ಗುರುವಾರ, ಏಪ್ರಿಲ್ 10, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಗೇಲ್ ದಾಖಲೆ ಮೀರಿದ ಸುದರ್ಶನ್

ಗುಜರಾತ್ ಟೈಟನ್ಸ್ ತಂಡದ ಬ್ಯಾಟರ್ ಸಾಯಿ ಸುದರ್ಶನ್ ಅವರು ಬುಧವಾರ ಅಹಮದಾಬಾದ್‌ನಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು **82** (**53**ಎಸೆತ) ರನ್ ಗಳಿಸಿದರು. ಈ ಸಂದರ್ಭದಲ್ಲಿ ಅವರು ಕ್ರಿಸ್ ಗೇಲ್ ಅವರ ದಾಖಲೆಯನ್ನು (**30** ಇನಿಂಗ್ಸ್‌ಗಳಲ್ಲಿ ಗರಿಷ್ಠ ರನ್) ಮೀರಿದರು.

ಸಾಯಿ **1307** ರನ್ | ಕ್ರಿಸ್ ಗೇಲ್ **1141** ರನ್

* ಈ ದಾಖಲೆಯ ಪಟ್ಟಿಯಲ್ಲಿ ಶಾನ್ ಮಾರ್ಷ್ (1338 ರನ್) ಮೊದಲ ಸ್ಥಾನದಲ್ಲಿದ್ದಾರೆ



UNIVERSAL GROUP OF INSTITUTIONS @ BENGALURU

24 Years of EXCELLENCE | Produced 8025+ OFFICERS

ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ADMISSIONS OPEN FOR 2025-26

UNIVERSAL PRE-UNIVERSITY COLLEGE
100% RESULTS
COMMERCE, ARTS
with CLAT, IAS (CSAT), CUET Coaching and CA Foundation

UNIVERSAL SCHOOL OF ADMINISTRATION & LAW
BSc (Environmental Science) / BA / B.Com / M.A. in Political Science with IAS, IPS & KAS Coaching
B.Com with CA
BA.LLB


UNIVERSAL GREEN SCHOOL
Kinder Garden to High School
8th, 9th, 10th (Residential) Integrated IAS foundation Coaching
ADMISSION OPEN FOR 2026-27

24 Years of TRUST

ಯೂನಿವರ್ಸಲ್ ಸಂಸ್ಥೆಯೊಂದಿಗೆ ನಿಮ್ಮ ಯಶಸ್ಸಿನ ಪಯಣ ಆರಂಭಿಸಿ

ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್, ಬೆಂಗಳೂರು ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಾ ಬಂದಿದೆ. ನಮ್ಮ ಗುಣಮಟ್ಟದ ಶಿಕ್ಷಣದಿಂದ ದೇಶಕ್ಕೆ ಸಾವಿರಾರು ಐಎಎಸ್, ಐಪಿಎಸ್ ಮತ್ತು ಕೆಎಎಸ್ ಅಧಿಕಾರಿಗಳನ್ನು ಕೊಟ್ಟಿದ್ದೇವೆ. ಈ ನಮ್ಮ ಯಶಸ್ಸಿನ ದಾರಿಯಲ್ಲಿ ಸದಾ ನಮ್ಮ ಜೊತೆಗಿರುವ ಎಲ್ಲಾ ನಮ್ಮ ವಿದ್ಯಾರ್ಥಿಗಳಿಗೂ ಮತ್ತು ಪೋಷಕರಿಗೂ ಧನ್ಯವಾದಗಳು.

FEW OF OUR IAS/IPS RANK HOLDERS FROM KARNATAKA




KOUSHIK H. R. IAS | GOPALAKRISHNA IAS | THRILOKCHANDRA IAS | DR. AJAY N IAS | PRABHULINGA IAS | JUBIN MOHAPATRA IAS | RANDEEP IAS | MANJUSHREE IAS | SHILPA NAG IAS | DR. VENKATESH IAS | SUKHAPUTRA N O IAS



Dr. HARSHA IPS | RAVI D CHANNANAVAR IPS | CHETHAN R IPS | NARAYAN IPS | MUTHURAJ M IPS | SIRIVENNELA IPS | SHOBARANI V. J. IPS | YASHODHA VANTAGODI IPS | ANITHA B H IPS | Dr. PRAPHULLA IFS | SOWMYA C IFS

ಐತಿಹಾಸಿಕ ದಾಖಲೆ ಸೃಷ್ಟಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು

- 2021-22 ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಟಾಪ್ 9 ರ್‍ಯಾಂಕ್‌ಗಳು
- 2022-23ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಟಾಪ್ 8 ರ್‍ಯಾಂಕ್‌ಗಳು
- 2023-24ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ BA ವಿಭಾಗದಲ್ಲಿ ಎಲ್ಲಾ 10 ರ್‍ಯಾಂಕ್‌ಗಳು ಮತ್ತು B.Com ವಿಭಾಗದಲ್ಲಿ 2 ರ್‍ಯಾಂಕ್‌ಗಳನ್ನು ಪಡೆದ ಏಕೈಕ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



Shri. R. Upendra Shetty
Founder Chairman

Contact Our Vijayanagar Branch For
IAS/IPS/KAS Coaching classes
Address: 2922/20, Next to Canara Bank, Near Attiguppe Bus Stop, RPC Layout, Vijayanagar, Bengaluru - 560040.
JOIN OUR YOUTUBE CHANNEL @UGIBENGALURU

FOR COLLEGE ADMISSION ENQUIRY CALL:
9686664985
6366816611
9686664983

SCAN FOR CAMPUS TOUR

ugibengaluru | ugibengaluru | ugibengaluru | ugibengaluru | ugibengaluru | universalinstitutions | UPSC IAS Current Affairs


UNIVERSAL
GROUP OF INSTITUTIONS
100% RESULTS
Congratulations to our 2024-25 PUC & CLAT Toppers
Sheikh Ehsaan Khaleelullah
CLAT AIR - 100
STATE RANK - 11
PUC STATE RANK 10
Diya U
PUC - 98.00%
CLAT STATE - 1630
Druthi Kanth
PUC - 97.33%
CLAT STATE - 1669
Chittha Saagar
PUC - 96.50%
CLAT AIR - 2483
Pragathi G
PUC - 96.00%
CLAT STATE - 833
Preetham R
PUC - 94.50%
CLAT AIR - 10269
Bhuvan Sai S
PUC - 94.17%
CLAT AIR 4397
Pavithra S
PUC - 94.00%
CLAT STATE - 1736
U N Rakshitha
PUC - 93.67%
Mythri M
PUC - 93.50%
Omkar U B
PUC - 93.17%
Hemanth Gowda A
PUC - 93.00%
CLAT STATE - 1638
Siya Sonu G
PUC - 88.67%
Saddala Vasudha
PUC - 87.67%
CLAT STATE - 825
Afsha Mulla
PUC - 87.17%
Samyami Sanketh
PUC - 86.83%
CLAT AIR - 4573
Himansi Sharma
PUC - 86.33%
CLAT STATE - 788
Yashvardhan G
PUC - 85.50%
Gourav
CLAT STATE - 2079
Vaishnavi M
CLAT STATE - 2166
TARGET UPSC 2026
40 Full-Length Tests with In-Depth Solutions Now Available at Nominal Rates
Hurry, Limited Time Offer!
"Gateway" TO PUBLIC SERVICES
ನವಯುಗ ಆರಂಭ
HOSTEL
CLASS ROOM
LAB
SPORTS
NCC
LIBRARY
Academic Excellence with Unique Value-Added Programs for Degree & PUC Students:
• 700+ hours each year of focused civil services preparation guided by experienced civil servants, top academicians and subject specialists
• Expert Mentors for Common Law Admission Test (CLAT), Common University Entrance Test (CUET) and CA Foundation Program for PU Students
• B.com with Built-In CA Coaching
• M.A. in Political Science with Residential Campus, Access to Research Journals and a Well-Equipped Library
• NCERT to Advanced Level Preparation Pathway for UPSC/KPSC aspirants.
• Integrated Test Series (Prelims + Mains)
• Daily Current Affairs + Editorial Discussions in classroom/online.
Infrastructure & Facilities
Separate Hostel for Boys & Girls with 24/7 Warden Surveillance
Smart Classrooms with Audio-Visual Aids
Dedicated UPSC Library with 10,000+ Resources
Career Counselling Cell & Parent-Student Review Meetings
Study material available on Amazon
JOIN OUR YOUTUBE CHANNEL @UGIBENGALURU
College Address
Gururayanapura, Kolur Village, Tavarekere Hobli, Ramohalli Post, Bengaluru South Taluk, Bengaluru-74
FOR COLLEGE ADMISSION ENQUIRY CALL
9686664985, 6366816611, 9686664983
info@universalinstitutions.com
www.universalinstitutions.com
SCAN FOR CAMPUS TOUR
College Bus Facility Available from Kengeri Metro Station

ಗುರುವಾರ, ಏಪ್ರಿಲ್ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 99 | ಪುಟ 18

● www.prajavani.net

prajavani.net | prajavani | prajavani | prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಿರುದ್ಯೋಗ ಪ್ರಮಾಣ ತುಸು ಇಳಿಕೆ



6.7% 2023 ಮತ್ತು 2024ರಲ್ಲಿ ನಗರ ಭಾಗದಲ್ಲಿನ ನಿರುದ್ಯೋಗ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ

ಆಧಾರ: ಪೀರಿಯಾಡಿಕ್ ಲೇಬರ್ ಫೋರ್ಸ್ ಸಮೀಕ್ಷೆ ವರದಿ

ಆಳ-ಅಗಲ
ರಾಜ್ಯ-ರಾಜ್ಯಪಾಲರ ಸಂಘರ್ಷ 'ಸುಪ್ರೀಂ' ದಿಕ್ಸೂಚಿ

90 ದಿನಗಳ 'ವಿರಾಮ'; ಚೀನಾಕ್ಕಿಲ್ಲ 'ಕೃಪೆ' 7

ಮಹಾವೀರ ಜಯಂತಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
73,847 ▼	22,399 ▼	86.68 ▼

ಕಾವೇರಿಗೂ ತಟ್ಟಿದ ದರ ಭಾರ

ಇಂದಿನಿಂದಲೇ ನೀರಿನ ದರ ಏರಿಕೆ ● ಪ್ರತಿ ಲೀಟರ್‌ಗೆ 0.15ಪೈಸೆಯಿಂದ 1 ಪೈಸೆವರೆಗೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ನೀರಿನ ದರ ಏರಿಕೆ ಮಾಡಿದ್ದು, ಗೃಹ ಬಳಕೆ ನೀರಿಗೆ ಪ್ರತಿ ಲೀಟರ್‌ಗೆ 0.15 ಪೈಸೆಯಿಂದ 1 ಪೈಸೆವರೆಗೂ ಹೆಚ್ಚಳವಾಗಲಿದೆ. ಏಪ್ರಿಲ್ 10ರಿಂದಲೇ ಹೊಸ ದರ ಜಾರಿಯಾಗಲಿದೆ.

ವಸತಿ ಸಮುಚ್ಚಯ ಕಟ್ಟಡಗಳಿಗೆ ಲೀಟರ್‌ಗೆ 0.30 ಪೈಸೆಯಿಂದ 1 ಪೈಸೆಯವರೆಗೂ ಹೆಚ್ಚಳವಾಗಿದೆ. ಹೆಚ್ಚು ನೀರು ಬಳಸುವ (ಬಲ್ಕ್) ವಸತಿಯೇತರ (ವಾಣಿಜ್ಯ/ಕೈಗಾರಿಕೆ) ಸಂಪರ್ಕಕ್ಕೆ 0.90 ಪೈಸೆಯಿಂದ 1.90 ಪೈಸೆವರೆಗೂ ಏರಿಕೆಯಾಗಿದೆ.



ನೀರಿನ ದರದ ಜೊತೆಗೆ ಒಳಚರಂಡಿ ಶುಲ್ಕವನ್ನು ಶೇಕಡ 25ರಷ್ಟು ಹೆಚ್ಚಿಸಲಾಗಿದೆ. ಜೊತೆಗೆ, ಕೊಳವೆ ಬಾವಿ/ ಬಾವಿ/ಸಾರ್ವಜನಿಕ ಕೊಳವೆ ಬಾವಿಗಳಿಗೆ ವಿಧಿಸುವ ಶುಲ್ಕವನ್ನು ಪ್ರತಿ ಮನೆಗೆ ₹30 ಮತ್ತು ವಸತಿಯೇತರ ಸಂಪರ್ಕಕ್ಕೆ ₹125ಕ್ಕೆ ಹೆಚ್ಚಳ ಮಾಡಲಾಗಿದೆ.

4ನೇ ಪುಟ ನೋಡಿ

ಏರಿಕೆಯಾಗಿರುವ ನೀರಿನ ದರದ ವಿವರ

ವಸತಿ ಕಟ್ಟಡಗಳು

ಸ್ಲ್ಯಾಬ್ (ಲೀಟರ್ ಗಳಲ್ಲಿ)	ಪ್ರತಿ ಲೀಟರ್‌ಗೆ (ಪೈಸೆಗಳಲ್ಲಿ)
0- 8,000 ಲೀಟರ್‌ವರೆಗೆ	0.15
8,001-25,000 ಲೀಟರ್‌ವರೆಗೆ	0.40
25,001-50,000 ಲೀಟರ್‌ವರೆಗೆ	0.80
50,001 ಲೀಟರ್‌ಗೆ ಮೇಲ್ಪಟ್ಟು	1

(ಉದಾಹರಣೆಗೆ: ಒಂದು ಮನೆಯಲ್ಲಿ 30ಗಳಿಗೆ 25 ಸಾವಿರ ಲೀಟರ್ ನೀರನ್ನು ಬಳಕೆ ಮಾಡುತ್ತಿದ್ದರೆ, 30ಗಳ ಬಿಲ್‌ನಲ್ಲಿ ₹63 ಹೆಚ್ಚಳವಾಗಲಿದೆ. 1ಲಕ್ಷ ಲೀಟರ್ ಬಳಕೆ ಮಾಡುವವರಿಗೆ 30ಗಳ ಬಿಲ್‌ನಲ್ಲಿ ₹763 ಹೆಚ್ಚಾಗಲಿದೆ)




ಜನಸಾಮಾನ್ಯರಿಗೆ ಹೊರೆಯಾಗದಂತೆ ನೀರಿನ ದರ ಏರಿಕೆ ಮಾಡಲಾಗಿದೆ. ಏಪ್ರಿಲ್ 10ರಿಂದ ದರ ಏರಿಕೆ ಅಧಿಕೃತವಾಗಿ ಜಾರಿಯಾಗಲಿದೆ.
ರಾಮ್ ಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ

ಹೆಚ್ಚಳವಾಗಲಿದೆ ಖಾಸಗಿ ಶಾಲಾ ವಾಹನಗಳ ಶುಲ್ಕ



ಬೆಂಗಳೂರು: ಡೀಸೆಲ್ ದರ ಹೆಚ್ಚಳ, ತೆರಿಗೆ ಹೆಚ್ಚಳ ಸೇರಿದಂತೆ ವಿವಿಧ ಕಾರಣಗಳಿಂದಾಗಿ ವೆಚ್ಚ ಅಧಿಕಗೊಂಡಿರುವುದರಿಂದ ಶಾಲಾ ವಾಹನಗಳ ಶುಲ್ಕವನ್ನು ಹೆಚ್ಚಿಸಲು ಖಾಸಗಿ ಶಾಲಾ ವಾಹನಗಳ ಚಾಲಕರ ಯೂನಿಯನ್ ನಿರ್ಧರಿಸಿದೆ.


ರವಿಕುಮಾರ್

ಡೀಸೆಲ್ ಪ್ರತಿ ಲೀಟರ್‌ಗೆ ₹ 2 ಹೆಚ್ಚಳವಾಗಿದೆ. ರಸ್ತೆ ತೆರಿಗೆ ಜಾಸ್ತಿ ಮಾಡಲಾಗಿದೆ. ಎಲ್ಲ ವಾಹನಗಳಲ್ಲಿ ಜಿಪಿಆರ್‌ಎಸ್ ಅಳವಡಿಸಬೇಕು. ಪ್ಯಾನಿಕ್ ಬಟನ್ ಅಳವಡಿಸಬೇಕು. ಕ್ಯಾಮೆರಾ ಅಳವಡಿಸಬೇಕು ಮುಂತಾದ ಸುಪ್ರೀಂಕೋರ್ಟ್‌ನ ನಿರ್ದೇಶನಗಳನ್ನು ಪಾಲನೆ ಮಾಡಬೇಕು. ಶಾಲಾ ವಾಹನಗಳ ಕಾರ್ಯಾಚರಣೆಗೆ ಸಾರಿಗೆ ಇಲಾಖೆಗೆ ಶುಲ್ಕ ಕಟ್ಟಿ ಅನುಮತಿ ಪಡೆಯಬೇಕು. ಇದರಿಂದ ವೆಚ್ಚ ವಿಪರೀತವಾಗಿದೆ ಎಂದು ಯೂನಿಯನ್ ಅಧ್ಯಕ್ಷ ಜಿ. ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು ನಗರ ವ್ಯಾಪ್ತಿಯಲ್ಲಿ 20 ಸಾವಿರ ಖಾಸಗಿ ಶಾಲಾ ವಾಹನಗಳಿವೆ. ವಾಹನಗಳ ಶುಲ್ಕವನ್ನು ನಾವು ಹೆಚ್ಚಿಸುತ್ತಿರಲಿಲ್ಲ.

4ನೇ ಪುಟ ನೋಡಿ

ರೆಪೊ ದರ ಶೇ 0.25ರಷ್ಟು ಕಡಿತ: ಗೃಹ, ವಾಹನ ಸಾಲ ಅಗ್ಗ

ಇಎಂಐ ಹೊರೆ ಇಳಿಕೆ

ಮುಂಬೈ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸತತ ಎರಡನೇ ಬಾರಿಗೆ ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಬಡ್ಡಿದರ ಕಡಿತಗೊಳಿಸುವ ಸುಳಿವು ಕೂಡ ನೀಡಿದೆ.

ಶೇ 6.25ರಷ್ಟಿದ್ದ ರೆಪೊ ದರವು ಶೇ 6ಕ್ಕೆ ಇಳಿದಿದೆ. ಇದರಿಂದ ಬ್ಯಾಂಕ್‌ಗಳಲ್ಲಿ ಈ ಬಡ್ಡಿದರ ಆಧರಿತ ಗೃಹ, ಕಾರು ಮತ್ತು ವೈಯಕ್ತಿಕ ಸಾಲ ಪಡೆದವರಿಗೆ ಸಾಲ ಮರುಪಾವತಿಯ ಸಮಾನ ಮಾಸಿಕ ಕಂತಿನ (ಇಎಂಐ) ಮೊತ್ತವೂ ಕಡಿಮೆಯಾಗಲಿದೆ. ಅಲ್ಲದೆ, ಗೃಹ ಮತ್ತು ವಾಹನ ಸಾಲ ಅಗ್ಗವಾಗಲಿವೆ.

ಅಮೆರಿಕದ ಪ್ರತಿ ಸುಂಕ ನೀತಿಯು ಭಾರತಕ್ಕೆ ಹಲವು ಸವಾಲು ಒಡ್ಡಿದೆ. ಸುಂಕದ ಬಿಸಿಯನ್ನು ತಣ್ಣಗಾಗಿಸಿ ದೇಶದ ಆರ್ಥಿಕತೆಗೆ ಬಲ ತುಂಬಲು ಆರ್‌ಬಿಐ ಮುಂದಾಗಿದೆ. ಹಾಗಾಗಿ, ಬಡ್ಡಿದರ ಇಳಿಕೆಯ ನಿರ್ಧಾರ ಕೈಗೊಂಡಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ನಾನು ಮಹಾಭಾರತದ ಸಂಜಯನಲ್ಲ. ಸದ್ಯ ಜಾಗತಿಕ ಅನಿಶ್ಚಿತ ಸ್ಥಿತಿ ತಲೆದೋರಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ರೆಪೊ ದರವು ಯಾವ ಮಟ್ಟದಲ್ಲಿ ಮಿತಗೊಳ್ಳಲಿದೆ ಎಂದು ಹೇಳುವುದು ಕಷ್ಟಕರ
ಸಂಜಯ್ ಮಲ್ಹೋತ್ರಾ ಆರ್‌ಬಿಐ ಗವರ್ನರ್

ಸಂಜಯ್ ಮಲ್ಹೋತ್ರಾ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಮುಕ್ತಾಯಗೊಂಡ ಹಣಕಾಸು ನೀತಿ ಸಮಿತಿ ಸಭೆಯಲ್ಲಿ, ಎಲ್ಲಾ 6 ಸದಸ್ಯರು ಬಡ್ಡಿದರ ಕಡಿತಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

4ನೇ ಪುಟ ನೋಡಿ

ತಗ್ಗಿದ ಜಿಡಿಪಿ ಬೆಳವಣಿಗೆ ದರ

ಜಾಗತಿಕ ಮಟ್ಟದಲ್ಲಿ ತಲೆದೋರಿರುವ ವ್ಯಾಪಾರ ಸಮರ ಮತ್ತು ಆರ್ಥಿಕ ಅನಿಶ್ಚಿತ ಸ್ಥಿತಿಯಿಂದಾಗಿ 2025–26ನೇ ಆರ್ಥಿಕ ವರ್ಷದಲ್ಲಿನ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವನ್ನು ಆರ್‌ಬಿಐ ಪರಿಷ್ಕರಿಸಿದೆ. ಈ ಮೊದಲು ಜಿಡಿಪಿ ಶೇ 6.7ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿತ್ತು. ಇದನ್ನು ಶೇ 6.5ಕ್ಕೆ ತಗ್ಗಿಸಿದೆ. ಮೊದಲ ತ್ರೈಮಾಸಿಕದಲ್ಲಿ ಶೇ 6.5, 2ನೇ ತ್ರೈಮಾಸಿಕ ಶೇ 6.7, 3ನೇ ತ್ರೈಮಾಸಿಕ ಶೇ 6.6, 4ನೇ ತ್ರೈಮಾಸಿಕದಲ್ಲಿ ಶೇ 6.3ರಷ್ಟು ಬೆಳವಣಿಗೆ ಕಾಣಲಿದೆ ಎಂದಿದೆ.

ನಾಗೇಂದ್ರಗೆ ಮತ್ತೆ ಸಂಕಷ್ಟ

ಜಾರಿ ನಿರ್ದೇಶನಾಲಯದ ಪ್ರಸ್ತಾವಕ್ಕೆ ರಾಜ್ಯಪಾಲರ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸೇರುವ ಉಮೇದಿನಲ್ಲಿದ್ದ ಮಾಜಿ ಸಚಿವ ಬಿ. ನಾಗೇಂದ್ರ ಅವರಿಗೆ ಹಿನ್ನಡೆಯಾಗಿದೆ.


ಬಿ. ನಾಗೇಂದ್ರ

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹94 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿ, ವಂಚಿಸಿದ್ದ ಪ್ರಕರಣದಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕರೂ ಆಗಿರುವ ಬಿ. ನಾಗೇಂದ್ರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿದ್ದಾರೆ. ಇದರಿಂದಾಗಿ ಅವರ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣಾ ಪ್ರಕ್ರಿಯೆ ಆರಂಭವಾಗಲಿದೆ. ಹೀಗಾಗಿ, ಸಂಪುಟ ಸೇರುವ ಅವರ ಕನಸು ಭಗ್ನಗೊಳ್ಳುವ ಸಾಧ್ಯತೆ ಇದೆ.

8ನೇ ಪುಟ ನೋಡಿ

ಮಂಜುನಾಥ ಗೌಡ 14 ದಿನ ಇ.ಡಿ ವಶಕ್ಕೆ

ಬೆಂಗಳೂರು/ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ (ಡಿಸಿಸಿ) ನಕಲಿ ಚಿನ್ನಾಭರಣ ಅಡವಿಟ್ಟು ₹62.77 ಕೋಟಿ ಸಾಲ ಪಡೆದಿದ್ದ ಪ್ರಕರಣದಲ್ಲಿ, ಬ್ಯಾಂಕ್‌ನ ಹಾಲಿ ಅಧ್ಯಕ್ಷ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಆರ್.ಎಂ. ಮಂಜುನಾಥಗೌಡ ಅವರನ್ನು ಇ.ಡಿ ಮಂಗಳವಾರ ತಡರಾತ್ರಿ ಬಂಧಿಸಿದೆ.


ಮಂಜುನಾಥಗೌಡ

ಮಂಜುನಾಥ ಅವರನ್ನು 14 ದಿನಗಳವರೆಗೆ ಇ.ಡಿ ಬಂಧನಕ್ಕೆ ನೀಡಿ, ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಬುಧವಾರ ಆದೇಶಿಸಿದೆ.

2014ರಲ್ಲಿ ಮಂಜುನಾಥಗೌಡ ಅವರು ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾಗ ಅಕ್ರಮ ನಡೆದಿತ್ತು. ಇ.ಡಿ ತನಿಖೆಗೆ, ಅವರು ಹೈಕೋರ್ಟ್‌ನಿಂದ ತಂದಿದ್ದ ತಡೆ ಈಚೆಗಷ್ಟೇ ತೆರವಾಗಿತ್ತು.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಜಾತಿ ಗಣತಿ' ನಾಳೆ ಸಂಪುಟದ ಮುಂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ –2015ರ (ಜಾತಿ ಜನಗಣತಿ) ದತ್ತಾಂಶಗಳ ಅಧ್ಯಯನ ವರದಿಯನ್ನು ಇದೇ 11ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಹಿಂದುಳಿದ ವರ್ಗಗಳ ಆಯೋಗವು ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ 2024ರ ಫೆ. 29ರಂದು ಸರ್ಕಾರಕ್ಕೆ ಸಲ್ಲಿಸಿತ್ತು. ಈ ಲಕೋಟೆಯನ್ನು ತೆರೆದು ಪರಿಶೀಲಿಸಲು ಅನುಮೋದನೆ ಕೋರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಿದೆ.

ಪ್ರಸ್ತಾವದಲ್ಲಿ ಏನಿದೆ?: ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರ ಏಪ್ರಿಲ್ 11ರಿಂದ ಮೇ 30ರವರೆಗೆ ರಾಜ್ಯದಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಜಾತಿ ವಿವರವೂ ಒಳಗೊಂಡಂತೆ ಒಟ್ಟು 54 ಮಾನದಂಡಗಳಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಸಮೀಕ್ಷೆ ನಡೆಸಿ ಮಾಹಿತಿ ಸಂಗ್ರಹಿಸಿ ಗಣಕೀಕರಣಗೊಳಿಸಲಾಗಿದೆ.



ಈ ಸಮೀಕ್ಷೆಯ ದತ್ತಾಂಶಗಳನ್ನು ಬಳಸಿಕೊಂಡು ಅಧ್ಯಯನ ವರದಿ ಸಲ್ಲಿಸುವಂತೆ ಕೆ. ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗಕ್ಕೆ 2023ರ ಜುಲೈ 17ರಂದು ಸರ್ಕಾರ ಪತ್ರ ಬರೆದಿತ್ತು.

ಅದರ ಅನ್ವಯ, ಕಾಂತರಾಜ ಆಯೋಗ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಧ್ಯಯನ ವರದಿ–2024' ಮತ್ತು ಸಮೀಕ್ಷೆಯ ಅಂಕಿ-ಅಂಶಗಳನ್ನು ಒಳಗೊಂಡ ವರದಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿತ್ತು.

'ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ 1995ರ ಪ್ರಕಾರ, ಆಯೋಗವು ನೀಡುವ ಸಲಹೆಗಳಿಗೆ ಸರ್ಕಾರವು ಸಾಮಾನ್ಯವಾಗಿ ಬದ್ಧವಾಗಿರಬೇಕು. ಆದ್ದರಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಅರಿಯಲು ಹಾಗೂ ಯೋಜನೆಗಳನ್ನು ಸಮರ್ಪಕವಾಗಿ ರೂಪಿಸಿ ಅದರಂತೆ ಅನುಷ್ಠಾನಗೊಳಿಸಲು ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಸಮಗ್ರ ಅಧ್ಯಯನ ವರದಿ ಅವಶ್ಯವಿದೆ' ಎಂದು ಪ್ರಸ್ತಾವದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಮರ್ಥನೆ ನೀಡಿದೆ.

'2025ರ ಜ. 2ರಂದು ನಡೆದಿದ್ದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿ ಈ ವರದಿ ಮಂಡಿಸುವ ಪ್ರಸ್ತಾವ ಇತ್ತು. ಅಂದು ಈ ವರದಿಯ ಬಗ್ಗೆ ಅನೌಪಚಾರಿಕ ಚರ್ಚೆ ನಡೆದಿತ್ತು. ಮುಚ್ಚಿದ ಲಕೋಟೆಯಲ್ಲಿರುವ ಸಮೀಕ್ಷೆಯ ದತ್ತಾಂಶಗಳ ಅಧ್ಯಯನ ವರದಿ ಮತ್ತು ಸಮೀಕ್ಷೆಯ ಅಂಕಿಅಂಶಗಳ ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೆರೆಯಲು ಅಂದಿನ ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸೂಚಿಸಲಾಗಿತ್ತು' ಎಂದೂ ಪ್ರಸ್ತಾವದಲ್ಲಿ ವಿವರಿಸಲಾಗಿದೆ.



ಚಿನ್ನದ ನಾಣ್ಯಗಳ ಪ್ರಿ-ಬುಕ್ ಮಾಡುವುದರೊಂದಿಗೆ ಈ ಅಕ್ಷಯ ತೃತೀಯ ಶುಭಾರಂಭ ಮಾಡಿ!

ನೀಲ್‌ಕಂಠ್ ಗೋಲ್ಡ್ ಅಂಡ್ ಡೈಮಂಡ್ಸ್ ಪ್ರೈ. ಲಿ. ರಿಚ್ಮಂಡ್ ರಸ್ತೆ: 080-2227 8846 | HSR ಲೇಔಟ್: 080-4696 3800 | HRBR ಲೇಔಟ್: 080-6907 8000

Scan to reach us



ಡಿಸಿಆರ್‌ಇ ವಿಶೇಷ ಪೊಲೀಸ್ ಠಾಣೆಗಳಿಗೆ ಹಂಚಿಕೆಯಾಗಿರುವ ವಾಹನಗಳಿಗೆ ಗೃಹಸಚಿವ ಜಿ. ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಚಾಲನೆ ನೀಡಿದರು. ಅಧಿಕಾರಿಗಳು ಉಪಸ್ಥಿತರಿದ್ದರು.

‘ದಕ್ಷಿಣವೆಲ್ಲ ಒಟ್ಟಾಗಿ ಹೋರಾಡಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಭಾಷಾ ಸೂತ್ರ ಮತ್ತು ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ವಿರುದ್ಧ ದಕ್ಷಿಣ ರಾಜ್ಯಗಳೆಲ್ಲ ಒಟ್ಟಾಗಿ ಹೋರಾಡಬೇಕು ಎಂಬ ಅಭಿಪ್ರಾಯ ಬುಧವಾರ ನಡೆದ ನವ ಕರ್ನಾಟಕ ಆಂದೋಲನದ ಸ್ವಾಭಿಮಾನಿ ಚಳವಳಿಗಳ ಸಂವಾದದಲ್ಲಿ ವ್ಯಕ್ತವಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಸೇರಿದಂತೆ ವಿವಿಧ ಸಂಘಟನೆಗಳು ಮತ್ತು ಪಕ್ಷಗಳ ಸಹಯೋಗದಲ್ಲಿ ಸಂವಾದವನ್ನು ಆಯೋಜಿಸಲಾಗಿತ್ತು.

ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಮಾತನಾಡಿ, ‘ಹಿಂದಿ ಹೇರಿಕೆ, ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಇದರ ವಿರುದ್ಧ ನಮ್ಮ ರಾಜ್ಯದ ಸಂಸದರಂತೂ ಧ್ವನಿ ಎತ್ತುವುದಿಲ್ಲ. ನವ ಕರ್ನಾಟಕ ನಿರ್ಮಾಣ ಆಂದೋಲನದ ನೇತೃತ್ವದಲ್ಲಿ ದಕ್ಷಿಣದ ರಾಜ್ಯಗಳನ್ನು ಸೇರಿಸಿಕೊಂಡು ಹೋರಾಟ ನಡೆಸಬೇಕು. ಈ ಸಂಬಂಧ ಬೆಂಗಳೂರಿನಲ್ಲಿ ಸಭೆ ಕರೆಯಬೇಕು’ ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ‘ಉತ್ತರದ ರಾಜ್ಯಗಳು ಎರಡು ಭಾಷೆಯನ್ನು ಕಲಿಯುತ್ತಿವೆ. ನಾವೇಕೆ ತ್ರಿಭಾಷಾ ಸೂತ್ರದಲ್ಲಿ ಹಿಂದಿ ಕಲಿಯಬೇಕು? ಈಗಾಗಲೇ ರಾಜ್ಯದಲ್ಲಿ ಹಿಂದಿ ಹೇರಿಕೆ ಆರಂಭವಾಗಿದೆ. ಇದನ್ನು ತಡೆಯಲು ನಿರಂತರವಾಗಿ ಹೋರಾಟ ಮಾಡಬೇಕಿದೆ’ ಎಂದರು.



ಸ್ವಾಭಿಮಾನಿ ಚಳವಳಿಗಳ ಸಂವಾದ ಕಾರ್ಯಕ್ರಮದಲ್ಲಿ ಮಾರಸಂದ್ರ ಮುನಿಯಪ್ಪ, ಕೋಡಿಹಳ್ಳಿ ಚಂದ್ರಶೇಖರ್, ಗೋಪಿನಾಥ್, ಎನ್‌.ಮೂರ್ತಿ, ಆರ್‌. ಮೋಹನರಾಜ್, ವಾಣಿ ಅವರು ದಾರ್ಶನಿಕರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು.

ಆಲ್ ಇಂಡಿಯಾ ಬಹುಜನ ಪಾರ್ಟಿಯ ರಾಷ್ಟ್ರೀಯ ಸಂಯೋಜಕ ಗೋಪಿನಾಥ್, ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ರಾಜ್ಯ ಸಂಯೋಜಕ ಆರ್. ಮುನಿಯಪ್ಪ, ಆರ್‌ಪಿಐ(ಬಿ) ರಾಷ್ಟ್ರೀಯ ಅಧ್ಯಕ್ಷ ಎನ್. ಮೂರ್ತಿ, ಆರ್‌ಪಿಐ (ಕರ್ನಾಟಕ) ರಾಜ್ಯ ಘಟಕದ ಅಧ್ಯಕ್ಷ ಆರ್. ಮೋಹನ್ ರಾಜ್ ಸಂವಾದದಲ್ಲಿ ಪಾಲ್ಗೊಂಡಿದ್ದರು.

‘ಗ್ಯಾರಂಟಿ’ಗಾಗಿ ಬೆಲೆ ಏರಿಕೆ: ಕಾಂಗ್ರೆಸ್ ಶಾಸಕ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ರಾಜ್ಯ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿ ಮೂಲಕ ಜನರಿಗೆ ಉಚಿತ ಸೌಲಭ್ಯ ಕಲ್ಪಿಸಿದೆ. ಇದರ ಆರ್ಥಿಕ ಹೊರೆ ನಿಭಾಯಿಸಲು ಹಾಲು, ಡೀಸೆಲ್ ಬೆಲೆ ಏರಿಕೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಶಾಸಕ ಸುಬ್ಬಾರೆಡ್ಡಿ ಹೇಳಿದರು.

ಮ್ಯಾಜಿಕ್ ಮಾಡಿ ಸರ್ಕಾರ ಈ ಹಣ ಹೊಂದಿಸಲು ಸಾಧ್ಯವೇ? ಜನರಿಗೆ ಸೌಲಭ್ಯ ಕಲ್ಪಿಸಲು ಸರ್ಕಾರ ತೆರಿಗೆ ಮೂಲಕ ಹಣ ಹೊಂದಿಸಬೇಕಾಗುತ್ತದೆ ಎಂದು ಹೇಳಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಬಗ್ಗೆ ಬಿಜೆಪಿ ಪ್ರತಿಭಟನೆ ರಾಜಕೀಯ ದುರುದ್ದೇಶದಿಂದ ಕೂಡಿದೆ. ಬಿಜೆಪಿಗೆ ಪ್ರತಿಭಟನೆ ಮಾಡುವ ನೈತಿಕತೆ ಇಲ್ಲ. ಕೇಂದ್ರ ಸರ್ಕಾರ ಟೋಲ್ ಏರಿಕೆ ಮಾಡಿದೆ. ಇದರ ವಿರುದ್ಧ ಬಿಜೆಪಿ ಪ್ರತಿಭಟನೆ ಮಾಡಲಿ ಎಂದರು.

ಸುದ್ದಿ 2 ನಿಮಿಷ

ಕುಕ್ಕೆಗೆ ಹೊಸ ರೈಲು

ತುಮಕೂರು: ಬೆಂಗಳೂರು– ಕುಕ್ಕೆ ಸುಬ್ರಹ್ಮಣ್ಯ ನಡುವೆ ಹೊಸ ರೈಲು ಸಂಚಾರಕ್ಕೆ ಏ. 12ರಂದು ಚಾಲನೆ ನೀಡಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದಲ್ಲಿ ಬುಧವಾರ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಭಕ್ತರು, ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೊಸ ರೈಲು ಸಂಚಾರ ಆರಂಭಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ದಿನಕ್ಕೆ ನಾಲ್ಕು ಬಾರಿ ಸಂಚರಿಸುವ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಹಾವೇರಿ– ಬೆಂಗಳೂರು ನಡುವೆ ವಂದೇ ಭಾರತ್ ರೈಲು ಸಂಚಾರಕ್ಕೂ ಏ. 11ರಂದು ಚಾಲನೆ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಗದಗ– ವಾಡಿ ಮಾರ್ಗದ ಪೈಕಿ ಕುಷ್ಟಗಿವರೆಗೆ ರೈಲು ಸಂಚಾರ ಆರಂಭಿಸಲಾಗುವುದು. ಚಿಕ್ಕಮಗಳೂರು– ಬೇಲೂರು ನಡುವೆ ರೈಲ್ವೆ ಹಳಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ರೈಲು ಸಂಚಾರಕ್ಕೆ ಪರಿಶೀಲನೆ ಕಾರ್ಯ ನಡೆದಿದೆ ಎಂದರು.

‘ಆಟೊ ಚಾಲಕಿಯರು ಹೆಚ್ಚಲಿ’



ಬೆಂಗಳೂರು: ಆಟೊ ಚಾಲಕಿಯರ ಸಂಖ್ಯೆ ಹೆಚ್ಚಾದರೆ, ನಗರದಲ್ಲಿ ಮಹಿಳೆಯರು ಇನ್ನಷ್ಟು ಸುರಕ್ಷಿತವಾಗಿ ಆಟೊ ಪ್ರಯಾಣ ಮಾಡಲು ಮುಂದಾಗುತ್ತಾರೆ ಎಂದು ಶಾಸಕ ಎಸ್. ಸುರೇಶ್ ಕುಮಾರ್ ಅಭಿಪ್ರಾಯಪಟ್ಟರು.

ಬಿ.ಪ್ಯಾಕ್ ಹಾಗೂ ಆದರ್ಶ ಆಟೊ ಸಂಘಟನೆ ಸಹಯೋಗದಲ್ಲಿ ‘ಮಹಿಳೆಯರಿಗೆ ಉಚಿತ ಆಟೊ ಚಾಲನಾ ತರಬೇತಿ’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಗರದಲ್ಲಿ ಆಟೊ ಬಳಸುವವರ ಪೈಕಿ ಮಹಿಳೆಯರೇ ಹೆಚ್ಚಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಆಟೊ ಚಾಲನೆಗೆ ಮುಂದಾದರೆ, ಇತರೆ ಮಹಿಳೆಯರು ಮತ್ತು ಮಕ್ಕಳು ಹೆಚ್ಚು ಸುರಕ್ಷಿತವಾಗಿ ಸಂಚರಿಸಲು ಮುಂದಾಗುತ್ತಾರೆ. ಹೀಗಾಗಿ ಮಹಿಳೆಯರು ಹೆಚ್ಚಾಗಿ ಆಟೊ ಚಾಲನೆ ತರಬೇತಿ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿ.ಪ್ಯಾಕ್ ಸದಸ್ಯರಾದ ಮಿಮಿ ಪಾರ್ಥಸಾರಥಿ, ಅನಿಶಾ ಭಂಡಾರಿ, ಸಂಪತ್ ಸಿ, ರಾಘವೇಂದ್ರ ಪೂಜಾರಿ, ದೇವಿಕಾ ರಾಜ್ ಹಾಗೂ ತರಬೇತಿದಾರರದ ಪ್ರಭಾವತಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ: ಉಪಸ್ಥಿತಿ: ಸಿದ್ದರಾಮಯ್ಯ, ಉದ್ಘಾಟನೆ: ಪ್ರಿಯಾಂಕ್ ಖರ್ಗೆ, ಅಧ್ಯಕ್ಷತೆ: ಶ್ರೀಧರ್, ಕ್ಯಾಲೆಂಡರ್ ಬಿಡುಗಡೆ: ಜಿ. ಪರಮೇಶ್ವರ, ಕೆ.ಸುಧಾಕರ್, ವಿಶೇಷ ಸಂಚಿಕೆ ಬಿಡುಗಡೆ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ಆನಂದಕುಮಾರ್, ಎಂ.ಶಾಂತರಾಜು, ಆಯೋಜನೆ: ಜೈಭೀಮ್ ಜನಸೇವಾ ಸಮಿತಿ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಬೆಳಿಗ್ಗೆ 11

ಅಹಿಂಸಾ ಮತ್ತು ವಿಶ್ವಶಾಂತಿ ಸಮಾವೇಶ: ಆಯೋಜನೆ: ಜೈನ್ ಯುವ ಸಂಘಟನೆ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಎಸ್.ರಾಮಲಿಂಗೇಶ್ವರ (ಸಿಸಿರಾ) ಬಗ್ಗೆ ವಿಚಾರ ಸಂಕಿರಣ: ಅತಿಥಿಗಳು: ಹಂಪನಾ, ವೂಡೇ ಪಿ. ಕೃಷ್ಣ, ಮಲ್ಲೇಪುರಂ ಜಿ. ವೆಂಕಟೇಶ್, ಬೈರಮಂಗಲ ರಾಮೇಗೌಡ, ಆಯೋಜನೆ: ಸಾಹಿತ್ಯ–ಸರಸ್ವತಿ ಕಲಾ ವೇದಿಕೆ, ಸ್ನೇಹಕೂಟ ಸಾಂಸ್ಕೃತಿಕ ವೇದಿಕೆ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2

ಗೋಡ್ಸೆ ರಂಗಪ್ರಯೋಗ: ಆಯೋಜನೆ: ನಂದಿ ಕಲಾ ಸಂಘ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.15

ಕನ್ನಡ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ: ಉಪನ್ಯಾಸ: ನಂದಾದೀಪ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಪ್ರಸ್ತಾವನೆ: ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಸಂಜೆ 6.30

25ನೇ ವರ್ಷದ ಪ್ರವಚನ ವಾಹಿನಿ: ‘ರಾಮಾಯಣದ ಆಯ್ದ ಭಾಗಗಳು’ ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಬೆಂಗಳೂರು ಕರಗ ಮಹೋತ್ಸವ: ಹಸೀ ಕರಗ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30



ರಾಮನವಮಿ ಮಹೋತ್ಸವ ವಿಶೇಷ

87ನೇ ರಾಮೋತ್ಸವ ಸಮಾರಂಭ: ಗಾನ–ಜ್ಞಾನ–ಮಂಥನ, ವಾದನ: ಅನೀಶ್ ನಾಗೇಶ್, ಗಾಯನ: ಆರ್.ವಿ. ಅಕ್ಷಯ್, ಆರ್.ವಿ. ಅಭಿಷೇಕ್, ಕೊಳಲು: ಸುಮಂತ್ ಶ್ರೀಧರ್, ಮೃದಂಗ: ಪ್ರಣವ್ ಎಸ್. ಬಾಲಕೃಷ್ಣ, ಪ್ರವಚನ: ಪಾವಗಡ ಪ್ರಕಾಶ್ ರಾವ್, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ– ಗಾಯನ: ಚೈತ್ರಾ ಎಚ್.ಜಿ., ತಬಲಾ: ಎಚ್.ಎಸ್. ಗೋಪಿನಾಥ್, ಹಾರ್ಮೋನಿಯಂ: ಉಮಾಕಾಂತ್ ಪುರಾಣಿಕ್, ಕೀ ಬೋರ್ಡ್: ಅಭಿಷೇಕ್, ರಿದಂ ಪ್ಯಾಡ್: ಶ್ರೀನಿವಾಸ್ ಎಂ.ಸಿ., ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

32ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಜೆ 5.15– ಗಾಯನ: ದಿವ್ಯಾ ಪುರಂದರ, ಅಮೇಯ ವಿಗ್ನಾರ್ತಿ, ಪಿಟೀಲು: ನೈಮಿಷ ಸಂಜಯ್, ಮೃದಂಗ: ಶರತ್ ಭಾರ್ಗವ, ಸಂಜೆ 6.30 ಗಾಯನ: ಲಾವಣ್ಯ ಕೃಷ್ಣಮೂರ್ತಿ, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ಅನಿರುದ್ಧ ಎಸ್. ಭಟ್, ಖಂಜೀರ: ಭಾರ್ಗವ ಹಾಲಂಜಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಜಯಂತಿ ಕುಮಾರೇಶ್ ಅವರಿಗೆ ‘ರಾಮ ಗಣ ಕಲಾಚಾರ್ಯ ಪ್ರಶಸ್ತಿ’ ಪ್ರದಾನ, ಹಾಡುಗಾರಿಕೆ: ಕುಮಾರೇಶ್ ಆರ್., ಜಯಂತಿ ಕುಮಾರೇಶ್, ಮೃದಂಗ: ವಿಜಯ್ ನಟೇಶನ್, ಘಟ: ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ವಸಂತ ನವರಾತ್ರಿ ಶ್ರೀರಾಮೋತ್ಸವ: ಗಾಯನ: ಪಟ್ಟಾಭಿರಾಮ ಪಂಡಿತ್, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಅಲಸೂರು ಎನ್. ಸಾಗರ್, ಖಂಜೀರ: ಸಿ.ಪಿ. ವ್ಯಾಸವಿಠಲ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಸಂಜೆ 5.30–ದ್ವಂದ್ವ ವೀಣೆ: ಶೈಲಜಾ ಶ್ರೀನಾಥ್, ಹಂಸವೀಣಾ ಸುರೇಶ್, ಮೃದಂಗ: ಪ್ರವೀಣ್ ಹರಿಹರನ್, ಎಸ್. ಶ್ರೀಧರ ರಾವ್, ರಾತ್ರಿ 7–ಭರತನಾಟ್ಯ: ನಾಟ್ಯ ಭೈರವಿ ಡಾನ್ಸ್ ಸ್ಕೂಲ್ ವೃಂದದವರಿಂದ, ನಿರ್ದೇಶನ: ಶೃತಿ ಎನ್. ಮೂರ್ತಿ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 02/2025/SBC, ದಿನಾಂಕ: 03.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್‌8247033ಎ	ಆರ್‌ಸಿಎಫ್ ನಿರ್ದಿಷ್ಟತೆ ಸಂ. ಇಡಿಟಿಎಸ್130, ರೆವ್. ಬಿ, ಸಿಟಿಆರ್‌ಆರ್–6 ಅಥವಾ ಇತ್ತೀಚಿನದಕ್ಕೆ ಅನುಸಾರ ಕಾಂಪೋಜಿಟ್ ಪ್ಯಾಂಟ್ರಿ ಉಪಕರಣಗಳು (ಪರಿಮಾಣ: 17 ಸೆಟ್‌ಗಳು).
	ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 28.04.2025, 10:30 ಗಂಟೆಯವರೆಗೆ
ಎಲ್‌8255530	ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಒ / ಪಿಇ / ಎಸ್‌ಪಿಇಸಿ / ಎಸಿ / 0197–2020 ಅನುಸಾರ ಎಲ್‌ಹೆಚ್‌ಬಿ / ಇಓಜಿ / ಹೆಚ್‌ಓಜಿ ಟೈಪ್ ಎಸಿ ಕೋಚ್‌ಗಳಿಗೆ ಎರಡೂ ಬದಿಗಳಲ್ಲಿ ಸಿಲಿಕಾನ್ ರಬ್ಬರ್ ಕೋಟಿಂಗ್‌ನೊಂದಿಗೆ ಬೆಲ್ಲೋವ್ಸ್‌ಗಳ ಪೂರೈಕೆ (ಪರಿಮಾಣ: 400 ಸೆಟ್‌ಗಳು).
	ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 28.05.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

PUB/13/AAMO/PRB/SWR/2025-26

South Western Railway - SWR | SWRRLY | SWRRLY

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/02/2025–26 ದಿನಾಂಕ: 08.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

2021–22, 2022–23, 2023–24ನೇ ಸಾಲಿನ ಎಸ್.ಎಫ್.ಸಿ ಉಳಿತಾಯ ಮೊತ್ತ ಹಾಗೂ 2022–23ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಇಂಡೆಂಟ್	ವರ್ಗ
1	INDENT-35127-Call-3 INDENT-35135-Call-3 INDENT-35136-Call-3 INDENT-35132-Call-3 INDENT-35134-Call-3 INDENT-35163-Call-3	Others

ಟೆಂಡರ್ ಸಲ್ಲಿಸುವ ವಿವರಗಳು:– ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **17.04.2025 ಸಂಜೆ 5.30 ಗಂಟೆಯವರೆಗೆ.** ಹಾಗೂ ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **19.04.2025 ಬೆಳಿಗ್ಗೆ 10.30 ಗಂಟೆಗೆ.**
ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/167/2025–26

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/333/282 ಟೆಲಿ–ಫ್ಯಾಕ್ಸ್:080–26534477
ಇ–ಮೇಲ್: director.sjicr@gmail.com / pstodirectorsjicr@gmail.com

ಸಂಖ್ಯೆ: ಎಸ್‌ಜೆಐಸಿಆರ್/ಅಕೌಂಟ್ಸ್/ಎಫ್‌ಡಿ/2025–26 ದಿನಾಂಕ: 09.04.2025

ಇ–ಹರಾಜು

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ಗಳಿಂದ ಏಕ–ಲಕೋಟೆ ಪದ್ಧತಿಯನ್ವಯ ಟೆಂಡರ್ ಅನ್ನು ಈ ಕೆಳಗೆ ತಿಳಿಸಿದಂತೆ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಹರಾಜು ಸೂಚನೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿಆರ್/2025–26 /ಹರಾಜು–019 ದಿನಾಂಕ:09.04.2025	ಒಂದು ವರ್ಷದ ಅವಧಿಗೆ ಎಸ್‌ಜೆಐಸಿಆರ್‌ನ ರೂ. 50.00 ಕೋಟಿಗಳ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಇ–ಹರಾಜು.

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ: 10.04.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **17.04.2025ರ ಸಂಜೆ 4.00 ಗಂಟೆಯವರೆಗೆ.**

1. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.04.2025 ಸಂಜೆ 4:00 ಗಂಟೆಗೆ.**
2. ಇ.ಎಂ.ಡಿ. : **ರೂ. 5,000/–.**
3. ಲೈವ್ ಬಿಡ್ಡಿಂಗ್ (ಇ–ಹರಾಜು): **22.04.2025 ರಂದು ಬೆಳಗ್ಗೆ 10:00 ಗಂಟೆಗೆ** ಪ್ರಾರಂಭವಾಗುತ್ತದೆ ಮತ್ತು **ಸಂಜೆ 03:00 ಗಂಟೆಗೆ** ಮುಕ್ತಾಯವಾಗುತ್ತದೆ.
4. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನ್ನು ನೋಡಬಹುದು.
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/– ಆರ್ಥಿಕ ಸಲಹೆಗಾರರು.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಸಹಾಯಕ ಆಯುಕ್ತರ ಕಛೇರಿ, ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, 4ನೇ ಮಹಡಿ, ಪೊಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001.
ದೂರವಾಣಿ ಸಂಖ್ಯೆ: 080–22869850 Email.ld.endowmentacurban@gmail.com

File No. HRICE-ACU0ADMS/3/2024-E- 1708219 ದಿನಾಂಕ: 07.04.2025

–: ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕಟಣೆ–2 :–

ವಿಷಯ:– ಬೆಂಗಳೂರು ನಗರ ಸಭಾವಲಯದಲ್ಲಿರುವ ದೇವಾಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕಟಣೆ ಅನ್ನು ಆಹ್ವಾನಿಸುವ ಬಗ್ಗೆ.

ಬೆಂಗಳೂರು ನಗರ ಸಭಾವಲಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಿಗೆ ಅಗತ್ಯವಾದ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಅಧಿಕೃತ ಸಂಸ್ಥೆಗಳಿಂದ ಕಾರ್ಯದೇಶ ಹೊರಡಿಸಿದ ದಿನಾಂಕದಿಂದ, **ದಿನಾಂಕ: 31.03.2026** ರ ಅವಧಿಗೆ ಟೆಂಡರ್‌ನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.Kppp.karnataka.gov.in** ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದು.

1.	ಟೆಂಡರ್ ಮಾಡುವ ವಿಧಾನ	ಇ–ಟೆಂಡರ್ ಹರಾಜು ಮೂಲಕ
2.	ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಟೆಂಡರ್ ವಿವರಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ :	ದಿನಾಂಕ: 07.04.2025
3.	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ: 21.04.2025 ಸಂಜೆ 05.00 ಗಂಟೆಯವರೆಗೆ
4.	ಸ್ವೀಕೃತಗೊಂಡ ಟೆಂಡರ್‌ಗಳನ್ನು ತೆರೆಯುವ ದಿನಾಂಕ:	ದಿನಾಂಕ: 23.04.2025 ಬೆಳಗ್ಗೆ 11.00 ಗಂಟೆಯವರೆಗೆ
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ:	ದಿನಾಂಕ: 24.04.2025 ಬೆಳಗ್ಗೆ 11.00 ಗಂಟೆಯವರೆಗೆ
6.	ಇ.ಎಂ.ಡಿ ಮೊತ್ತ	ರೂ.50,000/–
7.	ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22869850 ಇ–ಪ್ರೊಕ್ಯೂರ್‌ಮೆಂಟ್ (e-procurement) ಸೆಂಟರ್ 080–25501216 & 25501227

ಸಹಿ/– ಸಹಾಯಕ ಆಯುಕ್ತರು, ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, ಬೆಂಗಳೂರು–01

ವಾಸಾಸಂಇ/ವಾ.ಪ್ರ/171/ಎಸ್‌ಎಸ್‌ಸಿ/2025–26

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110, ದೂರವಾಣಿ: 080–29599998 e-mail : forest.brzp@gmail.com

ಸಂಖ್ಯೆ: ಎ3/ಕೆರೆಕತ್ತಿಗನೂರು/ಸಿಆರ್ – 2024/25 ದಿನಾಂಕ : 05.03.2025

ಇ–ಆಕ್ಷನ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ ಬೆಳೆಸಿರುವ ಕೆಳಕಂಡ ನೆಡುತೋಪುಗಳಲ್ಲಿರುವ ಮರಗಳನ್ನು ವಿಲೇ ಮಾಡುವ ಸಂಬಂಧ **ಮೆ॥ ಎಂ.ಎಸ್.ಟಿ.ಸಿ ಲಿಮಿಟೆಡ್ ರವರ ಮುಖಾಂತರ** ಇ–ಆಕ್ಷನ್ ಮೂಲಕ ಹರಾಜು ಮಾಡಲಾಗುವುದು.

ಕ್ರ.ಸಂ.	ವಲಯ	ನೆಡುತೋಪಿನ ಸ್ಥಳ	ಮರಗಳ ಜಾತಿ	ಇ.ಎಂ.ಡಿ ಮೊತ್ತ ಪಾವತಿಸಲು ಕೊನೆಯ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	ಸಾಮಾಜಿಕ ಅರಣ್ಯ ವಲಯ, ನೆಲಮಂಗಲ	ಶಿವಗಂಗೆ ಗ್ರಾಮ ಪಂಚಾಯಿತಿ, ಬಸವಾಪಟ್ಟಣ ಕೆರೆ ಅಂಗಳ	ಅಕೇಶಿಯಾ ಅರ್ಕ್ಯುಲಿ ಫಾರ್ಮಿಸ್	15.04.2025	16.04.2025
2.	ಸಾಮಾಜಿಕ ಅರಣ್ಯ, ವಲಯ, ಹೊಸಕೋಟೆ	ದೇವನಗೊಂದಿ ಗ್ರಾಮ ಪಂಚಾಯಿತಿ, ಲಿಂಗದೀರಮಲ್ಲಸಂದ್ರ ಕೆರೆ ಅಂಗಳ	ಅಕೇಶಿಯಾ ಅರ್ಕ್ಯುಲಿ ಫಾರ್ಮಿಸ್	16.04.2025	17.04.2025
3.	ಸಾಮಾಜಿಕ ಅರಣ್ಯ, ವಲಯ, ಹೊಸಕೋಟೆ	ಲಕ್ಕೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಸಿಗಾಳ ಕೆರೆ ಅಂಗಳ	ಬಿದಿರು, ಹುಣಸೆ, ಬೇವು, ನೀಲಗಿರಿ, ಜಾಲಿ, ಹೊಂಗೆ, ಜಂಗಲಿ, ಸಿಲ್ವರ್	22.04.2025	23.04.2025
4.	ಸಾಮಾಜಿಕ ಅರಣ್ಯ ವಲಯ, ನೆಲಮಂಗಲ	ಕುಲುವನಹಳ್ಳಿ ಗ್ರಾಮ ಪಂಚಾಯಿತಿ, ಕೆರೆಕತ್ತಿಗನೂರು ಕೆರೆ ಅಂಗಳ	ಅಕೇಶಿಯ ಅರ್ಕ್ಯುಲಿ ಫಾರ್ಮಿಸ್	24.04.2025	25.004.2025

ಹೆಚ್ಚಿನ ಮಾಹಿತಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ವಾಪ್ರ/170/ಆಕಾರ್/2025–26

ಮಹಾತ್ಮ ಗಾಂಧಿ ಅಂತರ್‌ರಾಷ್ಟ್ರೀಯ ಹಿಂದಿ ವಿಶ್ವವಿದ್ಯಾಲಯ

(ಸಂಸತ್‌ನಿಂದ ಕಾಯ್ದೆ ನಂ. 3/1997 ರ ಮೂಲಕ ಸ್ಥಾಪಿತ ಒಂದು ಕೇಂದ್ರಿಯ ವಿಶ್ವವಿದ್ಯಾಲಯ)
ಹಿಂದಿ ವಿಶ್ವವಿದ್ಯಾಲಯ ಅಂಚೆ, ಗಾಂಧಿ ಹಿಲ್ಸ್, ವಾರ್ಧಾ – 442001 (ಮಹಾರಾಷ್ಟ್ರ)
ದೂರವಾಣಿ ಸಂ.: 07152–230901 ವೆಬ್‌ಸೈಟ್: www.hindivishwa.org

ಬೋಧಕೇತರ ಹುದ್ದೆಗಳಿಗಾಗಿ ಅಧಿಸೂಚನೆ
(ರಿಜಿಸ್ಟ್ರಾರ್, ಫೈನಾನ್ಸ್ ಆಫೀಸರ್ ಮತ್ತು ಕಂಟ್ರೋಲರ್ ಆಫ್ ಎಕ್ಸಾಮಿನೇಶನ್ಸ್)

ಜಾಹೀರಾತು ಸಂ. ಎಂಜಿಎಎಚ್‌ವಿ/03/2025 ದಿನಾಂಕ: 25.03.2025

ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ/ಡೆಪ್ಯುಟೇಶನ್ ಆಧಾರದ ಅಡಿಯಲ್ಲಿ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಅಂತರ್ಜಾಲ ತಾಣದ ಮೂಲಕ ನಿರ್ದಿಷ್ಟ ನಮೂನೆಯಲ್ಲಿ ಅರ್ಹ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನುಆಹ್ವಾನಿಸಲಾಗಿದೆ:

ಹುದ್ದೆ ಸಂಕೇತ	ಹುದ್ದೆ ಹೆಸರು	7ನೇ ಸಿಪಿಸಿ ಪ್ರಕಾರ ವೇತನ ಶ್ರೇಣಿ		ಹುದ್ದೆಗಳ ಸಂಖ್ಯೆ	ಹುದ್ದೆಯ ಪ್ರವರ್ಗ
		ವೇತನ ಹಂತ	ವೇತನ ಶ್ರೇಣಿ		
1	ರಿಜಿಸ್ಟ್ರಾರ್	ಹಂತ – 14	ರೂ. 1,44,200 – 2,18,200	01	ಯುಆರ್
2	ಫೈನಾನ್ಸ್ ಆಫೀಸರ್	ಹಂತ – 14	ರೂ. 1,44,200 – 2,18,200	01	ಯುಆರ್
3	ಕಂಟ್ರೋಲರ್ ಆಫ್ ಎಕ್ಸಾಮಿನೇಶನ್ಸ್	ಹಂತ – 14	ರೂ. 1,44,200 – 2,18,200	01	ಯುಆರ್

ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 21 (ಇಪ್ಪತ್ತೊಂದು) ದಿನಗಳ ಅವಧಿಯು ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಒಂದು ವೇಳೆ, ಇದಕ್ಕೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ ಉಂಟಾದಲ್ಲಿ, ಅಂತಹುದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. **ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಈ ಜಾಹೀರಾತು ಪ್ರಕಟಗೊಂಡ ದಿನಾಂಕದಂದು, ಆನ್‌ಲೈನ್ ಅರ್ಜಿ ಭರ್ತಿ ಮಾಡಲಿಕ್ಕೆ ಸಂಬಂಧಿತ ಲಿಂಕ್ ಲಭ್ಯವಾಗುತ್ತದೆ.**

ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯು ಅತ್ಯವಶ್ಯವಾಗಿರುತ್ತದೆ. ಪೂರಕ ಅನುಬಂಧಗಳನ್ನು ಒಳಗೊಂಡಿರುವ ಅರ್ಜಿ ಕರಡು ಪ್ರತಿಯನ್ನು ಮತ್ತು ಸೇವೆಯಲ್ಲಿರುವ ಅರ್ಜಿದಾರರ ಮುಂಗಡ ಪ್ರತಿಯನ್ನು ಕಡ್ಡಾಯವಾಗಿ, ಆನ್‌ಲೈನ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದಿಂದ 10 ದಿನಗಳೊಳಗೆ ಅಂಚೆ ಮುಖಾಂತರ (ನೋಂದಾಯಿತ/ತ್ವರಿತ ಅಂಚೆ ಮಾತ್ರ) ವಿಶ್ವವಿದ್ಯಾಲಯಕ್ಕೆ ತಲುಪಿಸತಕ್ಕದ್ದು. ವಿದ್ಯಾರ್ಹತೆಗಳು, ಪ್ರಾಯ, ಅನುಭವ, ಸೇವಾ ಷರತ್ತುಗಳು, ಸಂಭಾವನೆಗಳು,ಅಪೇಕ್ಷಿತ ಅರ್ಹತೆಗಳು ಮತ್ತು ಅರ್ಜಿ/ಪ್ರಕ್ರಿಯಾ ಶುಲ್ಕ ಇತ್ಯಾದಿ ವಿವರಗಳಿಗಾಗಿ ದಯವಿಟ್ಟು ವಿಶ್ವವಿದ್ಯಾಲಯದ **www.hindivishwa.org** ವೆಬ್‌ಸೈಟ್‌ಗೆ ಭೇಟಿ ಕೊಡಿ.

CBC 21207/12/0001/2526 ರಿಜಿಸ್ಟ್ರಾರ್

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ವಿಶೇಷ ವೈಯಕ್ತಿಕ ಬ್ಯಾಂಕಿಂಗ್ ಶಾಖೆ (ಕೋಡ್ 06866) ನಂ.65, ಸೆಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು- 560 001

ಸಾರ್ವಜನಿಕ ನೋಟೀಸು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಈ ಶಾಖೆಯಲ್ಲಿ ನೀವು ಲಾಕರ್ ಸೌಲಭ್ಯವನ್ನು ಪಡೆದುಕೊಂಡಿದ್ದೀರಿ (ಇನ್ನು ಮುಂದೆ ಸಂಕ್ಷಿಪ್ತವಾಗಿ ಬ್ಯಾಂಕ್ ಎಂದು ಉಲ್ಲೇಖಿಸಲಾಗಿದೆ) ಮತ್ತು ಕೆಳಗೆ ತಿಳಿಸಲಾದ ಮೊತ್ತಗಳು ನಿಯೋಜಿತ ಮಾರಾಟ ಠೇವಣಿ ಲಾಕರ್ ವಿರುದ್ಧ ಮರುಕಳಿಸುವ ಶುಲ್ಕಗಳು / ನಿರ್ವಹಣಾ ಶುಲ್ಕಗಳು / ದಂಡಗಳಿಗೆ ದಿನಾಂಕದಂದು ಬಾಕಿ ಉಳಿದಿವೆ ಎಂದು ನಿಮಗೆ ತಿಳಿಸಲು ಬಯಸುತ್ತೇವೆ. ಬ್ಯಾಂಕ್ 3 ನೋಟೀಸುಗಳನ್ನು ಕಳುಹಿಸಿದೆ, ಅದಕ್ಕೆ ಯಾವುದೇ ಉತ್ತರವಿಲ್ಲ. ಆದ್ದರಿಂದ 18-08-2021ನೇ ದಿನಾಂಕದ ಆರ್‌ಬಿಐ ಸುತ್ತೋಲೆ ಸಂಖ್ಯೆ : DOR.LEG.REC/40/09-07-005/2021-22ರ ಪ್ರಕಾರ, ಬ್ಯಾಂಕ್ ಸದರಿ ಲಾಕರ್‌ಗಳನ್ನು ಒಡೆದು ಸದರಿ ಲಾಕರ್‌ನಲ್ಲಿರುವ ಯಾವುದೇ ಸ್ವತ್ತುಗಳನ್ನು ಸ್ವಾಧೀನ ಪಡೆದುಕೊಳ್ಳುವ ಮೂಲಕ ಬಾಕಿಗಳನ್ನು ಪಾವತಿಸಲು ನಿರ್ಧರಿಸಿದೆ ಎಂದು ನಿಮಗೆ ತಿಳಿಸಲು ಬಯಸುತ್ತೇವೆ. ಕೆಳಗೆ ತಿಳಿಸಲಾದ ಬಾಕಿಗಳನ್ನು ಪಾವತಿಸಲು ಮತ್ತು ಸದರಿ ಲಾಕರ್‌ಗಳನ್ನು ಮುಂದುವರೆಸಲು / ಹಿಂದಿರುಗಿಸಲು ಯೋಜಿಸಲು ಬಯಸುವ ಯಾರಾದರೂ ಗ್ರಾಹಕರು ಇದ್ದಲ್ಲಿ ಈ ಸಾರ್ವಜನಿಕ ಸೂಚನೆಯ 30 ದಿನಗಳ ಒಳಗೆ ಲಿಖಿತವಾಗಿ ತಮ್ಮ ಸೂಕ್ತ ಪ್ರಾತಿನಿಧ್ಯದೊಂದಿಗೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕರನ್ನು ಅಥವಾ ಕಾನೂನು ಸಲಹೆಗಾರರನ್ನು ಸಂಪರ್ಕಿಸಬಹುದು. ವಿಫಲವಾದರೆ, ಮೇಲೆ ತಿಳಿಸಲಾದ ಆರ್‌ಬಿಐ ನೀತಿಗೆ ಅನುಸಾರವಾಗಿ ಬ್ಯಾಂಕಿನ ವಿರುದ್ಧವಾಗಿ ಕಾನೂನಿನ ಮೊರೆ ಹೋಗುವ ಹಕ್ಕನ್ನು ಕಳೆದುಕೊಂಡಿರುತ್ತೀರಿ ಎಂದು ಬ್ಯಾಂಕ್ ಪರಿಗಣಿಸುತ್ತದೆ.

ಕ್ರಮ ಸಂಖ್ಯೆ	ಲಾಕರ್	ಒಟ್ಟು ಬಾಕಿ (ಜಿಎಸ್‌ಟಿ ಹೊರತು ಪಡಿಸಿ ಮತ್ತು ದಂಡ	ಗ್ರಾಹಕರ ಹೆಸರು	ವಿಳಾಸ
1	702	8000	ಐ. ಹೆಚ್. ಜಾಹಗೀರದಾರ	ವ್ಯವಸ್ಥಾಪಕರು, ಬ್ರಿಟಿಷ್ ಗ್ರಂಥಾಲಯ, ಪ್ರೆಸ್ಟೀಜ್ ತತ್ವ, ನಂ.23, ಕಸ್ತೂರಬಾ ರಸ್ತೆ ಕ್ರಾಸ್, ಬೆಂಗಳೂರು -560001
2	2028	48000	ಚಾರ್ಲ್ಸ್ ಕ್ರಿಸ್ಟೋಫರ್ ಸ್ಮಿತ್ ಮತ್ತು ಮಾರ್ಗ್ರೇಟ್ ಸ್ಮಿತ್	ನಂ.4, ಮಾರ್ಗ್ರೇಟ್ ವಿಲ್ಲಾ, ಲಕ್ಷ್ಮಣ ಲೇಔಟ್, ಹೆಬ್ಬಾಳ, ಬೆಂಗಳೂರು
3	1591	72000	ಕ್ಲೇರಾನ್ ಜರ್ಮನಿ ಮತ್ತು ವಂದನಾ ಸೆಲೆಸ್ಟೈನ್	ನಂ.849/ಎ, 100ನೇ ರಸ್ತೆ, 1ನೇ ಸ್ಟೇಜ್, ಇಂದಿರಾ ನಗರ, ಬೆಂಗಳೂರು – 560008
4	244	24000	ಚೆಲ್ಲಾಕುಮಾರನ್ ಆರ್.	ನಂ.818, 8ನೇ ಬ್ಲಾಕ್, 80 ಫೀಟ್ ರಸ್ತೆ, ಕೋರಮಂಗಲಾ, ಬೆಂಗಳೂರು – 560095
5	1443	24000	ಮಾಧವಿ ರೆಡ್ಡಿ ಮಂಥನಿ ಮತ್ತು ಶ್ರೀಧರ ರೆಡ್ಡಿ ಮಂಥನಿ	98/11, 8ನೇ ಕ್ರಾಸ್, ಆರ್‌ಎಮ್‌ವಿ ಎಕ್ಸಟೆನ್‌ಷನ್, ಸದಾಶಿವ ನಗರ, ಬೆಂಗಳೂರು – 560080
6	1501	48000	ವ್ಹಿ. ಹೆಚ್. ಪ್ರಸಾದ ಮತ್ತು ಜಾನ್ಸಿ ಲಕ್ಷ್ಮೀ ವಿ.	ಕಾಸಾ ಲೇವೆಲ್ಲೆ ಅಪಾರ್ಟಮೆಂಟ್, ಫ್ಲಾಟ ನಂ.ಎ2, ಬ್ಲಾಕ್ II, 85, ಲೆವೆಲ್ಲೆ ರಸ್ತೆ, ಬೆಂಗಳೂರು – 560084
7	19	24000	ರೊನಾಲ್ಡ್ ಫೆಲ್ಸಿಂಗರ್ ಮತ್ತು ರೈಮಂಡ ಮರಿಡ್ ಫ್ರಾನ್ಸಿಸ್	ಕೆ/ಆಫ್. ಬಿ.ಸಿ. ಫ್ರಾನ್ಸಿಸ್, ನಂ.27, ಹಚಿಂಗ್ 3ನೇ ಕ್ರಾಸ್, ಥಾಮಸ್ ನಗರ, ಬೆಂಗಳೂರು – 560084
8	147	10000	ಭಗವಂತಿ ಪರಮಾನಂದ ಕರ್ಣಾ ಮತ್ತು ರಾಜೇಶ ಪರಮಾನಂದ ಕರ್ಣಾ	ನಂ.10, ಅಜಂತಾ ಅಪಾರ್ಟಮೆಂಟ್, 24 ಲೆವೆಲ್ಲೆ ರಸ್ತೆ, ಜಾವಾ ಸಿಟಿ ಕಾಫಿ ಅಂಗಡಿ ಹತ್ತಿರ, ಬೆಂಗಳೂರು – 560001
9	1213	24000	ಅಬ್ದುಲ್ ರಝಾಕ್ ಮತ್ತು ಮರಿಯಮ್ ಅರ್ಷಾ	ನಂ.37, ಲಾಲಬಾಗ ರಸ್ತೆ, 3ನೇ ಕ್ರಾಸ್ ರಸ್ತೆ, ಬೆಂಗಳೂರು – 560027
10	1547	32000	ಪ್ರವೀಣ ಕುಮಾರ ಎಸ್‌ಹೆಚ್	ನಂ.20, 3ನೇ ಕ್ರಾಸ್, 3ನೇ ಮುಖ್ಯ, ವಿದ್ಯಾಗಿರಿ ಲೇಔಟ್, ನಾಗರಭಾವಿ, 1ನೇ ಸ್ಟೇಜ್, ಬೆಂಗಳೂರು – 560072

ಶಾಖಾ ವ್ಯವಸ್ಥಾಪಕರು, ಬ್ಯಾಂಕಿನ ಕಾನೂನು ಸಲಹೆಗಾರರು : **ಜೆ. ಸತೀಶ್‌ಕುಮಾರ್**, ವಕೀಲರು, ನಂ.16/2, 1ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ, 2ನೇ ಹಂತ, ಕೆಎಚ್‌ಬಿ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560079.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: Interlocking_16LC_SBCDiv ದಿನಾಂಕ: 03.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ, ಬೆಂಗಳೂರು ವಿಭಾಗ: ಬೆಂಗಳೂರು ವಿಭಾಗದಲ್ಲಿ 16 ಪಾಸ್–ಇಂಟರ್‌ಲಾಕಿಂಗ್ [illegible]	ರೂ. 13,97,42,549.81/-

ಟೆಂಡರ್ ಸಲ್ಲಿಕೆಯ ಕೊನೆಯ ದಿನಾಂಕ: 25.04.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/11/AAMO/PRB/SWR/2025-26

South Western Railway - SWR | SWRRLY | SWRRLY

ರೈಲು ಗಾಲಿ ಕಾರ್ಖಾನೆ

ಯಲಹಂಕ ಬೆಂಗಳೂರು–560064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಸಿವಿಲ್/ಟೆಂಡರ್/25–26/02 ದಿನಾಂಕ: 07/04/2025

ಇ–ಟೆಂಡರ್: [illegible] http://www.ireps.gov.in [illegible] (works) [illegible]

[illegible]

ಟೆಂಡರ್ ಮುಕ್ತಾಯ ದಿನಾಂಕ: 15.04.2025 [illegible] 30.04.2025 [illegible]

ಉಪ ಮುಖ್ಯ ಇಂಜಿನಿಯರ್

ಪಟ್ಟಣ ಪಂಚಾಯತಿ ಕಾರ್ಯಾಲಯ, ಹಾರೋಹಳ್ಳಿ

ರಾಮನಗರ ಜಿಲ್ಲೆ – 562 112.
ದೂ. : 080–2976 0055, ಇಮೇಲ್ : ka.harohalli.tp@gmail.com

ಸಂಖ್ಯೆ : ಪ.ಪಂ.ಹಾ./ಸಿ.ಶಾ./ಸಿ.ಆರ್/03/2025–26 ದಿನಾಂಕ : 05–04–2025

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಪಬ್ಲಿಕ್ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **ಹಾರೋಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 2024–25 ಕುಡಿಯುವ ನೀರಿನ ಸಮಸ್ಯೆ ಪರಿಹಾರ ಅನುದಾನದಡಿ ರೂ. 3.75 ಲಕ್ಷ ಕಾಮಗಾರಿಗಳ ಟೆಂಡರ್‌ನ್ನು** ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.

ಆಸಕ್ತ ಗುತ್ತಿಗೆದಾರರು ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : 15–04–2025 ರ ಸಂಜೆ 4.00 ರೊಳಗಾಗಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ : 16–04–2025 ರ ಸಂಜೆ 4.30 ರೊಳಗಾಗಿ ಟೆಂಡರ್ ತೆರೆಯಲಾಗುವುದು. ಅಥವಾ ಮುಂದಿನ ದಿನಾಂಕದಂದು ತೆರೆಯಲಾಗುವುದು. ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ (Technical Qualification Criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು.

ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು ಹಾಗೂ ಕಛೇರಿಯ ಅಧಿಕೃತ **ವೆಬ್‌ಸೈಟ್ : www.harohallitown.mrc.gov.in** ನಲ್ಲಿ ಸಹ ಪಡೆಯಬಹುದು.

ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ ಹಾರೋಹಳ್ಳಿ.

ಡಿಐಪಿಆರ್/ರಾಮನಗರ/26/ಮಣಿಪಾಲ್/2025–26

‘ಕಸದ ಶುಲ್ಕ: ಸಾರ್ವಜನಿಕರಿಗೆ ದೊಡ್ಡ ಬರೆ’

ಬೆಂಗಳೂರು: ಘನ ತ್ಯಾಜ್ಯ ವಿಲೇವಾರಿಗೆ ಬಳಕೆದಾರರ ಶುಲ್ಕ ಸಂಗ್ರಹಿಸುವ ಸಂಬಂಧ ಬಿಬಿಎಂಪಿಯು ಹೊರಡಿಸಿರುವ ಆದೇಶ ಸಾರ್ವಜನಿಕರು, ಹೋಟೆಲ್‌ಗಳು ಮತ್ತು ವಾಣಿಜ್ಯ ಸಂಘ ಸಂಸ್ಥೆಗಳ ಮೇಲೆ ಬರೆ ಎಳೆದಂತಾಗಿದೆ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ದೂರಿದರು.

2025–26ನೇ ಸಾಲಿನ ಆಸ್ತಿ ತೆರಿಗೆ ಜತೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ಮತ್ತು ಸುಂಕವನ್ನು ವಿಧಿಸಲಾಗುತ್ತಿದೆ. ಇದು ಜನ ವಿರೋಧಿ ಕೃತ್ಯ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೇ 5ರಂದು ಹೊರಡಿಸಿದ ಸುತ್ತೋಲೆಯನ್ನು ಕಾನೂನಿನ ಪರಿಜ್ಞಾನವಿಲ್ಲದೇ ಮಾಡಿದಂತಿದೆ. ಕಟ್ಟಡದ ನಿವೇಶನದ ಅಳತೆಯ ಆಧಾರದಲ್ಲಿ ಶುಲ್ಕ ವಿಧಿಸುವ ಬದಲಾಗಿ ಕಟ್ಟಡದ ವಿಸ್ತೀರ್ಣವನ್ನು ಆಧರಿಸಿ ಸೆಸ್ ಶುಲ್ಕದ ಜತೆಗೆ ಬಳಕೆದಾರರ ಶುಲ್ಕವನ್ನೂ ವಿಧಿಸಿದ್ದಾರೆ ಎಂದರು.

600 ಚದರಡಿ ಮೇಲಿನವರಿಗೆ ತಿಂಗಳಿಗೆ ₹10 ಮತ್ತು 1,000 ಚದರಡಿಯಿಂದ 2,000 ಚದರಡಿಯವರಿಗೆ ತಿಂಗಳಿಗೆ ₹100 ವಿಧಿಸಲಿದ್ದಾರೆ. ತಿಂಗಳು ಮತ್ತು ವರ್ಷ ಎಂದು ಮಂಗಳವಾರ ಸ್ಪಷ್ಟೀಕರಣ ನೀಡಿದ್ದಾರೆ. ತ್ಯಾಜ್ಯ ವಿಲೇವಾರಿ ಬಳಕೆದಾರರ ಶುಲ್ಕವನ್ನು ಪ್ರತಿ ತಿಂಗಳ ಬದಲಾಗಿ ಒಮ್ಮೆಲೆ ಮುಂಚಿತವಾಗಿ ಸಂಗ್ರಹಿಸುತ್ತಿದ್ದಾರೆ ಎಂದು ಕಿಡಿಕಾರಿದರು.

केनरा बैंक Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಸರ್ಕಲ್ ಆಫೀಸ್
ಆರ್ & ಎಲ್ ವಿಭಾಗ ಬೆಂಗಳೂರು
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001.
ದೂ: 8708450558/ 080–25008800, ಇಮೇಲ್ ಐಡಿ: blrlegal@canarabank.com

ಬ್ಯಾಂಕಿನ ಪ್ಯಾನಲ್‌ನಲ್ಲಿ ವಕೀಲರ ಉದ್ಯೋಗಕ್ಕಾಗಿ ಅಗತ್ಯತೆ

ವಿವರಗಳು : ಡಿಆರ್‌ಟಿಗಳು, ಹೈಕೋರ್ಟ್‌ಗಳು ಸೇರಿದಂತೆ ವಿವಿಧ ನ್ಯಾಯಾಲಯಗಳು ಮತ್ತು ವಿವಿಧ ಸಾಲದ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಕಾನೂನು ಪರಿಶೀಲನೆಯ ವರದಿಗಳನ್ನು ನೀಡುವುದಕ್ಕಾಗಿ ಬ್ಯಾಂಕ್ ಅನ್ನು ಪ್ರತಿನಿಧಿಸಲು ಬ್ಯಾಂಕ್ ತನ್ನ ಸಮಿತಿಗೆ ವಕೀಲರನ್ನು ಎಂಪಾನೆಲಿಂಗ್ ಮಾಡುವ ಪ್ರಕ್ರಿಯೆಯಲ್ಲಿದೆ. ಮಂಜೂರು ಮಾಡಿದ ಕೆಲಸಕ್ಕೆ ಶುಲ್ಕ ರಚನೆಯು ಬ್ಯಾಂಕಿನ ನಿಗದಿತ ಶುಲ್ಕ ರಚನೆಯ ಪ್ರಕಾರ ಇರುತ್ತದೆ.

ಅರ್ಹತೆ : * ನಿಗದಿತ ದಿನಾಂಕದಂದು ಮೇಲೆ ತಿಳಿಸಿದ ನ್ಯಾಯಾಲಯಗಳಲ್ಲಿ 5 ವರ್ಷಗಳಿಗಿಂತ ಹೆಚ್ಚು ಅಭ್ಯಾಸ ಅನುಭವ ಹೊಂದಿರುವ ವಕೀಲರು. * ಇತರ ಬ್ಯಾಂಕ್‌ಗಳು/ಎಫ್‌ಐ ಸಂಸ್ಥೆಗಳಲ್ಲಿ ಅನುಭವ ಹೊಂದಲು ಅಪೇಕ್ಷಣೀಯ. * ವಕೀಲರನ್ನು ಯಾವುದೇ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಸಮಿತಿಯಿಂದ ತೆಗೆದುಹಾಕಲಾಗುವುದಿಲ್ಲ/ ಪಟ್ಟಿಯಿಂದ ತೆಗೆದುಹಾಕಲಾಗುವುದಿಲ್ಲ ಮತ್ತು IBA ಎಚ್ಚರಿಕೆ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ.

ಎಲ್ಲಾ ಆಸಕ್ತ ವಕೀಲರು ಈ ಕೆಳಗಿನ ವಿವರಗಳೊಂದಿಗೆ ಬೆಂಗಳೂರಿನಲ್ಲಿರುವ ಯಾವುದೇ ಕೆನರಾ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಬಹುದು. (1) ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಶಾಖೆಯ ಶಿಫಾರಸಿನೊಂದಿಗೆ ನಮ್ಮ ಬ್ಯಾಂಕಿನ ಸ್ವರೂಪದಲ್ಲಿರುವ ಬಯೋ ಡೇಟಾ, (2) ಪದವಿ ಪ್ರಮಾಣಪತ್ರ (ಎಲ್‌ಎಲ್‌ಬಿ) (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (3) ಬಾರ್ ಕೌನ್ಸಿಲ್ ನೋಂದಣಿ ಪ್ರಮಾಣಪತ್ರ (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (4) ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್‌ನ ಪ್ರತಿ (ಶಾಖೆಯಿಂದ ಮೂಲ ಪ್ರತಿಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (5) ಇತರ ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳೊಂದಿಗೆ ನೋಂದಾಯಿಸಿದ್ದರೆ, ನೋಂದಣಿ ಪತ್ರಗಳು ಮತ್ತು ಅನುಭವ ಪ್ರಮಾಣಪತ್ರಗಳು. (6) ಯಾವುದೇ ಇತರ ಸಂಬಂಧಿತ ದಾಖಲೆಗಳು (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು).

ಸ್ಥಳ : ಬೆಂಗಳೂರು
ದಿನಾಂಕ : 07.04.2025

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ಪಿ.ವಿ. ನಾರಾಯಣರ ಸಂಶೋಧನೆಗಳನ್ನು ಅನುಸರಿಸಿ: ಹಂಪನಾ

ಬೆಂಗಳೂರು: ‘ಪಿ.ವಿ. ನಾರಾಯಣ ಅವರು ಕನ್ನಡ ಸಾಹಿತ್ಯ ವೈವಿಧ್ಯಮಯ ಕ್ಷೇತ್ರಗಳಲ್ಲಿ ದುಡಿದ ಅಪರೂಪದ ಸಾಹಿತಿ. ಅವರ ಸಂಶೋಧನೆಗಳನ್ನು ಇಂದಿನ ಕಿರಿಯರು ಅನುಸರಿಸುವಂತಾಗಲಿ ’ ಎಂದು ಸಾಹಿತಿ ಹಂಪ ನಾಗರಾಜಯ್ಯ ತಿಳಿಸಿದರು.

ಬಿಎಂಶ್ರೀ ಪ್ರತಿಷ್ಠಾನ, ಉದಯ ಭಾನು ಕಲಾಸಂಘ, ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗದ ಸಹಯೋಗದಲ್ಲಿ ಆಯೋಜಿಸಿದ್ದ ‘ಪಿ.ವಿ. ನಾರಾಯಣ ನುಡಿ ನಮನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಚನಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿದ ನಾರಾಯಣ ಅವರು, ‘ಧರ್ಮ ಕಾರಣ’ ಕೃತಿ ವಿವಾದಕ್ಕೆ ಕಾರಣವಾಯಿತಾದರೂ ಕುಗ್ಗದೇ ಸಾಹಿತ್ಯ ಕೃಷಿ ಮುಂದುವರಿಸಿದ್ದರು’ ಎಂದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website : www.kiadb.in

ಸಂಖ್ಯೆ: ಕ.ಕೈ.ಪ್ರ.ಅ.ಮಂ./ಸಿಇಓ&ಇಎಂ/64/2025-26 ದಿನಾಂಕ:09.04.2025

“ಸಾರ್ವಜನಿಕ ಪ್ರಕಟಣೆ”

ಕರ್ನಾಟಕದಲ್ಲಿ ಬೃಹತ್/ಮೆಗಾ/ಸೂಪರ್ ಮೆಗಾ-ಗಾತ್ರದ ಹೂಡಿಕೆ ಪ್ರದೇಶಗಳು ಮತ್ತು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು, ನಿಯಂತ್ರಿಸಲು ಮತ್ತು ನಿರ್ವಹಿಸಲು ವಿಶೇಷ ಹೂಡಿಕೆ ಪ್ರದೇಶ (Special Investment Region) ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಅದರಂತೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಯನ್ನು ಅಧಿಸೂಚಿತ ವಿಶೇಷ ಹೂಡಿಕೆ ಪ್ರದೇಶವನ್ನು (SIR) ನಿರ್ವಹಿಸಲು ಅತ್ಯುನ್ನತ ಪ್ರಾಧಿಕಾರವಾಗಿ ನೇಮಿಸಲಾಗಿದೆ. ಆದ್ದರಿಂದ, ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ 2022 (2023 ರ ಕರ್ನಾಟಕ ಕಾಯ್ದೆ 5) ರ ವಿಭಾಗ 3 ರ ಉಪವಿಭಾಗ (1) ರ ಪ್ರಕಾರ ನೀಡಲಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ತನ್ನ ಕೆಲವು ಕೈಗಾರಿಕಾ ಪ್ರದೇಶಗಳನ್ನು “ವಿಶೇಷ ಹೂಡಿಕೆ ಪ್ರದೇಶ” (SIR) ಎಂದು ಸೂಚಿಸಿದೆ. ಇದಲ್ಲದೆ, ಸರ್ಕಾರವು ಈ ವಿಶೇಷ ಹೂಡಿಕೆ ಪ್ರದೇಶಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ (Regional Development Authority) ಎಂದು ಆದೇಶಿಸಿದೆ. ವಿಶೇಷ ಹೂಡಿಕೆ ಪ್ರದೇಶಗಳ ವಿವರಗಳು ಈ ಕೆಳಗಿನಂತಿವೆ:

1. ಅಪೆರಲ್ ಪಾರ್ಕ್ 1ನೇ ಹಂತ, ಅಪೆರಲ್ ಪಾರ್ಕ್ 2ನೇ ಹಂತ, ಓಬದೇನಹಳ್ಳಿ (ದೊಡ್ಡಬಳ್ಳಾಪುರ 3ನೇ ಹಂತ) ಕೈಗಾರಿಕಾ ಪ್ರದೇಶ, ಆದಿನಾರಾಯಣ ಹೊಸಹಳ್ಳಿ (ದೊಡ್ಡಬಳ್ಳಾಪುರ 4ನೇ ಹಂತ), ದೊಡ್ಡಬಳ್ಳಾಪುರ ಸಾಮಾನ್ಯ ಕೈಗಾರಿಕಾ ಪ್ರದೇಶ ಕೈಗಾರಿಕಾ ಪ್ರದೇಶ.
2. ದಾಬಸ್‌ಪೇಟೆ 1 & 2 ಹಂತ, ದಾಬಸ್‌ಪೇಟೆ 3ನೇ ಹಂತ (ಸೋಂಪುರ 1 ಮತ್ತು 2ನೇ ಹಂತ), ದಾಬಸ್‌ಪೇಟೆ 4ನೇ ಹಂತ (ಅವ್ವೇರಹಳ್ಳಿ), ದಾಬಸ್‌ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶ.
3. ಬಿಡದಿ 1ನೇ ಮತ್ತು 2ನೇ ಹಂತ(ಸೆಕ್ಟರ್1 & 2) ಕೈಗಾರಿಕಾ ಪ್ರದೇಶ.
4. ಕಡಕೋಳ, ಅಡಕನಹಳ್ಳಿ, ಕೋಚನಹಳ್ಳಿ, ಇಮ್ಮಾವು, ತಾಂಡ್ಯ 2ನೇ ಹಂತ 1ನೇ ಹಂತ, ತಾಂಡ್ಯ 2ನೇ ಹಂತ, ತಾಂಡ್ಯ ಕೈಗಾರಿಕಾ ಪ್ರದೇಶ, ಮಹಿಳಾ ಉದ್ಯಮಿಗಳ ಪಾರ್ಕ್ 1ನೇ ಮತ್ತು 2ನೇ ಹಂತ, ಎಸ್‌ಯುಸಿ, ಫಿಲ್ಮ್ ಸಿಟಿ.
5. ಹೆಬ್ಬಾಳ, ಹೂಟಗಳ್ಳಿ, ಬೆಳವಾಡಿ, ಬೆಳಗೊಳ, ಕೂರ್ಗಳ್ಳಿ, ಹೆಬ್ಬಾಳ 2ನೇ ಹಂತದ ಕೈಗಾರಿಕಾ ಪ್ರದೇಶ, ಮೆ||ಬಿಇಎಂಎಲ್ (ಎಸ್‌ಯುಸಿ) ಕೈಗಾರಿಕಾ ಪ್ರದೇಶ.
6. ವಸಂತನರಸಾಪುರ 1ನೇ ಹಂತ, ವಸಂತನರಸಾಪುರ 1ನೇ ಹಂತ (ಅನೆಕ್ಸ್), ವಸಂತನರಸಾಪುರ ಕೈಗಾರಿಕಾ ಪ್ರದೇಶ, ಹಂತ-2 ಮತ್ತು ವಸಂತನರಸಾಪುರ 3ನೇ ಹಂತದ ಕೈಗಾರಿಕಾ ಪ್ರದೇಶ, ತುಮಕೂರು.
7. ಗೌರಿಬಿದನೂರು 1ನೇ, 2ನೇ ಮತ್ತು 3ನೇ ಹಂತದ ಕೈಗಾರಿಕಾ ಪ್ರದೇಶ.
8. ಹಾರೋಹಳ್ಳಿ 1ನೇ, 2ನೇ ಮತ್ತು 3ನೇ ಹಂತದ ಕೈಗಾರಿಕಾ ಪ್ರದೇಶ.
9. ಹಾಸನ ಗ್ರೋಥ್ ಸೆಂಟರ್, ಗ್ರೋಥ್ ಸೆಂಟರ್ ಉಪ-ಲೇಔಟ್‌ಗಳು, ಹಾಸನ ಜವಳಿ ವಲಯ, ಜೈವಿಕ ತಂತ್ರಜ್ಞಾನ ಮತ್ತು ಫಾರ್ಮಾ ವಲಯ ಹಾಸನ ತಾಲ್ಲೂಕು, ಹಾಸನ ಜಿಲ್ಲೆ
10. ಬದನಗುಪ್ಪೆ – ಕೆಲ್ಲಂಬಳ್ಳಿ ಹಂತ-1, ಮತ್ತು ಬದನಗುಪ್ಪೆ –ಕೆಲ್ಲಂಬಳ್ಳಿ ಹಂತ-2 ಕೈಗಾರಿಕಾ ಪ್ರದೇಶ ಚಾಮರಾಜನಗರ ಜಿಲ್ಲೆ.
11. ಕಡೇಚೂರು ಕೈಗಾರಿಕಾ ಪ್ರದೇಶ, ಗುರ್ಮಿಟ್ಕಲ್ ತಾಲೂಕು, ಯಾದಗಿರಿ ಜಿಲ್ಲೆ
12. ರಾಯಚೂರು ಬೆಳವಣಿಗೆ ಕೇಂದ್ರ, ಕೈಗಾರಿಕಾ ಪ್ರದೇಶ, ರಾಯಚೂರು ಜಿಲ್ಲೆ.
13. ನರಸಾಪುರ, ಜಕ್ಕಸಂದ್ರ 1 ಮತ್ತು 2 ನೇ ಹಂತ, ಬಾವನಹಳ್ಳಿ ಕೈಗಾರಿಕಾ ಪ್ರದೇಶ.
14. ಹೈಟೆಕ್ ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, ಹಂತ-1 (ಹಾರ್ಡ್‌ವೇರ್ ವಲಯ), ಹೈಟೆಕ್ ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, ಹಂತ-1 (ಐಟಿ ವಲಯ), ಹೈಟೆಕ್ ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, ಹಂತ-1 (ಏರೋಸ್ಪೇಸ್ ವಲಯ), ಹೈಟೆಕ್ ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, ಹಂತ-1 (ಏರೋಸ್ಪೇಸ್ ಸೆಕ್ಟರ್), ಹೈಟೆಕ್ ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, ಹಂತ-1 (ಏರೋಸ್ಪೇಸ್ ಎಸ್‌ಇಝೆಡ್ ವಲಯ),
15. ನೌಬಾದ್ ಮತ್ತು ಕೊಲ್ಹಾರ್ ಹಂತ-1 ಕೈಗಾರಿಕಾ ಪ್ರದೇಶ, ನೌಬಾದ್ ವಸತಿ ಮತ್ತು ಆಟೋನಗರ, ಕೊಲ್ಹಾರ್ ಹಂತ-2 ಕೈಗಾರಿಕಾ ಪ್ರದೇಶಗಳು.
16. ಬೊಮ್ಮಸಂದ್ರ 1ನೇ, 2ನೇ, 3ನೇ ಮತ್ತು 4ನೇ ಹಂತದ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ-ಜಿಗಣಿ ಲಿಂಕ್ ರಸ್ತೆ ಕೈಗಾರಿಕಾ ಪ್ರದೇಶ.
17. ಮುಮ್ಮಿಗಟ್ಟಿ, ಬೇಲೂರು, ಮುಮ್ಮಿಗಟ್ಟಿ ಗ್ರಾಮ, ನರೇಂದ್ರ ಮತ್ತು ಮುಮ್ಮಿಗಟ್ಟಿ ಭಾಗ-2 (ಗುಗ್ಗಿಗಟ್ಟಿ) ಕೈಗಾರಿಕಾ ಪ್ರದೇಶ.

ಮುಂದುವರೆದು, ಅಧಿಸೂಚನೆಯ ದಿನಾಂಕದಿಂದ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ (ಕೆಐಎಡಿಬಿ) ಸ್ಥಳೀಯ ಆಡಳಿತಕ್ಕಾಗಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ ಹಾಗೂ ಸದರಿ ಪ್ರದೇಶಕ್ಕೆ ತೆರಿಗೆಗಳ ಮೌಲ್ಯಮಾಪನ, ತೆರಿಗೆ ನಿಗದಿ ಮತ್ತು ವಸೂಲಿಗಾಗಿ ನಿರ್ಧಾರಗಳು ಮತ್ತು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಅದರಂತೆ, ಏಪ್ರಿಲ್ 1, 2025 ರಿಂದ ಜಾರಿಗೆ ಬರುವಂತೆ ಈ ಅಧಿಸೂಚಿತ ವಿಶೇಷ ಹೂಡಿಕೆ ಪ್ರದೇಶಗಳಲ್ಲಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಅಧಿಕಾರ ನೀಡಲಾಗಿದೆ.

ವಿಶೇಷ ಹೂಡಿಕೆ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಕೈಗಾರಿಕಾ ಘಟಕಗಳು/ಪ್ಲಾಟ್‌ಗಳ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಇನ್ನು ಮುಂದೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸಂಗ್ರಹಿಸುತ್ತದೆ ಎಂದು ಬಿಬಿಎಂಪಿ/ಪುರಸಭೆ ನಿಗಮಗಳು/ಪಟ್ಟಣ ಪುರಸಭೆಗಳು/ಗ್ರಾಮ ಪಂಚಾಯಿತಿಗಳಿಗೆ ಈ ಮೂಲಕ ತಿಳಿಸಲಾಗಿದೆ. ಹಾಗೂ, ಅಧಿಸೂಚಿತ ವಿಶೇಷ ಹೂಡಿಕೆ ಪ್ರದೇಶಗಳಲ್ಲಿನ ಉದ್ಯಮಿಗಳು/ಹಂಚಿಕೆದಾರರು ಚಾಲ್ತಿಯಲ್ಲಿರುವ ಆಸ್ತಿ ತೆರಿಗೆಗಳನ್ನು ಇನ್ನು ಮುಂದೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಪಾವತಿಸಲು ಈ ಮೂಲಕ ತಿಳಿಸಲಾಗಿದೆ.

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ
ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ, ಬೆಂಗಳೂರು

DIPR/CP/183/Zen/2025-26

‘ಸೈಡ್ ಪಿಕ್ ಅಪ್’ಗೆ ವಿರೋಧ

ಕೆಎಸ್‌ಟಿಡಿಸಿ ಟ್ಯಾಕ್ಸಿ ಸ್ಥಗಿತ ● ವಿಮಾನ ನಿಲ್ದಾಣದ ಮುಂದೆ ಚಾಲಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ‘ಸೈಡ್ ಪಿಕ್ ಅಪ್’ ವಿರೋಧಿಸಿ ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರು ಮಂಗಳವಾರ ತಡರಾತ್ರಿ ಪ್ರತಿಭಟನೆ ನಡೆಸಿದರು

ದೇವನಹಳ್ಳಿ: ತಾಲ್ಲೂಕಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅನಧಿಕೃತ ಖಾಸಗಿ ವಾಹನಗಳ ‘ಸೈಡ್ ಪಿಕ್ ಅಪ್’ ಹಾವಳಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಿ ಮಂಗಳವಾರ ರಾತ್ರಿಯಿಂದಲೇ ಕೆಎಸ್‌ಟಿಡಿಸಿ ಟ್ಯಾಕ್ಸಿ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಅಧಿಕೃತವಾಗಿ ಕೆಎಸ್‌ಟಿಡಿಸಿ ಮತ್ತು ‘ರೆಫಿಕ್ಸ್’ ಸಂಸ್ಥೆ ಒಪ್ಪಂದ ಮಾಡಿಕೊಂಡಿವೆ. ಬೆಂಗಳೂರು ನಗರದ ವಿವಿಧೆಡೆಯಿಂದ ವಿಮಾನ ನಿಲ್ದಾಣಕ್ಕೆ ಹಾಗೂ ವಿಮಾನ ನಿಲ್ದಾಣದಿಂದ ವಿವಿಧ ಭಾಗಗಳಿಗೆ ‘ಏರ್‌ಪೋರ್ಟ್ ಟ್ಯಾಕ್ಸಿ’ ಹೆಸರಿನಲ್ಲಿ ಸೇವೆ ಒದಗಿಸಿಕೊಂಡು ಬರಲಾಗುತ್ತಿದೆ.

ಅನುಮತಿ ಇಲ್ಲದಿದ್ದರೂ ರ್‍ಯಾಪಿಡೊ, ನಮ್ಮ ಯಾತ್ರಿ, ಕ್ವಿಕ್ ರೈಡ್ ಸಂಸ್ಥೆಗಳು ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ಮಾಡುತ್ತಿವೆ. ಈ ಸಂಸ್ಥೆಗಳ ಪ್ರತಿನಿಧಿಗಳು ಕೆಎಸ್‌ಟಿಡಿಸಿ ಟ್ಯಾಕ್ಸಿ ಪ್ರತಿನಿಧಿಗಳೆಂದು ಪರಿಚಯಿಸಿಕೊಂಡು ಪ್ರಯಾಣಿಕರನ್ನು ದಾರಿ ತಪ್ಪಿಸುತ್ತಿವೆ ಎಂದು ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರು ಆರೋಪಿಸಿದ್ದಾರೆ.

ವಿಮಾನ ನಿಲ್ದಾಣದಿಂದ ಮೂರ್ನಾಲ್ಕು ಪ್ರಯಾಣಿಕರನ್ನು ಒಂದೇ ಟ್ಯಾಕ್ಸಿಯಲ್ಲಿ ತುಂಬಿ ಎಲ್ಲರಿಂದಲೂ ಬಾಡಿಗೆ ವಸೂಲಿ ಮಾಡಲಾಗುತ್ತಿದೆ. ಇದನ್ನು ಪ್ರಶ್ನಿಸಿದ ಟ್ಯಾಕ್ಸಿ ಚಾಲಕರ ಮೇಲೆ ಮಂಗಳವಾರ ತಡ ರಾತ್ರಿ ಹಲ್ಲೆ ನಡೆದಿದೆ.

ಬೆಳಿಗ್ಗೆಯಿಂದ ಕಾಣದ ಟ್ಯಾಕ್ಸಿ ಮಾಫಿಯಾದ 30-40 ಜನರು ರಾತ್ರಿಯಾಗುತ್ತಲೇ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಳ್ಳುತ್ತಾರೆ. ವಿದೇಶದಿಂದ ಬರುವ ವಿಮಾನ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ಸೈಡ್ ಪಿಕಪ್ ಜಾಲ ಸಕ್ರಿಯವಾಗುತ್ತದೆ ಎಂದು ಟ್ಯಾಕ್ಸಿ ಚಾಲಕರು ಆಕ್ರೋಶ ವ್ಯಕ್ತಪಡಿಸಿದರು.

ಓಲಾ, ಉಬರ್, ಬ್ಲೂ ಸ್ಮಾರ್ಟ್ ಟ್ಯಾಕ್ಸಿಗಳಿಗೆ ಟರ್ಮಿನಲ್‌ನಿಂದ ಸ್ವಲ್ಪ ದೂರದಲ್ಲಿ ವಾಹನ ನಿಲ್ಲಿಸಿಕೊಳ್ಳಲು ಬಾಡಿಗೆ ಆಧಾರದಲ್ಲಿ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರವೂ ಅವಕಾಶ ಕಲ್ಪಿಸಿದೆ. ಅದೇ ರೀತಿಯಲ್ಲಿ ಟರ್ಮಿನಲ್ ಮುಂಭಾಗದಲ್ಲಿ ಕೆಎಸ್‌ಟಿಡಿಸಿ, ‘ರೆಫಿಕ್ಸ್’ ಟ್ಯಾಕ್ಸಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ರ್‍ಯಾಪಿಡೊ, ನಮ್ಮ ಯಾತ್ರಿ, ಕ್ವಿಕ್ ರೈಡ್ ಸಂಸ್ಥೆಗಳಿಗೆ ವಿಮಾನ ನಿಲ್ದಾಣದಲ್ಲಿ ಅವಕಾಶವಿಲ್ಲದ ಕಾರಣ ಸೈಡ್ ಪಿಕ್ ಅಪ್‌ಗೆ ಬೆಂಬಲಿಸುತ್ತಿದ್ದಾರೆ ಎನ್ನುವುದು ಚಾಲಕರ ಆರೋಪ.

ದೂರು ಸ್ವೀಕರಿಸಲು ಪೊಲೀಸರ ನಕಾರ

ವಿಮಾನ ನಿಲ್ದಾಣದಲ್ಲಿ ಅನಧಿಕೃತ ಸೈಡ್ ಪಿಕ್ ಅಪ್ ಮಾಡುವ ಟ್ಯಾಕ್ಸಿ ಜಾಲ ದುಪ್ಪಟ್ಟು ದರ ವಸೂಲಿ ಪ್ರಶ್ನಿಸಿದ ವಿಮಾನ ನಿಲ್ದಾಣ ಸಿಬ್ಬಂದಿ ಮತ್ತು ಟ್ಯಾಕ್ಸಿ ಚಾಲಕರ ಮೇಲೆ ಹಲ್ಲೆ ಮಾಡಿದ್ದಾರೆ. ಈ ಕುರಿತು ದೂರು ನೀಡಿದರೂ ಅದನ್ನು ಪೊಲೀಸರು ಸ್ವೀಕರಿಸುತ್ತಿಲ್ಲ.

ರ್‍ಯಾಪಿಡೊ, ನಮ್ಮ ಯಾತ್ರಿ, ಕ್ವಿಕ್ ರೈಡ್ ಸಂಸ್ಥೆಗಳ ಪರವಾಗಿ ಪೊಲೀಸರು ವರ್ತಿಸುತ್ತಿದ್ದಾರೆ. ವಿಮಾನ ನಿಲ್ದಾಣದ ಸಿಬ್ಬಂದಿಯೂ ಅಸಹಾಯಕರಾಗಿದ್ದಾರೆ ಎಂದು ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ರಮೇಶ್ ಆರೋಪ ಮಾಡಿದ್ದಾರೆ.



ಸಚಿವ ಸಂಪುಟ ಸಭೆಯಲ್ಲಿ ಟಿಪ್ಪಣಿ ಮಂಡಿಸಲು ನಗರಾಭಿವೃದ್ಧಿ ಇಲಾಖೆ ಸಿದ್ಧತೆ

ನಳಿನ್‌ಗೆ ನಿವೇಶನ: 'ಸುಪ್ರೀಂ' ಆದೇಶ ಉಲ್ಲಂಘನೆ?

• ಮಂಜುನಾಥ ಹೆಬ್ಬಾರ್

ನವದೆಹಲಿ: ಕಾಂಗ್ರೆಸ್–ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣದ ಬಗ್ಗೆ ರಾಜ್ಯ ರಾಜಕಾರಣದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ, ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಜಿ–ಕೆಟಗರಿ ಕೋಟಾದಲ್ಲಿ 50X80 ಅಡಿ ಅಳತೆಯ ನಿವೇಶನಕ್ಕೆ ಶುದ್ಧ ಕ್ರಯಪತ್ರ ಮಾಡಿಕೊಡಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನುಮೋದನೆಯ ಮೇರೆಗೆ ಈ ಟಿಪ್ಪಣಿಯನ್ನು ಶುಕ್ರವಾರ ನಡೆಯಲಿರುವ ಸಚಿವ ಸಂಪುಟ ಸಭೆಗೆ ಮಂಡಿಸಲು ನಗರಾಭಿವೃದ್ಧಿ ಇಲಾಖೆ ಸಿದ್ಧತೆ ನಡೆಸಿದೆ. ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಚದರ ಅಡಿಗೆ ₹23 ಸಾವಿರದಿಂದ ₹30 ಸಾವಿರದ ವರೆಗೆ ಇದೆ. ಈ ನಿವೇಶನದ ಮೌಲ್ಯ ₹12 ಕೋಟಿಯಷ್ಟು ಎಂದು ಅಂದಾಜಿಸಲಾಗಿದೆ.

ಮುಖ್ಯಾಂಶಗಳು

- ಎಚ್‌ಎಸ್‌ಆರ್ ಬಡಾವಣೆಯ 50X80 ಅಡಿ ನಿವೇಶನ
- ನಿವೇಶನದ ಮೌಲ್ಯ ಅಂದಾಜು ₹12 ಕೋಟಿ
- ಪ್ರಸ್ತಾವನೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅನುಮೋದನೆ

ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ರಾಜಕಾರಣಿಗಳಿಗೆ ಕಾನೂನುಬಾಹಿರವಾಗಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಈ ಬದಲಿ ನಿವೇಶನಗಳನ್ನು ವಾಪಸ್ ಪಡೆಯುವಂತೆ ಪ್ರಾಧಿಕಾರಕ್ಕೆ ಅಕ್ಟೋಬರ್ 11ರಂದು ನಿರ್ದೇಶನ ನೀಡಿತ್ತು. ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿ ನೀಡಿರುವ ವರದಿಯನ್ನು ಪರಿಗಣಿಸಿ ಈ ಸೂಚನೆ ನೀಡಿತ್ತು.

'ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್‌ನಲ್ಲಿ ನೀಡಿರುವ ಆದೇಶವನ್ನು ಉಲ್ಲಂಘಿಸಿ ಪ್ರಾಧಿಕಾರವು ಆರ್‌ಎಂವಿ ಎರಡನೇ ಹಂತದಲ್ಲಿ ರಾಜಕಾರಣಿಗಳಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿದೆ. ಇದು 1984ರ ನಿವೇಶನ ಹಂಚಿಕೆ ನಿಯಮದ ಸೆಕ್ಷನ್ 11 ಎ ಯ ಉಲ್ಲಂಘನೆ' ಎಂದು ಸಮಿತಿ ವರದಿ ಸಲ್ಲಿಸಿತ್ತು. ಮರು ಸ್ವಾಧೀನ ಪಡೆದಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು. ನಳಿನ್ ಕುಮಾರ್ ಕಟೀಲ್ ಅವರಿಗೆ ನಿವೇಶನ ನೀಡಲು ಮುಂದಾಗಿರುವುದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಕಾನೂನು ಇಲಾಖೆ ಆಕ್ಷೇಪ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ) ನಿಯಮ 1984ರ 14(3)(ಎ) ಮತ್ತು ಬಿ ಅನ್ವಯ, 10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಕರಾರು ಅವಧಿ ಮುಕ್ತಾಯಗೊಂಡ ಬಳಿಕವೇ ಹಂಚಿಕೆದಾರರಿಗೆ ಶುದ್ಧ ಕ್ರಯಪತ್ರ ನೋಂದಾಯಿಸಲು ಅವಕಾಶ ಇದೆ ಎಂದು ನಗರಾಭಿವೃದ್ಧಿ ಇಲಾಖೆಯ ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಅಭಿಪ್ರಾಯ ನೀಡಿರುವ ಕಾನೂನು ಇಲಾಖೆ, ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಗಳ ಪ್ರಕಾರ ಗುತ್ತಿಗೆ ಅವಧಿಯಲ್ಲಿ ಶುದ್ಧ ಕ್ರಯಪತ್ರ ನೋಂದಾಯಿಸಲು ಅವಕಾಶ ಇಲ್ಲ ಎಂದೂ ಇಲಾಖೆಯು ಸ್ಪಷ್ಟಪಡಿಸಿದೆ.

ಪ್ರಕರಣವೇನು:

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಟೀಲ್ ಅವರಿಗೆ ಜಿ–ಕೆಟಗರಿಯಡಿ ಬನಶಂಕರಿ ಆರನೇ ಹಂತ ಏಳನೇ ಬಡಾವಣೆಯಲ್ಲಿ 15X24 ಮೀಟರ್ ಅಳತೆಯ ನಿವೇಶನ (ಸಂಖ್ಯೆ 204) ಹಂಚಿಕೆ ಮಾಡಿ 2009ರ ನವೆಂಬರ್ 2ರಂದು ಹಂಚಿಕೆ ಪತ್ರ ನೀಡಲಾಗಿತ್ತು. ನಂತರ ಕಟೀಲ್ ಮನವಿಯ ಮೇರೆಗೆ ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 3ರಲ್ಲಿ ನಿವೇಶನ (ಸಂಖ್ಯೆ 13/ಬಿ1) ಹಂಚಿಕೆ ಮಾಡಿ 2011ರ ಜೂನ್‌ನಲ್ಲಿ ಹಂಚಿಕೆ ಪತ್ರ ನೀಡಲಾಗಿತ್ತು. ಹೆಚ್ಚುವರಿ ವಿಸ್ತೀರ್ಣದ ಮೌಲ್ಯ ಹಾಗೂ ಬಡ್ಡಿ ಪಾವತಿಸಿದ್ದ ಕಟೀಲ್ ಅವರು ನಿವೇಶನವನ್ನು ನೋಂದಾಯಿಸಿಕೊಡುವಂತೆ ಮನವಿ ಮಾಡಿದ್ದರು. ಆದರೆ, ಜಿ–ಕೆಟಗರಿಯ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದ್ದರಿಂದ ಪ್ರಾಧಿಕಾರವು ನಿವೇಶನದ ನೋಂದಣಿ ಮಾಡಿಕೊಟ್ಟಿರಲಿಲ್ಲ. ನ್ಯಾಯಮೂರ್ತಿ ಡಿ.ವಿ.ಶೈಲೇಂದ್ರ ಕುಮಾರ್ ವಿಚಾರಣಾ ಸಮಿತಿಯ ಆದೇಶದ ಪ್ರಕಾರ, ಪ್ರಾಧಿಕಾರವು ಗುತ್ತಿಗೆ ಹಾಗೂ ಮಾರಾಟ ಪತ್ರವನ್ನು ನೋಂದಾಯಿಸಿ 2020ರಲ್ಲಿ ಸ್ವಾಧೀನಪತ್ರ ನೀಡಿತ್ತು. 'ಪೂರ್ಣ ಮೌಲ್ಯ ಪಾವತಿಸಿದ್ದರೂ ನಿವೇಶನವನ್ನು ತಡವಾಗಿ ನೋಂದಣಿ ಮಾಡಲಾಗಿದೆ. ವಿಶೇಷ ಪ್ರಕರಣವೆಂದು ಪರಿಗಣಿಸಿ ನಿವೇಶನದ ಗುತ್ತಿಗೆ ಅವಧಿ ಸಡಿಲಿಸಿ ಶುದ್ಧ ಕ್ರಯಪತ್ರ ಮಾಡಿಕೊಡಬೇಕು' ಎಂದು ನಳಿನ್ ಅವರು ಪ್ರಾಧಿಕಾರಕ್ಕೆ ಮನವಿ ಮಾಡಿದ್ದರು.

ಈ ಪ್ರಸ್ತಾವನೆ ತಿರಸ್ಕರಿಸಬಹುದು ಅಥವಾ ಶುದ್ಧ ಕ್ರಯಪತ್ರ ನೋಂದಾಯಿಸಲು ಅನುಮತಿ ನೀಡಬಹುದು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್ ಅವರು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಊರು, ಪ್ರವಾಸ ತೆರಳುವವರಿಗೆ ಪೊಲೀಸರ ಸಲಹೆ

ಬೆಂಗಳೂರು: ಬೇಸಿಗೆ ರಜೆಯ ಸಂದರ್ಭದಲ್ಲಿ ಮನೆಗಳ ಬಾಗಿಲಿಗೆ ಬೀಗ ಹಾಕಿ, ಊರು ಅಥವಾ ಪ್ರವಾಸಕ್ಕೆ ತೆರಳುವ ಸಂದರ್ಭದಲ್ಲಿ ನಗರದ ನಿವಾಸಿಗಳು ಎಚ್ಚರ ವಹಿಸಬೇಕು ಎಂದು ನಗರ ಪೊಲೀಸ್ ಕಮಿಷನ್ ಬಿ. ದಯಾನಂದ ಅವರು ಸಲಹೆ ನೀಡಿದ್ದಾರೆ.

'ಮನೆಯ ಭದ್ರತೆ ಬಗ್ಗೆ ನಿವಾಸಿಗಳು ಹೆಚ್ಚು ಎಚ್ಚರಿಕೆ ವಹಿಸಬೇಕು. ದೀರ್ಘಾವಧಿಗೆ ಪ್ರವಾಸಕ್ಕೆ ತೆರಳುವುದೇ ಆಗಿದ್ದರೆ ಮನೆಯಲ್ಲಿ ಬೆಲೆಬಾಳುವ ವಸ್ತು ಇಡುವುದು ಬೇಡ. ಅವುಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇರಿಸುವುದು ಸೂಕ್ತ' ಎಂದು ಸೂಚನೆ ನೀಡಿದ್ದಾರೆ. 'ಮನೆಗಳಿಗೆ ಗುಣಮಟ್ಟದ ಬೀಗ ಅಳವಡಿಸಬೇಕು. ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿಕೊಳ್ಳಬೇಕು. ಒಂದಕ್ಕಿಂತ ಹೆಚ್ಚು ದಿನ ಪ್ರವಾಸಕ್ಕೆ ಹೋಗುವುದಿದ್ದರೆ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿ ತೆರಳಬೇಕು. ಆಗ ಆಯಾ ಠಾಣೆಯ ವ್ಯಾಪ್ತಿಯ ಪೊಲೀಸರು ಗಸ್ತು ನಡೆಸಲಿದ್ದಾರೆ' ಎಂದು ಹೇಳಿದರು.

'ಮನೆಯಿಂದ ಹೊರ ಹೋಗುವ ಮುನ್ನ ಕಿಟಕಿ, ಬಾಗಿಲು, ಗೇಟ್ ಬಂದ್ ಮಾಡಬೇಕು. ಕೀಗಳನ್ನು ಮನೆಯ ಹೊರಗಿನ ಹೂವಿನ ಕುಂಡ, ಪಾದರಕ್ಷೆಗಳು ಅಥವಾ ಡೋರ್ ಮ್ಯಾಟ್ ಕೆಳಗೆ ಬಚ್ಚಿಡುವುದು ಬೇಡ. ಮನೆಯ ಮುಖ್ಯ ಗೇಟ್ ಲಾಕ್ ಮಾಡದೇ ಇರುವುದು ಸೂಕ್ತ. ಲಾಕ್ ಮಾಡಿದರೆ ಮನೆಯಲ್ಲಿ ಯಾರೂ ಇಲ್ಲ ಎಂದು ಕಳ್ಳರಿಗೆ ತಿಳಿಯಲಿದೆ. ಮನೆಯಲ್ಲಿ ಯಾರಾದರೂ ಇದ್ದಾರೆ ಎಂಬ ಭಾವನೆ ಮೂಡಿಸಲು ಮನೆಯೊಳಗಿನ ಒಂದು ವಿದ್ಯುತ್ ದೀಪವನ್ನು ಆನ್ ಮಾಡಿ ಹೋಗುವುದು ಸೂಕ್ತ' ಎಂದಿದ್ದಾರೆ.



ಜಾಮೀನು ಅರ್ಜಿ: ಆದೇಶ ಕಾಯ್ದಿರಿಸಿದ ನ್ಯಾಯಾಲಯ

ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಬಳ್ಳಾರಿಯ ಚಿನ್ನದ ವ್ಯಾಪಾರಿ ಸಾಹಿಲ್ ಜೈನ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಆದೇಶವನ್ನು ಕಾಯ್ದಿರಿಸಿದೆ. ಏಪ್ರಿಲ್ 15ರಂದು ಆದೇಶ ಪ್ರಕಟಿಸುವುದಾಗಿ ಹೇಳಿದೆ.

ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ್ದ ಆರೋಪದ ಅಡಿ ನಟಿ ರನ್ಯಾ ರಾವ್ ಅವರನ್ನು ರೆವಿನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ರನ್ಯಾ ಅವರು ತಂದಿದ್ದ ಚಿನ್ನವನ್ನು ಖರೀದಿಸಿದ ಆರೋಪದಡಿ ಸಾಹಿಲ್ ಅವರನ್ನು ಬಂಧಿಸಿದ್ದ ಡಿಆರ್‌ಐ ಅಧಿಕಾರಿಗಳು, ಹೆಚ್ಚಿನ ವಿಚಾರಣೆಗಾಗಿ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದರು. ಡಿಆರ್‌ಐ ಪರ ವಾದ ಮಂಡಿಸಿದ ವಕೀಲರು, ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ್ದು, ಸಾಹಿಲ್ ಜೈನ್‌ಗೆ ಜಾಮೀನು ನೀಡಬಾರದು ಎಂದು ಕೋರಿದರು.

ನೀಲಿ ಬಣ್ಣದ ಸ್ಕೂಟರ್‌ನಲ್ಲಿ ಆರೋಪಿ ಸುತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆ ಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನಲ್ಲಿ ಯುವತಿ ಜತೆಗೆ ಅನುಚಿತ ವರ್ತನೆ ತೋರಿ ಪರಾರಿ ಆಗಿರುವ ಆರೋಪಿ, ನೀಲಿ ಬಣ್ಣದ ಸ್ಕೂಟರ್‌ನಲ್ಲಿ ನಗರದ ವಿವಿಧೆಡೆ ಸುತ್ತಾಟ ನಡೆಸುತ್ತಿರುವುದು ಪತ್ತೆಯಾಗಿದೆ.

'ಆರೋಪಿಯ ಪತ್ತೆಗೆ ಸುದ್ದಗುಂಟೆ ಠಾಣೆಯ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಘಟನೆ ನಡೆದ ಸುತ್ತಮುತ್ತ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಿದ್ದಾರೆ.

ಘಟನೆಯು ಏಪ್ರಿಲ್ 3ರಂದು ರಾತ್ರಿ ನಡೆದಿದೆ. ಘಟನೆ ನಡೆದು ಎರಡು ದಿನಗಳ ಬಳಿಕ ಆರೋಪಿಯು ನೀಲಿ ಬಣ್ಣದ ಸ್ಕೂಟರ್‌ನಲ್ಲಿ ಓಡಾಟ ನಡೆಸಿರುವುದು ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿಯ ಪತ್ತೆಗಾಗಿ ಸಿ.ಸಿ.ಟಿ.ವಿ.ಗಳ ಕ್ಯಾಮೆರಾದಲ್ಲಿ ಸೆರೆಯಾದ 300ಕ್ಕೂ ಅಧಿಕ ದೃಶ್ಯಾವಳಿಗಳನ್ನು ಪರಿಶೀಲಿಸಿ, ವಿಶ್ಲೇಷಣೆ ಒಳಪಡಿಸಲಾಗಿತ್ತು. ಯಾವುದೇ ದೃಶ್ಯದಲ್ಲೂ ಸ್ಕೂಟರ್ ನೋಂದಣಿ ಸಂಖ್ಯೆ ಸೆರೆಯಾಗಿಲ್ಲ. ಆದರೆ, ಆರೋಪಿ ಕಪ್ಪು ಬಣ್ಣದ ಪ್ಯಾಂಟ್ ಹಾಗೂ ಅಂಗಿ ಧರಿಸಿ ಓಡಾಟ ನಡೆಸುತ್ತಿರುವುದು ಸೆರೆಯಾಗಿದೆ. ಆರೋಪಿ ಕುರಿತು ಕೆಲವು ಮಾಹಿತಿಗಳು ಸಿಕ್ಕಿವೆ. ಅದನ್ನು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲು ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿ ತನ್ನ ಸ್ನೇಹಿತೆ ಜತೆಗೆ ನಡೆದು ತೆರಳುತ್ತಿದ್ದರು. ಆರೋಪಿ ಸ್ಕೂಟರ್ ಅನ್ನು ರಸ್ತೆ ಬದಿ ನಿಲುಗಡೆ ಮಾಡಿ ಹಿಂಬಾಲಿಸಿ ಬರುತ್ತಾನೆ. ಬಂದವನೇ ಯುವತಿಯನ್ನು ತಬ್ಬಿಕೊಂಡು ಎದೆಯ ಭಾಗ ಮುಟ್ಟಿ ಪರಾರಿ ಆಗುತ್ತಾನೆ. ಈ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾವೊಂದರಲ್ಲಿ ಸೆರೆಯಾಗಿದೆ.

ಕಳ್ಳರ ಬಂಧನ

ಗೌರಿಬಿದನೂರು: ಬೆಂಗಳೂರಿನಿಂದ ಬಂದು ರಾತ್ರಿ ವೇಳೆ ನಗರದ ಮನೆ ಮತ್ತು ಮಳಿಗೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಕಳ್ಳರನ್ನು ಗೌರಿಬಿದನೂರು ನಗರ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಕಮಲಾನಗರದ ಉಲ್ಲಾಸ್ (24) ಮತ್ತು ಯಶವಂತಪುರದ ಕಿರಣ್ (46) ಬಂಧಿತರು. ಮತ್ತೊಬ್ಬ ಗಣೇಶ(23) ತಲೆಮರೆಸಿಕೊಂಡಿದ್ದಾನೆ. ಮಾರ್ಚ್ 20ರಂದು ಔಷಧ ಮಳಿಗೆ ಕಬ್ಬಿಣದ ಬಾಗಿಲು ಒಡೆದು ಚಿನ್ನ, ಬೆಳ್ಳಿ ಒಡವೆ ಮತ್ತು ನಗದು ದೋಚಿ ಪರಾರಿಯಾಗಿದ್ದರು.

ಪೊಲೀಸರು ಬೆಂಗಳೂರಿನಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಾದ ಉಲ್ಲಾಸ್ ಮತ್ತು ಕಿರಣ್ ವಿರುದ್ಧ ರಾಮನಗರ, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗಳಲ್ಲಿ ಡಕಾಯತಿ ಪ್ರಕರಣ ಸೇರಿದಂತೆ ಸುಬ್ರಮಣ್ಯ ಪುರ, ಕುಂಬಳಗೋಡು, ಪುಟ್ಟೇನಹಳ್ಳಿ ಮುಂತಾದ ಠಾಣೆಗಳಲ್ಲಿ ಒಟ್ಟು 12 ಕಳ್ಳತನ ಪ್ರಕರಣ ದಾಖಲಾಗಿವೆ.

ಡ್ರಗ್ಸ್ ಮಾರಾಟ ಮಾಡಲು ಪ್ರಯತ್ನ

ಇಬ್ಬರು ಅಪರಾಧಿಗಳಿಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರಾಟ ಮಾಡಲು ಯತ್ನಿಸಿದ್ದ ಇಬ್ಬರು ಅಪರಾಧಿಗಳಿಗೆ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯವು(ಸಿಸಿಎಚ್ 33) ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ನೈಜೀರಿಯಾ ಪ್ರಜೆ ಒಕೋರೊ ಕ್ರಿಶ್ಚಿಯಾನ್ ಇಫಿಯಾನಿ ಹಾಗೂ ಟಿ.ಸಿ. ಪಾಳ್ಯದ ನಿವಾಸಿ ರೋಹಿತ್ ಕ್ರಿಸ್ಟೋಫರ್ ಶಿಕ್ಷೆಗೆ ಒಳಗಾದವರು. ಟಿ.ಸಿ ಪಾಳ್ಯದ ಹಳೆಹಳ್ಳಿಯಲ್ಲಿ ಒಕೋರೊ ಕ್ರಿಶ್ಚಿಯಾನ್ ನೆಲಸಿದ್ದ.

2021ರ ಫೆಬ್ರುವರಿ 28ರಂದು ನಗರದ ಕಬ್ಬನ್ ರಸ್ತೆಯ ಜಂಕ್ಷನ್‌ನಲ್ಲಿ ಇಬ್ಬರು ಅಪರಾಧಿಗಳು, ಕಾಲೇಜು ವಿದ್ಯಾರ್ಥಿಗಳಿಗೆ ಎಂಡಿಎಂಎ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಯತ್ನಿಸಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಪೊಲೀಸರು, ಇಬ್ಬರನ್ನು ವಶಕ್ಕೆ ಪಡೆದುಕೊಂಡು ಬಂಧಿಸಿದ್ದರು. ಬಂಧಿತರಿಂದ 350 ಗ್ರಾಂ. ಎಂಡಿಎಂಎ ಮಾದಕ ವಸ್ತುವನ್ನು ಜಪ್ತಿ ಮಾಡಿಕೊಂಡಿದ್ದರು.

ಅಪರಾಧ ಸುದ್ದಿ



ರೋಹಿತ್ ಕ್ರಿಸ್ಟೋಫರ್



ಒಕೋರೊ ಇಫಿಯಾನಿ

ಎನ್‌ಡಿಪಿಎಸ್ ಕಾಯ್ದೆಯ ಕಲಂ 22(ಸಿ), 27(ಎ), 27(ಬಿ), ರೆ.ವಿ. 8(ಸಿ) ಅಡಿ ಪ್ರಕರಣ ದಾಖಲಿಸಿಕೊಂಡು ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣವು ಸಾಬೀತಾಗಿದ್ದರಿಂದ ಮೊದಲ ಅಪರಾಧಿ ಒಕೋರೊ ಕ್ರಿಶ್ಚಿಯಾನ್‌ಗೆ 15 ವರ್ಷ ಜೈಲು ಶಿಕ್ಷೆ ಹಾಗೂ ₹ 1.75 ಲಕ್ಷ ದಂಡ ಹಾಗೂ ಎರಡನೇ ಅಪರಾಧಿ ರೋಹಿತ್ ಕ್ರಿಸ್ಟೋಫರ್‌ಗೆ 14 ವರ್ಷ ಜೈಲು ಶಿಕ್ಷೆ ಹಾಗೂ ₹1.50 ಲಕ್ಷ ದಂಡ ವಿಧಿಸಿ ನ್ಯಾಯಾಧೀಶ ವಿಜಯ ದೇವರಾಜ ಅರಸ್ ಅವರು ಆದೇಶ ಹೊರಡಿಸಿದ್ದಾರೆ.

ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ವಿ.ಅಶ್ವತ್ಥ್ ನಾರಾಯಣ ಅವರು ವಾದ ಮಂಡನೆ ಮಾಡಿದ್ದರು.

ವಿಶೇಷ ಆತಿಥ್ಯ: ಪ್ರಾಸಿಕ್ಯೂಷನ್‌ಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ವೇಳೆ ಅವರಿಗೆ ವಿಶೇಷ ಆತಿಥ್ಯ ಕಲ್ಪಿಸಿದ್ದ ಆರೋಪ ಹೊತ್ತಿರುವ ಜೈಲು ಸಿಬ್ಬಂದಿ ಹಾಗೂ ಅಧಿಕಾರಿಗಳ ವಿಚಾರಣೆಗೆ ಗೃಹ ಇಲಾಖೆ ಅನುಮತಿ ನೀಡಿದೆ.

'ಘಟನೆ ನಡೆದು ಏಳು ತಿಂಗಳ ಬಳಿಕ ಪ್ರಾಸಿಕ್ಯೂಷನ್‌ಗೆ ಅನುಮತಿ ಸಿಕ್ಕಿದೆ. ಜೈಲು ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿಚಾರಣೆ ಆರಂಭವಾಗಿದೆ' ಎಂದು ಮೂಲಗಳು ತಿಳಿಸಿವೆ.

ದರ್ಶನ್ ಮತ್ತು ಸಹಚರರು ಹಾಗೂ ರೌಡಿ ಶೀಟರ್‌ಗಳಿಗೆ ವಿಶೇಷ ಆತಿಥ್ಯ ನೀಡಿದ ಆರೋಪದ ಅಡಿ ಹಿಂದಿನ ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕ ಮತ್ತು ಸಿಬ್ಬಂದಿ ಸೇರಿ ಒಂಬತ್ತು ಮಂದಿಯನ್ನು ಕಳೆದ ಆಗಸ್ಟ್ 26ರಂದು ಅಮಾನತು ಮಾಡಲಾಗಿತ್ತು. ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಎಫ್‌ಐಆರ್ ದಾಖಲಾಗಿದ್ದವು.

'ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ಜೈಲಿನ ಅಧಿಕಾರಿ, ಸಿಬ್ಬಂದಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಮೂಲಗಳು ತಿಳಿಸಿವೆ. 'ದರ್ಶನ್, ವಿಲ್ಸನ್ ಗಾರ್ಡನ್ ನಾಗನ ಕೈಗೆ ಸಿಗರೇಟ್ ಸಿಕ್ಕಿದ್ದು ಹೇಗೆ? ದರ್ಶನ್‌ಗೆ ಮೊಬೈಲ್ ಕೊಟ್ಟವರು ಯಾರು? ಬಾಕ್ಸ್‌ವೊಂದನ್ನು ಕೊಂಡೊಯ್ದವರು ಯಾರು? ಬಾಕ್ಸ್‌ನಲ್ಲಿ ಏನಿತ್ತು ಎಂಬ ಪ್ರಶ್ನೆ ಕೇಳಿ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ'. 'ವಿಶೇಷ ಆತಿಥ್ಯಕ್ಕೆ ಕೆಲವು ಸಾಕ್ಷ್ಯಗಳು ಲಭಿಸಿದ್ದು, ಸಿಬ್ಬಂದಿ ಎದುರು ಸಾಕ್ಷ್ಯಗಳನ್ನು ತೋರಿಸಿ ಪ್ರಶ್ನೆ ಕೇಳಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಭಾರತ ಸರ್ಕಾರ
ಜವಳಿ ಸಚಿವಾಲಯ
ಅಭಿವೃದ್ಧಿ ಆಯುಕ್ತರ (ಕರಕುಶಲ) ಕಚೇರಿ

ಕರಕುಶಲ ಪ್ರಶಸ್ತಿ 2024

ಅಭಿವೃದ್ಧಿ ಆಯುಕ್ತರ (ಕರಕುಶಲ) ಕಚೇರಿ ಇವರಿಂದ, ಕರಕುಶಲತೆಯ ಬೆಳವಣಿಗೆಗಾಗಿ ಮತ್ತು ಅಭಿವೃದ್ಧಿಗಾಗಿ ತಮ್ಮ ಅತ್ಯುತ್ತಮ ಕೊಡುಗೆಗಳನ್ನು ನೀಡಿರುವ ಅಪ್ರತಿಮ ಕರಕುಶಲ ವ್ಯಕ್ತಿಗಳನ್ನು ಗುರುತಿಸಿ, ಅಂತಹವರಿಗೆ ಕರಕುಶಲಗಳ ಕ್ಷೇತ್ರಗಳಲ್ಲಿನ ರ್‍ಯೋಚ್ಚ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತದೆ. ಕೆಳಕಂಡ ಪ್ರಶಸ್ತಿ ಪ್ರವರ್ಗಗಳ ಪ್ರಕಾರ ಕರಕುಶಲ ಪ್ರಶಸ್ತಿಗಳು 2024 ಕ್ಕಾಗಿ ಕರಕುಶಲ ವ್ಯಕ್ತಿಗಳಿಂದ ಆನ್‌ಲೈನ್/ ಆಫ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಪ್ರಶಸ್ತಿ ಹೆಸರು	ಪ್ರವರ್ಗ		ಪ್ರಶಸ್ತಿಗಳ ಸಂಖ್ಯೆ
ಶಿಲ್ಪ ಗುರು ಪ್ರಶಸ್ತಿ	ಕರಕುಶಲ ಪ್ರವರ್ಗ		05
	ಮಹಿಳೆಯರಿಗಾಗಿ ಮಾತ್ರ		01
	ಒಟ್ಟು		06
ರಾಷ್ಟ್ರೀಯ ಪ್ರಶಸ್ತಿ			
1	ಕರಕುಶಲತೆಯ ಪ್ರವರ್ಗ	ಮೆಟಲ್ ವೇರ್	01
		ಕೇನ್ & ಬಂಬೂ & ಫಾರೆಸ್ಟ್ ಬೇಸ್ಡ್ ಪ್ರಾಡಕ್ಟ್	01
		ಸ್ಟೋನ್ ವೇರ್	01
		ಪಾಟರಿ, ಸೆರಾಮಿಕ್ಸ್ ಮತ್ತು ಟರ್ರಾಕೋಟಾ	01
		ಪೈಂಟಿಂಗ್ಸ್	01
		ಜ್ಯುವೆಲ್ಲರಿ ಮತ್ತು ಸೆಮಿ–ಪ್ರೆಸಿಯಸ್ ಜೆಮ್ ಸ್ಟೋನ್	01
		ಪೇಪರ್ ಮಷೀನ್ ಕ್ರಾಫ್ಟ್ ಮತ್ತು ಪೇಪರ್ ಕ್ರಾಫ್ಟ್	01
		ರ್‍ಲಿಸ್ಟಿಕ್ ಟೆಕ್ಸ್‌ಟೈಲ್	01
		ಹ್ಯಾಂಡ್‌ಮೇಡ್ ಕರ್ಪೆಟ್/ರಗ್/ದರ್ರೀಸ್	01
		ಟಾಯ್ಸ್ ಮತ್ತು ಡಾಲ್ಸ್, ಪಪ್ಪೆಟ್, ಗೇಮ್ಸ್ ಹಾಗೂ ಕೈಟ್ಸ್	01
		ಮಿಸಲೇನಿಯಸ್ ಕ್ರಾಫ್ಟ್	01
		ಮಹಿಳಾ ಕಲಾವಿದರು	01
		ಯುವ ಕಲಾವಿದರು 30 ರ್ಷಕ್ಕಿಂತ ಕಡಿಮೆ ಪ್ರಾಯದವರು	01
		ದಿವ್ಯಾಂಗ ಕಲಾವಿದರು	01
		ಅಳಿವಿನಂಚಿನಲ್ಲಿರುವ ಕರಕುಶಲತೆ	01
		ಬುಡಕಟ್ಟು ಕಲಾವಿದರು	01
2	ವಿನ್ಯಾಸ ಆವಿಷ್ಕಾರ		01
3.	ಸ್ಟಾರ್ಟ್‌ಅಪ್ ವೆಂಚರ್/ ಪ್ರೊಡ್ಯೂಸರ್ ಕಂಪನಿ		01
	ಒಟ್ಟು		19

2. ಅರ್ಹತಾ ಮಾನದಂಡ, ಪ್ರಾಯ, ಅನುಭವ, ಅರ್ಜಿ ನಮೂನೆ ಇತ್ಯಾದಿ ಕುರಿತಾದ ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು, ಅಭಿವೃದ್ಧಿ ಆಯುಕ್ತರ ಕಚೇರಿಯ (ಕರಕುಶಲ) ವೆಬ್‌ಸೈಟ್‌ನಲ್ಲಿರುವ (www.handicrafts.nic.in) 'ಜಾಹೀರಾತು' ಲಿಂಕ್ ಮೇಲೆ ಕ್ಲಿಕ್ ಮಾಡುವ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿದಾರರು, ಯಾವುದೇ ಮಾಹಿತಿ/ ನೆರವಿಗಾಗಿ ತಮ್ಮ ಸಮೀಪದ ಕರಕುಶಲ ಸೇವಾ ಕೇಂದ್ರವನ್ನು (ಎಚ್‌ಎಸ್‌ಸಿ) ಸಂಪರ್ಕಿಸಬಹುದು.

3. ಎಲ್ಲಾ ರೀತಿಯಲ್ಲೂ ಸಂಪೂರ್ಣವಾಗಿ ಪೂರ್ತಿ ಮಾಡಲಾಗಿರುವ ಅರ್ಜಿಗಳನ್ನು ಎಲ್ಲಾ ಅಗತ್ಯ ಕರಕುಶಲ ಪ್ರವೇಶಗಳು / ದಾಖಲಾತಿಗಳ ಸಮೇತ, 12.05.2025ರೊಳಗೆ ತಮ್ಮ ಸಮೀಪದ ಕರಕುಶಲ ಸೇವಾ ಕೇಂದ್ರದಲ್ಲಿ ಸಲ್ಲಿಸತಕ್ಕದ್ದು.

CBC 41103/11/0001/2526

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

BEST OF the best TEACHERS for Kannada, English, Hindi, Science, Maths, Social Science, PE, Music, Karate, Co-ordination. Librarian (Reputed CBSE-School). Walk-in on 11.04.2025. 9449835744/ 9535601743.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

TOURS & TRAVEL

Travel

HEAVENLY WORLD TOURS
BHUTAN 7DAYS 55000
VIETNAM 5 DAYS 85000
MALAYSIA 4DAYS 47000
THAILAND 5DAYS 47000
KASHMIR 5DAYS 57000
SHIMLA KULU MANALI 7DAYS 43000 DELHI AGRA JAIPUR 6DAYS 39000
Mobile:9880541665/ 9947547866

PERSONAL

Change of Name

CHANGE OF NAME
I, JAYASHRI B JAMBAGI Residing at No. 4626/2, Plot No. 31/A, Shahu Nagar, Kangrali BK , Belagavi-590010 have changed my name & gender from Female to Male & name to RAGHAV K H vide affidavit dated 07.04.2025 before notary Kallimani Shripal Annappa, Belagavi. Henceforth I shall be known as RAGHAV K H only.

CHANGE OF NAME
I, EATHEN ASHER, Residing at No.360, 29th A Main, 9th Cross, Sector-1, HSR Layout, Bengaluru- 560102, have changed my name to ETHAN ASHER TONKIN vide affidavit dated 09-04-2025 before notary M Narendran, Bengaluru. Henceforth I shall be called ETHAN ASHER TONKIN only

CHANGE OF NAME
WE, SACHIN KUMAR S/o.Ashok Kumar and RASHMI KARANTH W/o. Sachin Kumar R/a flat #G11, 303, Provident Wellworth City,Doddaballapur Main Road, Amanikere, Marasandra, Doddatumkur, Bangalore Rural-562163 have changed our minor Son's Name from AKSHAY SACHIN to AKSHAY KUMAR vide affidavit dated: 2.4.2025 sworn before Notary C.N.Chandrashekar, Bengaluru.

CHANGE OF NAME
We, GANESHA S K & THEJASWINI S, Residing at No. 12, 1st Cross, 2nd Main, Bahubalinagar, Jalahalli Village, Bengaluru-560013, have changed our minor son's name from LAKSH G to LAKSH G TEJAS vide affidavit dated 01.03.2025 before notary Chandrakala, Bengaluru. Henceforth he shall be known as LAKSH G TEJAS only.

CHANGE OF NAME
I, SHASHI SONI, D/O Jagadish Prasad Soni, residing at No. 65/12 Mansarovar 1st Floor, 39th Cross, 14th Main Road, Jayanagar 4th T Block, Bengaluru-560041, have changed my name to SHASHI SOLIWAL vide affidavit dated 09-04-2025 before notary H.S. Dharma Prasad Bengaluru

EDUCATION CORNER ಕ್ಲಾಸಿಫೈಡ್ಸ್

B.Com
BCA
BBA MBA
BBA Aviation Management
B.Sc. Aircraft Maintenance
Approved by AICTE & Affiliated with Bengaluru North University
Eligibility: 12th Std. or Diploma (DTE approved)

HINDUSTAN AVIATION ACADEMY
Approved by DGCA, Govt. of India
AME Aircraft Maintenance Engineering
DGCA CAR 147 Basic
• B1.1 Aeroplane Turbine
• B1.3 Helicopter Turbine
• B2 Avionics
Eligibility: 12th Std. with PCM or Diploma (DTE approved)



HEA - POLYTECHNIC
Approved by DTE & AICTE
Diploma Courses:
• Aeronautical Engineering
• Mechanical Engineering
• Computer Science Engg.
Eligibility: 10th Std.

8971404357 / 9740037853

HBS HINDUSTAN BUSINESS SCHOOL
MARATHAHALLI, BENGALURU
Ashwathnagar, Chinnappanahalli, Marathahalli - 560037
Mobile: 63645 44814
E: admissions@hindustanacademy.edu.in
www.hindustanacademy.edu.in
SCAN FOR MORE DETAILS
ADMISSIONS ARE OPEN FOR 2025-26

ಸೇಂಟ್ ಫಿಲೋಮಿನಾಸ್ ಪಿ.ಯು. ಕಾಲೇಜು
ಮರಿಯಪ್ಪನಪಾಳ್ಯ, ಜ್ಞಾನಭಾರತಿ ಹತ್ತಿರ, ಬೆಂಗಳೂರು
SCIENCE TOPPERS 2024-25



CONNECT ಕ್ಲಾಸಿಫೈಡ್ಸ್

ನ್ಯಾಷನಲ್ ಸಿಲ್ಕ್ ಎಕ್ಸ್ ಪೋ
UP TO 50% DISCOUNT BY WEAVERS
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಪ್ಯಾಬ್ರಿಕ್ | ಇನ್ನೂ ಹಲವು
ಏಪ್ರಿಲ್ 11 ರಿಂದ 16ರ ವರೆಗೆ
ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ
ಭಾರತದಾದ್ಯಂತದ 15+ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು
ಬನಾರಸ್ ಸಿಲ್ಕ್, ಜಾಮದನಿ, ಲಕ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಚತ್ತೀಸ್‌ಗಢ್ ಕೊಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೇರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
ಸಿಂಧೂರ್ ಕನ್ವೆನ್‌ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು
M: 9412258826 | ENTRY FREE | ALL UPI ONLINE / DEBIT & CREDIT CARDS ACCEPTED



ಸಂಕ್ಷಿಪ್ತ ಸುದ್ದಿ

ಮೇ 2ರಿಂದ ಶ್ರೀವಿದ್ಯಾ ಬ್ರಹ್ಮಕಮಲ ಮಹಾಯಾಗ

ಬೆಂಗಳೂರು: ತ್ರಿಪುರ ಸುಂದರಿ ಲಲಿತಾಂಬೆ ಟ್ರಸ್ಟ್ ವತಿಯಿಂದ ಮೇ 2, 3 ಮತ್ತು 4ರಂದು ಶ್ರೀವಿದ್ಯಾ ಬ್ರಹ್ಮ ಕಮಲ ಮಹಾಯಾಗವು ಪದ್ಮನಾಭ ನಗರ ಸಾಯಿಬಾಬಾ ಮಂದಿರದ ಎದುರಿನ ಮೈದಾನದಲ್ಲಿ ನಡೆಯಲಿದೆ.

ಸತೀಶ್ ಸತ್ಯ ಶೀಲನ್ ಗುರೂಜಿ ಉಪಸ್ಥಿತಿಯಲ್ಲಿ ಸಿದ್ಧಿಬುದ್ಧಿ ಮಹಾಗಣಪತಿ ಹೋಮ, ಗುರುಹೋಮ, ರಾಜಮಾತಂಗಿ ಹೋಮ, ವಾರಾಹೀ ಹೋಮ, ಲಲಿತಾ ತ್ರಿಪುರ ಸುಂದರಿ ಹೋಮಗಳು ನಡೆಯಲಿವೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 9972852235/ 9845010310 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಪುಕ್ಕಟೆ ಸಲಹೆ' ನೂರರ ಸಂಭ್ರಮ 13ಕ್ಕೆ

ಬೆಂಗಳೂರು: ಚುಟುಕು ಸಾಹಿತಿ ಎಚ್. ಡುಂಡಿರಾಜ್ ರಚಿಸಿರುವ, ಅಶೋಕ್ ಬಿ. ನಿರ್ದೇಶಿಸಿರುವ 'ಪುಕ್ಕಟೆ ಸಲಹೆ' ಹಾಸ್ಯ ನಾಟಕದ 100ನೇ ಪ್ರದರ್ಶನವು ಏಪ್ರಿಲ್ 13ರಂದು ಸಂಜೆ 5ಕ್ಕೆ ಮಲ್ಲತ್ತಹಳ್ಳಿ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ನಡೆಯಲಿದೆ.

ವಿಶ್ವಪಥ ಕಲಾ ಸಂಗಮದ ಕಲಾವಿದರು ನಾಟಕ ಪ್ರದರ್ಶಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕವಿಗಳಾದ ನಾ.ದಾಮೋದರ ಶೆಟ್ಟಿ, ಬಿ.ಆರ್. ಲಕ್ಷ್ಮಣ ರಾವ್, ಡುಂಡಿರಾಜ್, ಸಾಹಿತಿಗಳು, ಕಲಾವಿದರು ಭಾಗವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

'ಜ್ಞಾನಭಾರತಿ': ಪ್ಲಾಸ್ಟಿಕ್ ಮುಕ್ತಗೊಳಿಸಲು ಒಡಂಬಡಿಕೆ

ಬೆಂಗಳೂರು: ಜ್ಞಾನಭಾರತಿ ಆವರಣವನ್ನು ಪ್ಲಾಸ್ಟಿಕ್ ಹಾಗೂ ಕಸ ಮುಕ್ತವಾಗಿಸಲು ಬೆಂಗಳೂರು ವಿಶ್ವವಿದ್ಯಾಲಯ ಸಂಕಲ್ಪ ಮಾಡಿದ್ದು, ಬಿಸ್ಲೆರಿ ಇಂಟರ್‌ನ್ಯಾಷನಲ್ ಪ್ರೈ. ಲಿ. ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವ ಶೇಕ್ ಲತೀಫ್ ಮತ್ತು ಬಿಸ್ಲೆರಿ ಇಂಟರ್‌ನ್ಯಾಷನಲ್ ಕಂಪನಿಯ ಸುಸ್ಥಿರ ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ವ್ಯವಹಾರಗಳ ನಿರ್ದೇಶಕ ಕೆ.ಗಣೇಶ್ ಅವರು ಈ ಒಡಂಬಡಿಕೆಗೆ ಸಹಿ ಹಾಕಿದರು.

'ಬಿಸ್ಲೆರಿ ಬಾಟಲ್ಸ್ ಫಾರ್ ಚೇಂಜ್' ಕಾರ್ಯಕ್ರಮದಡಿ, ಜ್ಞಾನಭಾರತಿ ಆವರಣದಲ್ಲಿ 7 ವಿಧದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ನಿರಂತರವಾಗಿ ಸಂಗ್ರಹಿಸಿ ಮರುಬಳಕೆ ಮಾಡಲಾಗುವುದು ಎಂದು ಒಡಂಬಡಿಕೆಯಲ್ಲಿ ತಿಳಿಸಲಾಗಿದೆ.



ನವೀಕರಣಗೊಳ್ಳುವ ಮೊದಲು 'ಸಭಾ' ಪಾರಂಪರಿಕ ಕಟ್ಟಡದ ಸ್ವರೂಪ (ಸಂಗ್ರಹ ಚಿತ್ರ)



ನವೀಕರಣಗೊಳ್ಳುವ ಮೊದಲು 'ಸಭಾ' ಪಾರಂಪರಿಕ ಕಟ್ಟಡದ ನೋಟ (ಸಂಗ್ರಹ ಚಿತ್ರ)



ನವೀಕರಣಗೊಂಡಿರುವ 'ಸಭಾ' ಪಾರಂಪರಿಕ ಕಟ್ಟಡ ಚಿತ್ರ: ರಂಜು ಪಿ.


160 ವರ್ಷಗಳ ಐತಿಹಾಸಿಕ ಕಟ್ಟಡಕ್ಕೆ ಹೊಸ ರೂಪ

ಪಾರಂಪರಿಕ ಮೆರುಗಿನ 'ಸಭಾ' ಲೋಕಾರ್ಪಣೆಗೆ ಸಿದ್ಧ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕಾಮರಾಜ್ ರಸ್ತೆಯಲ್ಲಿ 160 ವರ್ಷಗಳ ಇತಿಹಾಸ ಹೊಂದಿರುವ 'ಸಭಾ' ಕಟ್ಟಡವನ್ನು ಪಾರಂಪರಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ನವೀಕರಣ ಮಾಡಲಾಗಿದೆ. ಹೊಸ ಸೊಬಗಿನಿಂದ ಕಂಗೊಳಿಸುತ್ತಿರುವ ಕಟ್ಟಡವು ಉದ್ಘಾಟನೆಗೆ ಸಿದ್ಧವಾಗಿದೆ.

ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮುದಲಿಯಾರ್ (ಆರ್‌ಬಿಎಎನ್‌ಎಂ) ಅವರು ಸುತ್ತಲಿನ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದಕ್ಕಾಗಿ 1865ರಲ್ಲಿ ಮೊದಲ ಕಟ್ಟಡ ನಿರ್ಮಿಸಿದ್ದರು. ಅದಾಗಿ 8 ವರ್ಷಗಳ ಬಳಿಕ 'ಆರ್‌ಬಿಎಎನ್‌ಎಂ'ಎಸ್ ಎಜುಕೇಶನಲ್ ಚಾರಿಟಿಯನ್ನು ಮಾಡಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರಿಂದ 1895ರಲ್ಲಿ ಅಲ್ಲೇ ಪಕ್ಕದಲ್ಲಿ ಮತ್ತೊಂದು ಕಟ್ಟಡ ನಿರ್ಮಿಸಿದ್ದರು. ಸಿವಿಎಸ್ (ಚತುರ್ ವೇದ ಸಿದ್ಧಾಂತ) ಸಭಾ ಸ್ಕೂಲ್ ಎಂದು ಆಗ ಹೆಸರಿತ್ತು. ತಮಿಳ್ ಸಭಾ ಸ್ಕೂಲ್ ಎಂದು ಸ್ಥಳೀಯರು ಕರೆಯುತ್ತಿದ್ದರು. ನಾರಾಯಣ ಸ್ವಾಮಿ ಮುದಲಿಯಾರ್ ಅವರ ನಂತರ ಚಾರಿಟಿಯು ವಿದ್ಯಾದಾನವನ್ನು ಮುಂದುವರಿಸಿಕೊಂಡು ಬಂದಿತ್ತು. ನಗರದ ವಿವಿಧೆಡೆ ಶಿಕ್ಷಣ ಸಂಸ್ಥೆಗಳನ್ನು ತೆರೆದಿತ್ತು.



'ಸಭಾ'ದ ಪಾರಂಪರಿಕ ಕಟ್ಟಡದ ಒಂದು ನೋಟ ಪ್ರಜಾವಾಣಿ ಚಿತ್ರ

ಸುಮಾರು 20 ವರ್ಷಗಳ ಹಿಂದೆ ತಮಿಳು ಸಭಾ ಸ್ಕೂಲ್ ಮುಚ್ಚಿ ಹೋಗಿತ್ತು. ಬಳಿಕ ಪಾಳು ಬಿದ್ದು, ಗಿಡಗಂಟಿಗಳು ಬೆಳೆದಿದ್ದವು. ಕಸ ತುಂಬಿಕೊಂಡಿತ್ತು. ಪಾರಂಪರಿಕ ಸ್ವರೂಪವನ್ನು ಉಳಿಸಿಕೊಂಡೇ ಕಟ್ಟಡ ನವೀಕರಿಸಲು ಮೂರು ವರ್ಷಗಳ ಹಿಂದೆ ಅಮ್ಮಿನಿ ಟ್ರಸ್ಟ್‌ನ ಟ್ರಸ್ಟಿಗಳಾದ ವಿ. ರವಿಚಂದರ್ ಮತ್ತು ಹೇಮಾ ಮುಂದೆ ಬಂದಿದ್ದರು.

'ಬೆಂಗಳೂರಿನಲ್ಲಿ ಇಂಥ ಸ್ಥಳಗಳು ಬಹಳವಿಲ್ಲ. ಇರುವುದನ್ನು ಹಾಗೇ ಉಳಿಸಿಕೊಂಡು ನವೀಕರಿಸಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಆರ್‌ಬಿಎಎನ್‌ಎಂಎಸ್ ಚಾರಿಟಿಯವರ ಜೊತೆ ಮಾತನಾಡಿ ದಾನಿಗಳನ್ನು ಸಂಪರ್ಕಿಸಿದ್ದೆವು. ಆದರೆ, ಯಾರೂ ಮುಂದೆ ಬಾರದ ಕಾರಣ ನಮ್ಮದೇ ಟ್ರಸ್ಟ್‌ನಿಂದ ನವೀಕರಿಸಲು ನಿರ್ಧರಿಸಿದೆವು' ಎಂದು ವಿ. ರವಿಚಂದರ್ ಮಾಹಿತಿ ನೀಡಿದರು.

'ಕಲೆ, ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡಲು ಇಂಥ ಸ್ಥಳಾವಕಾಶ ಬಳಕೆಯಾಗಬೇಕು. ಪಾರಂಪರಿಕ ಕಟ್ಟಡವನ್ನು ಉಳಿಸಿಕೊಳ್ಳುವ ಮೂಲಕ ಹಿಂದಿನ ನಮ್ಮ ಬೇರುಗಳೊಂದಿಗಿನ ಕೊಂಡಿಯನ್ನು ಮುಂದುವರಿಸಬೇಕು. ಬೆಂಗಳೂರಿನಲ್ಲಿ ಇಂಥ ಕಟ್ಟಡಗಳೆಲ್ಲ ನೆಲಸಮಗೊಂಡು ಕಾಂಕ್ರೀಟ್ ಕಟ್ಟಡಗಳೆದ್ದಿವೆ. ಇಲ್ಲಿ ಹಾಗಾಗಬಾರದು. ಈ ಪಾರಂಪರಿಕ ಕಟ್ಟಡ ಬೇರೆಯವರಿಗೆ ಸ್ಫೂರ್ತಿಯಾಗುವ ರೀತಿಯಲ್ಲಿ ನವೀಕರಣಗೊಳ್ಳಬೇಕು ಎಂಬುದು ನಮ್ಮ ಆಶಯ' ಎಂದು ವಿವರಿಸಿದರು.

ಎತ್ತರದ ಆಕರ್ಷಕ ಕಂಬಗಳು, ಹಳೇ ಮದ್ರಾಸ್ ಶೈಲಿಯ ಚಾವಣಿಗಳು, ಮಂಗಳೂರು ಹೆಂಚಿನ ಹೊದಿಕೆ, ಮರದ ಕಿಟಕಿಗಳು, 160 ಆಸನಗಳಿರುವ ಪ್ರದರ್ಶನಾ ಸಭಾಂಗಣ, 2,000 ಚದರ ಅಡಿ ಇರುವ ಗ್ಯಾಲರಿಗಳು ಜನರನ್ನು ಕೈ ಬೀಸಿ ಕರೆಯುತ್ತಿವೆ.

ಇದರ ಜೊತೆಗೆ ಆಧುನಿಕತೆಯ ಸ್ಪರ್ಶವೂ ಮೇಳೈಸಿದೆ. ಹವಾನಿಯಂತ್ರಣ ವ್ಯವಸ್ಥೆ, ಸಾಂಸ್ಕೃತಿಕ ಪ್ರದರ್ಶನಗಳಿಗೆ ಬೇಕಾದ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ, ನೆಲ ತೇವಗೊಳ್ಳುವುದನ್ನು ಪರಿಹರಿಸಲು ವಿದ್ಯುತ್ ಡ್ರೈನ್‌ಗಳಿವೆ.

ವಾಸ್ತುಶಿಲ್ಪಿ ಬಿಜೋಯ್ ರಾಮಚಂದ್ರನ್ ನೇತೃತ್ವದಲ್ಲಿ ಕೇರಳದ ನುರಿತ ಬಡಗಿಗಳ ಸಹಾಯದಿಂದ ಪುನರ್‌ರಚನೆಗೊಂಡಿರುವ 'ಸಭಾ' ಏಪ್ರಿಲ್ 12ರಂದು (ಶನಿವಾರ) ಉದ್ಘಾಟನೆಗೊಳ್ಳಲಿದೆ.

ಶೇ 40ರಷ್ಟು ಅಧಿಕ ವೆಚ್ಚ

'ಹೊಸತಾಗಿ ನಿರ್ಮಾಣ ಮಾಡುವುದಕ್ಕಿಂತ ಹಳೇ ಕಟ್ಟಡವನ್ನು ನವೀಕರಿಸುವಾಗ ಶೇ 40ರಷ್ಟು ಅಧಿಕ ವೆಚ್ಚವಾಗುತ್ತದೆ. ಇದೇ ಜಾಗದಲ್ಲಿ ಈಗಿರುವ ಕಟ್ಟಡಗಳನ್ನು ನೆಲಸಮಗೊಳಿಸಿ, ಈಗಿರುವ ಮಾದರಿಯಲ್ಲೇ ಕಟ್ಟಿದ್ದರೂ ಸುಮಾರು ₹3 ಕೋಟಿ ವೆಚ್ಚ ಕಡಿಮೆಯಾಗುತ್ತಿತ್ತು. ಆದರೂ, ಹಳೆಯದನ್ನು ಉಳಿಸಿಕೊಳ್ಳಬೇಕು ಎಂಬ ಕಾರಣಕ್ಕೆ ನೆಲಸಮಗೊಳಿಸಿಲ್ಲ' ಎಂದು ವಿ. ರವಿಚಂದರ್ ತಿಳಿಸಿದರು.

ಮುಂದೆ ಕಲೆ, ಕರಕುಶಲ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಬಯಸುವವರಿಗೆ ಬಾಡಿಗೆ ಆಧಾರದಲ್ಲಿ ಅವಕಾಶ ನೀಡಲಾಗುವುದು. ಕಾಮರಾಜ್ ರಸ್ತೆ–262 ಎಂದು ವಿಳಾಸ ಹುಡುಕಿಕೊಂಡು ಬರಬಹುದು. ಇಲ್ಲವೇ ಗೂಗಲ್ ಮ್ಯಾಪ್‌ನಲ್ಲಿ ಸಭಾ–ಬಿಎಲ್‌ಆರ್ ಎಂದು ನಮೂದಿಸಿದರೆ ಈ ಸ್ಥಳಕ್ಕೆ ಸುಲಭವಾಗಿ ಬರಬಹುದು ಎಂದು ಮಾಹಿತಿ ನೀಡಿದರು.

ಎರಡು ದಿನ ಕಾರ್ಯಕ್ರಮ

ಒಟ್ಟು 10,000 ಚದರ ಅಡಿ ಪ್ರದೇಶವನ್ನು ಹೊಂದಿರುವ, 7,500 ಚದರ ಅಡಿ ಕಟ್ಟಡ ಹೊಂದಿರುವ 'ಸಭಾ' ಉದ್ಘಾಟನೆಯ ಪ್ರಯುಕ್ತ ಏಪ್ರಿಲ್ 12 ಮತ್ತು 13ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.12ರಂದು ಬೆಳಿಗ್ಗೆ 7.15ಕ್ಕೆ ಆರಂಭಗೊಳ್ಳುವ ಕಲೆ, ಕರಕುಶಲ ಪ್ರದರ್ಶನ, ಸಾಂಸ್ಕೃತಿಕ ಪ್ರದರ್ಶನ, ಮಾತುಗಳು ರಾತ್ರಿ 9ರ ವರೆಗೆ ನಿರಂತರವಾಗಿ ಇರಲಿವೆ. ಏ.13ರಂದು ಬೆಳಿಗ್ಗೆ 10ರಿಂದ ರಾತ್ರಿ 7ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿವೆ. ಪ್ರಸಿದ್ಧ ಕಲಾವಿದರಲ್ಲದೇ 40–50 ಮಕ್ಕಳು ಕೂಡ ವಿವಿಧ ಕಾರ್ಯಕ್ರಮಗಳನ್ನು ನೀಡಲಿದ್ದಾರೆ.

'ಎನ್‌ಇಪಿಯಿಂದ ಶಿಕ್ಷಣ ಕಾರ್ಪೊರೇಟ್ ತೆಕ್ಕೆಗೆ'

ಪ್ರಜಾವಾಣಿ ವಾರ್ತೆ



ಪ್ರೊ.ಬಿ.ಕೆ. ಚಂದ್ರಶೇಖರ್

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಮೂಲಕ ಕೇಂದ್ರ ಸರ್ಕಾರವು ಶಿಕ್ಷಣ ಕ್ಷೇತ್ರವನ್ನು ಕಾರ್ಪೊರೇಟ್ ತೆಕ್ಕೆಗೆ ನೀಡಲು ಹೊರಟಿದೆ. ವಿಶ್ವವಿದ್ಯಾಲಯಗಳ ಕುಲಪತಿ ನೇಮಕ ಸಂಬಂಧ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹೊರಡಿಸಿರುವ ಕರಡು ನಿಯಮದ ಹಿಂದೆಯೂ ಇದೇ ಹುನ್ನಾರ ಇದೆ' ಎಂದು ಶಿಕ್ಷಣ ತಜ್ಞ ಪ್ರೊ.ಬಿ.ಕೆ.ಚಂದ್ರಶೇಖರ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎನ್‌ಇಪಿ ಅಡಿ ಭಾರತೀಯ ಜ್ಞಾನ ಪರಂಪರೆಯನ್ನು ಬೋಧಿಸಿ, ಪುರಾಣಕಾಲದಲ್ಲೇ ವಿಮಾನ ತಂತ್ರಜ್ಞಾನ ಇತ್ತು ಎಂಬುದನ್ನೆಲ್ಲಾ ಮಕ್ಕಳಿಗೆ ಹೇಳಿಕೊಡಿ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಇದಕ್ಕೆ ಒಪ್ಪದ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿಯು ಸುಮಾರು ₹950 ಕೋಟಿ ಅನುದಾನ ಕಡಿತ ಮಾಡಿದೆ' ಎಂದರು.

'ಶಿಕ್ಷಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ರೂಪಿಸಿದ್ದ ಮಸೂದೆಗಳನ್ನು ವರ್ಷಗಳ ಕಾಲ ತಮ್ಮಲ್ಲಿಯೇ ಇರಿಸಿಕೊಂಡಿದ್ದ ಅಲ್ಲಿನ ರಾಜ್ಯಪಾಲ ಎನ್.ರವಿ ಅವರಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಕೇರಳದ ಹಿಂದಿನ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಸಹ ಹೀಗೇ ಮಸೂದೆಗಳನ್ನು ಇರಿಸಿಕೊಂಡಿದ್ದರು. ಕೇಂದ್ರವು ತನ್ನ ಆಜ್ಞೆ ಪಾಲಿಸುವವರನ್ನೇ ರಾಜ್ಯಪಾಲರಾಗಿ ನೇಮಕ ಮಾಡುತ್ತಿದೆ. ಇದೂ ಸಹ ಅದರ ಹುನ್ನಾರದ ಭಾಗ' ಎಂದು ಆರೋಪಿಸಿದರು.

'ಕುಲಪತಿ ನೇಮಕ ಅಧಿಕಾರ ವಿ.ವಿಗಳಿಗಿರಲಿ'

'ಕುಲಪತಿ ನೇಮಕ ಅಧಿಕಾರ ರಾಜ್ಯಪಾಲರ ಬಳಿ ಇರಬೇಕೇ ಅಥವಾ ಮುಖ್ಯಮಂತ್ರಿಯ ಬಳಿ ಇರಬೇಕೇ ಎಂಬುದು ಈಗ ರಾಜ್ಯದಲ್ಲಿ ಚರ್ಚೆಯಲ್ಲಿರುವ ವಿಚಾರ. ಮುಖ್ಯಮಂತ್ರಿಗೆ ಈ ಅಧಿಕಾರ ನೀಡುವ ಮಸೂದೆಯನ್ನು ರಾಜ್ಯಪಾಲ ವಾಪಸ್ ಕಳುಹಿಸಿದ್ದಾರೆ. ಇದು ಸಂಘರ್ಷಕ್ಕೆ ಕಾರಣವಾಗಿದೆ. ಆದರೆ ಕುಲಪತಿ ನೇಮಕ ಅಧಿಕಾರವನ್ನು ವಿಶ್ವವಿದ್ಯಾಲಯಗಳಿಗೇ ನೀಡುವುದು ಸೂಕ್ತ' ಎಂದು ಪ್ರೊ.ಬಿ.ಕೆ.ಚಂದ್ರಶೇಖರ್ ಹೇಳಿದರು.

'ಸಮಾಜಮುಖಿ' ಸ್ಪರ್ಧೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜಮುಖಿ ಪ್ರಕಾಶನ, 2024ನೇ ಸಾಲಿನ ವಾರ್ಷಿಕ ಕಥಾ ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಿದೆ.

ವೀರೇಶ ಶಿವಲಿಂಗಪ್ಪ ಸಜ್ಜನ ಅವರ 'ಕ್ಯಾನವಾಸ್', ಹಳೆಮನೆ ರಾಜಶೇಖರ ಅವರ 'ದೇವರ ತುಪ್ಪ', ಟಿ.ಆರ್.ಉಷಾರಾಣಿ ಅವರ 'ಕಾಲವೆಂಬ ಕಬಂಧ ಬಾಹು', ನಾಗರಾಜ ಕೋರಿ ಅವರ 'ಶಕುನದ ಚುಕ್ಕಿ' ಹಾಗೂ ಫೌಝಿಯಾ ಸಲೀಂ ಅವರ 'ಬಯಾಲಾಜಿಕಲ್ ಫಾದರ್' ಕಥೆಗಳು ಕಥಾ ಪುರಸ್ಕಾರಕ್ಕೆ ಆಯ್ಕೆಯಾಗಿವೆ.


ಪುರಸ್ಕಾರವು ತಲಾ ₹5 ಸಾವಿರ ನಗದು ಒಳಗೊಂಡಿದೆ.

ಸಂಪತ್ ಸಿರಿಮನೆ, ಪ್ರವೀಣ್ ಕುಮಾರ್ ಜಿ., ಪೂರ್ಣಿಮಾ ಭಟ್ಟ ಸಣ್ಣಕೇರಿ, ಚಿನ್ನು ಪ್ರಕಾಶ್ ಶ್ರೀರಾಮನಹಳ್ಳಿ, ಅಂದಯ್ಯ ಅರವಟಗಿಮಠ, ಹೇಮಂತ್ ಲಿಂಗಪ್ಪ, ಜಹಾನ್ ಆರಾ ಕೋಳೂರು, ಮೈತ್ರೇಯಿಣಿ ಗದಿಗೆಪ್ಪಗೌಡರ, ಜಯದೇವಿ ಗಾಯಕವಾಡ, ಅಮರೇಶ ಗಿಣಿವಾರ ಅವರ ಕಥೆಗಳು ಸಮಾಜಮುಖಿ ವಾರ್ಷಿಕ ಕಥಾ ಸಂಕಲನಕ್ಕೆ ಆಯ್ಕೆಯಾಗಿವೆ.

ಸ್ಪರ್ಧೆಯಲ್ಲಿ ಒಟ್ಟು 241 ಕಥೆಗಾರರು ಭಾಗವಹಿಸಿದ್ದರು.

ಲೇಖಕ, ವಿಮರ್ಶಕ ರಂಗನಾಥ ಕಂಟನಕುಂಟೆ ಸ್ಪರ್ಧೆಯ ಅಂತಿಮ ಹಂತದ ತೀರ್ಪುಗಾರರಾಗಿದ್ದರು.





1 ಎಕರೆವರೆಗಿನ ನಿವೇಶನಕ್ಕೆ ಖಾತಾ, ಕಟ್ಟಡ ನಕ್ಷೆ ನೀಡುವ ಅಧಿಕಾರ • ಯೋಜಿತ ಬೆಳವಣಿಗೆ ಆಧರಿಸಿ ನಕ್ಷೆಗೆ ಅನುಮೋದನೆ

ಬಿಬಿಎಂಪಿಯಿಂದ ಏಕ ನಿವೇಶನಕ್ಕೆ 'ವಿನ್ಯಾಸ ನಕ್ಷೆ'

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಏಕ ನಿವೇಶನಗಳಿಗೆ 'ವಿನ್ಯಾಸ ನಕ್ಷೆ' ನೀಡುವ ಅಧಿಕಾರವನ್ನು ಬಿಬಿಎಂಪಿ ಮುಖ್ಯ ಆಯುಕ್ತರಿಗೇ ನೀಡಲಾಗಿದ್ದು, ಸ್ಥಗಿತಗೊಂಡಿದ್ದ ಖಾತಾ, ಕಟ್ಟಡ ನಕ್ಷೆ ಮಂಜೂರು ಪ್ರಕ್ರಿಯೆ ಆರಂಭವಾಗಿದೆ.

ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾದ ಹಾಗೂ ಪರಿವರ್ತನೆಯಾಗದ ಏಕ ನಿವೇಶನಗಳಿಗೆ 'ಎ' ಖಾತಾ ಪಡೆದುಕೊಳ್ಳಲು ಬಿಡಿಎಯಿಂದ 'ವಿನ್ಯಾಸ ನಕ್ಷೆ' ಅನುಮೋದನೆ ಪಡೆದು-ಕೊಳ್ಳಬೇಕಿತ್ತು. ಅದರ ನಂತರವಷ್ಟೇ ಬಿಬಿಎಂಪಿಯಿಂದ ಖಾತಾ ಹಾಗೂ ಕಟ್ಟಡ ನಕ್ಷೆ ಪಡೆದುಕೊಳ್ಳಬಹುದಾಗಿತ್ತು.

ಮುಖ್ಯಾಂಶಗಳು

- ಸ್ಥಗಿತಗೊಂಡಿದ್ದ ಖಾತಾ, ಕಟ್ಟಡ ನಕ್ಷೆ ಪ್ರಕ್ರಿಯೆ ಆರಂಭ
- ಮೊದಲು ಯೋಜನಾ ಪ್ರಾಧಿಕಾರದ ಅನುಮೋದನೆ ಕಡ್ಡಾಯ

ಆದರೆ, ಇದೀಗ ಬಿಬಿಎಂಪಿಯೇ ಒಂದು ಎಕರೆವರೆಗಿನ ಏಕ ನಿವೇಶನಗಳಿಗೆ 'ವಿನ್ಯಾಸ ನಕ್ಷೆ' ನೀಡಲಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ (ಕೆಎಲ್‌ಆರ್) ಸೆಕ್ಷನ್ 95ರಡಿ ಕೃಷಿ ಜಮೀನಿನಿಂದ ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾದ 'ಏಕ ನಿವೇಶನ'ಕ್ಕೆ ಬಿಬಿಎಂಪಿ ಅನುಮೋದನೆ ನೀಡಿ, ಖಾತಾ ನೀಡುತ್ತಿತ್ತು. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 17ಕ್ಕೆ ತಿದ್ದುಪಡಿಯಾದ ನಂತರ ಏಕ ನಿವೇಶನವೂ ಸೇರಿದಂತೆ ಎಲ್ಲ ಸ್ವತ್ತುಗಳಿಗೂ ಯೋಜನಾ ಪ್ರಾಧಿಕಾರದ ಅನುಮೋದನೆ ಕಡ್ಡಾಯವಾಗಿತ್ತು.

ಯಾರಿಗೆ ವಿನ್ಯಾಸ ನಕ್ಷೆ?

- ನಗರ ಟೈಟಲ್ ಸರ್ವೆ (ಸಿಟಿಎಸ್) ಸಂಖ್ಯೆ ಹೊಂದಿರುವ ನಿವೇಶನ
- ನಗರಸಭೆ, ಪುರಸಭೆ, ಗ್ರಾಮ ಪಂಚಾಯಿತಿಗಳಿಂದ ಬಿಬಿಎಂಪಿ ವ್ಯಾಪ್ತಿಗೆ ಬಂದಾಗ 'ಎ' ರಿಜಿಸ್ಟರ್‌ನಲ್ಲಿ ನಮೂದಾಗಿರುವ ಖಾತಾ ಹೊಂದಿರುವ ನಿವೇಶನ
- ಬಿಡಿಎಯಿಂದ ನಿರ್ಮಾಣವಾದ, ಅನುಮೋದನೆಯಾದ ನಿವೇಶನಗಳು, ಅಭಿವೃದ್ಧಿ ಯೋಜನಾ ನಕ್ಷೆ ಮಂಜೂರು ಪಡೆದ ನಿವೇಶನ
- ಬಿಬಿಎಂಪಿಯಿಂದ ಈಗಾಗಲೇ ಕಟ್ಟಡ ನಕ್ಷೆ ಪಡೆದಿದ್ದು, ಪರಿಷ್ಕೃತ ಅಥವಾ ಹೆಚ್ಚುವರಿ ಕಟ್ಟಡ ನಿರ್ಮಾಣದ ಪ್ರಸ್ತಾವಗಳು
- ಬಿಡಿಎ, ಬಿಎಂಐಸಿಎಪಿ ಸೇರಿದಂತೆ ಕೆಟಿಸಿಪಿ ತಿದ್ದುಪಡಿ ಕಾಯ್ದೆ ಸೆಕ್ಷನ್ 17ರಡಿ ಅನುಮೋದನೆಯಾದ ಏಕ ನಿವೇಶನ

ಈ ತಿದ್ದುಪಡಿಯಿಂದ ಬಿಡಿಎ ಅಥವಾ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗದ ಸ್ವತ್ತುಗಳಿಗೆ ಬಿಬಿಎಂಪಿ ಖಾತೆ ನೀಡುತ್ತಿರಲಿಲ್ಲ. ಇದೀಗ ಕೆಟಿಸಿಪಿ ಕಾಯ್ದೆಯ ಸೆಕ್ಷನ್ 81ರಡಿ ಅಧಿಕಾರ ಚಲಾಯಿಸಿ, ಬಿಬಿಎಂಪಿ ವ್ಯಾಪ್ತಿಯ ಏಕ ನಿವೇಶನಗಳಿಗೆ 'ವಿನ್ಯಾಸ ನಕ್ಷೆ' ಮಂಜೂರು ನೀಡುವ ಅಧಿಕಾರವನ್ನು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪ್ರತ್ಯಾಯೋಜಿಸಿ ಸರ್ಕಾರ ಆದೇಶಿಸಿದೆ.

'ಕೆಟಿಸಿಪಿ ಕಾಯ್ದೆಯಂತೆ ಸಕ್ಷಮ ಪ್ರಾಧಿಕಾರದಿಂದ 'ವಿನ್ಯಾಸ ನಕ್ಷೆ' ಅನುಮೋದಿಸದಿದ್ದರೆ ಆ ಪ್ರದೇಶಗಳಲ್ಲಿ ಅಡ್ಡಾದಿಡ್ಡಿ ಬೆಳವಣಿಗೆಯಾಗುವ ಸಂಭವವಿರುತ್ತದೆ. ಮಾಸ್ಟರ್ ಪ್ಲಾನ್‌ನಂತೆ ಯೋಜಿತ ಬೆಳವಣಿಗೆಯನ್ನು ಆಧರಿಸಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲಾಗುತ್ತದೆ. ಇದರಿಂದ ಕೆರೆ, ಕಾಲುವೆ ಸೇರಿದಂತೆ ಸರ್ಕಾರಿ ಜಮೀನುಗಳ ಒತ್ತುವರಿಗಳನ್ನು ಈ ಸಂದರ್ಭದಲ್ಲೇ ತಡೆಯಬಹುದು. ಅಲ್ಲದೆ, ಮಾಸ್ಟರ್ ಪ್ಲಾನ್‌ನಂತೆ ವಾಣಿಜ್ಯ, ವಸತಿ ಪ್ರದೇಶಗಳ ವರ್ಗೀಕರಣ ಸೇರಿದಂತೆ ರಸ್ತೆ, ಚರಂಡಿಯಂತಹ ಮೂಲಸೌಕರ್ಯಗಳು ಹೇಗಿರಬೇಕು ಎಂಬುದೂ 'ವಿನ್ಯಾಸ ನಕ್ಷೆ'ಯಲ್ಲಿ ನಮೂ-ದಾಗಿರುತ್ತದೆ. ಇದರಿಂದ ಯೋಜನಾ-ಬದ್ಧವಾಗಿ ಅಭಿವೃದ್ಧಿ ಸಾಧ್ಯವಾಗುತ್ತದೆ. ಈಗ ಬಿಬಿಎಂಪಿಯೇ ಈ ವಿನ್ಯಾಸ ನಕ್ಷೆಯನ್ನು ನೀಡಿ, ಎ ಖಾತಾ, ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಲಿದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಮಣಿಪಾಲ್ ಹಾಸ್ಪಿಟಲ್ಸ್– ಗೂಗಲ್ ಕ್ಲೌಡ್ ಪಾಲುದಾರಿಕೆ

ಬೆಂಗಳೂರು: ಎಐ-ಚಾಲಿತ ಡಿಜಿಟಲ್ ಆರೋಗ್ಯ ಆರೈಕೆ ಸೇವೆಯನ್ನು ಒದಗಿಸುವ ಉದ್ದೇಶದಿಂದ ಮಣಿಪಾಲ್ ಹಾಸ್ಪಿಟಲ್ಸ್ ಸಂಸ್ಥೆಯು ಗೂಗಲ್ ಕ್ಲೌಡ್‌ನೊಂದಿಗೆ ಕೈಜೋಡಿಸಿದೆ.

ಈ ಪಾಲುದಾರಿಕೆಯಿಂದ ಆರೋಗ್ಯ ಸೇವೆಯಲ್ಲಿ ಹೊಸ ಯುಗ ಆರಂಭವಾಗಲಿದ್ದು, ಕೃತಕ ಬುದ್ಧಿಮತ್ತೆಯಿಂದ, ಅತ್ಯುನ್ನತ ದತ್ತಾಂಶ ವಿಶ್ಲೇಷಣೆ ಮತ್ತು ಕ್ಲೌಡ್‌ನ ಮೂಲಸೌಕರ್ಯವ-ನ್ನು ಬಳಸಿಕೊಂಡು ರೋಗಿಯ ಆರೈಕೆಯ ಮೌಲ್ಯ ವೃದ್ಧಿಸಲಾಗುತ್ತ-ದೆ ಎಂದು ಪ್ರಕಟಣೆ ತಿಳಿಸಿದೆ.

ಕ್ಲೌಡ್‌ನ ಮೂಲಸೌಕ-ರ್ಯದೊಂದಿಗೆ ಎಐ ಚಾಲಿತ ತಂತ್ರಜ್ಞಾನದ ಮೂಲಕ ಮಣಿಪಾಲ್ ಆಸ್ಪತ್ರೆಗಳು ತಮ್ಮ ಇ-ಫಾರ್ಮಸಿ ವೇದಿಕೆಯನ್ನು ನಿರ್ವಹಿಸಲಿವೆ. ಈ ಮೂಲಕ ಇ-ಫಾರ್ಮಸಿ ಪ್ರಕ್ರಿಯೆ ಅವಧಿ 15 ನಿಮಿಷದಿಂದ 5 ನಿಮಿಷಕ್ಕೆ ಕಡಿತ-ಗೊಳ್ಳಲಿದ್ದು, ನರ್ಸ್‌ಗಳ ಸಂಚಾರ ಅವಧಿಯನ್ನು 90 ನಿಮಿಷದಿಂದ 20 ನಿಮಿಷಕ್ಕೆ ಇಳಿಕೆಯಾಗಲಿದೆ ಎಂದು ತಿಳಿಸಲಾಗಿದೆ.

'ನಮ್ಮ ಕಾರ್ಯಾಚರಣೆಗಳಿಗೆ ನಿರ್ಣಾಯಕವಾದ ಉನ್ನತ ಮಟ್ಟದ ಕಾರ್ಯಕ್ಷಮತೆ ಮತ್ತು ಸುರಕ್ಷತೆಯ-ನ್ನು ಗೂಗಲ್ ಕ್ಲೌಡ್ ಒದಗಿಸಲಿದೆ. ಮೂಲಸೌಕರ್ಯ ನಿರ್ವಹಣೆಯ ಹೊರೆಯಿಲ್ಲದೆ, ನಮ್ಮ ತಂಡಗಳು ನಿರ್ಣಾಯಕ ಪ್ರಕರಣಗಳಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಸದೃಢರಾಗಲಿವೆ' ಎಂದು ಮಣಿಪಾಲ್ ಹಾಸ್ಪಿಟಲ್ಸ್‌ನ ಗ್ರೂಪ್ ಮುಖ್ಯ ಕಾರ್ಯಾಚರಣಾ ಅಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದ್ದಾರೆ.

ಪಿಯುಸಿ ಸಾಧಕರು

ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜು, ಕೆಂಗೇರಿ ಉಪನಗರ



ಎಂ.ಪೂರ್ವಿತಾ ಶೆಟ್ಟಿ (ವಿಜ್ಞಾನ) ಶೇ 98.83 | ಬೃಂದಾ ಎಸ್ (ವಿಜ್ಞಾನ) ಶೇ 98.66 | ಕಿರಣ್ ಕುಮಾರ್ (ವಿಜ್ಞಾನ) ಶೇ 97.33 | ಹೇಮಾವತಿ (ವಿಜ್ಞಾನ) ಶೇ 97.33



ಮೇಘನಾ ಕೆ (ವಾಣಿಜ್ಯ) ಶೇ 97.83 | ಪವಿತ್ರಾ ಡಿ (ವಾಣಿಜ್ಯ) ಶೇ 97.66 | ಸಂಜನಾ ಸಿ (ವಾಣಿಜ್ಯ) ಶೇ 97.33 | ತುಷಾರಾ (ವಾಣಿಜ್ಯ) ಶೇ 97

ಸೌಂದರ್ಯ ಸಂಯುಕ್ತ ಪದವಿಪೂರ್ವ ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ



ಸ್ಫೂರ್ತಿ ಎಸ್ (ವಿಜ್ಞಾನ) ಶೇ 99 | ನಿವೇದ್ (ವಿಜ್ಞಾನ) ಶೇ 98.17




ಚೇತನಾ (ವಾಣಿಜ್ಯ) ಶೇ97.83 | ವನಿತಾ ಕೆ (ವಾಣಿಜ್ಯ) ಶೇ 97.67 | ಸಾನಿಧ್ಯ ಬಿ.ಪಿ (ವಿಜ್ಞಾನ) ಶೇ 97.67



ರಥೋತ್ಸವ ವೈಭವ

ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ 'ದೊಡ್ಡಜಾತ್ರೆ' ಪ್ರಯುಕ್ತ ಬುಧವಾರ ಮುಂಜಾನೆ ನಡೆದ 'ಶ್ರೀಕಂಠೇಶ್ವರಸ್ವಾಮಿ ಪಂಚ ಮಹಾರಥೋತ್ಸವ'ದಲ್ಲಿ ಉತ್ಸವಮೂರ್ತಿ ನೋಡಲು ಹರಿದು ಬಂದ ಭಕ್ತಸಾಗರ ಚಿತ್ರ: ಅನೂಪ್ ರಾಘ.ಟಿ.

ಲಂಚ ಪಡೆಯುತ್ತಿದ್ದ ಮುಖ್ಯ ಎಂಜಿನಿಯರ್ ಲೋಕಾಯುಕ್ತ ಬಲೆಗೆ



ಎಂ.ಕೃಷ್ಣಪ್ಪ

ಶಿವಮೊಗ್ಗ: ಜಾಹೀರಾತು ಫಲಕಗಳ ನಿರ್ವಹಣೆ ಮೊತ್ತದ ಬಿಡುಗಡೆಗೆ ಗುತ್ತಿಗೆ ಸಂಸ್ಥೆಯಿಂದ ₹1 ಲಕ್ಷ ಲಂಚ ಪಡೆಯುತ್ತಿದ್ದ ಇಲ್ಲಿನ ಸ್ಮಾರ್ಟ್ ಸಿಟಿ ಸಂಸ್ಥೆಯ ಮುಖ್ಯ ಎಂಜಿನಿಯರ್ ಎಂ.ಕೃಷ್ಣಪ್ಪ ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಶಿವಮೊಗ್ಗದ ಎಕ್ಸ್‌ಟ್ರೀಮ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆ 2019ರಲ್ಲಿ ಸ್ಮಾರ್ಟ್ ಸಿಟಿ ಸಂಸ್ಥೆಯಿಂದ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್ ಜಾಹೀರಾತಿಗೆ ಗುತ್ತಿಗೆ ಪಡೆದು ಕಾಮಗಾರಿ ಪೂರ್ಣಗೊಳಿಸಿದೆ. ಆ ಪೈಕಿ ಏಳು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳ 2 ತ್ರೈಮಾಸಿಕ ಅವಧಿಯ ನಿರ್ವಹಣೆ ಮೊತ್ತ ₹11.16 ಲಕ್ಷ ಬಿಲ್ ಪಡೆಯುವುದು ಬಾಕಿ ಇದ್ದು, ಅದನ್ನು ಕೊಡಲು ಎಂ. ಕೃಷ್ಣಪ್ಪ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಕೋದಂಡರಾಮಸ್ವಾಮಿ ಬ್ರಹ್ಮರಥೋತ್ಸವ



ಯಲಹಂಕ: ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿರುವ ಕೋದಂಡರಾಮಸ್ವಾಮಿಯ 76ನೇ ವರ್ಷದ ಬ್ರಹ್ಮರಥೋತ್ಸವ ಇತ್ತೀಚೆಗೆ ವಿಜೃಂಭಣೆಯಿಂದ ನಡೆಯಿತು.

ಬೆಳಿಗ್ಗೆಯಿಂದಲೇ ದೇವರಿಗೆ ಅಭಿಷೇಕ, ಅರ್ಚನೆ, ಮಹಾನಿವೇದನೆ, ಹೋಮ, ಮಹಾಮಂಗಳಾರತಿ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಬಳಿಕ ಭಕ್ತರ 'ಗೋವಿಂದ-ಗೋವಿಂದ ಘೋಷಗಳೊಂದಿಗೆ ಮಧ್ಯಾಹ್ನ 2.45ಕ್ಕೆ ರಥವನ್ನು ಎಳೆಯಲಾಯಿತು. ಸುತ್ತಮುತ್ತಲ ಗ್ರಾಮಗಳು, ಬೆಂಗಳೂರು ನಗರ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದರು. ಬಾಳೆಹಣ್ಣು ಮತ್ತು ದವನವನ್ನು ರಥದಮೇಲೆ ಎಸೆಯುವ ಮೂಲಕ ಹರಕೆ ತೀರಿಸಿದರು.

ಗ್ರಾಮದೇವತೆಗಳಾದ ದೊಡ್ಡಮ್ಮ ಮತ್ತು ಮಹೇಶ್ವರಮ್ಮ ದೇವಿಗೆ ಇದೇ ವೇಳೆ ವಿಶೇಷಪೂಜೆ ನೆರವೇರಿಸಲಾಯಿತು. ಕೋಸಂಬರಿ, ಪಾನಕ ಮತ್ತು ಮಜ್ಜಿಗೆ ವಿತರಣೆಯ ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಎಟಿಎಂ ಧ್ವಂಸಗೊಳಿಸಿ ₹18 ಲಕ್ಷ ದರೋಡೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ರಿಂಗ್ ರಸ್ತೆಯ ಪೂಜಾರಿ ವೃತ್ತ ಸಮೀಪದಲ್ಲಿ ಬುಧವಾರ ನಸುಕಿನಲ್ಲಿ ಎಸ್‌ಬಿಐ ಎಟಿಎಂ ಕೇಂದ್ರವನ್ನು ಧ್ವಂಸಗೊಳಿಸಿದ ದರೋಡೆಕೋರರು ₹18 ಲಕ್ಷ ದೋಚಿದ್ದಾರೆ.

ಕಾರಿನಲ್ಲಿ ಬಂದ ದರೋಡೆಕೋರರು ಎಟಿಎಂ ಕೇಂದ್ರದ ಒಳಗಿನ ಸಿ.ಸಿ.ಟಿ.ವಿ ಕ್ಯಾಮೆರಾ, ಎಟಿಎಂ ಯಂತ್ರಗಳ ಮೇಲಿನ ಕ್ಯಾಮೆರಾಗಳಿಗೂ ಕಪ್ಪು ಬಣ್ಣದ ಸ್ಪ್ರೇ ಮಾಡಿದ್ದಾರೆ. ಬಳಿಕ ಗ್ಯಾಸ್ ಕಟರ್ ಬಳಸಿ ಎಟಿಎಂ ಯಂತ್ರವನ್ನು ಧ್ವಂಸಗೊಳಿಸಿದ್ದಾರೆ. ಕ್ಯಾಶ್ ಬಾಕ್ಸ್‌ನಲ್ಲಿ ಇರಿಸಿದ್ದ ₹18 ಲಕ್ಷ ದೋಚಿ ಪರಾರಿಯಾಗಿದ್ದಾರೆ. ಎಟಿಎಂ ಕೇಂದ್ರದಲ್ಲಿ ಆರೋಪಿಗಳ ಬೆರಳಚ್ಚು, ವೈಜ್ಞಾನಿಕ ಸಾಕ್ಷಿಗಳು ಸಿಕ್ಕಿವೆ. ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತನಿಖಾ ತಂಡ ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಡವಾಗಿ ಮಾಹಿತಿ ಹಂಚಿಕೆ: 'ಭದ್ರತಾ ಸಿಬ್ಬಂದಿ ಇಲ್ಲದ ಎಟಿಎಂ ಕೇಂದ್ರಕ್ಕೆ ಡಿಜಿಟಲ್ ಕಣ್ಗಾವಲು ವ್ಯವಸ್ಥೆ ಅಳವಡಿಸಲಾಗಿತ್ತು. ಕೃತ್ಯ ನಡೆದು 45 ನಿಮಿಷಗಳ ನಂತರ ಪೊಲೀಸರಿಗೆ ಮಾಹಿತಿ ಬಂದಿದೆ. ಜತೆಗೆ ಬ್ಯಾಂಕ್ ಆಡಳಿತ ಮಂಡಳಿಯವರು ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಗಳನ್ನು ನೀಡಿಲ್ಲ. ಕೃತ್ಯದ ಸುತ್ತಲಿನಲ್ಲಿಯೂ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲ. ಇವುಗಳಿಂದ ತನಿಖೆಗೆ ಆರಂಭಿಕ ಅಡ್ಡಿ ಆಗಿದೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಮಾಧ್ಯಮಗಳಿಗೆ ತಿಳಿಸಿದರು.

'ಮಂಗಳವಾರ ಸಂಜೆಯೇ ಎಟಿಎಂಗೆ ಹಣ ಹಾಕಿದ್ದು, ಮರುದಿನವೇ ಕೃತ್ಯ ನಡೆದಿದೆ. ಎಲ್ಲ ಆಯಾಮಗಳಿಂದ ತನಿಖೆ ಮಾಡಲಾಗುತ್ತಿದೆ' ಎಂದರು.

ಕಾವೇರಿಗೂ ತಟ್ಟಿದ ದರ ಭಾರ

ಒಂದನೇ ಪುಟದಿಂದ

ಪ್ರತಿ ವರ್ಷ ಶೇ 3ರಷ್ಟು ಹೆಚ್ಚಳ: ಪ್ರತಿ ವರ್ಷ ಏಪ್ರಿಲ್ 1ರಿಂದ ನೀರಿನ ದರವನ್ನು ಶೇ 3ರಷ್ಟು ಏರಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

'ಒಮ್ಮೆಲೆ ದರ ಹೆಚ್ಚಳದ ಮೂಲಕ ಜನರಿಗೆ ಹೊರೆಯಾಗು-ವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಹಾಗೂ ಕರ್ನಾಟಕ ರಾಜ್ಯ ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ 2026ರ ಏಪ್ರಿಲ್‌ನಿಂದ ಪ್ರತಿ ವರ್ಷ ನೀರಿನ ದರವನ್ನು ಶೇ 3ರಷ್ಟು ಹೆಚ್ಚಳ ಮಾಡಲು ಜಲಮಂಡಳಿ ನಿರ್ಧರಿಸಿದೆ' ಎಂದು ಅವರು ವಿವರಿಸಿದರು.

'11 ವರ್ಷಗಳಿಂದ ನೀರಿನ ದರವನ್ನು ಹೆಚ್ಚಿಸಿಲ್ಲ. ಸ್ವಾಯತ್ತ ಸಂಸ್ಥೆಯಾಗಿರುವ ಜಲಮಂಡಳಿಗೆ ಸರ್ಕಾರದಿಂದ ಹಣಕಾಸಿನ ನೆರವಿಲ್ಲ. ಕುಡಿಯುವ ನೀರಿಗೆ ವಿಧಿಸುವ ಶುಲ್ಕವೇ ಪ್ರಮುಖ ಆದಾಯವಾಗಿದೆ. ದಶಕದಲ್ಲಿ ವಿದ್ಯುತ್ ವೆಚ್ಚವು ಶೇಕಡ 107 ರಷ್ಟು ಹೆಚ್ಚಾಗಿದೆ' ಎಂದು ವಿವರಿಸಿದರು. 'ಪ್ರಸ್ತುತ ಬೆಂಗಳೂರು ಜಲಮಂಡಳಿಯ ತಿಂಗಳ ವೆಚ್ಚ ₹200 ಕೋಟಿ. ಆದರೆ, ಪ್ರತಿ ತಿಂಗಳು ಸಂಗ್ರಹಣೆ ಆಗುತ್ತಿರುವುದು ₹120 ಕೋಟಿ. ಪ್ರತಿ ತಿಂಗಳು ಸುಮಾರು ₹ 80 ಕೋಟಿ ಆರ್ಥಿಕ ಕೊರತೆಯನ್ನು ಜಲಮಂಡಳಿ ನಿಭಾಯಿಸಬೇಕಾಗಿದೆ. ಇದನ್ನು ಸರಿದೂಗಿಸುವುದಕ್ಕಾಗಿ ನೀರಿನ ದರವನ್ನು ಏರಿಸಲು ಉದ್ದೇಶಿಸಲಾಗಿದೆ' ಎಂದು ರಾಮ್‌ಪ್ರಸಾತ್ ತಿಳಿಸಿದರು.

ವಸತಿಯೇತರ ಕಟ್ಟಡಗಳು

ಸ್ಲ್ಯಾಬ್ (ಲೀಟರ್ ಗಳಲ್ಲಿ)	ಪ್ರತಿ ಲೀಟರ್‌ಗೆ (ಪೈಸೆಗಳಲ್ಲಿ)
0 -10,000 ಲೀಟರ್‌ವರೆಗೆ	1.00
10,001–25,000 ಲೀಟರ್‌ವರೆಗೆ	1.30
25,001–50,000 ಲೀಟರ್‌ವರೆಗೆ	1.50
50,001–75,000 ಲೀಟರ್‌ವರೆಗೆ	1.90
76,001–1 ಲಕ್ಷ ಲೀಟರ್‌ವರೆಗೆ	1.10
1 ಲಕ್ಷ ಲೀಟರ್‌ಗಿಂತ ಮೇಲ್ಪಟ್ಟು	1.20
ಕೈಗಾರಿಕೆಗಳು/ಹೆಚ್ಚು ಬಳಕೆದಾರರಿಗೆ (ಬಲ್ಕ್)	ಪ್ರತಿ ಲೀಟರ್‌ಗೆ 0.90 ಪೈಸೆ

ವಸತಿ ಸಮುಚ್ಚಯ ಕಟ್ಟಡಗಳು

ಸ್ಲ್ಯಾಬ್ (ಲೀಟರ್ ಗಳಲ್ಲಿ)	ಪ್ರತಿ ಲೀಟರ್‌ಗೆ (ಪೈಸೆಗಳಲ್ಲಿ)
0 -2 ಲಕ್ಷ ಲೀಟರ್‌ವರೆಗೆ	0.30
2,00,001-5 ಲಕ್ಷ ಲೀಟರ್‌ವರೆಗೆ	0.60
5,00,001-10 ಲಕ್ಷ ಲೀಟರ್‌ವರೆಗೆ	1.20

ಹೆಚ್ಚಳವಾಗಲಿದೆ ಖಾಸಗಿ ಶಾಲಾ ವಾಹನಗಳ ಶುಲ್ಕ

ಒಂದನೇ ಪುಟದಿಂದ

ಪ್ರತಿ ಬಾರಿ ಶೈಕ್ಷಣಿಕ ವರ್ಷ ಆರಂಭವಾದಾಗ ಪೋಷಕರೇ ₹100 ಹೆಚ್ಚಳ ಮಾಡಿ ನೀಡುತ್ತಿದ್ದರು. ಅದೇ ರೀತಿ ಪೋಷಕರು ಈ ಬಾರಿಯೂ ₹100 ಹೆಚ್ಚು ನೀಡಬಹುದು. ಆದರೆ, ಈಗಿನ ಖರ್ಚು ನೋಡಿದರೆ ಈ ಹೆಚ್ಚಳ ಸಾಕಾಗುವುದಿಲ್ಲ' ಎಂದು ವಿವರಿಸಿದರು.

'ಶಾಲೆಗಳದ್ದೇ ವಾಹನಗಳಲ್ಲಿ ₹2000–₹3000 ಇದೆ. ಖಾಸಗಿ ವಾಹನಗಳಲ್ಲಿ ತಿಂಗಳಿಗೆ ಒಂದು ಮಗುವಿಗೆ ಒಂದು ಕಿ.ಮೀ.ಗೆ ₹800–₹1000 ಇದೆ. ದೂರ ಹೆಚ್ಚಾದಂತೆ ಶುಲ್ಕ ಹೆಚ್ಚಾಗುತ್ತದೆ. ಈ ವರ್ಷದಿಂದ ತಿಂಗಳಿಗೆ ಹೆಚ್ಚುವರಿಯಾಗಿ ₹300ರಿಂದ ₹500 ಪಡೆಯಬೇಕಿದೆ' ಎಂದು ಅವರು ಮಾಹಿತಿ ನೀಡಿದರು.

'ಏ.15ರ ವರೆಗೆ ಏರಿಕೆ ಇಲ್ಲ'

ಖಾಸಗಿ ಬಸ್‌ಗಳ ಟಿಕೆಟ್ ದರ ಏರಿಸುವ ಬಗ್ಗೆ ಏಪ್ರಿಲ್ 15ರವರೆಗೆ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ. ಅನಂತರ ಈ ಬಗ್ಗೆ ಚರ್ಚಿಸಲಾಗುವುದು ಎಂದು ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ ಶರ್ಮ ತಿಳಿಸಿದ್ದಾರೆ.

'ಡೀಸೆಲ್ ದರ ₹ 2 ಹೆಚ್ಚಳ ಮಾಡಿರುವುದನ್ನು ಕಡಿಮೆ ಮಾಡಬೇಕು ಎಂದು ಲಾರಿ ಮಾಲೀಕರ ಸಂಘ ಬೇಡಿಕೆ ಇರಿಸಿದೆ. ಏ.15ರ ಒಳಗೆ ಕಡಿಮೆ ಮಾಡದಿದ್ದರೆ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದೆ. ಆ ಬಗ್ಗೆ ಸರ್ಕಾರ ಏನು ತೀರ್ಮಾನ ಕೈಗೊಳ್ಳುತ್ತದೆ ಎಂಬುದನ್ನು ನಾವು ಕಾದು ನೋಡುತ್ತೇವೆ. ಡೀಸೆಲ್ ದರ ಇಳಿಸಲು ತೀರ್ಮಾನ ಕೈಗೊಂಡರೆ ಬಸ್‌ಗಳ ಟಿಕೆಟ್ ದರ ಈಗಿನದ್ದೇ ಮುಂದುವರಿಯಲಿದೆ. ಇಲ್ಲದಿದ್ದರೆ ಆಗ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವು-ದು' ಎಂದು ಸ್ಪಷ್ಟಪಡಿಸಿದರು.

ನಿಶ್ಚಿತ ಠೇವಣಿ ಮೇಲಿನ ಬಡ್ಡಿಗೆ ಬರೆ

ಒಂದನೇ ಪುಟದಿಂದ

ಜನಸಾಮಾನ್ಯರ ಹೂಡಿಕೆ ಹಾಗೂ ಉಳಿತಾಯದ ಮೇಲೂ ರೆಪೊ ದರ ಪರಿಣಾಮ ಬೀರುತ್ತದೆ.

ಬ್ಯಾಂಕ್‌ಗಳು ಗ್ರಾಹಕರಿಂದ ಹೆಚ್ಚಿನ ಮೊತ್ತದ ಠೇವಣಿ ಆಕರ್ಷಿಸಲು ಮುಂದಾಗುತ್ತವೆ. ರೆಪೊ ದರ ಹೆಚ್ಚಳವಾದರೆ ನಿಶ್ಚಿತ ಠೇವಣಿ ಹಾಗೂ ಇತರೆ ಉಳಿತಾಯದ ಮೊತ್ತಕ್ಕೆ ಹೆಚ್ಚಿನ ಬಡ್ಡಿ ಲಭಿಸುತ್ತದೆ. ರೆಪೊ ದರ ಇಳಿಕೆಯಾದಾಗ ಉಳಿತಾಯ ಯೋಜನೆಗಳ ಮೇಲೆ ಲಭಿಸುವ ಬಡ್ಡಿ ಕೂಡ ಕಡಿಮೆಯಾಗುತ್ತದೆ. ತಕ್ಷಣಕ್ಕೆ ಜಾರಿಗೆ ಬರುವಂತೆ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರ ಇಳಿಸಲು ಮುಂದಾಗುವುದಿಲ್ಲ. ಹಂತ ಹಂತವಾಗಿ ಇಳಿಸುತ್ತವೆ.

ಗೃಹ ಸಾಲದ ಬಡ್ಡಿ ಇಳಿಕೆಯ ಅಂದಾಜು ಲೆಕ್ಕಾಚಾರ

ಸಾಲದ ಮೊತ್ತ	ಬಡ್ಡಿದರ	ಅವಧಿ	ಇಎಂಐ	ಒಟ್ಟು ಬಡ್ಡಿ	ಪಾವತಿಸಬೇಕಾದ ಮೊತ್ತ
₹20 ಲಕ್ಷ ಸಾಲ ಪಡೆದವರಿಗೆ					
₹20 ಲಕ್ಷ	ಶೇ 8.50	20 ವರ್ಷ	₹17,356	₹21,65,552	₹41,65,552
ರೆಪೊ ದರ ಇಳಿಕೆ ಬಳಿಕ					
₹20 ಲಕ್ಷ	ಶೇ 8.25	20 ವರ್ಷ	₹17,041	₹20,89,915	₹40,89,915
₹30 ಲಕ್ಷ ಸಾಲಗಾರರಿಗೆ					
₹30 ಲಕ್ಷ	ಶೇ 8.50	20 ವರ್ಷ	₹26,035	₹32,48,327	₹62,48,327
ರೆಪೊ ದರ ಇಳಿಕೆ ಬಳಿಕ					
₹30 ಲಕ್ಷ	ಶೇ 8.25	20 ವರ್ಷ	₹25,562	₹31,34,873	₹61,34,873

ರೋಟರಿ ಸಂಸ್ಥೆಯಿಂದ ಹೊಲಿಗೆಯಂತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ರೋಟರಿ ಕ್ಲಬ್ ಆಫ್ ಬೆಂಗಳೂರು, ಭುವನೇಶ್ವರಿನಗರ ಹಾಗೂ ಕೆಂಪಾಪುರ ಕಾಫಿಬೋರ್ಡ್ ಲೇಔಟ್‌ನ ಸೇಂಟ್ ಜಾನ್ಸ್ ಶಾಲೆಯ ಸಹಯೋಗದಲ್ಲಿ ಭುವನೇಶ್ವರಿ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಡಹೆಣ್ಣುಮಕ್ಕಳಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ರೋಟರಿ ಕ್ಲಬ್ ಭುವನೇಶ್ವರಿ ನಗರ ಅಧ್ಯಕ್ಷೆ ಉಮಾ ಭಾರದ್ವಾಜ್, 'ಸಂಸ್ಥೆಯ ವತಿಯಿಂದ ಬಡ ಹೆಣ್ಣು ಮಕ್ಕಳನ್ನು ಗುರುತಿಸಿ, ಅವರಿಗೆ ಹೊಲಿಗೆ ತರಬೇತಿ ನೀಡಿ, ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಅವರು, ಸ್ವಂತ ಟೈಲರಿಂಗ್ ಅಂಗಡಿ ತೆರೆದು, ಸ್ವಾವಲಂಬಿಗಳಾಗಿ ಬದುಕು ನಡೆಸಿದರೆ ಸಂಸ್ಥೆಯ ಕೊಡುಗೆ ಸಾರ್ಥಕವೆನಿಸುತ್ತದೆ' ಎಂದು ತಿಳಿಸಿದರು.

ರೋಟರಿ ಕ್ಲಬ್ ಭುವನೇಶ್ವರಿನಗರ ಕಾರ್ಯದರ್ಶಿ ಜ್ಯೋತಿ ಪಾಟೀಲ್, ಹಿರಿಯ ಸದಸ್ಯೆ ಜ್ಯೋತಿ ಜಯಕುಮಾರ್, ಟೈಲರಿಂಗ್ ಶಿಕ್ಷಕಿ ರೋಹಿಣಿ.ಎಂ ಮತ್ತಿತರರು ಉಪಸ್ಥಿತರಿದ್ದರು.

ತಂಬಿಹಳ್ಳಿ ಮಠದ ಶ್ರೀ ಪೀಠಾರೋಹಣ

ಕೋಲಾರ: ತಾಲ್ಲೂಕಿನ ತಂಬಿಹಳ್ಳಿಯ ಮಾಧವತೀರ್ಥ ಮಹಾಸಂಸ್ಥಾನದ 44ನೇ ಪೀಠಾಧಿಪತಿಯಾಗಿ ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ ಬುಧವಾರ ಪೀಠಾರೋಹಣ ಮಾಡಿದರು.

ಮಠದ 43ನೇ ಪೀಠಾಧಿಪತಿಯಾಗಿದ್ದ ವಿದ್ಯಾಸಾಗರ ಮಾಧವತೀರ್ಥ ಸ್ವಾಮೀಜಿ ಏಪ್ರಿಲ್ 7ರ ಸೋಮವಾರ ರಾತ್ರಿ ನಿಧನರಾದ ಕಾರಣ ಬುಧವಾರ ಅವರ ಉತ್ತರಾಧಿಕಾರಿಯಾದ ವಿದ್ಯಾ ವಲ್ಲಭ ಮಾಧವತೀರ್ಥರ ಪೀಠಾರೋಹಣ ಕಾರ್ಯಕ್ರಮ ನಡೆಯಿತು.

ಕೋಲಾರ, ಮುಳಬಾಗಿಲು, ಬೆಂಗಳೂರು, ಚೆನ್ನೈ ಸೇರಿದಂತೆ ವಿವಿಧ ಭಾಗಗಳಿಂದ ಬಂದಿದ್ದ ನೂರಾರು ಭಕ್ತರ ಸಮ್ಮುಖದಲ್ಲಿ ಪೀಠಾರೋಹಣ ಮಾಡಿದ ಶ್ರೀಗಳಿಗೆ ಮಠದ ಕಾರ್ಯದರ್ಶಿ ಕಂಬಾಲೂರು ಸಮೀರಾಚಾರ್ಯರು ಮೂಲವೀರ ರಾಮದೇವರ ಪೆಟ್ಟಿಗೆಯ ಬೀಗದ ಕೈಗಳನ್ನು ಹಸ್ತಾಂತರಿಸಿ ಮಠದ ಸಂಪೂರ್ಣ ಜವಾಬ್ದಾರಿ ವಹಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-318/119/2024–25 ದಿನಾಂಕ: 09–04–2025


ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ಕೈಗಾರಿಕೆ ಭೂಉಪಯೋಗ ವಲಯದಿಂದ ವಸತಿ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s. G-Corp Spaces Pvt. Ltd., ರವರು # 21/19, Craig Park Layout, Off. M.G. Road, Bangalore - 560001	ಯಲಹಂಕ	ಜಾಲ	ಬೆಳ್ಳಹಳ್ಳಿ	46/2, 47 & 49/2	ಒಟ್ಟು 11ಎ–31ಗುಂ	ಕೈಗಾರಿಕೆ	ವಸತಿ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ಕೈಗಾರಿಕೆ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು



ಕಾಡಾನೆ ದಾಳಿಯಿಂದ ಗಾಯಗೊಂಡ ಆನೆ ಸಾಗರನಿಗೆ ಸಕ್ರೆಬೈಲಿನ ಬಿಡಾರದಲ್ಲಿ ಚಿಕಿತ್ಸೆ ಕೊಡಲಾಗುತ್ತಿದೆ

ಮಾವುತ-ಕಾವಾಡಿ, ಬಿಡಾರದ ಗಂಡಾನೆಗಳ ಮೇಲೆ ದಾಳಿ

ಹೆಣ್ಣಾನೆ ಸಾಂಗತ್ಯಕ್ಕಾಗಿ ಕಾಡಾನೆಗಳ ಕೀಟಲೆ!

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಹೆಣ್ಣಾನೆಗಳ ಸಾಂಗತ್ಯ ಅರಸಿ ಭದ್ರಾ ಅಭಯಾರಣ್ಯದಿಂದ ಇಲ್ಲಿನ ಸಕ್ರೆಬೈಲು ಆನೆ ಬಿಡಾರದ ಪರಿಸರಕ್ಕೆ ಬರುವ ಕಾಡಾನೆಗಳು ಮೇಯಲು ಕಾಡಿಗೆ ಬಿಟ್ಟ ಹೆಣ್ಣಾನೆಗಳನ್ನು ವಾರ, ತಿಂಗಳುಗಟ್ಟಲೇ ಒತ್ತೆ ಇರಿಸಿಕೊಳ್ಳುತ್ತಿವೆ.

ಈ ವೇಳೆ ಹೆಣ್ಣಾನೆಗಳ ಜೊತೆ ಬಿಡಾರದಲ್ಲಿ ಇರುವ ಗಂಡಾನೆಗಳ ಮೇಲೆ ದಾಳಿ ನಡೆಸಿ ಗಾಯಗೊಳಿಸಿ ಓಡಿಸುತ್ತಿವೆ. ಮೇಯಲು ಹೋದ ಆನೆಗಳನ್ನು ವಾಪಸ್ ಬಿಡಾರಕ್ಕೆ ಕರೆತರಲು ಕಾಡಿಗೆ ತೆರಳುವ ಮಾವುತ– ಕಾವಾಡಿಗಳ ಮೇಲೂ ಕಾಡಾನೆಗಳು ದಾಳಿ ನಡೆಸಿವೆ. ಇದು ಅರಣ್ಯ ಇಲಾಖೆಗೆ ತಲೆನೋವಾಗಿದೆ.

ದಾಳಿಯಿಂದ ಕಳೆದೊಂದು ತಿಂಗಳಲ್ಲಿ ಬಿಡಾರದ ಆನೆಗಳಾದ ಸಾಗರ, ಅಶ್ವತ್ಥಾಮ, ಬಹದ್ದೂರ್ ಹಾಗೂ ಬೆಂಗಳೂರು ಗಣೇಶ ಗಾಯಗೊಂಡಿದ್ದಾರೆ. ಸಾಗರ ಹಾಗೂ ಅಶ್ವತ್ಥಾಮನಿಗೆ ಬಿಡಾರದಲ್ಲಿಯೇ ಚಿಕಿತ್ಸೆ ಕೊಡಲಾಗುತ್ತಿದೆ.

ಸಕ್ರೆಬೈಲು ಬಿಡಾರದಲ್ಲಿ ಇರುವ ನಾಲ್ಕು ಹೆಣ್ಣಾನೆಗಳು (ನೇತ್ರಾವತಿ, ಹೇಮಾವತಿ, ಭಾನುಮತಿ ಹಾಗೂ ಕುಂತಿ) ಸೇರಿದಂತೆ 26 ಆನೆಗಳನ್ನು ನಿತ್ಯ ಮಧ್ಯಾಹ್ನ ಮೇಯಲು ಕಾಡಿಗೆ ಬಿಟ್ಟು ಮತ್ತೆ ಮರುದಿನ ಬೆಳಿಗ್ಗೆ ಕರೆತಂದು ತುಂಗಾ ಜಲಾಶಯದ ಹಿನ್ನೀರಲ್ಲಿ ಸ್ನಾನ ಮಾಡಿಸಿ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಲಾಗುತ್ತದೆ. ಇದು ಇಲ್ಲಿನ ಗಜಪಡೆಯ ದಿನಚರಿ.

> **ಕಾಡಾನೆಗಳ ಕಣ್ತಪ್ಪಿಸಿ ಬಿಡಾರದ ಹೆಣ್ಣಾನೆಗಳನ್ನು ಬಿಡಿಸಿಕೊಂಡು ಬರುತ್ತೇವೆ. ಅವು ಜೊತೆಯಲ್ಲಿದ್ದಾಗ ಬಿಟ್ಟು ಬರುತ್ತೇವೆ. ಕಾಡಾನೆಗಳಿಗೆ ಪ್ರತಿರೋಧ ತೋರಿ ನಮ್ಮ ಆನೆಗಳು ಗಾಯಗೊಳ್ಳುತ್ತಿವೆ**
> **ಪ್ರಸನ್ನಕೃಷ್ಣ ಪಟಗಾರ್,** ಡಿಸಿಎಫ್, ಶಿವಮೊಗ್ಗ ವನ್ಯಜೀವಿ ವಿಭಾಗ

ಮರಿ ಆನೆ ಉಳಿಸಲು ಆಗಲಿಲ್ಲ: ರಾತ್ರಿ ಕಾಡಿನಲ್ಲೇ ಉಳಿಯುವ ಹೆಣ್ಣಾನೆಗಳ ಸ್ನೇಹ ಅರಸಿ ಕಾಡಾನೆಗಳು ಬರುತ್ತಿವೆ. ನೇತ್ರಾವತಿ ಆನೆ ಕಳೆದ ಒಂದು ತಿಂಗಳಿನಿಂದ ಕಾಡಾನೆಯೊಟ್ಟಿಗೆ ಇದೆ. ಅದರೊಂದಿಗೆ ಹೋಗಿದ್ದ ಹೇಮಾವತಿ ಮಾರ್ಚ್ 7ರಂದು ಕಾಡಿನಲ್ಲೇ ಮರಿ ಹಾಕಿತ್ತು. ಚೊಚ್ಚಲ ಬಾಣಂತನದ ವೇಳೆ ಮರಿಗೆ ಹಾಲುಣಿಸಲು ತಾಯಿಯ ಕೆಚ್ಚಲ ಬಳಿ ಕರೆತಂದು ಅಭ್ಯಾಸ ಮಾಡಿಸಬೇಕಿದೆ. ಹತ್ತಿರ ಹೋದ ಕಾವಾಡಿ ಮೇಲೆ ಕಾಡಾನೆ ದಾಳಿ ನಡೆಸಿದೆ. ಗಾಯಗೊಂಡ ಕಾವಾಡಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಾಯಿ ಹಾಲುಣಿಸದೇ ನಿತ್ರಾಣಗೊಂಡ ಮರಿ ಸಾವನ್ನಪ್ಪಿತು.

'ಬಿಡಾರದ ಪರಿಸರದ ಸುತ್ತಮುತ್ತಲಿನ ಕಾಡಿನಲ್ಲಿ 12 ಕಾಡಾನೆಗಳು ಬೀಡುಬಿಟ್ಟಿವೆ. ಒಮ್ಮೆ ಹೆಣ್ಣಾನೆಯ ಸಾಂಗತ್ಯ ದೊರೆತರೆ ಅವುಗಳಿಗೆ ಇಷ್ಟವಾಗುವಷ್ಟು ದಿನ ಜೊತೆಗಿದ್ದು ಹೋಗುತ್ತವೆ. ಬಿಡಾರದಲ್ಲಿ ಸದ್ಯ 5 ಗಂಡಾನೆಗಳಿಗೆ 1 ಹೆಣ್ಣಾನೆ ಇದ್ದು, ಕಾಡಾನೆಗಳ ಕಾಟದಿಂದ ಇಲ್ಲಿ ಅನುಪಾತದ ನಿರ್ವಹಣೆ ಕಷ್ಟವಾಗಿ ಮದವೇರಿದ ನಮ್ಮ ಸಲಗಗಳನ್ನು ಸಲಹುವುದೂ ಸವಾಲಾಗಿದೆ' ಎಂದು ಹೇಳುತ್ತಾರೆ.

ಈಜಿ ಬರುತ್ತವೆ..!

ಭದ್ರಾ ಅಭಯಾರಣ್ಯದಲ್ಲಿ ಹೆಣ್ಣಾನೆಗಳು ಕಡಿಮೆ ಸಂಖ್ಯೆಯಲ್ಲಿವೆ. ಹೀಗಾಗಿ ಅಲ್ಲಿನ ಕಾಡಾನೆಗಳು ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯ ಸಕ್ರೆಬೈಲು ಆನೆ ಬಿಡಾರದತ್ತ ಬರುತ್ತವೆ. ಭದ್ರಾ, ಶೆಟ್ಟಿಹಳ್ಳಿ, ಶರಾವತಿ, ಸೋಮೇಶ್ವರ ಹಾಗೂ ಮೂಕಾಂಬಿಕಾ ವನ್ಯಜೀವಿ ಧಾಮಗಳ ನಡುವೆ ಇದ್ದ ಆನೆ ಪಥ 1972ರಲ್ಲಿ ಗಾಜನೂರಿನ ತುಂಗಾ ಜಲಾಶಯ ನಿರ್ಮಾಣಗೊಂಡ ನಂತರ ಕಡಿತಗೊಂಡಿದೆ.

ಹೆಣ್ಣಾನೆ ಅರಸಿ ಮಳೆಗಾಲದಲ್ಲಿ ಕಾಡಾನೆಗಳು ಜಲಾಶಯದ ಹಿನ್ನೀರಿನಲ್ಲಿ ಈಜಿಕೊಂಡು ಬರುತ್ತವೆ. ಬೇಸಿಗೆಯಲ್ಲಿ ಭದ್ರಾ ಅಭಯಾರಣ್ಯ ವ್ಯಾಪ್ತಿಯ ಬೈರಾಪುರ, ಚೌಡಿಗುಡ್ಡ, ಉಂಬ್ಳೆಬೈಲು, ಮಾರಿದಿಬ್ಬದ ಹಾದಿಯಲ್ಲಿ ಹಿನ್ನೀರು ಪ್ರದೇಶ ದಾಟುತ್ತವೆ ಎಂದು ಅರಣ್ಯಾಧಿಕಾರಿಯೊಬ್ಬರು ಹೇಳುತ್ತಾರೆ.

ಕೊರಿಯಾ ಪ್ರಜೆ ಪ್ರಕರಣಕ್ಕೆ ಮರುಜೀವ

ನವದೆಹಲಿ: 'ವಿದೇಶಿಯರು ಇಲ್ಲಿ ದಲ್ಲಿ ಸಾಬೀತಾಗಲಿ' ಎಂದೂ ಪೀಠ ಮಾಡಿರುವ ಹೂಡಿಕೆಗಳನ್ನು ಹೇಳಿದೆ. ಬೆಂಗಳೂರಿನ ನ್ಯಾಯಾಲಯ ರಕ್ಷಿಸುವುದು ದೇಶದ ಕಾನೂನು ದಲ್ಲಿ ಏಪ್ರಿಲ್ 16ರಂದು ಹಾಜರಿರುವಂತೆ ವ್ಯವಸ್ಥೆಯ ಜವಾಬ್ದಾರಿ' ಎಂದು ಪ್ರಕರಣದ ಎಲ್ಲ ಕಕ್ಷಿದಾರರಿಗೆ ಪೀಠವು ಹೇಳಿರುವ ಸುಪ್ರೀಂ ಕೋರ್ಟ್, ಜೆಬಿಸ್ ನಿರ್ದೇಶನ ನೀಡಿದೆ. ಪಾವತಿ ಹೆಸರಲ್ಲಿ ಉದ್ಯೋಗದಾತ ದಕ್ಷಿಣ ಕೊರಿಯಾದ ದಬಾಂಗ್ ಕಂಪನಿಗೆ ವಂಚಿಸಿದ ಆರೋಪ ಎದುರಿಸು ಸೀಟ್ ಆಟೋಮೋಟಿವ್ ಲಿಮಿಟೆಡ್ ತ್ತಿರುವ ದಕ್ಷಿಣ ಕೊರಿಯಾ ಪ್ರಜೆ ಕಂಪನಿಯಲ್ಲಿ ಮೂನ್ ಜೂನ್‌ಸೋಕ್ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಅವರು ಮುಖ್ಯ ಹಣಕಾಸು ಅಧಿಕಾರಿ ಮತ್ತೆ ಊರ್ಜಿತಗೊಳಿಸಿದೆ. ಯಾಗಿದ್ದರು. ಕಂಪನಿಯು ಕಿಯಾ ಈ ಕುರಿತ ಅರ್ಜಿಯ ವಿಚಾರಣೆ ಕಾರುಗಳಿಗೆ ಸೀಟು ತಯಾರಿಸುತ್ತದೆ. ನಡೆಸಿದ ನ್ಯಾಯಮೂರ್ತಿಗಳಾದ ಜಿಎಸ್‌ಟಿ ಪಾವತಿಗಳಿಗೆ ಸಂಬಂಧಿಸಿ, ಸಂಜಯ್ ಕರೋಲ್ ಹಾಗೂ ಕಂಪನಿಗೆ ಮೂನ್ ಜೂನ್‌ಸೋಕ್ ಅಹಸಾನುದ್ದೀನ್ ಅಮಾನುಲ್ಲಾ ಅವರು ₹10 ಕೋಟಿ ವಂಚಿಸಿದ್ದಾರೆ ಎಂದು ಇದ್ದ ನ್ಯಾಯಪೀಠ, ಆರೋಪಿ ಮೂನ್ ಆರೋಪಿಸಲಾಗಿದೆ. ನಿಖಿಲ್ ಕುಮಾರ್ ಜೂನ್‌ಸೋಕ್ ಅವರನ್ನು ದೋಷಮುಕ್ತ ಸಿಂಗ್ ಹಾಗೂ ರಿತೇಶ್ ಮದಾನ ಈ ಗೊಳಿಸಿ ಕರ್ನಾಟಕ ಹೈಕೋರ್ಟ್ ಪ್ರಕರಣದ ಇತರ ಆರೋಪಿಗಳು. ಹೊರಡಿಸಿದ್ದ ಆದೇಶ ರದ್ದು ಮಾಡಿದೆ. ಕಂಪನಿ ಪರ ವಕೀಲರಾದ್ದು ವಕೀಲರಾದ 'ಆರೋಪಿ ವಿರುದ್ಧ ಯಾವುದೇ ಹೈಕೋರ್ಟ್ ಸನ್ ಸಂಸ್ಥೆ ಪರವಾಗಿ ಹಿರಿಯ ಸಾಕ್ಷ್ಯ ಇಲ್ಲ ಹಾಗೂ ಈ ಪ್ರಕರಣದಲ್ಲಿ ವಕೀಲ ಸಿದ್ಧಾರ್ಥ ಲೂಥ್ರಾ ವಾದ ದೋಷಮುಕ್ತನಾಗಲು ಆರೋಪಿ ಅರ್ಹ ಮಂಡಿಸಿದರು. ಜೂನ್‌ಸೋಕ್ ಪರ ಎಂಬುದು ವಿಚಾರಣಾ ನ್ಯಾಯಾಲಯ- ವಕೀಲ ರಾಜೀವ್ ಸಿಕ್ರಿ ಹಾಜರಿದ್ದರು.


'ಅಂಬೇಡ್ಕರ್ ವೀದಿ' ಬಳಕೆ ಕಡ್ಡಾಯ

ಬೆಂಗಳೂರು: ಸಚಿವಾಲಯದ ಅಧಿಕೃತ ಪತ್ರ ವ್ಯವಹಾರಗಳಲ್ಲಿ 'ಡಾ.ಬಿ.ಆರ್. ಅಂಬೇಡ್ಕರ್ ವೀದಿ' ಎಂದು ವಿಳಾಸ ನಮೂದಿಸುವುದನ್ನು ಕಡ್ಡಾಯಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಸರ್ಕಾರದ ಸಚಿವಾಲಯವು ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕಟ್ಟಡಗಳು ಅಂಬೇಡ್ಕರ್ ವೀದಿಯಲ್ಲಿವೆ. ಆದರೆ, ವಿವಿಧ ಇಲಾಖೆಗಳು ನಡೆಸುವ ಪತ್ರ ವ್ಯವಹಾರದಲ್ಲಿ ವಿಳಾಸ ನಮೂದಿಸುತ್ತಿಲ್ಲ. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಹೆಸರನ್ನು ಒಳಗೊಂಡ ವೀದಿಯ ಹೆಸರು ಬಳಸದೇ ಇರುವುದು ಅಸಮಂಜಸವಾಗುತ್ತದೆ ಎಂದು ವಿವರಿಸಲಾಗಿದೆ. ಸರ್ಕಾರದ ನಿರ್ದೇಶನ ತಕ್ಷಣ ಜಾರಿಗೊಳಿಸಬೇಕು ಎಂದು ಸೂಚಿಸಲಾಗಿದೆ.

ಅಹಿಂಸೆಯ ಮಹಾಮೂರ್ತಿ ಮಹಾವೀರರು

● ಪದ್ಮಿನಿ ನಾಗರಾಜು



ಇಂದು ಮಹಾವೀರ ಜಯಂತಿ

ಭಗವಾನ್ ಮಹಾವೀರರು ಅಹಿಂಸಾಧರ್ಮದ ಪ್ರವರ್ತಕರು. ಕುಂಡಲಪುರದ ಗಣರಾಜ ಸಿದ್ಧಾರ್ಥ ಹಾಗೂ ತ್ರಿಶಲಾದೇವಿಯ ಪುತ್ರನಾಗಿ ಜನಿಸಿದ ಮಹಾವೀರರಿಗೆ ಸನ್ಮತಿ, ವರ್ಧಮಾನ, ವೀರ ಮುಂತಾದ ಹೆಸರುಗಳಿವೆ. ಇವರ ಕಾಲ ಸು. ಕ್ರಿ. ಪೂ. 6ನೇ ಶತಮಾನ. ರಾಜಪುತ್ರನಾಗಿ ಹುಟ್ಟಿದರೂ ಜನರ ಕಲ್ಯಾಣಕ್ಕಾಗಿ ರಾಜಪುತ್ರತ್ವವನ್ನೂ ಸಂಸಾರವನ್ನೂ ತ್ಯಾಗಮಾಡಿ ಸಾಮಾನ್ಯ ಜೀವನವನ್ನು ಸ್ವೀಕರಿಸಿಕೊಳ್ಳುವುದು ಸುಲಭವಲ್ಲ. ಆದರೆ ಮಹಾವೀರರ ಅಂತಃಕರಣ ಮಾರ್ಗವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರು. ತಮ್ಮ ಕಠೋರ ಸಂಯಮದಿಂದ ತಪಸ್ಸು ಮಾಡಿದರು. ತಪಸ್ಸಿನ ಮಧ್ಯೆ ಬಂದ ಅನೇಕ ಕಷ್ಟಗಳನ್ನು, ನೋವು-ಹಿಂಸೆಗಳನ್ನು ತಾಳ್ಮೆಯಿಂದ ಸಹಿಸಿಕೊಂಡರು. ತಮ್ಮ ಮನಸ್ಸಿನಲ್ಲಿ ಮೂಡಿದ ಅನೇಕ ತಾಕಲಾಟಗಳನ್ನು, ದ್ವಂದ್ವಗಳನ್ನು ಸಂಯಮದಿಂದ ನಿಗ್ರಹಿಸಿದರು. ತಮ್ಮ ಅನೇಕ ಪ್ರಶ್ನೆಗಳಿಗೆ ತಾವೇ ಉತ್ತರವನ್ನು ಕಂಡುಕೊಂಡರು.

ತಾವು ಕಂಡುಕೊಂಡ ಸತ್ಯವನ್ನು ಸಂಸಾರದಲ್ಲಿನ ಸಾಮಾನ್ಯ ಜನರಿಗೆ ಮುಟ್ಟಿಸಲು ಜನಸಾಮಾನ್ಯರ ಭಾಷೆಯಾದ ಅರ್ಧಮಾಗಧಿಯಲ್ಲಿ ಉಪದೇಶ ಮಾಡಿದರು. ಅಹಿಂಸೆ, ಅಪರಿಗ್ರಹ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಎಂಬ ಐದು ವ್ರತಗಳ ಅನುಷ್ಠಾನದ ಅಡಿಪಾಯ ಹಾಕಿದರು. 'ನೀನೂ ಜೀವಿಸು, ಇತರರಿಗೂ ಜೀವಿಸಲು ಅವಕಾಶ ನೀಡು, ಸತ್ಯವನ್ನೇ ನುಡಿ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಪರಿಗ್ರಹ ಬಿಡು, ಪರಿಶುದ್ಧವಾದ ಬ್ರಹ್ಮಚರ್ಯವನ್ನು ಪಾಲಿಸು. ಈ ವ್ರತಗಳ ಪಾಲನೆ ಮಾಡುವುದು ಸುಲಭ ಸಾಧ್ಯವಲ್ಲ.

ಆದರೆ ಒಮ್ಮೆ ಇಂತಹ ಚಿಂತನೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದೇ ಆದರೆ ಅದು ಅಂತರಂಗ-ಬಹಿರಂಗಶುದ್ಧಿಗಳಿಗೆ ಸಾಧನವೇ ಹೌದು' ಎಂದು ಮಾರ್ಗದರ್ಶನ ಮಾಡಿದರು.

'ಅಹಿಂಸೆಯೇ ಪರಮ ಧರ್ಮ' ಎಂಬುದನ್ನು ದಿವ್ಯಮಂತ್ರವನ್ನಾಗಿಸಿಕೊಳ್ಳಬೇಕು. ಅದನ್ನು ಒಂದು ವ್ರತದಂತೆ ಪಾಲಿಸಬೇಕು – ಎಂಬುದು ಮಹಾವೀರರ ಉಪದೇಶದ ಕೇಂದ್ರಬಿಂದು. 'ಪ್ರತಿಯೊಂದು ಜೀವಿಯೂ ಸಂತೋಷವಾಗಿರಲು ಬಯಸುತ್ತದೆ. ಯಾವುದೇ ಜೀವಿಯೂ ನೋವನ್ನು ಬಯಸುವುದಿಲ್ಲ. ಹೀಗಾಗಿ ಜೀವನದ ಅತ್ಯುನ್ನತ ಗುರಿಯು ಇತರ ಜೀವಿಗಳಲ್ಲಿನ ಜೀವನವನ್ನು ಗೌರವಿಸಿ, ರಕ್ಷಿಸುವುದೇ ಆಗಿದೆ' ಎಂದರು. ಮಹಾವೀರರ ಪ್ರಕಾರ, ಜೀವನದ ಪಾಪಗಳನ್ನು ಪೂಜೆ ಅಥವಾ ಪ್ರಾರ್ಥನೆಗಳಿಂದ ತೊಳೆಯಲಾಗುವುದಿಲ್ಲ. ನಮ್ಮ ಸದ್ಗುಣಶೀಲ ನಡವಳಿಕೆಗಳಿಂದ ಮಾತ್ರವೇ ಪಾಪಗಳನ್ನು ತಪ್ಪಿಸಬಹುದು ಎಂದು ಘೋಷಿಸಿದರು.

ಮನುಷ್ಯನ ಜೀವನ ಉತ್ತಮವಾಗಲು ರತ್ನತ್ರಯಗಳಾದ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರಗಳನ್ನು ಪಾಲಿಸಬೇಕು ಎಂದು ಮಹಾವೀರರು ಉಪದೇಶಿಸಿದರು. ಸರಿಯಾದ ನೋಟ ನಮಗೆ ಸರಿಯಾದ ಜ್ಞಾನವನ್ನು ನೀಡುತ್ತದೆ. ಸರಿಯಾದ ಜ್ಞಾನವು ನಮ್ಮನ್ನು ಸರಿಯಾದ ಕ್ರಿಯೆಯ ಕಡೆಗೆ ಪ್ರೇರೇಪಿಸುತ್ತದೆ. ದುರಾಚರಣೆಯನ್ನು ತೊರೆದು ಸದಾಚಾರಿಯಾಗುವುದೇ ಸಮ್ಯಕ್ ಚಾರಿತ್ರದ ನಿಲುವು. ಈ ಮೂರು ರತ್ನಗಳನ್ನು ಜೀವನದ ತತ್ವಗಳನ್ನಾಗಿ ಅಳವಡಿಸಿಕೊಳ್ಳುವುದೇ ಜೀವನದ ಗುರಿ ಎಂಬುದು ಮಹಾವೀರರ ಉಪದೇಶದ ಸಾರ.

ಮಹಾವೀರರು ಮನುಷ್ಯನ ಸರಿಯಾದ ನಡವಳಿಕೆಗೆ ಹೆಚ್ಚು ಒತ್ತು ನೀಡಿದರು. ಮನುಷ್ಯರು ಎಂದು ದೌರ್ಬಲ್ಯಗಳನ್ನು ಜಯಿಸಬೇಕೆಂದು ಅವರು ಪ್ರತಿಪಾದಿಸಿದರು. ಅವುಗಳೆಂದರೆ ಮೋಹ ಮತ್ತು ತಿರಸ್ಕಾರ. ಮೋಹವು ಸ್ವಾರ್ಥ ಹಾಗೂ ದುರಾಸೆಗೆ ಕಾರಣವಾದರೆ, ತಿರಸ್ಕಾರವು ದ್ವೇಷ ಮತ್ತು ಕೋಪಕ್ಕೆ ಕಾರಣವಾಗುತ್ತದೆ. ಇವೆರಡರಿಂದಲೂ ಬಿಡುಗಡೆಯನ್ನು ಪಡೆದಾಗ ಮಾತ್ರ ಮಾನವೀಯತೆ ನೆಲೆಸಲು ಸಾಧ್ಯ ಎಂಬುದು ಅವರ ನಿಲವು. ಮನುಷ್ಯನ ಜೀವನದ ಪರಮಸತ್ಯವನ್ನು ಅರಿತುಕೊಳ್ಳಬೇಕು. ಅದರ ಸಾಕ್ಷಾತ್ಕಾರಕ್ಕಾಗಿ ತಪಸ್ಸು, ನೈತಿಕತೆ, ಶುದ್ಧತೆ ಮತ್ತು ಸದ್ಗುಣಗಳಿಂದ ಜೀವನವನ್ನು ನಡೆಸಬೇಕು' ಎಂದು ಅವರ ಜೀವನಸಾರ್ಥಕತೆಯ ಬೆಳಕನ್ನು ಕಾಣಿಸಿದರು. 'ನೀನೂ ಬದುಕು, ಇತರರನ್ನೂ ಬದುಕಲು ಬಿಡು' ಎಂಬುದು ಅವರ ಜೀವನಸಂದೇಶ.

ಪೊಲೀಸರ ಕೈಸೇರಿದ ಮರಣೋತ್ತರ ಪರೀಕ್ಷಾ ವರದಿ

ಪ್ರಜಾವಾಣಿ ವಾರ್ತೆ



ವಿನಯ್ ಸೋಮಯ್ಯ

ಬೆಂಗಳೂರು: ಕಚೇರಿಯ ಗೋದಾಮಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅವರ ಮರಣೋತ್ತರ ಪರೀಕ್ಷಾ ವರದಿಯು ಬುಧವಾರ ಹೆಣ್ಣೂರು ಠಾಣೆ ಪೊಲೀಸರ ಕೈಸೇರಿದೆ. ವರದಿ ಆಧರಿಸಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ನಾಗವಾರದ ಖಾಸಗಿ ಕಂಪನಿಯೊಂದರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ವಿನಯ್ ಏಪ್ರಿಲ್ 4ರಂದು ನೇಣು ಹಾಕಿಕೊಂಡಿದ್ದರು.

'ವಿನಯ್ ಅವರು ಮೃತಪಟ್ಟ ನಿಖರವಾದ ಸಮಯ, ಮೃತದೇಹ ಯಾವ ಸ್ಥಿತಿಯಲ್ಲಿತ್ತು ಎಂಬುದನ್ನು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ವರದಿಯಲ್ಲಿ ಉಲ್ಲೇಖಿಸಿದ್ದಾರೆ. ವರದಿಯನ್ನು ವಿಶ್ಲೇಷಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ವಿನಯ್ ಅವರ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಅವರು ಬರೆದಿದ್ದರು ಎನ್ನಲಾದ ಮರಣ ಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್ಎಸ್ಎಲ್) ರವಾನೆ ಮಾಡಲಾಗಿತ್ತು. ಎರಡು ದಿನಗಳ ಒಳಗಾಗಿ ಎಫ್ಎಸ್ಎಲ್ ವರದಿ ಬರುವ ಸಾಧ್ಯತೆಯಿದೆ. ವರದಿ ಬಂದ ಬಳಿಕವಷ್ಟೇ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಮರಣ ಪತ್ರದ ನೈಜತೆ ಗೊತ್ತಾಗಲಿದೆ. ಏ. 4ರಂದು ಬೆಳಿಗ್ಗೆ 4.22ರ ಸುಮಾರಿಗೆ ವಿನಯ್ ಮೊಬೈಲ್‌ನಿಂದ ಕೊನೆಯ ಸಂದೇಶ ರವಾನೆ ಆಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಿನಯ್ ಆತ್ಮಹತ್ಯೆ ಪ್ರಕರಣದಲ್ಲಿ ಕಿರುಕುಳ ನೀಡಿದ್ದ ಆರೋಪದ ಅಡಿ ಕೊಡಗು ಜಿಲ್ಲಾ ಕಾಂಗ್ರೆಸ್ ವಕ್ತಾರ ತೆನ್ನಿರ ಮೈನಾ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ವಿಚಾರಣೆಗೆ ಬರುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ತೆನ್ನಿರ ಮೈನಾ ಅವರು ತಲೆಮರೆಸಿಕೊಂಡಿದ್ದು ಸಂಪರ್ಕಕ್ಕೆ ಸಿಗುತ್ತಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ವಿನಯ್ ಅವರ ಕುಟುಂಬಸ್ಥರಿಂದಲೂ ಮಾಹಿತಿ ಪಡೆದುಕೊಳ್ಳಬೇಕಿದೆ. ಸದ್ಯದಲ್ಲೇ ಅವರ ಕುಟುಂಬಸ್ಥರು, ಕಚೇರಿ ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಸುಧಾ, ಮಯೂರ ಓದಿರಿ

ಕರ್ನಾಟಕ ಸರ್ಕಾರ | ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ-ಮೇಲ್:zped.cta@gmail.com ದೂರವಾಣಿ ಸಂ:08194-222372

ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2025-26/38
ದಿನಾಂಕ: 08.04.2025

ಮರು ಟೆಂಡರ್ ಪ್ರಕಟಣೆ

(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಯೋಜನೆಯಡಿಯಲ್ಲಿ ವ್ಯಾಪ್ತಿಯ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾದ 12 ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.10.00 ಲಕ್ಷ ಗರಿಷ್ಠ ರೂ.100.00 ಲಕ್ಷಗಳು ಒಟ್ಟು ರೂ:534.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:-
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 17.04.2025ರ ಸಮಯ: 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 19.04.2025ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.04.2025ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.04.2025ರ : ಸಮಯ 16.02
ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.12:DIPR/CTA/KSMCA/2025-26
ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಆಯುಷ್ ಇಲಾಖೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು-560009.

ಅಧಿಸೂಚನೆ ಸಂಖ್ಯೆ: ಆವೈಮ/33/ಹೊ.ಗು/ಸರಬ/2024-25 ದಿನಾಂಕ: 08-04-2025

ಇ-ಟೆಂಡರ್ ಅಧಿಸೂಚನೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ & ಆಸ್ಪತ್ರೆ, ಬೆಂಗಳೂರು ಇಲ್ಲಿನ ಕಟ್ಟಡಗಳು ಮತ್ತು ಆವರಣಗಳನ್ನು ಶುಚಿಗೊಳಿಸಲು ಹಾಗೂ ಕಾವಲು ಕಾಯಲು ಅವಶ್ಯಕವಿರುವ ಭದ್ರತಾ / ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯಲ್ಲಿ ಪಡೆಯುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸುವ ಇ-ಟೆಂಡರ್

ಇ-ಟೆಂಡರ್ ಅನುಸೂಚಿಗಳು

ಇ-ಟೆಂಡರ್ ಅಧಿಸೂಚನೆ ದಿನಾಂಕ	: 08-04-2025
ಟೆಂಡರ್ ದಾಖಲೆಗಳು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	: 09-04-2025 ರಿಂದ 25-04-2025 ರವರೆಗೆ ಸಂಜೆ 4.00 ಘಂಟೆಯವರೆಗೆ
ಪ್ರೀ-ಬಿಡ್ ಸಭೆ	: 23-04-2025 ಮಧ್ಯಾಹ್ನ 12.00 ಘಂಟೆಗೆ
ಅಪ್‌ಲೋಡ್ ಆದ ಇ-ಟೆಂಡರ್‌ಗಳನ್ನು ತೆರೆಯುವ ದಿನಾಂಕ	: 28-04-2025 ಸಂಜೆ 4.00 ಘಂಟೆಗೆ
ಟೆಂಡರ್ ದಾಖಲೆ ತೆರೆಯುವ ಸ್ಥಳ	: ಪ್ರಾಚಾರ್ಯರ ಕೊಠಡಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು

ಇ-ಟೆಂಡರ್-ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ದಿನಾಂಕ: 09-04-2025 ರ ಸಂಜೆ 3.00 ಘಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು ಟೆಂಡರ್ ಸಮಿತಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/173/ಆಕಾರ್/2025-26

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ- 04, ಭೂತರಾಮನಹಟ್ಟಿ, ಬೆಳಗಾವಿ-591156
(ನ್ಯಾಕ್ ಮಾನ್ಯತೆ B+ ಗ್ರೇಡ್-2021) PM-USHA (MERU)
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in, aee@rcub.ac.in | ಕುಲಸಚಿವರ ಕಾರ್ಯಾಲಯ Office of the Registrar | Website: www.rcub.ac.in Phone No.: 0831-2565234/42

ಸಂ: ರಾಚವಿ/ಬೆಳಗಾವಿ/ಕುಸಕಾ/ಕ.ವಿ/2025-26/ ದಿನಾಂಕ: 08.04.2025

ಟೆಂಡರ್ ಅಧಿಸೂಚನೆ

ಕುಲ ಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಬೆಳಗಾವಿ ಇವರು ವಿಶ್ವವಿದ್ಯಾಲಯದ ಅಡಿಯಲ್ಲಿನ ಕೆಳಕಾಣಿಸಿದ ಸಿವಿಲ್ ಕಾಮಗಾರಿಗಳಿಗೆ ದಿನಾಂಕ: 08.04.2025 ರಂದು ಅರ್ಹ ಗುತ್ತಿಗೆದಾರರಿಂದ KPPP ಪೋರ್ಟಲ್‌ನಲ್ಲಿ 15 ದಿನಗಳ ಗುತ್ತಿಗೆಯನ್ನು ಕರೆಯಲಾಗಿದ್ದು, ದಿನಾಂಕ: 22.04.2025 ರ 10.00 AM ಗಂಟೆಯೊಳಗಾಗಿ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಬಹುದು. ಕಾಮಗಾರಿಯ ಅಂದಾಜು ಮೊತ್ತ, ಇ.ಎಮ್.ಡಿ ಮೊತ್ತದ ವಿವರಣೆಯು ಈ ಕೆಳಗಿನಂತಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಇಂಜನೀಯರಿಂಗ್ ವಿಭಾಗದಲ್ಲಿ ಹಾಗೂ ವೆಬ್‌ಸೈಟ್ ವಿಳಾಸ www.rcub.ac.in ರಲ್ಲಿ ಪಡೆಯಬಹುದು.

Sl. No.	Name of the Work	Estimated Amount	EMD	Standard Document
1	Providing Breaker from Sub-station including erection of new breaker for individual use and their connections from substation to RCU, New campus Hirebagewadi, Belagavi (RCUB/2024-25/EL/WORK_INDENT6/CALL-2)	Rs. 13.84 Lakhs	Rs. 34,600.00	KW-1
2	Rewiring of Main building, administrative building, Chemistry department and quarters of RCU Main campus, Bhutaramanahatti, Belagavi (RCUB/2025-26/EL/WORK_INDENT10)	Rs. 74.42 Lakhs	Rs. 1,48,840.00	KW-3
3	Repair works to Roofing sheet and False ceiling of Main building, of RCU Main campus, Bhutaramanahatti, Belagavi (RCUB/2025-26/BD/WORK_INDENT9)	Rs. 33.87 Lakhs	Rs. 67,740.00	KW-2

Sd/- ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ಮಂಗಳೂರು ಮಹಾನಗರಪಾಲಿಕೆ
DMA/2024-25/WORK INDENT NO. 38185, 38224 ದಿನಾಂಕ: 08.04.2025

ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಪ್ರೀಮಿಯಂ ಎಫ್.ಎ. ಆರ್. ನಿಧಿ ಹಾಗೂ ಸಾಮಾನ್ಯ ನಿಧಿಯಲ್ಲಿ ಈ ಕಛೇರಿ ಟೆಂಡರ್ ಸಂಖ್ಯೆ: DMA/2024-25/WORK INDENT NO. 38185, 38224ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 372.50 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.05.2025 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರಪಾಲಿಕೆ, ಮಂಗಳೂರು
DIPR / MNG/53/ MPL /25-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ:ನಿಡಗುಂದಿ, ಜಿ:ವಿಜಯಪುರ.
ದೂರವಾಣಿ:08426-281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಟಿಬಿ/ಟೆಂಡರ್/2025-26/14 ದಿನಾಂಕ:02.04.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ (1) (KBJNL/2024-25/IW/WORK_INDENT1557) for Rs. 239.45 Lakhs,(2) (KBJNL/2024-25/HL/WORK_INDENT1185/CALL-3)" Rs. 84.69 Lakhs,(3) (KBJNL/2024-25/OW/WORK_INDENT1545) for Rs.42.30 Lakhs (Others),(4) KBJNL/2025-26/CN/WORK_INDENT1556- for Rs. 76.22 Lakhs (SC category). (5) KBJNL/2024-25/SE0085/CALL-3---Rs. 11.50 lakhs (Service tender). ಶೇಕಡಾವಾರು ದ್ವಿ-ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ-ಲಕೋಟಿ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ ದಿನಾಂಕ: 07.04.2025 ರಿಂದ 21.04.2025 ಸಾಯಂಕಾಲ 5.00 ಘಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23.04.2025 ಮುಂಜಾನೆ 11.00 ಘಂಟೆಗೆ.
3) ಆರ್ಥಿಕ ಬಿಡ್ ತೆರೆಯುವ ದಿನಾಂಕ:25.04.2025 ಮುಂಜಾನೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/10/ಕೆಎಸ್‌ಎಂಸಿಎ/2025-26

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ: 08152-227443

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -1,3&4
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ-03/2025-26
ದಿನಾಂಕ: 09.04.2025

ಕೋಲಾರ ಜಿಲ್ಲೆ ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್, ಮುಳಬಾಗಿಲು, ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 2216-ವಸತಿ ಗೃಹಗಳ ದುರಸ್ಥಿ ನಿರ್ವಹಣೆ ವೆಚ್ಚ, 5054-ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳ ನವೀಕರಣ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ: ಕನಿಷ್ಠ: ರೂ. 8.00 ಲಕ್ಷಗಳು ಹಾಗೂ ಗರಿಷ್ಟ: 350.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ ಕಾಲಾವಧಿ : 03-06 ತಿಂಗಳು ನಿರ್ವಹಿಸಲು ಸಿವಿಲ್ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು- 1,3&4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್ (Viz., http://kppp. karnataka. gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕಃ 21.04.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 22.04.2025 ರಂದು ಸಂಜೆ 16.30 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್ ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ ಪೋರ್ಟಲ್ (Viz., http://kppp.karnataka.gov.in)ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:17/ಕೆಎಸ್‌ಎಂಸಿಎ/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ-ಪೂರ್ವ)
ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ, 21ನೇ ಮಹಡಿ, (ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001.
ಸಂಖ್ಯೆ: ಕಾಪಾಅ/ಯೋ-ಪೂ/ಟೆಂಡರ್/17/2024-25 ದಿನಾಂಕ: 08.04.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ ಪೂರ್ವ ವಿಭಾಗ) ಪೂರ್ವ ವಲಯ, ಬೃ.ಬೆಂ.ಮ.ಪಾಲಿಕೆ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ಕೆ.ಪಿ.ಡಬ್ಲ್ಯೂ.ಡಿ /ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಮ್.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತವಾಗಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	2024-25ನೇ ಸಾಲಿಗೆ ಶಾಂತಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ-167 ಅಶೋಕನಗರದಲ್ಲಿ ಪೂರ್ವ ವಲಯ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯ ಪಡೆಯನ್ನು ಒದಗಿಸುವುದು. (2ನೇ ಕರೆ) ಕಾಮಗಾರಿಯ ಅಂದಾಜು ಮೊತ್ತ ₹ 99.97 ಲಕ್ಷಗಳು ಇಎಂಡಿ: ₹ 1,99,940/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 11.04.2025ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 21.04.2025ರ ಸಂಜೆ 4:00 ಗಂಟೆಯವರೆಗೆ (3) ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ದಿನಾಂಕ 22.04.2025ರ ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ಪೂರ್ವ ವಿಭಾಗ

ಮೈಸೂರು ವಿಶ್ವವಿದ್ಯಾನಿಲಯ
ಸ್ಥಾಪನೆ-1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್ಐಆರ್ಎಫ್-2024: ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು-570 005,
ಸಂಖ್ಯೆ: ಪವಿ.6.7/180/2011-12 ದಿನಾಂಕ: 28-03-2025

ಟೆಂಡರ್ ಪ್ರಕಟಣೆ
E-Procurement Portal ಮುಖಾಂತರ ಮಾತ್ರ
Web site: https,eproc.karnataka.govt.in

ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನಗೊಂಡ ಹಳೆಯ ಉತ್ತರಪತ್ರಿಕೆಗಳನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿಯೇ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಪೇಪರ್ ಮಿಲ್ಸ್ ಉದ್ದಿಮೆದಾರರು ಹಾಗೂ ಹಳೆಯ ಪೇಪರ್ ವ್ಯಾಪಾರಿಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ರನ್ನು ಸಲ್ಲಿಸಲು ಕೊನೆಯ ದಿ: 19.04.2025 ಸಂಜೆ 5.30 ಗಂಟೆಯ ವರೆಗೆ ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿ: 21.04.2025 ರಂದು ಬೆಳಿಗ್ಗೆ 11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಕುಲಸಚಿವ (ಪರೀಕ್ಷಾಂಗ), ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ Web site: https;eproc.karnataka.govt.in ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: 0821-2419293, 2419220 ಅನ್ನು ಸಂಪರ್ಕಿಸುವುದು.
ಸಹಿ/- ಉಪಕುಲಸಚಿವರು (ಪರೀಕ್ಷಾಂಗ)
DIPR-DD-MYS/01/KSMCA-44/2025-26

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು-560009
ದೂರವಾಣಿ 080-22010414/22010415, e-mail: prckar.tender@gmail.com
ಸಂಖ್ಯೆ: ಕೆಪಿಆರ್‌ಸಿ-ಎಡಿಎಂ2/30/2025 ದಿನಾಂಕ: 09.04.2025

ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, 1999 ಮತ್ತು ನಿಯಮಗಳು, 2000 ಅನ್ವಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ **"Advancing Sustainable Menstrual Hygiene Management - An Initiative for Zero Menstrual Waste"** (ಪ್ರೇರಣಾ) ಕಾರ್ಯಕ್ರಮದಡಿ ಕೆಳಕಂಡ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಆಹ್ವಾನಿಸಲಾಗಿದೆ.
Tender Number : RDPR/2025-26/IND9270
ಟೆಂಡರ್ ಹೆಸರು: ಮುಟ್ಟಿನ ಕಪ್‌ಗಳ ಪೂರೈಕೆ (Supply of Menstrual Cups).
ಪೂರ್ವಭಾವಿ ಬಿಡ್ ಸಭೆಯ ದಿನಾಂಕ ಮತ್ತು ಸಮಯ: 16.04.2025, ಮಧ್ಯಾಹ್ನ 3.00 ಗಂಟೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 24.04.2025, ಸಂಜೆ 5.30 ಗಂಟೆ.
ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ಪೋರ್ಟಲ್‌ನಲ್ಲಿ ಲಭ್ಯವಿರುವ ವಿವರವಾದ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸೂಚನೆ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಗಳನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿರುತಾರೆ. (2) ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ನಿರ್ದೇಶಕರು (ಆಡಳಿತ-2) ಹಾಗೂ ಅಧ್ಯಕ್ಷರು, ಟೆಂಡರ್ ಆಹ್ವಾನ ಸಮಿತಿ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
DIPR/CP/YC/159/2025-26

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ
(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಎಂಎಸ್ಐಎಲ್ ಹೌಸ್, 7ನೇ ಮಹಡಿ, #36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560001 ದೂ: 080-23120582, +91 9945152469
ಇ-ಮೇಲ್: ceohmrdc@gmail.com CIN: U45203KA2003SGC032183
ಸಂಖ್ಯೆ: ಹೆಚ್‌ಎಂಆರ್‌ಡಿಸಿ/ಅಕೌಂಟ್ಸ್/14/ಇನ್‌ಶೂರೆನ್ಸ್ ಪಾಲಿಸಿ/2025-26 ದಿನಾಂಕ: 10.04.2025

ಇ-ಟೆಂಡರ್ ಸೂಚನೆ
ಕಾಮಗಾರಿಯ ಹೆಸರು: ಹೆಚ್‌ಎಂಆರ್‌ಡಿಸಿ 2025-26 ವರ್ಷಕ್ಕೆ ಈ ಕೆಳಗಿನ ವಿಮಾ ಪಾಲಿಸಿಗಳನ್ನು ನೀಡಲು ಹೆಸರಾಂತ ಮತ್ತು ಅನುಭವಿ ವಿಮಾ ಕಂಪನಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.
1. ಸ್ಟ್ಯಾಂಡರ್ಡ್ ಫೈರ್ ಮತ್ತು ಸ್ಪೆಷಲ್ ಪೆರಿಲ್ಸ್ ಪಾಲಿಸಿ. 2. ಬೆಂಕಿ ಮತ್ತು ಲಾಭದ ನಷ್ಟ (FLOP) 3. ಮೆಷಿನರಿ ಬ್ರೇಕ್-ಡೌನ್ ಪಾಲಿಸಿ 4. ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 02.05.2025 ರಂದು ಮಧ್ಯಾಹ್ನ 02.30 ಗಂಟೆಗೆ.
ವಿವರಗಳಿಗಾಗಿ http://kppp.karnataka.gov.in ಮತ್ತು www.hmrdc.com ಗೆ ಭೇಟಿ ನೀಡಿ
DIPR/CP/168/SPAN/2025-26 ಸಹಿ/- ಸಿಎಫ್‌ಓ/ಹೆಚ್‌ಎಂಆರ್‌ಡಿಸಿ

ಕರ್ನಾಟಕ ಗೃಹ ಮಂಡಳಿ
Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)
ಕರ್ನಾಟಕ ಗೃಹ ಮಂಡಳಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 09.05.2025 ಸಂಜೆ 4.00 ಗಂಟೆಗೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ವಿಜಯಪುರ ಜಿಲ್ಲಾಡಳಿತ ಕೇಂದ್ರ ಕಛೇರಿ ಕಟ್ಟಡ ಕಾಮಗಾರಿ ವಿಜಯಪುರ ಜಿಲ್ಲೆ. Tender Reference No. KHB/2025-26/BD/WORK_INDENT 557 & IFT No. 9/2025-26 Date : 09.04.2025 ಟೆಂಡರ್‌ಗಿಟ್ಟ ಮೊತ್ತ ರೂ.41,89,26,917/-.

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/ 080-22100077 website: https://kppp.karnataka.gov.in
ವಾ.ಸಾ.ಸಂ.ಇ/ವಾಪ್ರ/166/ಆಕಾರ್/2025-26 ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಚೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ ಸಂ.215, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು-562110. ದೂರವಾಣಿ: 080-22449999
ಇ-ಮೇಲ್: dobcmbengalururural@gmail.com
ಸಂ: ಡಿಬಿಬಿ/ಬೆಂಗ್ರಾ/ಆಹಾರ ಟೆಂಡರ್/ವಿನಿ/ಸಿ.ಆರ್10/2024-25 ದಿನಾಂಕ: 09.04.2025

ಪತ್ರಿಕಾ ಪ್ರಕಟಣೆ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ 2025-26 ಮತ್ತು 2026-27ನೇ (2 ವರ್ಷಗಳಿಗೆ) ಸಾಲುಗಳಲ್ಲಿ ಆಹಾರ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸಲು ಅರ್ಹ ಹಾಗೂ ವಿವಿಧ ಕಾಯ್ದೆಗಳ ಕಾನೂನಿನಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ವ್ಯಕ್ತಿಗಳು/ಸಂಸ್ಥೆಗಳಿಂದ ಆನ್‌ಲೈನ್ ಮುಖಾಂತರ ಟೆಂಡರ್ ಕರೆಯಲಾಗಿದೆ.
E-Procurement (https://www.eproc.karnataka.gov.in) (ಟೆಂಡರ್ ಸಂಖ್ಯೆ: BCWD/2025-26/IND0163) ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 09.04.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.04.2025 ಸಂಜೆ 5.30 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ (ಟೆಂಡರ್ ಸಂಖ್ಯೆ: BCWD/2025-26/IND0163) E-Procurement (https://www.eproc.karnataka.gov.in) ನ ಮೂಲಕ ಮಾಹಿತಿ ಪಡೆಯಬಹುದು ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/- ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಸಂಇ/ಸಿಪಿ/ಎಎಎ/163/2025-26


ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
ನಂ. 164, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು- 52. ದೂರವಾಣಿ: 080-22374832, 22374834, ಫ್ಯಾಕ್ಸ್: 080-22374833
ಇ-ಮೇಲ್: md.dbcdc@gmail.com, ವೆಬ್‌ಸೈಟ್: www.dbcdc.karnataka.gov.in
ಸಂಖ್ಯೆ :ದೇಹಿನಿ/ಟೆಂ/ಕೊ.ಬಾ/ಸಿ.ಆರ್-73/2024-25 ದಿನಾಂಕ : 08-04-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
2023-24 ಮತ್ತು 2024-25ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯನ್ವಯ ಕೊಳವೆ ಬಾವಿಗಳನ್ನು ಕೊರೆಯಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಡುವ 1) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, 2) ಕರ್ನಾಟಕ ಉಪ್ಪಾರಅಭಿವೃದ್ಧಿ ನಿಗಮ 3) ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, 4) ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, 5) ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, 6) ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, 7) ಕರ್ನಾಟಕ ಒಕ್ಕಲಿಗ ಅಭಿವೃದ್ಧಿ ನಿಗಮ. 8) ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, 9) ಕರ್ನಾಟಕ ಮರಾಠ ಸಮುಯದಾಯಗಳ ಅಭಿವೃದ್ಧಿ ಹಾಗೂ 10) ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, 11) ಕಾಡುಗೊಲ್ಲ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಡ್ರಿಲ್ಲಿಂಗ್ ಏಜೆನ್ಸಿಗಳಿಂದ ಎರಡು ಡಾಕ್ಯೂಮೆಂಟ್ ವಿಧಾನದಲ್ಲಿ ಕೋಲಾರ ಜಿಲ್ಲೆಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಬಂಧನೆಗಳು, ಇ.ಎಂ.ಡಿ ಮೊತ್ತ ಕೊರೆಯಬೇಕಾದ ಕೊಳವೆ ಬಾವಿಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://kppp.karnataka. gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
1) ಪ್ರಿ-ಬಿಡ್ ಪ್ರಶ್ನೆಗಳನ್ನು (Querries) ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 11-04-2025ರ 15:00 ಗಂಟೆಯವರೆಗೆ. 2) ಇ-ಪೋರ್ಟಲ್ ಮುಖಾಂತರ ಬಿಡ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 15-04-2025 ರ 17:00 ಗಂಟೆಯವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-04-2025 ರ ಬೆಳಿಗ್ಗೆ 11:00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 21-04-2025 ಬೆಳಿಗ್ಗೆ 11:00 ಗಂಟೆಗೆ. 5) ಸದರಿ ಟೆಂಡರ್ ಪ್ರಕಟಣೆಯನ್ನು ತಿರಸ್ಕರಿಸುವ/ ರದ್ದುಪಡಿಸುವ ಪೂರ್ಣ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
ಸಹಿ/- ವ್ಯವಸ್ಥಾಪಕ ನಿರ್ದೇಶಕರು ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾ.ಸಾ.ಸಂ.ಇ/ವಾಪ್ರ/185/ಆಕಾರ್/2025-26

ಹೇಗಿದೆ ಹೊಸ ಪಂಬನ್ ಸೇತುವೆ?

ತಮಿಳುನಾಡಿನ ರಾಮೇಶ್ವರ ದ್ವೀಪವನ್ನು ರೈಲು ಮೂಲಕ ಸಂಪರ್ಕಿಸುವ ಏಷ್ಯಾದಲ್ಲಿಯೇ ಮೊದಲ 'ಲಿಫ್ಟ್ ಸೇತುವೆ'ಯಾದ ನೂತನ ಪಂಬನ್ ಸೇತುವೆಯು ಇತ್ತೀಚೆಗೆ ಲೋಕಾರ್ಪಣೆಗೊಂಡಿದೆ. ಈ ಸೇತುವೆಯ ಎಂಜಿನಿಯರಿಂಗ್ ಚಾತುರ್ಯವು ಅಮೆರಿಕದ ಗೋಲ್ಡನ್ ಗೇಟ್ ಸೇತುವೆ, ಲಂಡನ್‌ನ ಟವರ್ ಬ್ರಿಡ್ಜ್‌ಗೆ ಸಮನಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ಬ್ರಿಟಿಷರು 1914ರಲ್ಲಿ ನಿರ್ಮಿಸಿದ್ದ ರೈಲು ಸೇತುವೆಯ ಬದಲಿಗೆ ಈ ನೂತನ ಸೇತುವೆಯನ್ನು ನಿರ್ಮಿಸಲಾಗಿದೆ. ಭಾರತೀಯ ರೈಲ್ವೆಯ ಅಧೀನ ಸಂಸ್ಥೆಯಾದ 'ರೈಲ್ ವಿಕಾಸ್ ನಿಗಮ' ನಿರ್ಮಿಸಿರುವ ಈ ಸೇತುವೆ ಕುರಿತಾದ ಕಿರು ಮಾಹಿತಿಯನ್ನು **ಸುಕೃತ ಎಸ್.** ನೀಡಿದ್ದಾರೆ





5 ನಿಮಿಷ
ಹೊಸ ಸೇತುವೆಯ ಭಾಗವನ್ನು ಮೇಲೆತ್ತಲು ತೆಗೆದುಕೊಳ್ಳುವ ಸಮಯ

75 ಕಿ.ಮೀ (ಪ್ರತಿ ಗಂಟೆಗೆ)
ಹೊಸ ಸೇತುವೆಯಲ್ಲಿ ರೈಲುಗಳು ಸಂಚರಿಸಬಹುದಾದ ಗರಿಷ್ಠ ವೇಗ

ನೂತನ ಸೇತುವೆಯ ಭಾಗವನ್ನು ಮೇಲೆತ್ತಲು ಅತ್ಯಾಧುನಿಕ ಸ್ವಯಂ ಚಾಲಿತ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಈ ಕ್ರಿಯೆಗೆ ಒಬ್ಬ ವ್ಯಕ್ತಿ ಸಾಕಾಗುತ್ತಾರೆ. ಹಳೇ ಸೇತುವೆಯ ಭಾಗವನ್ನು ಮೇಲೆತ್ತಲು 16 ಜನರ ಅಗತ್ಯವಿತ್ತು

25-30 ನಿಮಿಷ
111 ವರ್ಷದಷ್ಟು ಹಳೆಯ ಸೇತುವೆಯ ಭಾಗವನ್ನು ಮೇಲೆತ್ತಲು ತೆಗೆದುಕೊಳ್ಳುತ್ತಿದ್ದ ಸಮಯ



10 ಕಿ.ಮೀ (ಪ್ರತಿ ಗಂಟೆಗೆ)
ಹಳೇ ಸೇತುವೆಯಲ್ಲಿ ರೈಲುಗಳ ಸಂಚರಿಸುತ್ತಿದ್ದ ಗರಿಷ್ಠ ವೇಗ

ಚಿತ್ರ: ಗೂಗಲ್ ಅರ್ಥ್

₹550 ಕೋಟಿ
ಸೇತುವೆ ನಿರ್ಮಾಣ ವೆಚ್ಚ

2020: ಕಾಮಗಾರಿ ಆರಂಭಗೊಂಡ ವರ್ಷ **2024:** ಕಾಮಗಾರಿ ಪೂರ್ಣಗೊಂಡ ವರ್ಷ

> **"ಈ ಸೇತುವೆಯ ನಿರ್ಮಾಣವು 2020ರಲ್ಲಿ ಆರಂಭಗೊಂಡಿತು. ಆದರೆ, ಇದಕ್ಕೂ ಮೊದಲು ಅಂದರೆ, 2017ರಿಂದ 2019ರವರೆಗೆ ರೈಲ್ವೆ ಇಲಾಖೆಯ ತಜ್ಞರ ತಂಡವು ಅಮೆರಿಕ, ಐರೋಪ್ಯ ಒಕ್ಕೂಟದ ವಿವಿಧ ದೇಶಗಳನ್ನು ಸುತ್ತಾಡಿ ಬಂದಿದೆ. ಆ ದೇಶಗಳಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ 'ಮೂವೆಬಲ್' ಸೇತುವೆಗಳ ಅಧ್ಯಯನ ನಡೆಸಿವೆ. ಆ ಮೂಲಕ ನೂತನ ಪಂಬನ್ ಸೇತುವೆಯ ವಿನ್ಯಾಸ, ಸ್ವರೂಪವನ್ನು ನಿರ್ಧರಿಸಲಾಯಿತು"**
>
> **ಎಂ.ಪಿ. ಸಿಂಗ್**
> ನಿರ್ದೇಶಕ, ರೈಲ್ ವಿಕಾಸ್ ನಿಗಮ

ಕಳಪೆ ಗುಣಮಟ್ಟದತ್ತ ಬೊಟ್ಟು ಮಾಡಿದ್ದ ಸುರಕ್ಷಾ ಆಯುಕ್ತಾಲಯ

2024ರ ನವೆಂಬರ್‌ನಲ್ಲಿ ದಕ್ಷಿಣ ರೈಲ್ವೆ ಇಲಾಖೆಯ ಸುರಕ್ಷತಾ ಆಯುಕ್ತ ಎ.ಎಂ. ಚೌಧರಿ ಅವರು ಪರೀಕ್ಷಾರ್ಥ ಸಂಚಾರ ಹಾಗೂ ಸೇತುವೆಯನ್ನು ಪರಿಶೀಲಿಸಿದ ಬಳಿಕ ವರದಿಯೊಂದನ್ನು ನೀಡಿದ್ದರು. ಈ ವರದಿಯಲ್ಲಿ ಸೇತುವೆ ವಿನ್ಯಾಸದಲ್ಲಿನ ಹಲವು ದೋಷಗಳ ಬಗ್ಗೆ ಎಚ್ಚರಿಕೆ ನೀಡಿದ್ದರು. 'ವರದಿಯಲ್ಲಿ ಉಲ್ಲೇಖಿಸಲಾದ ಎಲ್ಲ ವಿಚಾರಗಳ ಬಗ್ಗೆ ಗಮನಹರಿಸಿ ಎಲ್ಲವನ್ನೂ ಸರಿಪಡಿಸಲಾಗಿದೆ' ಎಂದು ರೈಲ್ವೆ ಇಲಾಖೆ ಹೇಳಿದೆ. ಈ ವರದಿಯ ಕುರಿತು ಪರಿಶೀಲನೆ ನಡೆಸಲು, ನವೆಂಬರ್‌ನಲ್ಲಿಯೇ ತಜ್ಞರ ಸಮಿತಿಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ರೂಪಿಸಿದ್ದರು.

ಆಯುಕ್ತರ ವರದಿಯಲ್ಲೇನಿತ್ತು?

- ರೈಲ್ವೆ ಇಲಾಖೆಯ ಅಡಿಯಲ್ಲಿ 'ರಿಸರ್ಚ್ ಡಿಸೈನ್ ಆ್ಯಂಡ್ ಸ್ಟ್ಯಾಂಡರ್ಡ್ ಆರ್ಗನೈಸೇಷನ್' ಎಂಬ ಸಂಸ್ಥೆ ಕಾರ್ಯನಿರ್ವಹಿಸುತ್ತದೆ. ರೈಲ್ವೆ ಇಲಾಖೆಗೆ ಸಂಬಂಧಿಸಿದ ಎಲ್ಲ ನಿರ್ಮಾಣ, ನಿರ್ವಹಣೆ, ಕಾರ್ಯಾಚರಣೆಯನ್ನು ಇದೇ ಸಂಸ್ಥೆಯೇ ನೋಡಿಕೊಳ್ಳುತ್ತದೆ. ಆದರೆ, ಈ ಸೇತುವೆ ನಿರ್ಮಾಣ ಕಾರ್ಯವು ಈ ಸಂಸ್ಥೆಯ ವಿನ್ಯಾಸ ಮಾರ್ಗಸೂಚಿಗೆ ತಕ್ಕಂತೆ ಇರಲಿಲ್ಲ.
- ಸೇತುವೆಯ ವೆಲ್ಡಿಂಗ್ ಕಾಮಗಾರಿಯಲ್ಲಿ ಮಾರ್ಗಸೂಚಿಗಳನ್ನು ಪಾಲಿಸಲಾಗಿಲ್ಲ. ಇದರಿಂದ ಹಳಿಗಳ ಒತ್ತಡ ತಡೆದುಕೊಳ್ಳುವ ಸಾಮರ್ಥ್ಯವು ಶೇ 36ರಷ್ಟು ಕಡಿಮೆಯಾಗಿದೆ
- ಕ್ಷಿಪ್ರವಾಗಿ ತುಕ್ಕು ಹಿಡಿಯುವ ವಾತಾವರಣ ಇರುವ ಜಾಗಗಳ ಪೈಕಿ ರಾಮೇಶ್ವರ ಬಳಿಯ ಸಮುದ್ರವು ಜಗತ್ತಿನಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಕಾಮಗಾರಿ ಪೂರ್ಣಗೊಂಡ ಒಂದೇ ತಿಂಗಳಲ್ಲಿ ಸೇತುವೆಯ ಕೆಲ ಭಾಗಗಳಿಗೆ ತುಕ್ಕು ಹಿಡಿದಿದೆ. ಆದ್ದರಿಂದ ಈ ಬಗ್ಗೆ ಹೆಚ್ಚು ಗಮನಹರಿಸಬೇಕು.

'ಪರಿಶೀಲನೆ ನಡೆಸಿದೆವು'

ಆಯುಕ್ತರು ತಮ್ಮ ವರದಿಯಲ್ಲಿ ಹೇಳಿದ ಎಲ್ಲ ವಿಚಾರಗಳ ಬಗ್ಗೆ ನಾವು ಪರಿಶೀಲನೆ ನಡೆಸಿದ್ದೇವೆ. ಐಐಟಿ ಮದ್ರಾಸ್ ಹಾಗೂ ಐಐಟಿ ಬಾಂಬೆಯ ತಜ್ಞರು ಕೂಡ ನಮ್ಮೊಂದಿಗಿದ್ದರು. ವೆಲ್ಡಿಂಗ್ ಬಗ್ಗೆ ಹೆಚ್ಚು ಗಮನ ಹರಿಸಿದೆವು. ಬಿಎಚ್‌ಇಎಲ್ ಅಡಿಯಲ್ಲಿ ಬರುವ ತ್ರಿಚಿಯಲ್ಲಿರುವ 'ವೆಲ್ಡಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಅವರಿಂದ ಕೂಡ ವೆಲ್ಡಿಂಗ್ ಕುರಿತು ಪರಿಶೀಲನೆ ನಡೆಸಲಾಯಿತು

ರೈಲ್ ವಿಕಾಸ್ ನಿಗಮ

ಆಧಾರ: ದಕ್ಷಿಣ ರೈಲ್ವೆ 'ಎಕ್ಸ್' ಖಾತೆ, ಪಿಟಿಐ, ಚಿತ್ರಗಳು: ದಕ್ಷಿಣ ರೈಲ್ವೆ 'ಎಕ್ಸ್' ಖಾತೆ

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಭಾರತೀಯ ನೌಕಾಪಡೆಯ ದಿನಕ್ಕೆ ಸಂಬಂಧಿಸಿ ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಪ್ರತಿ ವರ್ಷ ಡಿಸೆಂಬರ್ 14 ರಂದು ಭಾರತೀಯ ನೌಕಾಪಡೆಯ ದಿನವನ್ನು ಆಚರಿಸಲಾಗುತ್ತದೆ
ಬಿ. 1971ರಲ್ಲಿ ಇಂಡೋ–ಪಾಕಿಸ್ತಾನ ಯುದ್ಧದ ಸಮಯದಲ್ಲಿ ನಡೆಸಿದ ಆಪರೇಷನ್ ಟ್ರೈಡೆಂಟ್‌ನಲ್ಲಿ ಭಾರತೀಯ ನೌಕಾಪಡೆಯ ಪಾತ್ರವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಬಿ

2. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. INS ಶಾತವಾಹನ ತರಬೇತಿ ಕೇಂದ್ರ ಆಂಧ್ರಪ್ರದೇಶ ವಿಶಾಖಪಟ್ಟಣಂನಲ್ಲಿದೆ
ಬಿ. INS ಕದಂಬ ನೌಕಾನೆಲೆ ಕಾರವಾರದಲ್ಲಿದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

3. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಮಾಂಟ್ರಿಯಲ್ ಪ್ರೋಟೋಕಾಲ್‌ನ ನೆನಪಿಗಾಗಿ 16 ಸೆಪ್ಟೆಂಬರ್ ರಂದು ವಿಶ್ವ ಓಝೋನ್ ದಿನವನ್ನು ಆಚರಿಸಲಾಗುತ್ತದೆ.
ಬಿ. 2024ರ ವಿಶ್ವ ಓಝೋನ್ ದಿನದ ಥೀಮ್, 'ಮಾಂಟ್ರಿಯಲ್ ಪ್ರೋಟೋಕಾಲ್: ಅಡ್ವಾನ್ಸಿಂಗ್ ಕ್ಲೈಮೇಟ್ ಆಕ್ಷನ್' ಆಗಿದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

4. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಮಾಂಟ್ರಿಯಲ್ ಪ್ರೋಟೋಕಾಲ್ ಅನ್ನು 16 ಸೆಪ್ಟೆಂಬರ್ 1987ರಂದು ಸಹಿ ಮಾಡಲಾಯಿತು
ಬಿ. ಓಝೋನ್–ಡಿಪ್ಲೀಟಿಂಗ್ ವಸ್ತುಗಳು (ODS) ಎಂದು ಕರೆಯುವ ಮಾನವ ನಿರ್ಮಿತ ರಾಸಾಯನಿಕಗಳ ಉತ್ಪಾದನೆ ಮತ್ತು ಬಳಕೆಯನ್ನು ಮಾಂಟ್ರಿಯಲ್ ಪ್ರೋಟೋಕಾಲ್ ನಿಯಂತ್ರಿಸುತ್ತದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

5. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಓಝೋನ್ ರಕ್ಷಣೆಯ ವಿಯೆನ್ನಾ ಸಮಾವೇಶ 1988ರಲ್ಲಿ ಜಾರಿಗೆ ಬಂದಿತು. 2009ರ ಹೊತ್ತಿಗೆ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟಿತು
ಬಿ. 2020ರ ಕಿಗಾಲಿ ಒಪ್ಪಂದವು ಮಾಂಟ್ರಿಯಲ್ ಪ್ರೋಟೋಕಾಲ್ ಗೆ ಮಾಡಿದ ತಿದ್ದುಪಡಿಯಾಗಿದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಎ

6. ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಕೆಳಗಿನ ಯಾವ ಮತ್ತೊಂದು ಹೆಸರಿನಲ್ಲಿಯೂ ಕೂಡ ಕರೆಯಲಾಗುತ್ತದೆ?
ಎ. ದೀನ್ ದಯಾಳ್ ಅಂತ್ಯೋದಯ ಯೋಜನೆ
ಬಿ. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ
ಸಿ. ಅಟಲ್ ಗ್ರಾಮೀಣ ಕೌಶಲ್ಯ ಯೋಜನೆ
ಡಿ. ಪ್ರಧಾನ ಮಂತ್ರಿ ಗ್ರಾಮೀಣ ಕೌಶಲ ಯೋಜನೆ
ಉತ್ತರ: ಎ

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

PUC-CET:BIOLOGY

37) Variations during mutations of meiotic recombinations are -
a) random and directionless
b) random and directional c) random and small
d) random, small and directional
Ans:- a

38) The term 'Health' is defined in many ways. The most accurate definition of the health would be –
a) health is the state of the body and mind in a balanced condition
b) health is the reflection of a smiling face
c) health is a state of complete physical, mental and social well-being
d) health is the symbol of economic prosperity
Ans:- c

39) The chemical test that is used for the diagnosis of typhoid is –
a) ELISA – test b) ESR – test
c) PCR – test d) Widal - test
Ans:- d

40) Match List-I with List-II and choose the correct answer.

List-I:	List-II:
1) Nitrogen rich fertilizers	p) Ozone depletion
2) Carbon dioxide	q) Eutrophication
3) Carbon monoxide	r) Greenhouse effect
4) CFC's	s) Air pollutant

Ans code
(A) 1-p, 2-q, 3-r, 4-s
(B) 1-q, 2-r, 3-s, 4-p
(C) 1-r, 2-s, 3-p, 4-q
(D) 1-s, 2-p, 3-q, 4-r
Ans:- B

41) Diseases are broadly groups grouped into infectious and non-infectious diseases. In the list given below, identify the infectious diseases.
i) Cancer ii) Influenza
iii) Allergy iv) Small pox
Ans Code
a) i and ii b) ii and iii
c) iii and iv d) ii and iv
Ans:- d

42) The sporozoites that cause infection when a female Anopheles mosquito bites a human being are formed in -
a) Liver of human b) RBCs of mosquito
c) Salivary glands of mosquito
d) Intestine of human
Ans:- c

43) The chances of contacting bird flu from a properly cooked (above 100^0C) chicken and egg are:
a) very high b) high
c) moderate d) none
Ans:- d

44) What is the function of protein GLUT-4?
a) Acts as an enzyme
b) Enables glucose transport into cells
c) Fight infectious agents
d) Functions as intercellular ground substance
Answer: (b)
Expln:- GLUT-4 is an insulin-responsive glucose transporter that is found in the adipose tissue, and brain. It is present in the cytoplasm of cells in vesicles from which it is translocated to the plasma membrane under the influence of insulin.

45) A group of animals which are related by descent and share many similarities are referred to as:
a) breed b) race
c) variety d) species
Ans:- a

39) Cell in the quiescent stage (G_0)
a) Always become cancerous
b) Show indefinite proliferation
c) Remain metabolically inactive
d) Remain metabolically active
Ans: (d)
Expln:- In G_0, some cells in the adult animals do not appear to exhibit division (e.g., heart cells) and many other cells divide only occasionally. These cells that do not divide further exist G_1 phase to enter an inactive stage called quiescent stage (G_0) of the cell cycle. Cells in this stage remain metabolically active but no longer proliferate unless called on to do so depending on the requirement of the organism.

46) Inbreeding is carried out in animal husbandry because it:
a) increases vigour b) improves the breed
c) increases heterozygosity
d) increases homozygosity
Ans:- d

47) Consider the following statements i, ii, and iii regarding criteria for the essentiality of the nutrients in plants:
i. The presence of elements is must for plants to complete their life cycle.
ii. The role of the element can be replaced by another in their life cycle.
iii. The elements must be directly involved in the metabolism of the plant.
Choose the correct statement/s:
a) i and iii b) i and ii
c) iii only d) ii and iii
Ans: (a)
Expln:- The criteria for the essentiality of an element are given below:
(a) The element must be absolutely necessary for supporting normal growth and reproduction. In the absence of the element, the plants do not complete their life cycle or set the seeds.
(b) The requirement of the element must be specific and not replaceable by another element. In other words, deficiency of any one element cannot be met by supplying some other element.
(c) The element must be directly involved in the metabolism of the plant. **(Contd....)**

NEET:CHEMISTRY

16) Intermolecular forces are forces of attraction and repulsion between interacting particles that will include:
A. dipole-dipole forces.
B. dipole - induced dipole forces,
C. hydrogen bonding.
D. covalent bonding.
E. dispersion forces.
Choose the most appropriate answer from the options given below:
a) A, C, D, E are correct.
b) B, C, D, E are correct.
c) A, B, C, D are correct.
d) A, B, C, E are correct
Ans:- (d) Covalent bonding is NOT an intermolecular force while rest all are considered as intermolecular forces.

17) The IUPAC name of the complex ion formed when gold dissolves in aqua regia is
a) tetrachloridoaurate (III)
b) tetrachloridoaurate (I)
c) tetrachloridoaurate (II)
d) tetrachloridoaurate (III).
Ans:- a; When gold dissolve sin aqua regia, it gives tetrachloridoaurate (III) anion.
$2Au + 3HNO_3 + 11HCl \rightarrow 2H\,[AuCl_4] + 3NOCl + 6H_2O$

18) Benzaldehyde and acetone can be best distinguished using ....
a) Sodium hydroxide solution
b) Fehling's solution
c) Tollen's reagent d) 2, 4- DNPH
Ans:- c;


19) Arrange the following compounds in the increasing order of their acidic strength:
i) m-nitrophenol, ii) m-cresol,
iii) phenol, iv) m-chlorophenol.
(a) ii < iv < iii < i (b) ii < iii < i < iv
(c) iii < ii < i < iv (d) ii < iii < iv< i
Ans: (d) ii < iii < iv< i
Expln:- m-cresol has electron-releasing group (CH_3). Hence it decreases the acidic strength. Both nitro and chloro have –I effect. Hence they show higher acidic strength. But nitro is a stronger –I group than chloro group. Hence m-minitro phenol is more acidic than m-chlorophenol.

20) Which of the following statements are NOT correct?
A) Hydrogen is used to reduce heavy metal oxides to metals.
B). Heavy water is used to study reaction mechanism.
C) Hydrogen is used to make saturated fats from oils.
D) The H-H bond dissociation enthalpy is lowest as compared to a single bond between two atoms of any element.
E) Hydrogen reduces oxides of metals that are more active than iron.
Choose the most appropriate answer from the options given below:
a) A, B, C only b) B, C, D, E only
c) B, D only d) D, E only
Ans:- (d) A, B and C are correct statements.
Expln:- The H-H bond dissociation enthalpy is highest for a single bond between two atoms of any element. Hydrogen does not reduce oxides of metals that are more active than iron.

21) Which one of the following is an example for homogeneous catalysis?
a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl
Ans:- d


22) For freundlich isotherm a graph of log(x/m) is plotted against log P. the slope of the line and its y-axis intercept, respectively corresponds to
a) $\frac{1}{n}$, k b) $\log\frac{1}{n}$, k
c) $\frac{1}{n}$, log k d) $\log\frac{1}{n}$, log k
Ans:- c; Freundlich adsorption isotherm can be written as,

$$\log\frac{x}{m} = \log k + \frac{1}{n}\log P$$



23) Which of the following is not true?
(a) Ampicillin is not a natural antibiotic.
(b) Vancomycin is a broad spectrum antibiotic.
(c) Erythromycin is a bacteriostatic antibiotic.
(d) Prontosil is not converted into sulphanilamide in the body.
Ans: (d)

24) The compound that reacts the fastest with sodium methoxide is



Ans:- (a)
Expln:- electron withdrawing groups ($-NO_2$) increase the reactivity of the aryl halide ($-ArCl$). Hence, 2-4-dinitrochlorobenzene reacts fastest.

‘ಸುಂಕ ನೀತಿ: ಭಾರತದ್ದು ಜಾಣ ನಡೆ’

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಸುಂಕ ನೀತಿ ವಿಚಾರದಲ್ಲಿ ಭಾರತ ಅನುಸರಿಸಿದ ಕಾರ್ಯತಂತ್ರವು ಜಾಣ ನಡೆಯಾಗಿದೆ. ಇದು ಭವಿಷ್ಯದಲ್ಲಿ ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಸಮಾಲೋಚನೆಗಳಿಗೆ, ಅಮೆರಿಕದಲ್ಲಿ ಭಾರತದ ಮಾರುಕಟ್ಟೆ ವಿಸ್ತರಣೆಗೆ ದಾರಿ ಮಾಡಿಕೊಡಲಿದೆ ಎಂದು ವ್ಯಾಪಾರ ಸಲಹೆಗಾರ ಮಾರ್ಕ್ ಲಿನ್‌ಸ್ಕಾಟ್ ಹೇಳಿದ್ದಾರೆ.

ಅಮೆರಿಕ–ಭಾರತ ಕಾರ್ಯತಂತ್ರ ಪಾಲುದಾರಿಕೆ ಫೋರಂನಲ್ಲಿ (ಯುಎಸ್ ಐಎಸ್‌ಪಿಎಫ್) ವ್ಯಾಪಾರ ಸಲಹೆಗಾರರಾಗಿರುವ ಮಾರ್ಕ್, ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಭಾರತವನ್ನು ಈ ರೀತಿ ಶ್ಲಾಘಿಸಿದ್ದಾರೆ. ವಿಪಕ್ಷಗಳಿಂದ ತೀವ್ರ ವಿರೋಧ ಎದುರಿಸಿದರೂ ಪ್ರಧಾನಿ ಮೋದಿ ಅವರ ಸರ್ಕಾರ ಸುಂಕ ನೀತಿ ವಿಚಾರದಲ್ಲಿ ಪ್ರತೀಕಾರಕ್ಕೆ ಆದ್ಯತೆ ನೀಡದೆ ರಾಜತಾಂತ್ರಿಕತೆಗೆ ಪ್ರಾಮುಖ್ಯ ನೀಡಿದ್ದು ಸರಿಯಾದ ನಿರ್ಧಾರ ಎಂದೂ ಬಣ್ಣಿಸಿದ್ದಾರೆ.

‘ವಿದೇಶಿ ಬ್ಯಾಂಕ್‌ಗೆ ಆಕರ್ಷಕ ಅವಕಾಶ’

ಲಂಡನ್ (ಪಿಟಿಐ): ವಿದೇಶಿ ಬ್ಯಾಂಕ್‌ಗಳಿಗೆ ಅಭಿವೃದ್ಧಿಯ ಆಕರ್ಷಕ ಅವಕಾಶಗಳನ್ನು ಭಾರತ ಕಲ್ಪಿಸುತ್ತಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬ್ರಿಟನ್‌ನ ಹೂಡಿಕೆದಾರರನ್ನು ಉದ್ದೇಶಿಸಿ ಹೇಳಿದರು.



ನಿರ್ಮಲಾ ಸೀತಾರಾಮನ್

ಭಾರತ–ಬ್ರಿಟನ್ ಹೂಡಿಕೆದಾರರ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಸಂಜೆ ಅವರು ಮಾತನಾಡಿದರು.

ಮಧ್ಯಮವರ್ಗದವರ ಸಂಖ್ಯೆ ಭಾರತದಲ್ಲಿ ಹೆಚ್ಚುತ್ತಿದ್ದು, ಸುಸ್ಥಿರ ಆರ್ಥಿಕ ಅಭಿವೃದ್ಧಿಗೆ ಸೂಕ್ತ ವಾತಾವರಣ ಸೃಷ್ಟಿಯಾಗುತ್ತಿದೆ. ಹೂಡಿಕೆಯನ್ನು ಪ್ರೋತ್ಸಾಹಿಸುವಂತಹ ನಿಯಮಗಳು ನವ ಭಾರತ ನಿರ್ಮಾಣಕ್ಕೆ ಪೂರಕವಾಗಿವೆ ಎಂದು ಹೇಳಿದರು.

2032ರ ಹೊತ್ತಿಗೆ ಭಾರತವು ವಿಶ್ವದ ಆರನೇ ಅತಿ ದೊಡ್ಡ ವಿಮಾ ಮಾರುಕಟ್ಟೆಯಾಗಿ ಬೆಳೆಯಲಿದೆ. 2024–28ರ ಅವಧಿಯಲ್ಲಿ ಈ ಕ್ಷೇತ್ರದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರದ (ಸಿಎಜಿಆರ್) ಸರಾಸರಿಯು 7.1ರಷ್ಟು ಇರಲಿದೆ. ಜಿ20 ರಾಷ್ಟ್ರಗಳಲ್ಲಿ ವಿಮಾ ಕ್ಷೇತ್ರದಲ್ಲಿ ಭಾರತ ದಾಪುಗಾಲು ಇಡುತ್ತಿದೆ. ಮುಂದಿನ ದಿನಗಳು ಹೂಡಿಕೆಗೆ ಪ್ರಶಸ್ತವಾಗಿವೆ ಎನ್ನುವುದಕ್ಕೆ ಈ ಪರಿಸ್ಥಿತಿಯೇ ಸಾಕ್ಷಿ ಎಂದು ಅವರು ತಿಳಿಸಿದರು.

‘ಪ್ರತಿ ಸುಂಕ’ ಜಾರಿ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಹತ್ವದ ಘೋಷಣೆ

90 ದಿನಗಳ ‘ವಿರಾಮ’; ಚೀನಾಕ್ಕಿಲ್ಲ ‘ಕೃಪೆ’

ವಾಷಿಂಗ್ಟನ್ (ರಾಯಿಟರ್ಸ್/ಎಪಿ/ಎಎಫ್‌ಪಿ): ವಿಶ್ವದ ಹಲವು ದೇಶಗಳ ಮೇಲೆ ವಿಧಿಸಲಾಗುತ್ತಿರುವ ಪ್ರತಿ ಸುಂಕ ಹಾಗೂ ಶೇ 10ರಷ್ಟು ಸುಂಕ ಜಾರಿಯನ್ನು 90 ದಿನ ತಡೆ ಹಿಡಿಯಲು ಅನುಮೋದನೆ ನೀಡಿದ್ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಘೋಷಿಸಿದ್ದಾರೆ.

ಟ್ರಂಪ್ ಘೋಷಿಸಿರುವ ಈ ವಿಶೇಷ ಸವಲತ್ತಿನಿಂದ ಚೀನಾವನ್ನು ಹೊರಗಿಡಲಾಗಿದೆ. ಅಲ್ಲದೇ, ಚೀನಾದಿಂದ ಆಮದಾಗುವ ಸರಕುಗಳ ಮೇಲಿನ ಸುಂಕದ ಪ್ರಮಾಣವನ್ನು ಶೇ 125ಕ್ಕೆ ಹೆಚ್ಚಿಸಿದ್ದಾರೆ.

ಟ್ರಂಪ್ ಘೋಷಿಸಿರುವ ಈ ‘ವಿರಾಮ’ದಿಂದ ಚೀನಾ ಹೊರತುಪಡಿಸಿದಂತೆ ಇತರ ದೇಶಗಳಿಗೆ ವಿಧಿಸಿರುವ ಪ್ರತಿಸುಂಕದಲ್ಲಿ ಎಷ್ಟು ಇಳಿಕೆಯಾಗಲಿದೆ ಎಂಬ ಬಗ್ಗೆ ವಿವರಗಳು ತಕ್ಷಣಕ್ಕೆ ಗೊತ್ತಾಗಿಲ್ಲ.

ಪ್ರತಿಸುಂಕ ಜಾರಿಗೊಳಿಸಿದ ಕ್ರಮದಿಂದ, ಅಮೆರಿಕ ಹಾಗೂ ಇತರ ದೇಶಗಳ ನಡುವೆ ವ್ಯಾಪಾರ ಸಮರ ಆರಂಭವಾಗಿತ್ತು. ಅದರಲ್ಲೂ, ಅಮೆರಿಕ ಮತ್ತು ಚೀನಾ ನಡುವೆ ‘ಶಕ್ತಿ ಪ್ರದರ್ಶನ’ಕ್ಕೂ ಇದು ಕಾರಣವಾಗಿತ್ತು. ಜಾಗತಿಕ ವ್ಯಾಪಾರ ಕ್ಷೇತ್ರದಲ್ಲಿ ಸೃಷ್ಟಿಯಾಗಿರುವ ಕಂದಕ ನಿವಾರಿಸುವ ನಿಟ್ಟಿನಲ್ಲಿ ಟ್ರಂಪ್ ಆಡಳಿತ ಈ ಕ್ರಮ ಕೈಗೊಂಡಿದೆ ಎನ್ನಲಾಗುತ್ತಿದೆ.

ಟ್ರಂಪ್ ಅವರು ಈ ಕುರಿತು ನಿರ್ಧಾರ ಪ್ರಕಟಿಸಿದ ಬೆನ್ನಲ್ಲೇ, ಅಮೆರಿಕ ಷೇರುಪೇಟೆಯಲ್ಲಿ ಚೇತರಿಕೆ ಕಂಡುಬಂದಿತು. ಎಸ್ ಅಂಡ್ ಪಿ ಸೂಚ್ಯಂಕ ಶೇ 6ಕ್ಕಿಂತಲೂ ಹೆಚ್ಚು ಗಳಿಕೆ ದಾಖಲಿಸಿದರೆ, ಡವ್ ಸೂಚ್ಯಂಕ 1,800 ಅಂಶಗಳಷ್ಟು ಏರಿಕೆ ಕಂಡಿತು.

ಜಪಾನ್‌ನ ಯೆನ್ ಸೇರಿ ಇತರ ಹಲವು ದೇಶಗಳ ಕರೆನ್ಸಿ ಎದುರು ಡಾಲರ್ ಬಲ ಹೆಚ್ಚಿಸಿಕೊಂಡರೆ, ಹಲವು ಷೇರುಗಳ ಮೌಲ್ಯ ಹೆಚ್ಚಾಗಿದೆ.



> **ವ್ಯಾಪಾರ ಕುರಿತು ಮಾತುಕತೆಗೆ ಅವಕಾಶ ನೀಡುವಂತೆ 75ಕ್ಕೂ ಹೆಚ್ಚು ದೇಶಗಳು ಅಮೆರಿಕ ಸರ್ಕಾರವನ್ನು ಸಂಪರ್ಕಿಸಿದ್ದವು. ಅಮೆರಿಕದ ಮೇಲೆ ಈ ದೇಶಗಳು ಪ್ರತಿಸುಂಕವನ್ನೂ ಹೇರಿಲ್ಲ. ಹೀಗಾಗಿ ಪ್ರತಿಸುಂಕ ಜಾರಿಗೆ 90 ದಿನ ತಡೆ ನೀಡುವುದಕ್ಕೆ ಹಾಗೂ ಈ ಅವಧಿಯಲ್ಲಿ ಪ್ರತಿಸುಂಕದಲ್ಲಿ ಗಣನೀಯ ಇಳಿಕೆ ಮಾಡುವುದಕ್ಕೆ ಅನುಮೋದಿಸಿದ್ದೇನೆ**
>
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ದ್ವಿಪಕ್ಷೀಯ ಒಪ್ಪಂದಕ್ಕೆ ಆದ್ಯತೆ

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಿರುವ ಪ್ರತಿಸುಂಕದ ಪರಿಣಾಮಗಳು ಇನ್ನೂ ಗೊತ್ತಾಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಈ ವರ್ಷದ ಅಂತ್ಯದೊಳಗೆ ಅಮೆರಿಕದ ಜೊತೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಸಾಧ್ಯವಾಗಿಸುವುದು ಈಗಿನ ಪರಿಸ್ಥಿತಿಗೆ ಸ್ಪಂದಿಸಲು ಕೇಂದ್ರ ಸರ್ಕಾರ ಹೊಂದಿರುವ ಕಾರ್ಯಯೋಜನೆಯಾಗಿದೆ ಎಂದು ಹೇಳಿದ್ದಾರೆ.

‘ನಮ್ಮ ಕಾರ್ಯತಂತ್ರಕ್ಕೆ ಒಂದು ಗುರಿ ಇದೆ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದವೊಂದನ್ನು ಸಾಧ್ಯವಾಗಿಸಿಕೊಂಡು ಈಗಿನ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವೇ ಎಂದು ನೋಡುವುದು ಆ ಗುರಿ’ ಎಂದು ಅವರು ಹೇಳಿದ್ದಾರೆ.

ಅಮೆರಿಕ ಮೇಲಿನ ಸುಂಕ ಹೆಚ್ಚಿಸಿದ ಚೀನಾ

ಬ್ಯಾಂಕಾಕ್/ವಾಷಿಂಗ್ಟನ್: ಅಮೆರಿಕದ ಜೊತೆಗಿನ ವಾಣಿಜ್ಯ ಸಮರದಲ್ಲಿ ‘ಕೊನೆಯವರೆಗೂ ಹೋರಾಟ ನಡೆಸುವುದಾಗಿ’ ಚೀನಾ ಹೇಳಿದೆ. ಅಮೆರಿಕದಿಂದ ಆಮದಾಗುವ ಸರಕುಗಳ ಮೇಲೆ ತೆರಿಗೆ ಪ್ರಮಾಣವನ್ನು ಗುರುವಾರದಿಂದ ಶೇಕಡ 84ಕ್ಕೆ ಹೆಚ್ಚಿಸುವುದಾಗಿ ತಿಳಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾದಿಂದ ಆಮದಾಗುವ ಸರಕುಗಳ ಮೇಲಿನ ತೆರಿಗೆಯನ್ನು ಶೇ 125ಕ್ಕೆ ಹೆಚ್ಚಿಸಿದ ನಂತರದಲ್ಲಿ ಹಲವು ಕ್ರಮಗಳನ್ನು ಚೀನಾ ಕೈಗೊಂಡಿದೆ. ಅಲ್ಲದೆ, ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಅಮೆರಿಕದ ವಿರುದ್ಧ ಹೆಚ್ಚುವರಿಯಾಗಿ ಅರ್ಜಿಯೊಂದನ್ನು ಸಲ್ಲಿಸುವುದಾಗಿ ತಿಳಿಸಿದೆ. ಅಮೆರಿಕದ ಕಂಪನಿಗಳು ಚೀನಾದ ಕಂಪನಿಗಳ ಜೊತೆ ವಹಿವಾಟು ನಡೆಸುವುದಕ್ಕೆ ಇನ್ನಷ್ಟು ನಿರ್ಬಂಧಗಳನ್ನು ವಿಧಿಸಿದೆ.

‘ಆರ್ಥಿಕ ಹಾಗೂ ವ್ಯಾಪಾರ ನಿರ್ಬಂಧಗಳನ್ನು ಹೆಚ್ಚಿಸುವ ವಿಚಾರವಾಗಿ ಅಮೆರಿಕವು ಹಟಮಾರಿತನ ತೋರಿಸಿದರೆ, ಅದಕ್ಕೆ ಎದುರಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಬಲ ಇಚ್ಛಾಶಕ್ತಿಯು ಚೀನಾಕ್ಕೆ ಇದೆ’ ಎಂದು ಚೀನಾದ ವಾಣಿಜ್ಯ ಸಚಿವಾಲಯವು ಹೇಳಿದೆ.

ಅಮೆರಿಕದ ಜೊತೆ ಮಾತುಕತೆ ನಡೆಸುವ ಇರಾದೆಯನ್ನು ಚೀನಾ ಇದುವರೆಗೆ ತೋರಿಲ್ಲ. ‘ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವ ನಿಜವಾದ ಬಯಕೆ ಅಮೆರಿಕಕ್ಕೆ ಇದ್ದರೆ ಅದು ಸಮಾನತೆಯ, ಗೌರವದ ಹಾಗೂ ಪರಸ್ಪರರಿಗೆ ಪ್ರಯೋಜನ ಮಾಡಿಕೊಡುವ ಧೋರಣೆ ಅನುಸರಿಸಬೇಕು’ ಎಂದು ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಅವರು ಬುಧವಾರ ಹೇಳಿದ್ದಾರೆ.

ಸಣ್ಣ ಪೊಟ್ಟಣದ ವಸ್ತುಗಳ ಮೇಲಿನ ತೆರಿಗೆ ಶೇ 90ಕ್ಕೆ ಏರಿಕೆ

ಚೀನಾದಿಂದ ಅಮೆರಿಕಕ್ಕೆ ಸಣ್ಣ ಪೊಟ್ಟಣಗಳಲ್ಲಿ ಕಳುಹಿಸುವ ವಸ್ತುಗಳ ಮೇಲಿನ ತೆರಿಗೆಯ ಪ್ರಮಾಣವು ಶೇ 30ರಷ್ಟು ಇರುವುದನ್ನು ಶೇ 90ಕ್ಕೆ ಹೆಚ್ಚಿಸುವ ಆದೇಶಕ್ಕೆ ಟ್ರಂಪ್ ಸಹಿ ಮಾಡಿದ್ದಾರೆ. ಅಮೆರಿಕದಲ್ಲಿ ಜನಪ್ರಿಯವಾಗಿರುವ ಅಗ್ಗದ ಬೆಲೆಯ ಕೆಲವು ಉತ್ಪನ್ನಗಳ ಆಮದಿನಲ್ಲಿ ಈ ಕ್ರಮದಿಂದಾಗಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

ಟ್ರಂಪ್ ಅವರ ಹೊಸ ಆದೇಶವು ಮೇ 2ರಿಂದ ಜಾರಿಗೆ ಬರಲಿದೆ. 800 ಡಾಲರ್‌ಗಿಂತ ಕಡಿಮೆ ಬೆಲೆಯ ಉತ್ಪನ್ನಗಳು ಚೀನಾದಿಂದ ಅಮೆರಿಕ ಪ್ರವೇಶಿಸಿದಾಗ ಸಿಗುತ್ತಿದ್ದ ಸುಂಕ ವಿನಾಯಿತಿಯನ್ನು ರದ್ದುಪಡಿಸುವ ಕ್ರಮಕ್ಕೆ ಟ್ರಂಪ್ ಕಳೆದ ವಾರ ಸಹಿ ಮಾಡಿದ್ದರು. ಚೀನಾದಿಂದ ಸುಂಕ ವಿನಾಯಿತಿಯ ಪ್ರಯೋಜನ ಪಡೆದು ಆಮದಾಗುತ್ತಿದ್ದ ಉತ್ಪನ್ನಗಳ ಮೇಲಿನ ಸುಂಕದ ಪ್ರಮಾಣವನ್ನು ಶೇ 30ಕ್ಕೆ (ಅಥವಾ 25 ಡಾಲರ್‌ಗೆ) ಹೆಚ್ಚಿಸುವುದಾಗಿ ಅಮೆರಿಕದ ಅಧಿಕಾರಿಗಳು ಕಳೆದ ವಾರ ಹೇಳಿದ್ದರು. ಆದರೆ, ಈಗ ಆಮದು ಸುಂಕವನ್ನು ಇನ್ನಷ್ಟು ಹೆಚ್ಚಿಸಿರುವ ಅಮೆರಿಕವು, ಅದನ್ನು ಶೇ 90ಕ್ಕೆ ತಂದಿರಿಸಿದೆ.

ಐರೋಪ್ಯ ಒಕ್ಕೂಟದಿಂದ ಪ್ರತಿಸುಂಕ

ಬ್ರಸೆಲ್ಸ್ (ಎಪಿ): ಅಮೆರಿಕದಿಂದ ಆಮದಾಗುವ ಒಟ್ಟು 23 ಬಿಲಿಯನ್ ಡಾಲರ್ (ಅಂದಾಜು ₹1.99 ಲಕ್ಷ ಕೋಟಿ) ಮೌಲ್ಯದ ಉತ್ಪನ್ನಗಳಿಗೆ ಪ್ರತಿಸುಂಕ ವಿಧಿಸಲು ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉಕ್ಕು ಮತ್ತು ಅಲ್ಯುಮಿನಿಯಂ ಆಮದಿನ ಮೇಲೆ ಶೇಕಡ 25ರಷ್ಟು ತೆರಿಗೆ ವಿಧಿಸಿರುವುದಕ್ಕೆ ಪ್ರತಿಯಾಗಿ ಒಕ್ಕೂಟದ ದೇಶಗಳು ಸುಂಕ ವಿಧಿಸಲು ತೀರ್ಮಾನಿಸಿವೆ.

ಆದರೆ, ಯಾವ ಉತ್ಪನ್ನಕ್ಕೆ ಎಷ್ಟು ಸುಂಕ ಎಂಬುದರ ನಿರ್ದಿಷ್ಟ ವಿವರವನ್ನು ಒಕ್ಕೂಟವು ಹಂಚಿಕೊಂಡಿಲ್ಲ. ಐರೋಪ್ಯ ಒಕ್ಕೂಟವು 27 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ. ಸುಂಕ ಸಮಸ್ಯೆಯನ್ನು ಮಾತುಕತೆಯ ಮೂಲಕ ಪರಿಹರಿಸಿಕೊಳ್ಳುವುದು ತನ್ನ ಆದ್ಯತೆ ಎಂಬುದನ್ನು ಒಕ್ಕೂಟವು ಪುನರುಚ್ಚರಿಸಿದೆ.

ಮಲ್ಯ ಮೇಲ್ಮನವಿ ವಜಾ

ಸಾಲ ಪ್ರಕರಣ



ಲಂಡನ್ (ರಾಯಿಟರ್ಸ್): ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೇರಿದಂತೆ ಸಾಲದಾತರಿಗೆ ಪಾವತಿಸಬೇಕಿರುವ ₹1.10 ಲಕ್ಷ ಕೋಟಿ (1.28 ಬಿಲಿಯನ್ ಡಾಲರ್) ಸಾಲಕ್ಕೆ ಸಂಬಂಧಿಸಿ ಲಂಡನ್ ಹೈಕೋರ್ಟ್ ನೀಡಿರುವ ದಿವಾಳಿತನ ಕುರಿತ ಆದೇಶದ ವಿರುದ್ಧ ಭಾರತೀಯ ಉದ್ಯಮಿ ವಿಜಯ್ ಮಲ್ಯ ಸಲ್ಲಿಸಿದ್ದ ಮೇಲ್ಮನವಿ ಬುಧವಾರ ವಜಾಗೊಂಡಿದೆ.

ಸದ್ಯ ಬ್ರಿಟನ್‌ನಲ್ಲಿ ನೆಲಸಿರುವ ಮಲ್ಯ, ತಮ್ಮ ಕಿಂಗ್‌ಫಿಶರ್ ಏರ್‌ಲೈನ್ಸ್ 2012ರಲ್ಲಿ ದಿವಾಳಿಯಾದ ನಂತರ ಸಾಲದಾತರು ಮತ್ತು ಭಾರತೀಯ ಅಧಿಕಾರಿಗಳ ವಿರುದ್ಧ ಸುದೀರ್ಘ ಕಾನೂನು ಹೋರಾಟದಲ್ಲಿ ತೊಡಗಿದ್ದಾರೆ. ಕಿಂಗ್‌ಫಿಶರ್ ಏರ್‌ಲೈನ್ಸ್‌ಗೆ ಸಾಲ ನೀಡಿದ್ದ ಬ್ಯಾಂಕ್‌ಗಳ ಗುಂಪಿಗೆ ಮಲ್ಯ ಅವರು ₹1.10 ಲಕ್ಷ ಕೋಟಿ ಪಾವತಿಸುವಂತೆ 2017ರಲ್ಲಿ ಕೋರ್ಟ್ ತೀರ್ಪು ನೀಡಿತ್ತು. ಇದು, 2021ರಲ್ಲಿ ಮಲ್ಯ ವಿರುದ್ಧ ದಿವಾಳಿತನದ ಆದೇಶ ಹೊರಡಿಸಲು ಕಾರಣವಾಗಿತ್ತು.

ದಿವಾಳಿತನದ ಆದೇಶದ ವಿರುದ್ಧ ಮಲ್ಯ ಅವರು ಮೇಲ್ಮನವಿ ಸಲ್ಲಿಸಿದಾಗ, ಬ್ಯಾಂಕುಗಳು ಈಗಾಗಲೇ ಸ್ವತ್ತುಗಳ ಮೂಲಕ ಸಾಲ ಮರುಪಾವತಿಸಿಕೊಂಡಿವೆ ಎಂದು ಅವರ ವಕೀಲರು ವಾದಿಸಿದರು. ಆದರೆ, ಅವರ ವಾದವನ್ನು ಮಂಗಳವಾರ ತಿರಸ್ಕರಿಸಿದ ನ್ಯಾಯಮೂರ್ತಿ ಆಂಥೋನಿ ಮಾನ್, ‘ದಿವಾಳಿತನ ಕುರಿತ ಆದೇಶವನ್ನು ಬದಲಿಸಲಾಗದು’ ಎಂದು ಲಿಖಿತ ತೀರ್ಪು ನೀಡಿದ್ದಾರೆ. ಅಲ್ಲದೆ, ಮಲ್ಯ ಹಸ್ತಾಂತರದ ಆದೇಶ ಜಾರಿಯಾಗಿಲ್ಲ ಎಂದು ಹೇಳಿದ್ದಾರೆ.

ಫಾರ್ಮುಲಾ ಒನ್ ಮೋಟರ್ ರೇಸಿಂಗ್ ತಂಡ ಫೋರ್ಸ್ ಇಂಡಿಯಾದ ಸಹ ಮಾಲೀಕರಾಗಿದ್ದ ಮಲ್ಯ, ಕಿಂಗ್‌ಫಿಶರ್ ಏರ್‌ಲೈನ್ಸ್ ದಿವಾಳಿ ನಂತರದ ವಂಚನೆ ಆರೋಪಗಳಲ್ಲಿ ವಿಚಾರಣೆಗಾಗಿ ತಮ್ಮನ್ನು ಭಾರತಕ್ಕೆ ಹಸ್ತಾಂತರಿಸುವುದರ ವಿರುದ್ಧ ಪ್ರತ್ಯೇಕ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಹಸ್ತಾಂತರದ ವಿರುದ್ಧ ಮಲ್ಯ ಸಲ್ಲಿಸಿರುವ ಮನವಿಯನ್ನು 2020ರಲ್ಲೇ ನ್ಯಾಯಾಲಯ ತಿರಸ್ಕರಿಸಿದೆ.

ಸಂಕ್ಷಿಪ್ತ ಸುದ್ದಿ

ಉಕ್ರೇನ್‌ನಿಂದ ಮತ್ತೆ ದಾಳಿ: ರಷ್ಯಾ

ಮಾಸ್ಕೊ (ರಾಯಿಟರ್ಸ್): ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸುವಂತಿಲ್ಲ ಎಂಬ ತಾತ್ಕಾಲಿಕ ಒಪ್ಪಂದವನ್ನು ಮೀರಿ ಉಕ್ರೇನ್ ಮತ್ತೆ ದಾಳಿ ಮಾಡುತ್ತಿದೆ ಎಂದು ರಷ್ಯಾ ಬುಧವಾರ ಹೇಳಿದೆ.

ನಮ್ಮ ಇಂಧನ ಮೂಲ ಸೌಕರ್ಯಗಳ ಮೇಲೆ ಉಕ್ರೇನ್, ಒಂದು ದಿನದಲ್ಲಿ ಆರು ಬಾರಿ ದಾಳಿ ನಡೆಸಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ. ಪರಸ್ಪರ ದೇಶಗಳಲ್ಲಿನ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಮಾಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು ಎಂದು ಅಮೆರಿಕದ ಮಧ್ಯಸ್ಥಿಕೆಯಲ್ಲಿ ಉಕ್ರೇನ್ ಮತ್ತು ರಷ್ಯಾ ಕಳೆದ ತಿಂಗಳು ಒಪ್ಪಂದ ಮಾಡಿಕೊಂಡಿದ್ದವು. ಆದರೆ, ಮತ್ತೆ ದಾಳಿ ಮುಂದುವರಿದಿದ್ದು, ಒಪ್ಪಂದವನ್ನು ಉಲ್ಲಂಘಿಸಲಾಗುತ್ತಿದೆ ಎಂದು ಎರಡೂ ದೇಶಗಳು ಪರಸ್ಪರ ಆರೋಪಿಸುತ್ತಿವೆ.

ರೋಸ್ತೊವ್ ಮತ್ತು ಕುರ್ಸ್ಕ್ ಹಾಗೂ ನಮ್ಮ ನಿಯಂತ್ರಣದಲ್ಲಿರುವ ಉಕ್ರೇನ್‌ನ ಭಾಗದ ಜಪೊರಿಝ್ಝಿಯಾ ಪ್ರದೇಶಗಳಲ್ಲಿರುವ ಇಂಧನ ಮೂಲಸೌಕರ್ಯಗಳ ಮೇಲೆ ಉಕ್ರೇನ್ ದಾಳಿ ನಡೆಸಿದೆ ಎಂದು ರಷ್ಯಾ ಹೇಳಿದೆ.

‘ಯೆಮನ್ ಮೇಲೆ ಅಮೆರಿಕ ದಾಳಿ: 10 ಜನರ ಸಾವು’



ದುಬೈ (ಎಪಿ): ಯೆಮನ್‌ನ ಕೆಂಪು ಸಮುದ್ರದ ಹೊಡೈಡಾ ಪ್ರದೇಶದ ಮೇಲೆ ಅಮೆರಿಕ ಮಂಗಳವಾರ ರಾತ್ರಿ ವಾಯುದಾಳಿ ನಡೆಸಿದ್ದು, ಕನಿಷ್ಠ ಹತ್ತು ಮಂದಿ ಮೃತಪಟ್ಟಿದ್ದಾರೆ ಎಂದು ಇರಾನ್ ಬೆಂಬಲಿತ ಹುಥಿ ಬಂಡುಕೋರರು ಆರೋಪಿಸಿದ್ದಾರೆ.

ಹೊಡೈಡಾದ ಅಲ್–ಹವಾಕ್ ಜಿಲ್ಲೆಯ ಸುತ್ತಮುತ್ತ ದಾಳಿ ನಡೆದಿದೆ ಎಂದು ತಿಳಿಸಿದ್ದಾರೆ. ದಾಳಿಯಿಂದ ತೀವ್ರ ಗಾಯಗೊಂಡ ಜನರು ನರಳುತ್ತಿರುವ, ಆಂಬುಲೆನ್ಸ್‌ಗಾಗಿ ಕಾಯುತ್ತಿರುವ ಹಾಗೂ ರಕ್ಷಣಾಕಾರರು ಮೊಬೈಲ್ ಟಾರ್ಚ್ ಹಿಡಿದು ಶೋಧ ನಡೆಸುತ್ತಿರುವ ದೃಶ್ಯಗಳು ‘ಅಲ್–ಮಾಸಿರಹ್’ ಉಪಗ್ರಹ ಚಾನಲ್‌ನಲ್ಲಿ ಪ್ರಸಾರವಾಗಿವೆ.

‘ಮಂಗಳ ಯಾನಕ್ಕೆ ಒತ್ತು ನೀಡುವೆ’

ಕೇಪ್ ಕೆನವೆರಲ್(ಎಪಿ): ‘ಮಂಗಳ ಗ್ರಹಕ್ಕೆ ಗಗನಯಾನಿಗಳನ್ನು ಕಳಿಸುವುದು ನನ್ನ ಆದ್ಯತೆಯಾಗಿದೆ’ ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಮುಖ್ಯಸ್ಥ ಸ್ಥಾನಕ್ಕೆ ನಾಮ ನಿರ್ದೇಶನಗೊಂಡಿರುವ, ಶತಕೋಟ್ಯಧಿಪತಿ ಜೇರ್ಡ್ ಐಸಾಕ್‌ಮನ್ ಬುಧವಾರ ಹೇಳಿದ್ದಾರೆ.

ತಮ್ಮ ನಾಮನಿರ್ದೇಶನ ದೃಢೀಕರಿಸುವುದಕ್ಕೆ ಸಂಬಂಧಿಸಿ, ವಾಣಿಜ್ಯ, ವಿಜ್ಞಾನ ಮತ್ತು ಸಾರಿಗೆ ಕುರಿತ ಸೆನೆಟ್ ಸಮಿತಿ ನಡೆಸಿದ ವಿಚಾರಣೆ ವೇಳೆ, ಐಸಾಕ್‌ಮನ್ ಈ ಮಾತು ಹೇಳಿದ್ದಾರೆ.

ನಾಸಾದ 15ನೇ ಮುಖ್ಯಸ್ಥರನ್ನಾಗಿ ಐಸಾಕ್‌ಮನ್ ಅವರನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಳೆದ ವರ್ಷ ನಾಮನಿರ್ದೇಶನ ಮಾಡಿದ್ದರು. ಒಂದು ವೇಳೆ, ಅವರ ನಾಮನಿರ್ದೇಶನ ದೃಢೀಕರಣಗೊಂಡಲ್ಲಿ, ಅತ್ಯಂತ ಕಿರಿಯ ವ್ಯಕ್ತಿಯೊಬ್ಬರು ನಾಸಾ ಚುಕ್ಕಾಣಿ ಹಿಡಿದಂತಾಗಲಿದೆ.

INSTITUTE OF HOTEL MANAGEMENT CATERING TECHNOLOGY AND APPLIED NUTRITION

“An Autonomous Body under Ministry of Tourism, Govt. of India”
S.J.P. Campus, Seshadri Road, Bangalore 560 001.
www.ihmbangalore.ac.in
E-mail: ihmbengaluru@gmail.com
Ph. 080-22262960 / 22268562

ADMISSION NOTICE

APPLICATIONS ARE INVITED FOR ADMISSION TO THE 1 ½ YR. DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2025-26

*****

1. Application form along with other details is available on payment of Rs.300/- (Rs.150/- for SC/ST) inclusive of Registration fee payable by cash or D.D. in person. By post Rs.350/- (Rs.175/- for SC/ST & P.H.)
2. Issue of application form from: 11.04.2025
3. Last date for receipt of filled in Application Form by the Institute: 28.07.2025
4. Limited Hostel facility available.
5. For details of courses/fee etc., please visit: https://ihmbangalore.ac.in

Sd/- PRINCIPAL



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಹಾಗೂ ಇಲಾಖೆಯ ಎಲ್ಲಾ ನೌಕರರ ಸಂಘ
ಇವರ ಸಹಯೋಗದೊಂದಿಗೆ



ರಾಷ್ಟ್ರೀಯ ಭೂಮಾಪನ ದಿನಾಚರಣೆ ಸಮಾರಂಭ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ದೇಶದಲ್ಲಿ ವ್ಯವಸ್ಥಿತ ಭೂಮಾಪನ ಕಾರ್ಯವನ್ನು ಕೇಪ್ ಕೊಮೊರಿನ್ ನಿಂದ ಬೆಂಗಳೂರಿನ ವರೆಗೆ 1802 ರ ಏಪ್ರೀಲ್ 10 ರಂದು ಪ್ರಾರಂಭಿಸಿದ ಸ್ಮರಣಾರ್ಥವಾಗಿ ಆಚರಿಸಲಾಗುತ್ತಿದೆ.

ದಿನಾಂಕ : 10-04-2025, ಗುರುವಾರ | ಸಮಯ : ಬೆಳಿಗ್ಗೆ 11.00 ಗಂಟೆಗೆ | ಸ್ಥಳ: ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗ, ವಿಧಾನಸೌಧ, ಬೆಂಗಳೂರು

: ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ — ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

: ಗೌರವಾನ್ವಿತ ಆಹ್ವಾನಿತರು :
ಶ್ರೀಮತಿ ನಿರ್ಮಲಾ ಸೀತಾರಾಮನ್ — ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ — ಮಾನ್ಯ ಸೂಕ್ಷ್ಮ, ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ

: ಗೌರವ ಉಪಸ್ಥಿತಿ :
ಶ್ರೀ ಡಿ.ಕೆ. ಶಿವಕುಮಾರ್ — ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಎಸ್. ಹೊರಟ್ಟಿ — ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಯು.ಟಿ. ಖಾದರ್ — ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
ಶ್ರೀ ಕೃಷ್ಣ ಬೈರೇಗೌಡ — ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ

: ಅಧ್ಯಕ್ಷತೆ :
ಶ್ರೀ ರಿಜ್ವಾನ್ ಅರ್ಷದ್ — ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ರಾಜ್ಯದ ಎಲ್ಲಾ ಗೌರವಾನ್ವಿತ ಸಚಿವರು, ಲೋಕಸಭಾ, ರಾಜ್ಯಸಭಾ, ವಿಧಾನಸಭಾ, ವಿಧಾನ ಪರಿಷತ್ ಸದಸ್ಯರುಗಳು, ನಿಗಮ ಮಂಡಳಿಯ ಅಧ್ಯಕ್ಷರುಗಳು ಹಾಗೂ ಎಲ್ಲಾ ಚುನಾಯಿತ ಜನ ಪ್ರತಿನಿಧಿಗಳು

ಕಳೆದ ಎರಡು ವರ್ಷಗಳಲ್ಲಿ ಇಲಾಖೆಯ ಸಾಧನೆ ಮತ್ತು ಸುಧಾರಣೆಗಳು

- ಮೋಜಣಿ 3.0 ತಂತ್ರಾಂಶ ವ್ಯವಸ್ಥೆ ಮೂಲಕ **26 ಲಕ್ಷ** ರೈತರ ಭೂ ಅಳತೆ ಕಾರ್ಯ ಹಾಗೂ ನಕ್ಷೆ ತ್ವರಿತವಾಗಿ ಅರ್ಜಿ ನೀಡಿದ **30 ದಿನಗಳಲ್ಲಿ** ವಿಲೇವಾರಿ.
- ರಾಜ್ಯಾದ್ಯಂತ ಸರಳೀಕೃತ **“ದರಖಾಸ್ತ ಪೋಡಿ ಆಂದೋಲನ”** ಮುಖೇನ ದಶಕಗಳಿಂದ ಬಾಕಿ ಇದ್ದ ರೈತರ ಜಮೀನಿನ ದುರಸ್ತಿ ಕಾರ್ಯ ಕಳೆದ ನಾಲ್ಕು ತಿಂಗಳಿನಲ್ಲಿ **20,000 ಕ್ಕೂ** ಹೆಚ್ಚು ದುರಸ್ತಿ.
- ಆಧುನಿಕ ತಂತ್ರಜ್ಞಾನದ ಮೂಲಕ ರಾಜ್ಯದ 1.16 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಡ್ರೋಣ್ ಸರ್ವೆ ಕಾರ್ಯ ಮರುಭೂಮಾಪನ (150 ವರ್ಷಗಳ ತರುವಾಯ) ಕಾರ್ಯ ಪ್ರಗತಿ.
- ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಅಳತೆಯಾಗದೇ ಇರುವ ಗ್ರಾಮಠಾಣಾ ಪ್ರದೇಶದ (18752 ಗ್ರಾಮಗಳು) ಆಸ್ತಿಗಳನ್ನು **ಡ್ರೋಣ್** ಸರ್ವೆ ಮಾಡಿ ಡಿಜಿಟಲ್ ನಕ್ಷೆ ಸಿದ್ಧಪಡಿಸುವಿಕೆ.
- **ಮಾನವ ಸಂಪನ್ಮೂಲ ಹೆಚ್ಚಳ** - ರೈತರಿಗೆ ತ್ವರಿತ ಸೇವೆ ಒದಗಿಸಲು 1227 ಪರವಾನಗಿ ಭೂಮಾಪಕರು, 750 ಸರ್ಕಾರಿ ಭೂಮಾಪಕರು, 36 ಭೂದಾಖಲೆಗಳ ಸಹಾಯಕ ನಿರ್ದೇಶಕರ ನೇಮಕಾತಿ .
- **ಪೋಡಿ ಮುಕ್ತ ಅಭಿಯಾನ 2.0** ಅಡಿಯಲ್ಲಿ **2079** ಗ್ರಾಮಗಳನ್ನು ಪೋಡಿಮುಕ್ತಗೊಳಿಸಲಾಗಿದೆ.
- ಇಲಾಖೆಯಲ್ಲಿ ತ್ವರಿತ ಭೂಮಾಪನ ಕಾರ್ಯಕ್ಕಾಗಿ 5000 **“ರೋವರ್”** ಆಧುನಿಕ ಸರ್ವೆ ಉಪಕರಣ.
- ರಾಜ್ಯದ ಆಯ್ದ 10 ನಗರ / ಪಟ್ಟಣಗಳಲ್ಲಿ **ನಕ್ಷಾ** ಯೋಜನೆ ಜಾರಿ.
- **ಭೂದಾಖಲೆಗಳ ಗಣಕೀಕರಣ - 2.43 ಕೋಟಿ** ಆಕಾರಬಂದ ದಾಖಲೆ ಮತ್ತು **1.34 ಕೋಟಿ** ಹಿಸ್ಸಾ ಸ್ಕೆಚ್‌ಗಳ ಗಣಕೀಕರಣ ಪೂರ್ಣ.



ಮಾನ್ಯ ಕಂದಾಯ ಸಚಿವರಾದ **ಶ್ರೀ ಕೃಷ್ಣ ಬೈರೇಗೌಡ** ರವರು ಭೂಮಾಪನ ಇಲಾಖೆಯು ದೈನಂದಿನ ಸರ್ವೆ ಕಾರ್ಯದಲ್ಲಿ ಬಳಸುತ್ತಿರುವ ಆಧುನಿಕ ಸರ್ವೆ ಉಪಕರಣಗಳನ್ನು ಪರಿಶೀಲಿಸುತ್ತಿರುವುದು.

ಎಲ್ಲರಿಗೂ ಆತ್ಮೀಯ ಸ್ವಾಗತ

ಶ್ರೀ ಜೆ. ಮಂಜುನಾಥ್ ಭಾ.ಆ.ಸೇ.
ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರ ವೃಂದ ಹಾಗೂ ಇಲಾಖೆಯ ಎಲ್ಲಾ ನೌಕರರ ಸಂಘದ ಪದಾಧಿಕಾರಿಗಳು, ಸದಸ್ಯರು

“ಸಾರ್ವಜನಿಕ ಆಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ”

ಪರೀಕ್ಷೆ ಬರೆಯಲು ಗರ್ಭಿಣಿಗೆ ಅನುಕೂಲ ಕಲ್ಪಿಸಿ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ (ಕೆಎಎಸ್) ಹುದ್ದೆಗಳ ಗ್ರೂಪ್ 'ಎ' ಮತ್ತು 'ಬಿ' ನೇಮಕಾತಿಗಾಗಿ ಇದೇ 15ರಿಂದ 19ರವರೆಗೆ ನಡೆಯಲಿರುವ ಮುಖ್ಯ ಪರೀಕ್ಷೆಯಲ್ಲಿ ತುಂಬು ಗರ್ಭಿಣಿಯೊಬ್ಬರಿಗೆ ಕಲಬುರಗಿಯಲ್ಲಿ ಪರೀಕ್ಷಾ ಕೇಂದ್ರದ ವ್ಯವಸ್ಥೆ ಮಾಡುವಂತೆ, ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಹೈಕೋರ್ಟ್ ನಿರ್ದೇಶಿಸಿದೆ.

'ನನಗೆ ಕಲಬುರಗಿ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡುವಂತೆ ನಿರ್ದೇಶಿಸಬೇಕು' ಎಂದು ಕೋರಿ ಕಲಬುರಗಿಯ ಮಹಾಲಕ್ಷ್ಮಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಚಿಲ್ಲಕೂರು ಸುಮಲತಾ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಈ ಕುರಿತಂತೆ ಆದೇಶಿಸಿದೆ.

'ಪರೀಕ್ಷೆ ಬರೆಯಲು ವ್ಯವಸ್ಥೆ ಕಲ್ಪಿಸದೇ ನಿರಾಕರಣೆ ಮಾಡುವುದು ಸಂವಿಧಾನದ 14 (ಕಾನೂನಿನ ಮುಂದೆ ಸಮಾನ), 15(3), (ಮಹಿಳೆ ಮತ್ತು ಮಕ್ಕಳಿಗೆ ವಿಶೇಷ ಸೌಲಭ್ಯ ಕಲ್ಪಿಸುವುದು) ಮತ್ತು 16ನೇ (ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ) ವಿಧಿಯ ಅಡಿಯಲ್ಲಿ ಲಭ್ಯವಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಲಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಭ್ರಷ್ಟಾಚಾರ ತೊಡೆದು ಹಾಕಲು ಸಿ.ಎಂ ಶ್ರಮಿಸುತ್ತಿದ್ದಾರೆ: ಬಸವರಾಜ ರಾಯರಡ್ಡಿ

'ಭ್ರಷ್ಟಾಚಾರ ಇದೆ, ಆದರೆ ನಂ.1 ಎಂದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರದಲ್ಲಿ 'ಕರ್ನಾಟಕ ನಂಬರ್ 1' ಆಗಿದೆ ಎಂದು ನಾನು ಹೇಳಿಲ್ಲ. ಮಾಧ್ಯಮಗಳು ತಪ್ಪಾಗಿ ಅರ್ಥೈಸಿವೆ. ಆದರೆ, ರಾಜ್ಯದಲ್ಲಿ ಭ್ರಷ್ಟಾಚಾರ ಎಲ್ಲ ಸರ್ಕಾರಗಳ ಅವಧಿಯಲ್ಲೂ ಇತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅದನ್ನು ತೊಡೆದು ಹಾಕಲು ಶ್ರಮಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಕರ್ನಾಟಕದ ಹಿತದೃಷ್ಟಿಯಿಂದ ಮಾತನಾಡಿದ್ದೇನೆ. ನನ್ನ ಮಾತನ್ನು ಉತ್ತಮ ಸ್ಫೂರ್ತಿಯಿಂದ ತೆಗೆದುಕೊಳ್ಳಬೇಕು. ಭ್ರಷ್ಟಾಚಾರವೇ ಇಲ್ಲ ಎಂದು ಹೇಳಲು ಆಗುವುದಿಲ್ಲ' ಎಂದರು.


ರಾಯರಡ್ಡಿ

'ಗುತ್ತಿಗೆದಾರರು ಮಾಡಿರುವ ಭ್ರಷ್ಟಾಚಾರದ ಆರೋಪದ ಕುರಿತು ತನಿಖೆ ನಡೆಸಬೇಕು. ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಸರ್ಕಾರದ ಕಾಮಗಾರಿಗಳಲ್ಲಿ ಗುಣಮಟ್ಟದ ಕೆಲಸ ನಡೆಯುತ್ತಿಲ್ಲ. ಹಿಂದೆಲ್ಲ ಐದಾರು ದಶಕ ಬಾಳಿಕೆ ಬರುತ್ತಿದ್ದ ಸರ್ಕಾರಿ ಕಟ್ಟಡಗಳು ಈಗ 10 ವರ್ಷಗಳಲ್ಲಿಯೇ ಬಿದ್ದು ಹೋಗುತ್ತಿವೆ. ಅದರಲ್ಲಿಯೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ನಡೆಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆ ಹೇಗೆ ಸಾಧ್ಯ? ಈ ವಿಚಾರವನ್ನು ಕೊಪ್ಪಳದಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪಿಸಿದ್ದೆ' ಎಂದರು.

'ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರಗಳ ಅವಧಿಯಲ್ಲಿ ಅತಿಯಾದ ಭ್ರಷ್ಟಾಚಾರವಿತ್ತು. ಸಿದ್ದರಾಮಯ್ಯ ಅವಧಿಯಲ್ಲಿ ಭ್ರಷ್ಟಾಚಾರವಿಲ್ಲ. ಅಲ್ಲದೇ, ಭ್ರಷ್ಟಾಚಾರ ನಿವಾರಿಸುವ ಉದ್ದೇಶದಿಂದ ಉಪನೋಂದಣಾಧಿಕಾರಿ, ಅಬಕಾರಿ, ಗಣಿ ಮತ್ತು ಭೂವಿಜ್ಞಾನ, ವಾಣಿಜ್ಯ ತೆರಿಗೆ, ಸಾರಿಗೆ ಇಲಾಖೆಗಳಲ್ಲಿ ವರ್ಗಾವಣೆಗೆ ಕೌನ್ಸಿಲಿಂಗ್ ವ್ಯವಸ್ಥೆ ಜಾರಿ ಮಾಡುವುದಾಗಿ ಸರ್ಕಾರ ಪ್ರಕಟಿಸಿದೆ' ಎಂದು ರಾಯರಡ್ಡಿ ಹೇಳಿದರು.


ರಾಯರಡ್ಡಿ ಹೇಳಿರುವುದು ಅಕ್ಷರಶಃ ಸತ್ಯ. ಇಷ್ಟು ದಿನ ನಾವು ಮಾಡುತ್ತಿದ್ದ ಆರೋಪವನ್ನು ದೃಢೀಕರಿಸಿದ್ದಾರೆ. ಶಂಖದ ಬಾಯಿಂದ ಬಂದರೆ ತೀರ್ಥವಲ್ಲವೇ?
ವಿ.ಸುನಿಲ್‌ಕುಮಾರ್, ಶಾಸಕ, ಬಿಜೆಪಿ


ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರರೇ ಕರ್ನಾಟಕ ಭ್ರಷ್ಟಾಚಾರದಲ್ಲೂ ನಂ.1 ಎಂದಿದ್ದಾರೆ. ಅವರ ಮಾತು ರಾಜ್ಯ ಸರ್ಕಾರದ ಕಾರ್ಯವೈಖರಿಗೆ ಹಿಡಿದ ಕನ್ನಡಿ
ನಿಖಿಲ್ ಕುಮಾರಸ್ವಾಮಿ, ಯುವ ಜೆಡಿಎಸ್ ಅಧ್ಯಕ್ಷ


ಭ್ರಷ್ಟಾಚಾರ ಎಷ್ಟು ಹಾಸುಹೊಕ್ಕಾಗಿದೆ ಎಂಬುದಕ್ಕೆ ರಾಯರಡ್ಡಿ ಅವರ ಹೇಳಿಕೆಯೇ ಸಾಕ್ಷಿ. ಗುತ್ತಿಗೆದಾರರ ಸಂಘ ಶೇ60 ಕಮಿಷನ್ ಆರೋಪ ಮಾಡಿದೆ
ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

'ನಮ್ಮ ಸರ್ಕಾರ ಭ್ರಷ್ಟಾಚಾರದ ವಿರುದ್ಧ ಇದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರದ ಆರೋಪದಡಿ ಹಲವರು ಜೈಲಿಗೆ ಹೋದರು. ಈಗ ಅವರಿಗೆ ನಮ್ಮ ವಿರುದ್ಧ ಮಾತನಾಡಲು ನೈತಿಕ ಹಕ್ಕಿಲ್ಲ. ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಿದ ದಿನದಿಂದ ಭ್ರಷ್ಟಾಚಾರ ಶುರುವಾಗುತ್ತದೆ. ಚುನಾವಣೆ ವೇಳೆ ನಡೆಯುವ ಭ್ರಷ್ಟಾಚಾರವನ್ನು ತಡೆಗಟ್ಟಲು ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಒತ್ತಾಯಿಸಿದರು.

'ಸರ್ಕಾರದ ಮುಖವಾಡ ಬಯಲು'

'ದೇಶದಲ್ಲೇ ಕರ್ನಾಟಕ ಭ್ರಷ್ಟಾಚಾರದಲ್ಲಿ ನಂ 1 ಎಂದು ಹೇಳುವ ಮೂಲಕ ಕಾಂಗ್ರೆಸ್ ಸರ್ಕಾರದ ಭ್ರಷ್ಟತೆಯ ಕರಾಳ ಮುಖವಾಡವನ್ನು ಬಯಲು ಮಾಡಿ ರಾಜ್ಯದ ಘನತೆ ಕುಗ್ಗಿರುವುದನ್ನು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಬಿಚ್ಚಿಟ್ಟಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಈ ಮೂಲಕ ನಿಮ್ಮ ಆಡಳಿತದಲ್ಲಿ ಸಂಪೂರ್ಣ ಭ್ರಷ್ಟತೆಯ ಕಪ್ಪು ಮಸಿ ಮೆತ್ತಿಸಿಕೊಂಡಿರುವುದನ್ನು ಅನಾವರಣ ಮಾಡಿ, ಕರ್ನಾಟಕ ವಿಶ್ವಮಟ್ಟದಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಇರುವುದನ್ನು ವಿವರಿಸಿದ್ದಾರೆ' ಎಂದು ಅವರು 'ಎಕ್ಸ್' ವೇದಿಕೆಯಲ್ಲಿ ಬರೆದುಕೊಂಡಿದ್ದಾರೆ.

ಸುದ್ದಿ 2 ನಿಮಿಷ

ಪ್ರವಾದಿ ಅವಹೇಳನ: ಯತ್ನಾಳ ವಿರುದ್ಧ ದೂರು

ವಿಜಯಪುರ: ಪ್ರವಾದಿ ಮಹಮ್ಮದ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಪ್ರಕರಣ ದಾಖಲಾಗಿದೆ.

'ಏಪ್ರಿಲ್ 7ರಂದು ಹುಬ್ಬಳ್ಳಿಯ ಬಾನಿ ಓಣಿಯಲ್ಲಿ ನಡೆದ ರಾಮನವಮಿ ಕಾರ್ಯಕ್ರಮದಲ್ಲಿ ಇಸ್ಲಾಂ ಧರ್ಮ ಮತ್ತು ಪ್ರವಾದಿ ಮಹಮ್ಮದ್ ಅವರ ಬಗ್ಗೆ ಯತ್ನಾಳ ಪ್ರಚೋದನಕಾರಿ, ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಮಹಮ್ಮದ್ ಹನ್ನಾನ್ ಎಂಬುವರು ವಿಜಯಪುರದ ಗೋಳಗುಮ್ಮಟ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



'ಬಾಳಾ ಸಾಬ್ ಠಾಕ್ರೆ ಮನೆಯಲ್ಲಿ ಮಹಮ್ಮದ್ ಪೈಗಂಬರ್ ಹುಟ್ಟಿದ್ದಾನೆ' ಎಂಬ ಹೇಳಿಕೆಯನ್ನು ಯತ್ನಾಳ ನೀಡಿದ್ದು, ಇದು ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ತೀವ್ರ ಆಘಾತ ಉಂಟು ಮಾಡಿದೆ. ಈ ಹೇಳಿಕೆಯಿಂದ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಗೆ ಭಂಗ ಉಂಟಾಗುವ ಸಾಧ್ಯತೆ ಇದೆ' ಎಂದು ದೂರುದಾರರು ತಿಳಿಸಿದ್ದಾರೆ.

ಪಕ್ಷ ಏನೇ ಜವಾಬ್ದಾರಿ ಕೊಟ್ಟರೂ ನಿಭಾಯಿಸಲು ಸಿದ್ಧ: ಅಣ್ಣಾಮಲೈ

ಉಡುಪಿ: 'ನಾನೊಬ್ಬ ಕಾರ್ಯಕರ್ತ. ಪಕ್ಷ ನನಗೆ ಒಂದು ಜವಾಬ್ದಾರಿ ಕೊಟ್ಟಿತ್ತು, ಅದನ್ನು ನಿಭಾಯಿಸಿದ್ದೇನೆ. ಇನ್ನೊಂದು ಜವಾಬ್ದಾರಿ ಕೊಟ್ಟರೂ ಕೆಲಸ ಮಾಡುತ್ತೇನೆ' ಎಂದು ಬಿಜೆಪಿ ಮುಖಂಡ ಅಣ್ಣಾಮಲೈ ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಇಲ್ಲಿ ಮಾತನಾಡಿದ ಅವರು, 'ತಮಿಳುನಾಡಿನಲ್ಲಿ ಚುನಾವಣೆ ಸಮೀಪಿಸುತ್ತಿದೆ. ಕೇಂದ್ರ ಗೃಹ ಸಚಿವರು ತಮಿಳುನಾಡಿನ ವಿರೋಧ ಪಕ್ಷದ ನಾಯಕ ಪಳನಿಸ್ವಾಮಿ ಅವರನ್ನು ಭೇಟಿಯಾಗಿ, ಮೈತ್ರಿಯ ಬಗ್ಗೆಯೂ ಮಾತನಾಡಿದ್ದಾರೆ. ಡಿಎಂಕೆಯನ್ನು ಅಧಿಕಾರದಿಂದ ಕೆಳಗಿಳಿಸುವುದು ನಮ್ಮೆಲ್ಲರ ಉದ್ದೇಶ' ಎಂದರು.

'ಎಐಎಡಿಎಂಕೆ ಕುರಿತ ನನ್ನ ನಿಲುವು ಎಲ್ಲರಿಗೂ ಗೊತ್ತಿದೆ. ಎಐಎಡಿಎಂಕೆ ಬಿಜೆಪಿ ಜೊತೆ ಮೈತ್ರಿ ಬಯಸುತ್ತಿದೆ. ನಾನು ಎಲ್ಲಿ, ಯಾವ ಸ್ಥಾನದಲ್ಲಿರಬೇಕು ಎಂಬುದು ಪಕ್ಷಕ್ಕೆ ಗೊತ್ತಿದೆ. ಮೈತ್ರಿಗೆ ಯಾವುದು ಸರಿಯಾದ ನಿಲುವು ಎಂಬುದು ಕೂಡ ಪಕ್ಷಕ್ಕೆ ತಿಳಿದಿದೆ. ರಾಜಕೀಯದಲ್ಲಿ ಅಧಿಕಾರಕ್ಕಿಂತ ತಾಳ್ಮೆ ಮುಖ್ಯ. ತಾಳ್ಮೆಯಿಂದ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ. ಒಂದಲ್ಲ ಒಂದು ದಿನ ಬಿಜೆಪಿ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದೇ ಬರುತ್ತದೆ' ಎಂದರು.

ಕರ್ನಾಟಕ ಸರ್ಕಾರ ಜನ ವಿರೋಧಿಯಾಗಿದೆ. ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಏನೆಲ್ಲ ಮಾಡುತ್ತಿದೆ ಎಂಬುದನ್ನು ಇಡೀ ದೇಶ ಗಮನಿಸುತ್ತಿದೆ. ಬಿಜೆಪಿ ಜನಾಕ್ರೋಶ ಯಾತ್ರೆಗೆ ಜನರು ಜೊತೆಯಾಗಬೇಕು ಎಂದು ಹೇಳಿದರು.

'ಸುಪ್ರೀಂ ತೀರ್ಪು: ಕೇಂದ್ರಕ್ಕೆ ಪಾಠ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದ ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಏಕಪಕ್ಷೀಯವಾಗಿ ಕೈಗೊಂಡಿರುವ ತೀರ್ಮಾನಗಳನ್ನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ದೇಶದ ಎಲ್ಲ ರಾಜ್ಯಪಾಲರು ಮತ್ತು ತೆರೆಯ ಹಿಂದೆ ಆಟವಾಡುತ್ತಿದ್ದ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆಯ ಪಾಠ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಸುಪ್ರೀಂ ಕೋರ್ಟಿನ ತೀರ್ಪು ರಾಜ್ಯಪಾಲ ಹುದ್ದೆಯ ಕರ್ತವ್ಯಗಳ ಇತಿಮಿತಿಯನ್ನು ವ್ಯಾಖ್ಯಾನಿಸಿದೆ. ರಾಜ್ಯ ಸರ್ಕಾರ ಅಂಗೀಕರಿಸಿದ ಮಸೂದೆಗಳಿಗೆ ರಾಷ್ಟ್ರಪತಿಯಿಂದ ಅಂಕಿತ ಪಡೆಯುವ ಪ್ರಕ್ರಿಯೆ ಗರಿಷ್ಠ ಮೂರು ತಿಂಗಳ ಅವಧಿಯೊಳಗೆ ನಡೆಯಬೇಕು ಎಂದು ಸುಪ್ರೀಂ ಕೋರ್ಟ್ ಕಾಲಮಿತಿ ನಿಗದಿಪಡಿಸಿರುವುದರಿಂದ ಗೊಂದಲಗಳು ನಿವಾರಣೆಯಾಗಿವೆ' ಎಂದಿದ್ದಾರೆ.

'ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ರಾಜ್ಯಪಾಲರು ಸಂವಿಧಾನದ ಆಶಯ ಮತ್ತು ಸಾಂವಿಧಾನಿಕ ಹುದ್ದೆಯ ಘನತೆ-ಗೌರವವನ್ನು ಗಾಳಿಗೆ ತೂರಿ ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ವರ್ತಿಸುತ್ತಿರುವ ಆರೋಪಗಳು ಇತ್ತೀಚೆಗೆ ಹೆಚ್ಚು ಕೇಳಿ ಬರುತ್ತಿವೆ. ತಮ್ಮ ಪಕ್ಷವನ್ನು ಜನ ತಿರಸ್ಕರಿಸಿದ ರಾಜ್ಯಗಳಲ್ಲಿ ತಮ್ಮ ಆಣತಿ ಪಾಲಿಸುವ ರಾಜ್ಯಪಾಲರನ್ನು ನೇಮಿಸಿ, ಆಡಳಿತವನ್ನು ಪರೋಕ್ಷವಾಗಿ ನಿಯಂತ್ರಿಸಲು ಮೋದಿ ನೇತೃತ್ವದ ಸರ್ಕಾರ ಮಾಡುತ್ತಿರುವ ಪ್ರಯತ್ನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುತ್ತಿರುವ ದ್ರೋಹ' ಎಂದು ಅವರು ಹೇಳಿದ್ದಾರೆ.

'ಕರ್ನಾಟಕದಲ್ಲಿ ಕೂಡಾ ವಿಧಾನ ಮಂಡಲ ಅಂಗೀಕರಿಸಿದ ಕೆಲ ಮಸೂದೆಗಳ ಬಗ್ಗೆ ರಾಷ್ಟ್ರಪತಿಯಿಂದ ಅಂಕಿತ ಪಡೆಯಲು ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸಿದ್ದು ಸಂಘರ್ಷಕ್ಕೆ ಕಾರಣವಾಗಿದೆ. ಹೀಗಿದ್ದರೂ ಸರ್ಕಾರ ಸಂಯಮದಿಂದ ನಡೆದುಕೊಂಡಿದೆ. ರಾಜ್ಯ ಸರ್ಕಾರ ಮತ್ತು ರಾಜಭವನದ ನಡುವಿನ ಅನಗತ್ಯ ಸಂಘರ್ಷವನ್ನು ಸುಪ್ರೀಂ ಕೋರ್ಟ್‌ನ ಈ ತೀರ್ಪು ಶಾಶ್ವತವಾಗಿ ಕೊನೆಗೊಳಿಸಲಿದೆ' ಎಂದಿದ್ದಾರೆ.

'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ'

ಬೆಲೆ ಏರಿಕೆ ಖಂಡಿಸಿ ಇದೇ 12ರಿಂದ ಜೆಡಿಎಸ್ ಪ್ರತಿಭಟನಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಬೆಲೆ ಏರಿಕೆ ಖಂಡಿಸಿ ಜೆಡಿಎಸ್ ಪಕ್ಷ 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಅಭಿಯಾನ ಹಮ್ಮಿಕೊಂಡಿದೆ.

ಅಭಿಯಾನದ ಅಂಗವಾಗಿ https://www.saakappasaaku.com ಎಂಬ ವೆಬ್‌ಸೈಟ್ ಬಿಡುಗಡೆ ಮಾಡಿ ಮಾತನಾಡಿದ ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಕಾರ್ಯಕರ್ತರು, ಪಕ್ಷದ ಅಭಿಮಾನಿಗಳು, ಜನಸಾಮಾನ್ಯರು ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಂಡು ಪ್ರತಿಭಟನಾ ಅಭಿಯಾನದಲ್ಲಿ ಭಾಗವಹಿಸಬಹುದು ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಜನರ ಮೇಲೆ ಬೆಲೆ ಏರಿಕೆಯ ಬರೆ ಎಳೆಯುತ್ತಿದೆ. ಆರ್ಥಿಕವಾಗಿ ರಾಜ್ಯವನ್ನು ದಿವಾಳಿಗೆ ದೂಡಿದೆ. ರಾಜ್ಯದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ ಸೃಷ್ಟಿಸಿದೆ ಎಂದು ಆರೋಪಿಸಿದರು.

'ಬಿಜೆಪಿ ಜತೆ ವಿಲೀನ ಇಲ್ಲ'

ಬಿಜೆಪಿ, ಜೆಡಿಎಸ್ ನಡುವೆ ಭಿನ್ನಾಭಿಪ್ರಾಯ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಮೆಚ್ಚಿ, ದೇಶದ ಹಿತಕ್ಕಾಗಿ ಎಚ್.ಡಿ. ದೇವೇಗೌಡರು ಮೈತ್ರಿಗೆ ಒಲವು ತೋರಿದರು. ಮೈತ್ರಿಯಿಂದ ಎರಡೂ ಪಕ್ಷಕ್ಕೂ ಲಾಭವಾಗಿದೆ. ಹಾಗಂತ ಬಿಜೆಪಿ ಜತೆ ಎಂದಿಗೂ ವಿಲೀನ ಆಗುವುದಿಲ್ಲ. ಪ್ರಾದೇಶಿಕ ಪಕ್ಷವಾಗಿ ಮುಂದುವರಿಯಲಿದೆ ಎಂದು ನಿಖಿಲ್ ಹೇಳಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಏ. 12ರಂದು ಮೊದಲ ಹಂತದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಭಾಗವಹಿಸುವರು. ನಂತರ ಅಭಿಯಾನ ನಿರಂತರವಾಗಿ ಮುಂದುವರಿಯಲಿದೆ ಎಂದರು.

ಸರ್ಕಾರದ ಸಚಿವರು, ಆಡಳಿತ ಪಕ್ಷದ ಶಾಸಕರು ಹಿಂದೆ ಏನು ಮಾತನಾಡಿದ್ದರು. ಈಗ ಏನು ಮಾತಾಡುತ್ತಿದ್ದಾರೆ ಎಂಬ ವಿಡಿಯೊ ತುಣುಕುಗಳು ವೆಬ್‌ಸೈಟ್‌ನಲ್ಲಿ ಸಿಗುತ್ತವೆ. ಅಧಿಕಾರಕ್ಕಾಗಿ ಸಚಿವರೇ 'ಹನಿಟ್ರ್ಯಾಪ್' ನಡೆಸಿದ್ದಾರೆ ಎನ್ನಲಾಗಿದೆ. ಸ್ಥಾನ ಉಳಿಸಿಕೊಳ್ಳಲು ಹೈಕಮಾಂಡ್‌ಗೆ 'ಮನಿಟ್ರ್ಯಾಪ್' ಮಾಡಿದ್ದಾರೆ. ಅದಕ್ಕಾಗಿ ಜನರನ್ನು 'ತೆರಿಗೆ ಟ್ರ್ಯಾಪ್' ಮಾಡುತ್ತಿದ್ದಾರೆ. ಇಂತಹ ಹಲವು ಅಂಶಗಳ ಕುರಿತು ಜನರಿಗೆ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

'ರಾಜ್ಯ ಸರ್ಕಾರ ಕಳೆದ ಎರಡು ವರ್ಷಗಳಿಂದ ಹಂತ ಹಂತವಾಗಿ ಯಾವುದಾದರೂ ಒಂದು ರೀತಿ ಬೆಲೆ ಏರಿಕೆ ಮಾಡಿ ಜನರಿಗೆ ಹೊರೆ ಹಾಕಿದೆ. ಬೆಲೆ ಏರಿಕೆ ಬಗ್ಗೆ ರಾಜ್ಯದಾದ್ಯಂತ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಜೆಡಿಎಸ್ ಕೂಡಾ ಪ್ರತಿಯೊಬ್ಬ ಕನ್ನಡಿಗರ ಭಾವನೆಗೆ ಸ್ಪಂದಿಸಿ, ಅವರ ಜತೆಗೆ ನಿಲ್ಲಲಿದೆ' ಎಂದರು.

ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಸಂಸದ ಮಲ್ಲೇಶ್ ಬಾಬು, ಶಾಸಕ ಸ್ವರೂಪ್ ಪ್ರಕಾಶ್, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ವಿಧಾನಪರಿಷತ್ ಮಾಜಿ ಸದಸ್ಯ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.


ಸೋಮವಾರಪೇಟೆ ಖಾಸಗಿ ಬಸ್ ನಿಲ್ದಾಣದಲ್ಲಿ ಬುಧವಾರ ಧಾರಾಕಾರ ಮಳೆಯ ನಡುವೆಯೇ ಬಸ್ಸಿನಿಂದ ಇಳಿದ ಪ್ರಯಾಣಿಕರು ನಿಲ್ದಾಣದೆಡೆಗೆ ಧಾವಿಸಿದರು.

ಮಡಿಕೇರಿಯಲ್ಲಿ ಭಾರಿ ಮಳೆ

ಮಡಿಕೇರಿ: ನಗರ ಸೇರಿದಂತೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಹಾಗೂ ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ಬುಧವಾರ ಗುಡುಗು, ಸಿಡಿಲಿನಿಂದ ಕೂಡಿದ ಭಾರಿ ಮಳೆ ಸುರಿಯಿತು. ಮಳೆಯು ಬೆಳೆಗಾರರಲ್ಲಿ ಸಂತಸ ತಂದಿದೆ. ನಾಪೋಕ್ಲು ಭಾಗದಲ್ಲಿ ಕೆಲವು ದಿನಗಳಿಂದ ನಿರಂತರವಾಗಿ ಮಳೆ ಆಗುತ್ತಿದೆ.

ಮಂಗಳೂರು ವರದಿ: ಚಿಕ್ಕಮಗಳೂರು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆ ಬುಧವಾರ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮೂಲ್ಕಿ, ಮೂಡುಬಿದಿರೆ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಕಡಬ ಹಾಗೂ ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಮಳೆಯಾಗಿದೆ. ಅನೇಕ ಮರಗಳು ಉರುಳಿ ವಿದ್ಯುತ್ ಸಂಪರ್ಕ ಸ್ಥಗಿತ ಗೊಂಡಿವೆ. ಸುಮಾರು ಅರ್ಧ ಗಂಟೆ ಧಾರಾಕಾರ ಮಳೆ ಸುರಿಯಿತು.

ಯಾದಗಿರಿ ವರದಿ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಗುಡುಗು ಸಹಿತ ಆಲಿಕಲ್ಲು ಮಳೆಯಾಗಿದೆ.

ಗುರುಮಠಕಲ್‌ನಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ಕಲಬುರಗಿಯಲ್ಲೂ ತುಂತುರು ಮಳೆಯಾಯಿತು.

ಹುಬ್ಬಳ್ಳಿ ವರದಿ: ಹಾವೇರಿ ಜಿಲ್ಲೆಯ ಕೆಲವೆಡೆ, ಹುಬ್ಬಳ್ಳಿ ನಗರ, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಮುಂಡಗೋಡ, ಕುಮಟಾ ಭಾಗದಲ್ಲಿ ಮಳೆಯಾಗಿದೆ.

ಹಾವೇರಿ ಜಿಲ್ಲೆಯ ಕೆಲ ತಾಲ್ಲೂಕಿನ ಹಲವು ಕಡೆಗಳಲ್ಲಿ ಗುಡುಗು–ಸಿಡಿಲು ಸಮೇತ ಜೋರು ಮಳೆಯಾಗಿದೆ.


ಸಿಡಿಲು ಬಡಿದು ಯುವಕ ಸಾವು: (ಮಸ್ಕಿ ವರದಿ) ತಾಲ್ಲೂಕಿನ ಅಂಕುಶದೊಡ್ಡಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಸಿಡಿಲು ಬಡಿದು ರಾಮಣ್ಣ ನಾಯಕ (25) ಎಂಬುವರು ಮೃತಪಟ್ಟಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಿಯು ಉಪನ್ಯಾಸಕರಿಗೆ ಒತ್ತಡ: ಆಕ್ಷೇಪ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯನ್ನು ರಜೆ ರಹಿತ ಇಲಾಖೆ ಎಂದು ಘೋಷಿಸಬೇಕು. ಪೊಲೀಸ್, ಆರೋಗ್ಯ ಇಲಾಖೆ ಸೇರಿದಂತೆ ತುರ್ತು ಸೇವಾ ಸಿಬ್ಬಂದಿಗೆ ನೀಡುವ ಎಲ್ಲ ಸವಲತ್ತು ನೀಡಬೇಕು ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

ಈ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಲಿಖಿತ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಶಿವರಾಮ್ ಬಿ. ಮಾಲೀಪಾಟೀಲ ಅವರು, 'ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷೆ–2ಗೆ ಕಡ್ಡಾಯವಾಗಿ ನೋಂದಾಯಿಸಬೇಕು. ವಿಶೇಷ ಬೋಧನಾ ತರಗತಿಗಳನ್ನು ನಡೆಸಿ, ಫಲಿತಾಂಶ ವೃದ್ಧಿಸಬೇಕು' ಎಂದು ಪದವಿಪೂರ್ವ ಶಿಕ್ಷಣ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ಇದು ಉಪನ್ಯಾಸಕರ ಮೇಲೆ ಮತ್ತಷ್ಟು ಒತ್ತಡ ತಂದಿದೆ ಎಂದು ದೂರಿದ್ದಾರೆ.



ಉಪನ್ಯಾಸಕರು ಬೋಧನಾ ಕಾರ್ಯ, ಕಿರು ಪರೀಕ್ಷೆ, ಪೂರ್ವಸಿದ್ಧತಾ ಪರೀಕ್ಷೆಗಳ ಜತೆಗೆ, ಮೂರು ಮುಖ್ಯ ಪರೀಕ್ಷೆಗಳು, ಮೌಲ್ಯಮಾಪನ ಕಾರ್ಯಕ್ಕಾಗಿ ಬೇಸಿಗೆ ರಜೆಯನ್ನೇ ತ್ಯಾಗ ಮಾಡಿದ್ದಾರೆ. ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಮುಂದಿನ ಪರೀಕ್ಷೆಗಳಿಗೆ ಕಡ್ಡಾಯವಾಗಿ ನೋಂದಾಯಿಸುವುದು, ವಿಶೇಷ ತರಗತಿ ಆಯೋಜಿಸುವುದು ಕಷ್ಟವಾಗುತ್ತದೆ. ಇದರಿಂದ ಇಡೀ ವರ್ಷ ರಜೆಯ ಸೌಲಭ್ಯವಿಲ್ಲದೇ ಕೆಲಸ ಮಾಡಬೇಕಿದೆ. ಹಾಗಾಗಿ, ಸುತ್ತೋಲೆ ಹಿಂಪಡೆಯುವಂತೆ ಸೂಚಿಸಬೇಕು. ಇಲ್ಲಿದ್ದರೆ ಪ್ರತಿಭಟನಾ ಮಾರ್ಗ ಹಿಡಿಯುವುದು ಅನಿವಾರ್ಯವಾಗುತ್ತದೆ ಎಂದಿದ್ದಾರೆ.

ಮಗಳ ಮೇಲೆ ಅತ್ಯಾಚಾರ; ತಂದೆ ಬಂಧನ



ಮುಳಗುಂದ (ಗದಗ ಜಿಲ್ಲೆ): ಮಗಳ ಮೇಲೆ ತಂದೆ ಅತ್ಯಾಚಾರ ನಡೆಸಿ, ಗರ್ಭಿಣಿ ಮಾಡಿದ್ದು ಸಂತ್ರಸ್ತ ಬಾಲಕಿಯ ತಾಯಿ ಪೊಲೀಸ್ ಠಾಣೆಗೆ ಬುಧವಾರ ದೂರು ನೀಡಿದ್ದಾರೆ.

'ಕೈಕಾಲು ನೋಯುತ್ತಿದ್ದ ಕಾರಣ ಚಿಕಿತ್ಸೆಗಾಗಿ ತಾಯಿಯೊಡನೆ ಬಾಲಕಿಯು ಗದಗ ಜಿಲ್ಲಾ ಆಸ್ಪತ್ರೆಗೆ ಹೋದಾಗ, ಆಕೆ ಗರ್ಭಿಣಿಯಾಗಿದ್ದು ಗೊತ್ತಾಗಿದೆ. ಈ ಬಗ್ಗೆ ವಿಚಾರಿಸಿದಾಗ, ಒಂದು ವರ್ಷದಿಂದ ತಂದೆ ನಿರಂತರ ಅತ್ಯಾಚಾರ ಎಸಗಿರುವುದಾಗಿ ತಾಯಿಗೆ ಹೇಳಿದ್ದಾಳೆ. ಪೋಕ್ಸೊ ಕಾಯ್ದೆಯಡಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಮುಳಗುಂದ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಾಕುನಾಯಿ ಕಚ್ಚಿ ವ್ಯಕ್ತಿ ಸಾವು

ಬೆಳಗಾವಿ: ಸಾಕುನಾಯಿ ಕಚ್ಚಿದ್ದರಿಂದ ನಂಜು ಏರಿ ವ್ಯಕ್ತಿಯೊಬ್ಬರು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ.



ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮದ ಶಿವಶಂಕರ ಪರಿಸರಗೋಳ (35) ಮೃತರು. 6 ತಿಂಗಳ ಹಿಂದೆ ಅವರು ನಾಯಿ ತಂದು, ಸಾಕಿದ್ದರು. ಆದರೆ, ಅದಕ್ಕೆ ನಂಜುನಿರೋಧ ಚುಚ್ಚುಮದ್ದು ಹಾಕಿಸಿರಲಿಲ್ಲ. ತಿಂಗಳ ಹಿಂದೆ ಆಟ ಆಡುವಾಗ, ನಾಯಿ ಆಕಸ್ಮಿಕವಾಗಿ ಕಚ್ಚಿತ್ತು.

'ಸಾಕುನಾಯಿ ಆಗಿದ್ದರಿಂದ ಶಿವಶಂಕರ ಅವರು ಚುಚ್ಚುಮದ್ದು ತೆಗೆದುಕೊಂಡಿರಲಿಲ್ಲ. ತಿಂಗಳ ಬಳಿಕ ಅವರಿಗೆ ನಂಜೇರಿತು. ನಾಲ್ಕು ದಿನಗಳ ಹಿಂದೆ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದರು' ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಅಂಬೇಡ್ಕರ್ ಜಯಂತಿ, ಬುದ್ಧಪೂರ್ಣಿಮಾ: ಕೈದಿಗಳಿಗೆ ಸಿಹಿ ತಿಂಡಿ



ಬೆಂಗಳೂರು: ಪ್ರತಿವರ್ಷ ಅಂಬೇಡ್ಕರ್ ಜನ್ಮದಿನವಾದ ಏಪ್ರಿಲ್ 14ರಂದು ಹಾಗೂ ಬುದ್ಧಪೂರ್ಣಿಮಾ (ಜಯಂತಿ) ಪ್ರಯುಕ್ತ ಮೇ 12ರಂದು ವಿವಿಧ ಜೈಲುಗಳಲ್ಲಿರುವ ಕೈದಿಗಳಿಗೆ ಸಿಹಿತಿಂಡಿ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸದ್ಯ ಗಣರಾಜ್ಯೋತ್ಸವ, ಯುಗಾದಿ, ಬಸವಜಯಂತಿ, ಸ್ವಾತಂತ್ರ್ಯ ದಿನ, ರಂಜಾನ್, ಗಾಂಧಿ ಜಯಂತಿ ಸೇರಿದಂತೆ ಒಟ್ಟು 15 ವಿಶೇಷ ದಿನಗಳಲ್ಲಿ ಕೈದಿಗಳಿಗೆ ಸಿಹಿ ತಿಂಡಿ ವಿತರಿಸಲಾಗುತ್ತಿದೆ. ಅಂಬೇಡ್ಕರ್ ಜಯಂತಿ ಮತ್ತು ಬುದ್ಧಪೂರ್ಣಿಮಾ ದಿನ ಸಿಹಿತಿಂಡಿ ವಿತರಿಸಲು ಹೆಚ್ಚುವರಿಯಾಗಿ ₹5 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

ಕೈದಿಗಳಿಗೆ ಸಿಹಿ ತಿಂಡಿ ವಿತರಿಸುವ ವಿಶೇಷ ದಿನಗಳ ಪಟ್ಟಿಗೆ ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಮ್ ಜಯಂತಿಯನ್ನು ಸೇರಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಅವರು ಒಳಾಡಳಿತ ಇಲಾಖೆಯ ಕಾರ್ಯದರ್ಶಿಗೆ ಮಾರ್ಚ್ 11ರಂದು ಪತ್ರ ಬರೆದಿದ್ದರು. ದಲಿತ ಸಂಘರ್ಷ ಸಮಿತಿಯ ರಾಜ್ಯ ಕಾರ್ಯದರ್ಶಿ ಎಚ್. ಅನಂತರಾಯಪ್ಪ ಈ ಕುರಿತು ಮನವಿ ಸಲ್ಲಿಸಿದ್ದರು.

₹500 ಮುಖಬೆಲೆಯ ನಕಲಿ ನೋಟು ಪತ್ತೆ

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): ಇಲ್ಲಿನ ಗಾಂಧಿನಗರದಲ್ಲಿನ ಬಾಡಿಗೆ ಮನೆಯೊಂದರಲ್ಲಿ ಮಂಗಳವಾರ ₹500 ಮುಖಬೆಲೆಯ ನಕಲಿ ನೋಟುಗಳು ಮತ್ತು ನೋಟು ಎಣಿಕೆ ಯಂತ್ರ ಪತ್ತೆಯಾಗಿವೆ.

'ಗೋವಾ ಮೂಲದ, ಸದ್ಯ ಹೈದರಾಬಾದ್‌ನಲ್ಲಿ ಇರುವ ಅರ್ಷದ ಅಂಜುಮ್ ಖಾನ್ ಎಂಬಾತ ಬಾಡಿಗೆಗೆ ಪಡೆದಿದ್ದ ಮನೆಯಲ್ಲಿ ಇವು ಸಿಕ್ಕಿವೆ. ಮನೆಯ ಹಿಂಬಾಗಿಲು ಸರಿಯಾಗಿ ಹಾಕಿರದ ಕಾರಣ ನೆರೆ ಮನೆಯ ವ್ಯಕ್ತಿಯೊಬ್ಬರು ಒಳಹೊಕ್ಕು ಪರಿಶೀಲಿಸಿದ ವೇಳೆ ನೋಟುಗಳು ಪತ್ತೆಯಾದವು' ಎಂದು ಪೊಲೀಸರು ತಿಳಿಸಿದ್ದಾರೆ.



'ನೋಟುಗಳ ಮೇಲೆ ಚಿತ್ರೀಕರಣದ ಉದ್ದೇಶಕ್ಕೆ ಎಂದು ಮುದ್ರಿತವಾಗಿದೆ. ಬರೀ ಸೊನ್ನೆಯನ್ನೆ ಸರಣಿ ಸಂಖ್ಯೆಗಳಾಗಿ ಬರೆಯಲಾಗಿದೆ. 2 ಲಕ್ಷಕ್ಕೂ ಹೆಚ್ಚು ಮೊತ್ತದ ನಕಲಿ ನೋಟುಗಳ ಜೊತೆಗೆ ನೋಟು ಎಣಿಕೆ ಯಂತ್ರ, ನೋಟುಗಳನ್ನು ಪ್ಯಾಕ್ ಮಾಡುವ ಯಂತ್ರವೂ ಸಿಕ್ಕಿದೆ. ಈ ಎಲ್ಲಾ ಕಾರಣದಿಂದ ತನಿಖೆ ನಡೆಸಲಾಗುತ್ತಿದೆ. ಹೈದರಾಬಾದ್‌ನಲ್ಲಿರುವ ಅರ್ಷದ ಅವರನ್ನು ವಿಚಾರಣೆಗೆ ವಶಕ್ಕೆ ಪಡೆದಿದ್ದೇವೆ' ಎಂದು ದಾಂಡೇಲಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಗೇಂದ್ರಗೆ ಮತ್ತೆ ಸಂಕಷ್ಟ

ಒಂದನೇ ಪುಟದಿಂದ...

ನಿಗಮವು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತನಗರ ಶಾಖೆ ಸೇರಿದಂತೆ ವಿವಿಧೆಡೆಯ ಬ್ಯಾಂಕ್ ಖಾತೆಗಳಲ್ಲಿ ಇರಿಸಿದ್ದ ಹಣವನ್ನು ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಖಾತೆಗೆ ವರ್ಗಾವಣೆ ಮಾಡಲಾಗಿತ್ತು. ಬಳಿಕ ಅದರಲ್ಲಿನ ₹94 ಕೋಟಿಯನ್ನು ಅಕ್ರಮವಾಗಿ ಹೈದರಾಬಾದ್‌ನ ಸಹಕಾರಿ ಬ್ಯಾಂಕ್ ಒಂದರ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು. 2024ರ ಫೆಬ್ರುವರಿ 26ರಿಂದ ಮೇ 9ರವರೆಗೆ ಈ ರೀತಿ ನಿಗಮದ ಖಾತೆಯಿಂದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿತ್ತು.

ನಿಗಮದ ಲೆಕ್ಕಪತ್ರ ವಿಭಾಗದ ಅಧೀಕ್ಷಕ ಪಿ. ಚಂದ್ರಶೇಖರನ್ ಮೇ 26ರಂದು ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರು ಸಾವಿಗೂ ಮುನ್ನ ಬರೆದಿದ್ದ ಪತ್ರದಿಂದ ಹಗರಣ ಬಹಿರಂಗವಾಗಿತ್ತು. ಬಳಿಕ ಸಿಐಡಿ ಪೊಲೀಸರು ಮತ್ತು ಸಿಬಿಐ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದವು. ಈ ಎಫ್‌ಐಆರ್‌ಗಳ ಆಧಾರದಲ್ಲಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಆರ್ಥಿಕ ಅಪರಾಧ ಪ್ರಕರಣ ವರದಿ (ಇಸಿಐಆರ್) ದಾಖಲಿಸಿತ್ತು.

ಪ್ರಕರಣದ ತನಿಖೆ ನಡೆಸಿದ್ದ ಇ.ಡಿ ಅಧಿಕಾರಿಗಳು ಜುಲೈ 12ರಂದು ನಾಗೇಂದ್ರ ಅವರನ್ನು ಬಂಧಿಸಿದ್ದರು. ತನಿಖೆ ಪೂರ್ಣಗೊಳಿಸಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಸಕ್ಷಮ ಪ್ರಾಧಿಕಾರದ (ರಾಜ್ಯಪಾಲರು) ಅನುಮತಿ ಕೋರಿ ತಿಂಗಳ ಹಿಂದೆ ರಾಜಭವನಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

'ಇ.ಡಿ ಅಧಿಕಾರಿಗಳು ಸಲ್ಲಿಸಿದ ಪ್ರಸ್ತಾವ ಮತ್ತು ದಾಖಲೆಗಳನ್ನು ಪರಿಶೀಲಿಸಿದ ರಾಜ್ಯಪಾಲರು, ಬಿ. ನಾಗೇಂದ್ರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಶನಿವಾರ (ಏಪ್ರಿಲ್ 5) ಅನುಮತಿ ನೀಡಿದ್ದಾರೆ. ನ್ಯಾಯಾಲಯಕ್ಕೆ ಆರೋಪಪಟ್ಟಿ ಮತ್ತು ದಾಖಲೆಗಳನ್ನು ಸಲ್ಲಿಸಲು ಇ.ಡಿ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮಂಜುನಾಥ ಗೌಡ 14 ದಿನ ಇ.ಡಿ ವಶಕ್ಕೆ

ಒಂದನೇ ಪುಟದಿಂದ...

'ಸತತ 11 ತಾಸಿನ ವಿಚಾರಣೆಯಲ್ಲೂ ಸಮರ್ಪಕ ಉತ್ತರ ನೀಡದ ಕಾರಣ ಅವರನ್ನು ವಶಕ್ಕೆ ಪಡೆದು, ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತರಲಾಗಿತ್ತು. ಅಲ್ಲಿಯೂ ವಿಚಾರಣೆಗೆ ಸಹಕಾರ ನೀಡದ ಕಾರಣ ತಡರಾತ್ರಿ ಅವರನ್ನು ಬಂಧಿಸಲಾಯಿತು. ನಂತರ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

'ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮಂಜುನಾಥಗೌಡ ಅವರ ಅಣತಿಯಂತೆಯೇ ನಕಲಿ ಚಿನ್ನಾಭರಣಗಳನ್ನು ಅಡಮಾನ ಇರಿಸಲಾಗಿತ್ತು. ಅವರು ಸೂಚಿಸಿದ ವ್ಯಕ್ತಿಗಳಿಗೇ ಸಾಲ ನೀಡಲಾಗಿತ್ತು. ಪ್ರಕರಣ ದಾಖಲಾದ ನಂತರ ಹಲವು ದಾಖಲೆಗಳನ್ನು ಅವರು ಬದಲಿಸಿದ್ದಾರೆ. ಅಕ್ರಮದ ಬಗ್ಗೆ ವಿಚಾರಣೆಗೆ ಒಳಪಡಿಸಲು ಅವರನ್ನು ಬಂಧನಕ್ಕೆ ನೀಡಬೇಕು' ಎಂದು ಇ.ಡಿ ನ್ಯಾಯಾಲಯವನ್ನು ಕೋರಿತ್ತು.

ಆಪ್ತರ ಮನೆಗಳಲ್ಲೂ ಶೋಧ

ಈ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಶಿವಮೊಗ್ಗದ ವಿವಿಧೆಡೆ ಬುಧವಾರವೂ ಶೋಧಕಾರ್ಯ ನಡೆಸಿದರು.

ಅಚ್ಚುತರಾವ್ ಬಡಾವಣೆಯಲ್ಲಿರುವ ಡಿಸಿಸಿ ಬ್ಯಾಂಕ್ ನಿರ್ದೇಶಕ ಜಿ.ಎನ್. ಸುಧೀರ್ ಅವರ ನಿವಾಸದ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದರು.

ತೀರ್ಥಹಳ್ಳಿಯ ಬೆಟ್ಟಮಕ್ಕಿಯಲ್ಲಿರುವ ಕೃಷ್ಣಮೂರ್ತಿ ಭಟ್ ಅವರ ನಿವಾಸದ ಮೇಲೂ ಅಧಿಕಾರಿಗಳು ದಾಳಿ ನಡೆಸಿದರು. ಇ.ಡಿ. ಬಂಧಿಸಿರುವ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ ಅವರ ಆಪ್ತ ಬಳಗದಲ್ಲಿ ಈ ಇಬ್ಬರೂ ಗುರುತಿಸಿಕೊಂಡಿದ್ದಾರೆ.

ಚೆಕ್ ಬೌನ್ಸ್: ನಾಗೇಂದ್ರಗೆ 1 ವರ್ಷ ಜೈಲು

ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಶಾಸಕ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 1 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಅಂತೆಯೇ, 'ಪ್ರಕರಣದ ದೂರುದಾರರಿಗೆ ₹1 ಕೋಟಿ 24 ಲಕ್ಷ ಮೊತ್ತವನ್ನು ನಾಗೇಂದ್ರ ಪಾವತಿಸಬೇಕು' ಎಂದು ಆದೇಶಿಸಿದೆ.

ಈ ಸಂಬಂಧ, 'ಮೆಸರ್ಸ್ ವಿಎಸ್‌ಎಲ್ ಸ್ಟೀಲ್ ಲಿಮಿಟೆಡ್ ಕಂಪನಿ' ಪ್ರಧಾನ ವ್ಯವಸ್ಥಾಪಕ ರಾಘವೇಂದ್ರ ಘೋಡ್ಕೆ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯ'ದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಬುಧವಾರ ಪ್ರಕಟಿಸಿದರು.

ನಾಗೇಂದ್ರ ಅವರು ಪರಿಹಾರ ರೂಪದಲ್ಲಿ ದೂರುದಾರರಿಗೆ ಒಟ್ಟು ₹1.24 ಕೋಟಿ ಹಾಗೂ ಸರ್ಕಾರಕ್ಕೆ ₹10 ಸಾವಿರ ದಂಡ ಪಾವತಿಸಲು ಆದೇಶಿಸಲಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ

'ಸಿ.ಎಂ ಹಳ್ಳಿಗೆ ಬಂದರೆ ಜನಾಕ್ರೋಶ ಗೊತ್ತಾಗುತ್ತದೆ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಸಿದ್ದರಾಮಯ್ಯ ಅವರು ಬೆಂಗಳೂರಿಗಷ್ಟೇ ಮುಖ್ಯಮಂತ್ರಿಯಲ್ಲ. ಗ್ಯಾರಂಟಿ ಯೋಜನೆಗಳ ಭ್ರಮೆಯಿಂದ ಹೊರಬಂದು ಹಳ್ಳಿಗಳಲ್ಲಿ ಜನರ ದನಿಗೆ ಕಿವಿಗೊಟ್ಟರೆ ಮಾತ್ರ ಜನಾಕ್ರೋಶ ಹೇಗಿದೆ ಎಂಬುದು ಗೊತ್ತಾಗುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಪಾದಿಸಿದರು.

ನಗರದಲ್ಲಿ ಬುಧವಾರ ಬಿಜೆಪಿ ಜನಾಕ್ರೋಶ ಯಾತ್ರೆಯ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, 'ಗ್ಯಾರಂಟಿಗಳ ಪರಿಣಾಮವಾಗಿ ಜನರ ಬೆಂಬಲವಿದೆ ಎಂದು ಭಾವಿಸಿದ ಸಂಪುಟದ ಸದಸ್ಯರು ಮೋಜು ಮಸ್ತಿಯಲ್ಲಿದ್ದು, ಜಿಲ್ಲೆ, ತಾಲ್ಲೂಕುಗಳಿಗೆ ಭೇಟಿ ಕೊಡುತ್ತಿಲ್ಲ' ಎಂದರು.


ಮಡಿಕೇರಿಯಲ್ಲಿ ಬುಧವಾರ ಬಿಜೆಪಿ ನಡೆಸಿದ ಜನಾಕ್ರೋಶ ಯಾತ್ರೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು. ಪಕ್ಷದ ಮುಖಂಡ ನಳಿನ್‌ಕುಮಾರ್ ಕಟೀಲ್, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಪಕ್ಷದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ರವಿ ಕಾಳಪ್ಪ, ಮುಖಂಡ ಶ್ರೀರಾಮುಲು ಭಾಗವಹಿಸಿದ್ದರು

'ಸರ್ಕಾರವು ಅಗತ್ಯ ವಸ್ತುಗಳ ಬೆಲೆ ಏರಿಸಿದ್ದು, ಎಸ್‌ಇಪಿ ಟಿಎಸ್‌ಪಿ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿರುವ ಹೊತ್ತಿನಲ್ಲಿ ಜನರಲ್ಲಿ ಆಕ್ರೋಶವಲ್ಲದೇ ಮತ್ತೇನಿರಲು ಸಾಧ್ಯ' ಎಂದರು.

'ಬಿಜೆಪಿ ಅಧಿಕಾರದಲ್ಲಿದ್ದಾಗ ಅಭಿವೃದ್ಧಿಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿತ್ತು. ಈಗ ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿಯವರೇ ಭ್ರಷ್ಟಾಚಾರದಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿದೆ ಎಂದಿದ್ದಾರೆ. ಸರ್ಕಾರದ ಕಾರ್ಯವೈಖರಿಗೆ ಇದಕ್ಕಿಂತ ಉದಾಹರಣೆ ಬೇಕೇ' ಎಂದರು.

'20 ತಿಂಗಳಲ್ಲಿ ಹಾಲಿನ ದರವನ್ನು ₹9ರಷ್ಟು ಹೆಚ್ಚಿಸಲು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಾವುದರ ದರ ಏರಿಕೆಯಾಗಿತ್ತು ಎಂಬುದನ್ನು ಬಹಿರಂಗಪಡಿಸಬೇಕು' ಎಂದು ಆಗ್ರಹಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಪತ್ನಿಗೆ ₹2 ಸಾವಿರ ಫ್ರೀ, ಪತಿಗೆ ₹ 5 ಸಾವಿರ ತೆರಿಗೆ ಗ್ಯಾರಂಟಿ ಎಂಬ ಸ್ಥಿತಿ ರಾಜ್ಯದಲ್ಲಿದೆ. ರಕ್ತಾಸುರನಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೆರಿಗೆ ಹಾಕುತ್ತಿದ್ದಾರೆ' ಎಂದು ಕಿಡಿಕಾರಿದರು.

ವಿನಯ್ ಸೋಮಯ್ಯ ಪ್ರಕರಣ; ಕಾನೂನು ಹೋರಾಟಕ್ಕೆ ಚಿಂತನೆ

'ಬೀದಿಗಿಳಿದು ಹೋರಾಡಿದರೂ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯನ್ನು ಸರ್ಕಾರ ಬಂಧಿಸಿಲ್ಲ. ಶಾಸಕ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ ಅವರ ಹೆಸರನ್ನೂ ಎಫ್‌ಐಆರ್‌ನಲ್ಲಿ ಸೇರಿಸದಿರುವುದರಿಂದ ಕಾನೂನು ಹೋರಾಟದ ಚಿಂತನೆ ನಡೆದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

'ಪ್ರಕರಣವನ್ನು ಸರ್ಕಾರ ಮುಚ್ಚಿಹಾಕಿದರೂ ಪಕ್ಷ ಅಧಿಕಾರಕ್ಕೆ ಬಂದಾಗ ಮತ್ತೆ ತನಿಖೆ ಮಾಡಿಸಿ ಪಾತಾಳದಲ್ಲಿ ಅಡಗಿ ಕುಳಿತಿದ್ದರೂ ಪೊನ್ನಣ್ಣ ಅವರನ್ನು ಬಿಡುವುದಿಲ್ಲ' ಎಂದು ಬಿಜೆಪಿ ಮುಖಂಡ ಶ್ರೀರಾಮುಲು ಹೇಳಿದರು.

ಮೀಟರ್: ನಿಷೇಧಿತ ಕಂಪನಿಯ ತಂತ್ರಾಂಶ

ನಿಷೇಧದ ಅವಧಿಯಲ್ಲೇ ಕಾರ್ಯಾಚರಣಾ ವ್ಯವಸ್ಥೆ ಪೂರೈಕೆಗೆ ಬಿಸಿಐಟಿಎಸ್ ಆಯ್ಕೆ ಮಾಡಿದ್ದ ಬೆಸ್ಕಾಂ

● ಜಯಸಿಂಹ ಆರ್.

ಬೆಂಗಳೂರು: ಸರ್ಕಾರಿ ಗುತ್ತಿಗೆಯ ಟೆಂಡರ್‌ಗಳಲ್ಲಿ ಭಾಗಿಯಾಗದಂತೆ ನಿಷೇಧಕ್ಕೆ ಗುರಿಯಾಗಿದ್ದ ಬೆಂಗಳೂರಿನ ಬಿಸಿಐಟಿಎಸ್ ಕಂಪನಿಗೆ, ಸ್ಮಾರ್ಟ್ ಮೀಟರ್‌ನ ತಂತ್ರಾಂಶ ಮತ್ತು ಕಾರ್ಯ ನಿರ್ವಹಣಾ ವ್ಯವಸ್ಥೆ ಪೂರೈಕೆ ಹೊಣೆಗಾರಿಕೆಯನ್ನು ಬೆಸ್ಕಾಂ ನೀಡಿದೆ.

ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿ ನಿರ್ವಹಣಾ ವ್ಯವಸ್ಥೆ (ಎಚ್‌ಇಎಸ್), ಮೀಟರ್ ದತ್ತಾಂಶ ನಿರ್ವಹಣಾ ವ್ಯವಸ್ಥೆ (ಎಂಡಿಎಂಎಸ್), ರೇಡಿಯೊ ಫ್ರೀಕ್ವೆನ್ಸಿ ಮತ್ತು ಸೆಲ್ಯುಲಾರ್ ತಂತ್ರಜ್ಞಾನ (ಆರ್‌ಎಫ್‌ಸಿಪಿ) ಮತ್ತು ಈ ಎಲ್ಲವನ್ನೂ ಪರಸ್ಪರ ಸಂಯೋಜಿಸುವ ಕಾರ್ಯಾಚರಣಾ ವ್ಯವಸ್ಥೆಯನ್ನು (ಎಸ್‌ಐ) ಪೂರೈಸಲು ಜೀನಸ್ ಪವರ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ಮತ್ತು ಬಿಸಿಐಟಿಎಸ್ ಪ್ರೈವೇಟ್ ಲಿಮಿಟೆಡ್ ಅನ್ನು ಬೆಸ್ಕಾಂ ಆಯ್ಕೆ ಮಾಡಿಕೊಂಡಿದೆ.

ಕಂಪನಿಯನ್ನು ಆಯ್ಕೆ ಮಾಡಿದ ಅವಧಿಯಲ್ಲಿ ಅದರ ಮೇಲೆ ನಿಷೇಧವಿತ್ತು ಎಂಬುದನ್ನು ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರು ಪ್ರಸ್ತಾಪ ಮಾಡಿದ್ದರು. ಜತೆಗೆ, 'ಕಪ್ಪುಪಟ್ಟಿಯಲ್ಲಿ ಇರುವ ಕಂಪನಿಗೆ ಸ್ಮಾರ್ಟ್ ಮೀಟರ್ ಗುತ್ತಿಗೆ ನೀಡಿ, ಅಕ್ರಮ ಎಸಗಲಾಗಿದೆ' ಎಂದು ಆರೋಪಿಸಿದ್ದರು.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದ್ದ ಇಂಧನ ಸಚಿವ ಕೆ.ಜೆ. ಜಾರ್ಜ್, 'ಬಿಸಿಐಟಿಎಸ್ ಕಂಪನಿ ಕಪ್ಪುಪಟ್ಟಿಯಲ್ಲಿ ಇರಲಿಲ್ಲ. ಬದಲಿಗೆ, ಅದರ ಮೇಲೆ ನಿಷೇಧ ಹೇರಲಾಗಿತ್ತು ಅಷ್ಟೇ' ಎಂದಿದ್ದರು. ಆದರೆ ನಿಷೇಧದ ಪಟ್ಟಿಯಲ್ಲಿ ಇರುವ ಕಂಪನಿ ಅಥವಾ ಗುತ್ತಿಗೆದಾರರ ಜತೆಗೂ ಒಪ್ಪಂದ ಮಾಡಿಕೊಳ್ಳಬಾರದು ಎಂಬುದನ್ನು ಟೆಂಡರ್ ನಿಯಮಗಳು ಸ್ಪಷ್ಟವಾಗಿ ಹೇಳುತ್ತವೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, 'ನಿಷೇಧದ ಅವಧಿ ಮುಗಿದ ನಂತರವೇ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಸ್ಪಷ್ಟನೆ ನೀಡಿದ್ದರು. ಆದರೆ ನಿಷೇಧ ಜಾರಿಯಲ್ಲಿ ಇದ್ದ ಅವಧಿಯಲ್ಲೇ ಈ ಕಂಪನಿಯನ್ನು ಆಯ್ಕೆ ಮಾಡಲಾಗಿದೆ ಎಂಬುದನ್ನು ಗುತ್ತಿಗೆ ಕಾರ್ಯಾದೇಶ ಹೇಳುತ್ತದೆ.

ಬಿಸಿಐಟಿಎಸ್ ಕಂಪನಿಯ ಮೇಲೆ ಉತ್ತರ ಪ್ರದೇಶದ ಪೂರ್ವಾಂಚಲ ವಿದ್ಯುತ್ ಪ್ರಸರಣ ನಿಗಮವು 2023ರ ಜನವರಿ 6ರಿಂದ 2025ರ ಜನವರಿ 6ರವರೆಗೆ ಎರಡು ವರ್ಷ ನಿಷೇಧ ಹೇರಿತ್ತು. ಆದರೆ ಈ ಕಂಪನಿಯ ಮೇಲೆ ನಿಷೇಧ ಜಾರಿಯಲ್ಲಿ ಇದ್ದ ಅವಧಿಯಲ್ಲೇ ಸ್ಮಾರ್ಟ್ ಮೀಟರ್ ಅಳವಡಿಕೆ ಯೋಜನೆಯಲ್ಲಿ ಬಿಸಿಐಟಿಎಸ್ ಕಂಪನಿಯನ್ನು, ಬೆಸ್ಕಾಂ ಆಯ್ಕೆ ಮಾಡಿದೆ.

ಬಿಸಿಐಟಿಎಸ್ ಮೇಲೆ ಇದ್ದ ನಿಷೇಧ ಕೊನೆಯಾಗಿದ್ದು 2025ರ ಜನವರಿ 6ರಂದು. ಈ ಯೋಜನೆಯ ಗುತ್ತಿಗೆ ಪಡೆದಿರುವ ದಾವಣಗೆರೆಯ ಕಂಪನಿಗೆ 2024ರ ಡಿಸೆಂಬರ್ 23ರಂದು ಬೆಸ್ಕಾಂ, ಗುತ್ತಿಗೆಯ ಕಾರ್ಯಾದೇಶ ನೀಡಿದೆ. 'ಎಚ್‌ಇಎಸ್, ಎಂಡಿಎಂಎಸ್, ಆರ್‌ಎಫ್‌ಸಿಪಿ ಮತ್ತು ಎಸ್‌ಐ ಸೇವೆಯನ್ನು ಜೀನಸ್ ಮತ್ತು ಬಿಸಿಐಟಿಎಸ್ ಕಂಪನಿಗಳಿಂದ ಮಾತ್ರ ಪಡೆದುಕೊಳ್ಳಬೇಕು' ಎಂದೂ ಆದೇಶದಲ್ಲಿ ಬೆಸ್ಕಾಂ ಷರತ್ತು ವಿಧಿಸಿದೆ.

ಈ ಕಂಪನಿ ಮೇಲೆ ನಿಷೇಧ ಜಾರಿಯಲ್ಲಿ ಇದ್ದ ಅವಧಿಯಲ್ಲೇ, ಅಸ್ಸಾಂನ ವಿದ್ಯುತ್ ಪೂರೈಕೆ ಸಂಸ್ಥೆಯೂ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಬಿಡ್ ಆಹ್ವಾನಿಸಿತ್ತು. ನಿಷೇಧದ ಕಾರಣವನ್ನು ತೋರಿಸಿ, ಬಿಸಿಐಟಿಎಸ್‌ನ ಪ್ರಸ್ತಾವವನ್ನು ತಿರಸ್ಕರಿಸಿತ್ತು. ಆದರೆ ಕರ್ನಾಟಕದಲ್ಲಿ ನಿಷೇಧದ ಅವಧಿಯಲ್ಲೇ ಎಲ್ಲ ಎಸ್ಕಾಂಗಳ ವ್ಯಾಪ್ತಿಯಲ್ಲಿ ಅಳವಡಿಸುವ ಸ್ಮಾರ್ಟ್ ಮೀಟರ್‌ಗಳಿಗೆ ತಂತ್ರಾಂಶಗಳನ್ನು ಪೂರೈಸಲು ಈ ಕಂಪನಿಯನ್ನು ಆಯ್ಕೆ ಮಾಡಲಾಗಿದೆ.

ನಿಯಮ ಹೇಳುವುದೇನು...

ನಿಷೇಧಕ್ಕೆ (ಡಿಬಾರ್) ಗುರಿಯಾದ ಕಂಪನಿಯ ಜತೆಗೆ, ನಿಷೇಧದ ಅವಧಿಯಲ್ಲಿ ಯಾವುದೇ ವಹಿವಾಟು ನಡೆಸಬಾರದು ಎನ್ನುತ್ತದೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ).

ಜತೆಗೆ ರಾಜ್ಯ ಸರ್ಕಾರಿ ಸಂಸ್ಥೆಗಳು ಕರೆಯುವ ಟೆಂಡರ್‌ಗಳಲ್ಲಿ ನಿಷೇಧದ ಪಟ್ಟಿಯಲ್ಲಿರುವ ಕಂಪನಿಗಳು ಭಾಗವಹಿಸುವಂತಿಲ್ಲ ಎಂದೂ ಕಾಯ್ದೆಯ 14ಎ(4) ಸೆಕ್ಷನ್ ಹೇಳುತ್ತದೆ.

ತಪ್ಪು ಮಾಹಿತಿ ನೀಡಿದ್ದ ಉಪ ನಿರ್ದೇಶಕ

ಅರಮನೆ ಮಂಡಳಿಗೆ ₹75 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಅರಮನೆ ಮಂಡಳಿಯನ್ನು ಸರ್ಕಾರೇತರ ಸಂಸ್ಥೆ ಎಂದು ತಪ್ಪು ಮಾಹಿತಿ ನೀಡಿದ್ದ ಹಾಗೂ ನೈಜ ಮಾಹಿತಿ ಒದಗಿಸಲು ಒಂದು ವರ್ಷಕ್ಕೂ ಹೆಚ್ಚು ಅಲೆದಾಡಿಸಿದ್ದ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಅವರಿಗೆ ಕರ್ನಾಟಕ ಮಾಹಿತಿ ಆಯೋಗ ₹25 ಸಾವಿರ ದಂಡ, ₹50 ಸಾವಿರ ಪರಿಹಾರ ನೀಡುವಂತೆ ವಿಧಿಸಿದೆ.

ಮೈಸೂರಿನ ರಾಮಕೃಷ್ಣ ನಗರದ ಕೆ. ರಾಮೇಶ್ವರಪ್ಪ ಅವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಆಯೋಗ, ಸರ್ಕಾರದ ವರ್ಗಾವಣಾ ನಿಯಮಗಳನ್ನೂ ಮೀರಿ 12 ವರ್ಷಗಳಿಂದ ಒಂದೇ ಸ್ಥಳದಲ್ಲಿ ಠಿಕಾಣಿ ಹೂಡಿರುವ ಸುಬ್ರಹ್ಮಣ್ಯ ಅವರನ್ನು ತಕ್ಷಣ ವರ್ಗಾವಣೆ ಮಾಡಬೇಕು. ಪಾರದರ್ಶಕ ಆಡಳಿತಕ್ಕಾಗಿ ಆ ಸ್ಥಾನಕ್ಕೆ ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿಯನ್ನು ನಿಯೋಜಿಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ಕಾಯ್ದೆ 1998ರ ಅನ್ವಯ ಮೈಸೂರು ಅರಮನೆಯನ್ನು ರಾಜ್ಯ ಸರ್ಕಾರ ವಶಕ್ಕೆ ಪಡೆದುಕೊಂಡಿದೆ. ಆಡಳಿತ ನಿರ್ವಹಣೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ 'ಮೈಸೂರು ಅರಮನೆ ಮಂಡಳಿ' ರಚಿಸಲಾಗಿದೆ. ಮಂಡಳಿಗೆ ಮೈಸೂರು ಜಿಲ್ಲಾಧಿಕಾರಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೇಮಿಸಿದ ಉಪ ನಿರ್ದೇಶಕರು ದೈನಂದಿನ ಕೆಲಸ ಕಾರ್ಯಗಳ ಮೇಲುಸ್ತುವಾರಿ ನೋಡಿಕೊಳ್ಳುತ್ತಾರೆ. ಇದು ಸಾರ್ವಜನಿಕ ಪ್ರಾಧಿಕಾರ ಎಂದು ಆಯೋಗ ಖಚಿತಪಡಿಸಿದೆ.

ಅರಮನೆ ಮಂಡಳಿಯ ಎಲ್ಲ 113 ಸಿಬ್ಬಂದಿ ರಾಜ್ಯ ಸರ್ಕಾರದ ನೌಕರರಾಗಿದ್ದಾರೆ. ಮಂಡಳಿ ಶಾಸನಬದ್ಧವಾಗಿ ರಚಿತವಾದ ಸರ್ಕಾರದ ಅಂಗಸಂಸ್ಥೆ. ರಕ್ಷಣೆ ಒದಗಿಸುವ ನಗರ ಸಶಸ್ತ್ರ ಮೀಸಲು ಪಡೆಗೂ ಸರ್ಕಾರವೇ ವೇತನ ಪಾವತಿಸುತ್ತದೆ. ಮಂಡಳಿಗೆ ಅಗತ್ಯವಾದ ಅನುದಾನವನ್ನೂ ಸರ್ಕಾರ ನೀಡುತ್ತಿದೆ. ಈ ಐತಿಹಾಸಿಕ ಸ್ಥಳದಲ್ಲಿ ಸಾರ್ವಜನಿಕರಿಂದ ಸಂಗ್ರಹ ಮಾಡಿದ ಶುಲ್ಕವನ್ನು ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ. ಆದರೆ, ಉಪ ನಿರ್ದೇಶಕರು ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ 'ಮಂಡಳಿ ಸರ್ಕಾರೇತರ ಸಂಸ್ಥೆಯಾಗಿರುವ ಕಾರಣ ಮಾಹಿತಿ ಒದಗಿಸಲು ಆಗದು' ಎಂದು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಇದು ಮಾಹಿತಿ ಹಕ್ಕು ಕಾಯ್ದೆಗೆ ವಿರುದ್ಧವಾದ ನಡೆ ಎಂದು ಆಯೋಗ ವಿವರಿಸಿದೆ.

ಮುಖ್ಯಾಂಶಗಳು

- ನೈಜ ಮಾಹಿತಿ ನೀಡಲು ಒಂದು ವರ್ಷ ಅಲೆದಾಡಿಸಿದ್ದ ಅಧಿಕಾರಿ
- 12 ವರ್ಷಗಳಿಂದ ಒಂದೇ ಸ್ಥಳದಲ್ಲಿ ಠಿಕಾಣಿ
- ತಕ್ಷಣ ವರ್ಗಾವಣೆಗೆ ಕರ್ನಾಟಕ ಮಾಹಿತಿ ಆಯೋಗ ಸೂಚನೆ

> ಅರಮನೆಯ ನಿರ್ವಹಣೆಯನ್ನು ಮಂಡಳಿಗೆ ವಹಿಸಿದ ನಂತರ ಏನು ನಡೆಯುತ್ತಿದೆ ಎಂಬ ಮಾಹಿತಿ ಇರಲಿಲ್ಲ. ಆದೇಶದಿಂದ ಈಗ ಎಲ್ಲವೂ ತಿಳಿಯಬಹುದಾಗಿದೆ
>
> **ಕೆ. ರಾಮೇಶ್ವರಪ್ಪ**
> ಮಾಹಿತಿ ಹಕ್ಕು ಅರ್ಜಿದಾರ

'ಬಿ' ವರದಿ ವಿರೋಧಿಸಿದ ಅರ್ಜಿಗಳ ವಿಚಾರಣೆ ಮುಕ್ತಾಯ

ಮುಡಾ ಪ್ರಕರಣ: ಇದೇ 15ಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಸಂಸ್ಥೆಯು ಸಕ್ಷಮ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿ ಸಲ್ಲಿಸಿರುವುದನ್ನು ವಿರೋಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಾಯ್ದಿರಿಸಿದೆ.

'ಇ.ಡಿ ಇಂತಹ ವಿರೋಧದ ಅರ್ಜಿ ಸಲ್ಲಿಸಲು ಕಾನೂನು ವ್ಯಾಪ್ತಿಯಲ್ಲಿ ಅವಕಾಶ ಇದೆಯೊ ಇಲ್ಲವೊ' ಎಂಬ ಬಗೆಗಿನ ವಿಚಾರಣೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ಪೂರ್ಣಗೊಳಿಸಿದರು. ಅರ್ಜಿ ಮೇಲಿನ ಆದೇಶವನ್ನು ಇದೇ 15ಕ್ಕೆ ಪ್ರಕಟಿಸುವುದಾಗಿ ತಿಳಿಸಿದರು.

ಇದೇ ವೇಳೆ ಸ್ವತಃ ವಾದ ಮಂಡಿಸಿದ ದೂರುದಾರ ಸ್ನೇಹಮಯಿ ಕೃಷ್ಣ, 'ಈ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಡಿನೋಟಿಫಿಕೇಷನ್ ಮಾಡಿರುವುದು ಸರಿ ಇದೆ ಎಂದು ಹೇಳುತ್ತಿದ್ದರೆ, ಇ.ಡಿ ಕಾನೂನು ಬಾಹಿರ ಎನ್ನುತ್ತಿದೆ ತನಿಖಾ ಸಂಸ್ಥೆ ಸರಿಯಾಗಿ ಕೆಲಸ ಮಾಡಿದ್ದರೆ ನಮ್ಮಂಥವರು ಹೋರಾಟ ಮಾಡುವ ಅಗತ್ಯವೇ ಬರುತ್ತಿರಲಿಲ್ಲ. ಆದ್ದರಿಂದ, ನ್ಯಾಯಾಲಯದ ದಾರಿ ತಪ್ಪಿಸುವ ಕೆಲಸ ಮಾಡಿರುವ ಲೋಕಾಯುಕ್ತ ತನಿಖಾ ಅಧಿಕಾರಿಯ ವಿರುದ್ಧ ಕ್ರಮಕ್ಕೆ ಆದೇಶಿಸಬೇಕು' ಎಂದು ಮನವಿ ಮಾಡಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಸ್ನೇಹಮಯಿ ಕೃಷ್ಣ ಅವರ ವಿರೋಧದ ಅರ್ಜಿಯ ಮೇಲಿನ ಆದೇಶವೂ ಸೇರಿದಂತೆ ಇ.ಡಿ ಅರ್ಜಿಯ ಮೇಲಿನ ಆದೇಶವನ್ನು ಒಟ್ಟಿಗೇ ಇದೇ 15ರಂದು ಪ್ರಕಟಿಸುವುದಾಗಿ ತಿಳಿಸಿದರು. ಇ.ಡಿ ಪರ ಮಧುಕರ ಕೆ.ದೇಶಪಾಂಡೆ ಮತ್ತು ಲೋಕಾಯುಕ್ತ ಪರ ವೆಂಕಟೇಶ ಅರಬಟ್ಟಿ ವಾದ ಮಂಡಿಸಿದರು.


ಮುಖ್ಯಾಂಶಗಳು

- ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ
- ತನಿಖಾಧಿಕಾರಿಯ ವಿರುದ್ಧ ಕ್ರಮಕ್ಕೆ ಸ್ನೇಹಮಯಿ ಕೃಷ್ಣ ಮನವಿ

'ಭೀಮ ಹೆಜ್ಜೆ 100ರ ಸಂಭ್ರಮ'

ಬಿಜೆಪಿಯಿಂದ ನಿಪ್ಪಾಣಿಗೆ ರಥಯಾತ್ರೆ

ಪ್ರಜಾವಾಣಿ ವಾರ್ತೆ



ಎನ್‌.ಮಹೇಶ್

ಬೆಂಗಳೂರು: ಡಾ.ಬಿ.ಆರ್.ಅಂಬೇಡ್ಕರ್ ಅವರು ಬೆಳಗಾವಿ ಜಿಲ್ಲೆ ನಿಪ್ಪಾಣಿಗೆ ಭೇಟಿ ಕೊಟ್ಟು 100 ವರ್ಷ ತುಂಬುತ್ತಿರುವ ಹೊತ್ತಿನಲ್ಲಿ ಬೆಂಗಳೂರಿನಿಂದ ನಿಪ್ಪಾಣಿವರೆಗೆ 'ಭೀಮ ಹೆಜ್ಜೆ 100 ರ ಸಂಭ್ರಮ' ಎಂಬ ಜಾಗೃತಿ ಕಾರ್ಯಕ್ರಮ ನಡೆಸಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂಬೇಡ್ಕರ್ ಅವರು 1925ರ ಏ. 10, 11ರಂದು ನಿಪ್ಪಾಣಿಗೆ ಭೇಟಿ ನೀಡಿದ್ದರು' ಎಂದರು.

ಅಂಬೇಡ್ಕರ್ ಅವರು ಶೋಷಿತ ವರ್ಗಗಳನ್ನು ಸಂಘಟಿಸಿ, ಅವರನ್ನು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಶೋಷಣೆಗಳಿಂದ ಮುಕ್ತಗೊಳಿಸಲು ಮೊದಲ ಬಾರಿಗೆ ಸಂಘಟಿತ ಪ್ರಯತ್ನ ಮಾಡಿದ್ದರು. ಅದು ಬಹಿಷ್ಕೃತ ಹಿತಕಾರಿಣಿ ಸಭಾ ಎಂಬುದಾಗಿತ್ತು. ಅದರ ಎರಡನೇ ಸಮಾವೇಶ ನಿಪ್ಪಾಣಿಯಲ್ಲಿ ನಡೆಯಿತು. ಅಂಬೇಡ್ಕರ್ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು ಎಂದರು.

'ವಿಧಾನಸೌಧ ಎದುರಿನ ಅಂಬೇಡ್ಕರ್ ಪ್ರತಿಮೆ ಆವರಣದಿಂದ ರಥಯಾತ್ರೆ ಆರಂಭಿಸಿ ಅದೇ ದಿನ ಸಂಜೆ ಚಿತ್ರದುರ್ಗ ತಲುಪುತ್ತೇವೆ. 12ರಂದು ಹುಬ್ಬಳ್ಳಿ ಮತ್ತು ಧಾರವಾಡ, 13ರ ಸಂಜೆ ಬೆಳಗಾವಿ ಮತ್ತು 14ರಂದು ಬಾಬಾಸಾಹೇಬರ ಜಯಂತಿಯಲ್ಲಿ ತೊಡಗಿಸಿಕೊಳ್ಳುತ್ತೇವೆ. ಇದೇ 15ರಂದು ನಿಪ್ಪಾಣಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ' ಎಂದು ಅವರು ತಿಳಿಸಿದರು.

'1924ರಲ್ಲಿ ಮಹಾತ್ಮಗಾಂಧೀಜಿ ಅವರು ಬೆಳಗಾವಿಯಲ್ಲಿ ಎಐಸಿಸಿ ಅಧಿವೇಶನ ಮಾಡಿದ್ದಾರೆಂದು ಹೇಳಿ ಕಾಂಗ್ರೆಸ್ ಸರ್ಕಾರ 100ನೇ ವರ್ಷದ ನೆನಪಿನಲ್ಲಿ ಅಧಿವೇಶನ ಮಾಡಿತ್ತು. ಶಾಸಕಿ ಶಶಿಕಲಾ ಜೊಲ್ಲೆ ಅವರು ಅಂಬೇಡ್ಕರ್ ನಿಪ್ಪಾಣಿಗೆ ಬಂದು 100 ವರ್ಷ ಆಗಿದೆ. ಅದನ್ನೂ ಆಚರಿಸಿ ಎಂದು ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಸಲಹೆ ನೀಡಿದ್ದರು. ಆದರೆ, ಸರ್ಕಾರ ಆ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ' ಎಂದು ಮಹೇಶ್ ದೂರಿದರು.

---

15 ಸಾಧಕರಿಗೆ 'ಅಂಬೇಡ್ಕರ್ ಪ್ರಶಸ್ತಿ'

ಬೆಂಗಳೂರು: ಡಾ. ಬಿ.ಆರ್. ಅಂಬೇಡ್ಕರ್ ಸ್ಮರಣಾರ್ಥ ಪ್ರತಿ ವರ್ಷ (2023, 2024 ಮತ್ತು 2025) ನೀಡುವ 'ಅಂಬೇಡ್ಕರ್ ಪ್ರಶಸ್ತಿ'ಗೆ ಒಟ್ಟು 15 ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಯು ತಲಾ ₹5 ಲಕ್ಷ ನಗದು, 20 ಗ್ರಾಂ ಚಿನ್ನದ ಪದಕ ಮತ್ತು ಫಲಕವನ್ನು ಹೊಂದಿದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಇದೇ 14ರಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆಯಲಿರುವ ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಪ್ರಶಸ್ತಿ ಪುರಸ್ಕೃತರು: 2023ನೇ ಸಾಲು– ಹರಿಹರಾನಂದ ಸ್ವಾಮಿ, ಮೈಸೂರು (ಸಮಾಜಸೇವೆ), ಇಂದೂಧರ ಹೊನ್ನಾಪುರ, ಬೆಂಗಳೂರು (ಪತ್ರಿಕೋದ್ಯಮ), ರುದ್ರಪ್ಪ ಹನಗವಾಡಿ, ದಾವಣಗೆರೆ (ಆಡಳಿತ), ಸೀತವ್ವ ಜೋಡಟ್ಟಿ, ಬೆಳಗಾವಿ (ದೇವದಾಸಿ ವಿಮೋಚನೆ), ಕೆ.ಪುಂಡಲೀಕರಾವ್ ಶೆಟ್ಟಿಬಾ, ಬೀದರ್ (ಸಮಾಜಸೇವೆ/ರಾಜಕೀಯ).

2024ನೇ ಸಾಲು– ಶ್ರೀಧರ ಕಲಿವೀರ, ಬೆಂಗಳೂರು (ಹೋರಾಟ), ಮಲ್ಲಾಜಮ್ಮ, ಮಂಡ್ಯ (ಸಮಾಜಸೇವೆ/ರಾಜಕೀಯ), ರಾಮದೇವ ರಾಕೆ, ಬೆಂಗಳೂರು (ಪತ್ರಿಕೋದ್ಯಮ), ವೈ.ಬಿ. ಹಿಮ್ಮಡಿ, ಬೆಳಗಾವಿ (ಸಾಹಿತ್ಯ/ಸಮಾಜಸೇವೆ), ಲಕ್ಷ್ಮೀಪತಿ ಕೋಲಾರ, ಕೋಲಾರ (ಸಾಹಿತ್ಯ/ ಸಂಘಟನೆ).

2025ನೇ ಸಾಲು– ದತ್ತಾತ್ರೇಯ ಇಕ್ಕಳಗಿ, ಕಲಬುರಗಿ (ಪ್ರಕಾಶನ), ಮಾವಳ್ಳಿ ಶಂಕರ್, ಬೆಂಗಳೂರು (ಹೋರಾಟ), ಎಫ್.ಎಚ್. ಜಕ್ಕಪ್ಪನವರ್, ಧಾರವಾಡ (ಹೋರಾಟ), ಹೊನ್ನೂರು ಗೌರಮ್ಮ, ಚಾಮರಾಜನಗರ (ಜನಪದ ಕಲೆ). ಈರಪ್ಪ, ಹಾಸನ (ದಲಿತ ಹೋರಾಟ).

ಸಂಕ್ಷಿಪ್ತ ಸುದ್ದಿ

ನ್ಯಾ. ಡಿಕುನ್ಹ ಆಯೋಗದ ಅವಧಿ ವಿಸ್ತರಣೆ

ಬೆಂಗಳೂರು: ಕೋವಿಡ್ ಹಗರಣದ ತನಿಖೆ ಸಂಬಂಧ ರಚಿಸಲಾಗಿದ್ದ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ನೇತೃತ್ವದ ಆಯೋಗದ ಅವಧಿಯನ್ನು ಜುಲೈ 31 ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಮೃತಪಟ್ಟವರ ಪ್ರಕರಣಗಳನ್ನು ಪರಿಶೀಲಿಸಲಿದೆ. ಅದಕ್ಕಾಗಿ ಆಯೋಗದ ಅವಧಿಯನ್ನು ವಿಸ್ತರಿಸಲಾಗಿದೆ. ಆಯೋಗವು ಸೆಪ್ಟೆಂಬರ್ ಹಾಗೂ ಇದೇ ತಿಂಗಳಿನಲ್ಲಿ ಎರಡು ಮಧ್ಯಂತರ ವರದಿಗಳನ್ನು ಸಲ್ಲಿಸಿತ್ತು.

ಸರ್ಕಾರದಿಂದಲೇ 'ಬುದ್ಧ ಜಯಂತಿ'



ಬೆಂಗಳೂರು: ಪ್ರತಿ ವರ್ಷ ಬುದ್ಧ ಪೌರ್ಣಿಮೆಯಂದು ರಾಜ್ಯದಾದ್ಯಂತ ಬುದ್ಧ ಜಯಂತಿ ಆಚರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಧರಿಸಿದೆ.

ಈ ಜಯಂತಿ ಆಚರಿಸಲು ತಗಲುವ ವೆಚ್ಚವನ್ನು ಮಹಾಪುರುಷರ ಜಯಂತಿಗಳ ಆಚರಣೆಗೆ 2025–26ನೇ ಸಾಲಿನಲ್ಲಿ ಒದಗಿಸಿದ ಅನುದಾನದಲ್ಲಿ ಭರಿಸಬೇಕು ಎಂದು ಇಲಾಖೆ ಆದೇಶದಲ್ಲಿ ತಿಳಿಸಿದೆ.

ಮಹಾವೀರ, ಕನಕದಾಸ ಸೇರಿದಂತೆ ಈಗಾಗಲೇ 32 ಮಹಾಪುರುಷರ ಜಯಂತಿಗಳನ್ನು ಇಲಾಖೆಯ ವತಿಯಿಂದ ಆಚರಿಸಲಾಗುತ್ತಿದೆ. ಭಗವಾನ್ ಬುದ್ಧರ ಜಯಂತಿಯನ್ನೂ ಇಲಾಖೆಯ ವತಿಯಿಂದಲೇ ಆಚರಿಸಲು ಇಲಾಖೆಯ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ ಕೆ.ಜಿ. ಜಗದೀಶ ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಂ.ಎಸ್. ಶ್ರೀಕರ್ ಅವರನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರಾಗಿ ನಿಯೋಜಿಸಲಾಗಿದೆ.

ಮಳವಳ್ಳಿ: ವಸತಿಶಾಲೆಯ ವಿಷಾಹಾರ ಸೇವನೆ ಪ್ರಕರಣ

ಮೇಘಾಲಯ ಮಕ್ಕಳ ಸುರಕ್ಷತೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಟಿ.ಕಾಗೇಪುರದ ಗೋಕುಲ ವಸತಿ ಶಾಲೆಯಲ್ಲಿ ಕಳೆದ ಮಾರ್ಚ್ 16ರಂದು ನಡೆದ ವಿಷಾಹಾರ ಸೇವನೆ ಪ್ರಕರಣದ ಬಳಿಕ ಮಂಡ್ಯದ ಬಾಲಮಂದಿರದ ಸುಪರ್ದಿಯಲ್ಲಿರುವ ಮೇಘಾಲಯದ 22 ಮಕ್ಕಳನ್ನು ವಿಮಾನ ಪ್ರಯಾಣದ ಮೂಲಕ ಸುರಕ್ಷಿತವಾಗಿ ಅವರ ಊರುಗಳಿಗೆ ಕಳುಹಿಸಿ ಪೋಷಕರಿಗೆ ಒಪ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಮೇಘಾಲಯದ ವಯ್ಲಾಡ್ ನಾಂಗ್ಟುಡು ಸೇರಿದಂತೆ ಮಕ್ಕಳ ಪೋಷಕರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಸದ್ಯ 22 ಮಕ್ಕಳು ಸರ್ಕಾರಿ ಬಾಲಮಂದಿರದ ಸುಪರ್ದಿಯಲ್ಲಿದ್ದಾರೆ. ಮಕ್ಕಳ ಕಲ್ಯಾಣ ಅಧಿಕಾರಿ (ಸಿಡಬ್ಲ್ಯುಒ) ಇವರೆಲ್ಲರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾರೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಮಕ್ಕಳ ಸುರಕ್ಷತೆ ಹಾಗೂ ಅವರ ಹಿತದೃಷ್ಟಿಯಿಂದ ವಿಮಾನದ ಮೂಲಕ ಅವರ ಊರುಗಳಿಗೆ ಕಳುಹಿಸಿ ಪೋಷಕರಿಗೆ ಒಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿಮಾನ ಯಾನಕ್ಕೆ ತಗಲುವ ವೆಚ್ಚವನ್ನು ಬಾಲನ್ಯಾಯ ನಿಧಿಯಿಂದ ಬಿಡುಗಡೆ ಮಾಡುವಂತೆ ಬಾಲನ್ಯಾಯ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ವಿವರಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, '22 ಮಕ್ಕಳು, ಮಕ್ಕಳ ಕಲ್ಯಾಣ ಅಧಿಕಾರಿ ಹಾಗೂ ಇತರರ ವಿಮಾನ ಪ್ರಯಾಣಕ್ಕೆ ತಗಲುವ ವೆಚ್ಚವನ್ನು ಬಾಲನ್ಯಾಯ ಮಂಡಳಿ ತಕ್ಷಣವೇ ಬಿಡುಗಡೆ ಮಾಡಬೇಕು. ಮಕ್ಕಳನ್ನು ಸುರಕ್ಷಿತವಾಗಿ ಒಪ್ಪಿಸಿದ ಕುರಿತಂತೆ ಕರ್ನಾಟಕದ ಮಕ್ಕಳ ಕಲ್ಯಾಣ ಸಮಿತಿಯು ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ರನ್ಯಾ ರಾವ್ ಜಾಮೀನು ಅರ್ಜಿ ಡಿಆರ್‌ಐಗೆ ಹೈಕೋರ್ಟ್ ನೋಟಿಸ್



ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಆರೋಪಿ ನಟಿ ಹರ್ಷವರ್ಧಿನಿ ಅಲಿಯಾಸ್ ರನ್ಯಾ ರಾವ್ ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕೆ (ಡಿಆರ್‌ಐ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹರ್ಷವರ್ಧಿನಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ರನ್ಯಾ ಪರ ಪದಾಂಕಿತ ಹಿರಿಯ ವಕೀಲ ಕಿರಣ್ ಜವಳಿ ಹಾಗೂ ಡಿಆರ್‌ಐ ಪರ ಮಧು ಎನ್. ರಾವ್ ಹಾಜರಿದ್ದರು. ಆಕ್ಷೇಪಣೆ ಸಲ್ಲಿಸುವಂತೆ ಡಿಆರ್‌ಐಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ರನ್ಯಾ ರಾವ್ ವಿರುದ್ಧ ಸೀಮಾ ಶುಲ್ಕ ಕಾಯ್ದೆ–1962ರ ಕಲಂ 135 (1)(ಎ) ಮತ್ತು 135(1)(ಬಿ) ಅಡಿ ಪ್ರಕರಣ ದಾಖಲಿಸಲಾಗಿದೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಗಳು ಮಾರ್ಚ್ 14 ಮತ್ತು 27ರಂದು ಕ್ರಮವಾಗಿ ರನ್ಯಾ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿವೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜೇನಿಯರರು, ಲೋಕೋಪಯೋಗಿ,ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–6/.ಟೆಂಡರ್.ಅಧಿಸೂಚನೆ/2025–26/219 ದಿನಾಂಕ: 09–04–2025

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೇನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ 8443 ಯೋಜನೆಯಡಿಯಲ್ಲಿನ 4 ಕಾಮಗಾರಿಗಳಿಗೆ ಟೆಂಡರ ಅಹ್ವಾನಿಸಲಾಗಿದೆ. ಇಂಡೆಂಟ ಸಂಖ್ಯೆ 21097, 20980, 21096 & ಎಸ್.ಸಿ. ಮೀಸಲು: 20978, 2) ಕಾಮಗಾರಿ ಅಂದಾಜು ಮೊತ್ತ: **ರೂ. 71.50 ದಿಂದ 139.70 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೆ ದರ್ಜೆ ಹಾಗೂ ಮೇಲ್ಪಟ್ಟು ದರ್ಜೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ: **ರೂ. 77,500.00 ದಿಂದ 2,01,000.00,** 5) ಪ್ರೀ ಬಿಡ್ ಮಿಟಿಂಗ: **21.04.2025 (11.00 ಗಂಟೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **22.04.2025 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **23.04.2025 (16.00 ಗಂಟೆ),** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **24.04.2025 (16.30 ಗಂಟೆ),** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.04.2025 (16.30 ಗಂಟೆ),** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೇನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ : WWW.kppp.Karnatak.gov.in

ಸಹಿ/– ಕಾರ್ಯನಿರ್ವಾಹಕ ಇಂಜೇನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/27/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು–560009

ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ ಸಿಎಂಟಿ/ಟಿಎನ್‌ಡಿ/ 2025–26 ದಿನಾಂಕ: 08.04.2025

ಟೆಂಡರ್ ಪ್ರಕಟಣೆ

ಕರ್ನಾಟಕದಲ್ಲಿ ಇರುವ ಕೆಆರ್‌ಐಡಿಎಲ್‌ನ ಉಪ ವಿಭಾಗಗಳಿಗೆ ಸಿಮೆಂಟ್‌ನ ಸರಬರಾಜಿಗಾಗಿ ಕಳೆದ 3 ಹಣಕಾಸಿನ ವರ್ಷಗಳಲ್ಲಿ ಕೆಳಗಿನ ತಃಖ್ತೆಯಲ್ಲಿ ತಿಳಿಸಿರುವಂತೆ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ತಯಾರಕರು ಇ–ಆಡಳಿತ ಕಾರ್ಯಾಲಯದ ಹೊಸ ವೆಬ್‌ಸೈಟ್: **www.kppp.karnataka.gov.in** ಮೂಲಕ ಮಾತ್ರ ವಿವರಗಳನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಸಂಪರ್ಕ ಸಂ: 080–46010000/080–68948777

ಕ್ರ. ಸಂ.	ಟೆಂಡರ್‌ನ ವಿವರ	ಟೆಂಡರಿಗಿಟ್ಟಿರುವ ಪ್ರಮಾಣ ಚೀಲಗಳಲ್ಲಿ	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ.ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ.ಲಕ್ಷಗಳಲ್ಲಿ
1	**ಟೆಂಡರ್ ಭಾಗ–I,** ಬೆಂಗಳೂರು ಮತ್ತು ಬಿಬಿಎಂಪಿ ವಲಯ	225000	767.20	11.51	2455.00
2	**ಟೆಂಡರ್ ಭಾಗ–II,** ಕೇಂದ್ರ (ಚಿತ್ರದುರ್ಗ) ವಲಯ	380000	1292.70	15.00	4136.00
3	**ಟೆಂಡರ್ ಭಾಗ–III,** ಮೈಸೂರು ವಲಯ	370000	1276.55	15.00	4085.00
4	**ಟೆಂಡರ್ ಭಾಗ–IV,** ಬೆಳಗಾವಿ ವಲಯ	285000	879.60	13.19	2815.00
5	**ಟೆಂಡರ್ ಭಾಗ–V,** ಕಲಬುರಗಿ ವಲಯ	240000	743.78	11.16	2380.00

ಸರಬರಾಜಿನ ಅವಧಿ: ಸರಬರಾಜಿನ ಆದೇಶ ನೀಡಿದ ದಿನಾಂಕದಿಂದ ಮೂರು ತಿಂಗಳು. ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **07.05.2025** ರಂದು **14.00** ಗಂಟೆವರೆಗೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **07.05.2025** ರಂದು **15.00** ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **09.05.2025** ರಂದು **15.00** ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.05.2025** ರಂದು **15.00** ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಬೆಂಗಳೂರು)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್,
ದೂರವಾಣಿ: 080–28015604, ಇ–ಮೇಲ್: ddworkskridl@gmail.com
ಮಾಹಿತಿಗಾಗಿ ಇಲ್ಲಿಗೆ ಲಾಗ್‌ಆನ್ ಆಗಿ: www.kridl.org.in

ಸಹಿ/- ಮುಖ್ಯ ಅಭಿಯಂತರರು (ಬೆಂಗಳೂರು)

ಕರ್ನಾಟಕ ಸರ್ಕಾರ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ
ಪಿಹೆಚ್‌ಐ ಕಾಂಪೌಂಡ್, ಶೇಷಾದ್ರಿ ರಸ್ತೆ, ಬೆಂಗಳೂರು–560001
ಇ–ಮೇಲ್: cfskarnataka@gmail.com

No: FSSD/WP/CB/16/2025-WPA Date: 09.04.2025

ಟೆಂಡರ್ ಪ್ರಕಟಣೆ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು NABL ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ, ಪ್ಯಾಕೇಜ್ಡ್ ಕುಡಿಯುವ ನೀರಿನ ಮಾದರಿಯಲ್ಲಿ ಮೈಕ್ರೋಬಯೋಲಜಿ ಪ್ಯಾರಾಮೀಟರ್ ವಿಶ್ಲೇಷಣೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಸ್ಪರ್ಧಾತ್ಮಕ ದರಗಳಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸುತ್ತದೆ. ಆಸಕ್ತ NABL ಮಾನ್ಯತೆ ಪಡೆದ ಪ್ರಯೋಗಾಲಯಗಳು ತಮ್ಮ ಬಿಡ್‌ಗಳನ್ನು ಸಲ್ಲಿಸುವ ಮೂಲಕ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗಾಗಿ, https://kppp.karnataka.gov.in ಗೆ ಭೇಟಿ ನೀಡಿ.

ಸಹಿ/–
ಉಪ ಆಯುಕ್ತರು (ಆಡಳಿತ)
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು.

DIPR/CP/158/Zen/2025-26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಹೊಸನಗರ ಅರಣ್ಯ ವಿಭಾಗ, ಹೊಸನಗರ

ಜಿಲ್ಲೆ: ಶಿವಮೊಗ್ಗ ಇ.ಮೇಲ್ ಸಂದೇಶ ಐಡಿನಂ.acfhnr@gmail.com

ಸಂಖ್ಯೆ:ACF/HNG/DDF, ROOT STOCK/CR-1/2025-26 ದಿನಾಂಕ: 08.04.2025

ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ)

2025–26ನೇ ಸಾಲಿನಲ್ಲಿ ಸಾಗರ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ DDF & DDF ROOT STOCK ಯೋಜನೆಯಡಿ ಅಂದಾಜು ಮೊತ್ತ:79.03 ಲಕ್ಷ ರೂ ಗಳಿಗೆ 12 ನೆಡುತೋಪುಗಳ ನಿರ್ಮಾಣ & ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲು, ಕನಿಷ್ಟ 05 (ಐದು) ವರ್ಷಗಳ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:17.04.2025ರ ಸಂಜೆ 4–30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ವಿವರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ

ವಾ.ಸಾ.ಸಂ.ಇ/ಶಿಎಸ್‌ಎಂಓಎ/ಶಿ/25–26/44/04/42

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/ಸಿಬ್ಬಂದಿ/ಚಾಅ/2025–26 ದಿನಾಂಕ: 09–04–2025

ದರಪಟ್ಟಿ ಆಹ್ವಾನ ಪ್ರಕಟಣೆ

ನೆಲಮಂಗಲ ಯೋಜನಾ ಪ್ರಾಧಿಕಾರದ ಆರ್ಥಿಕ ವ್ಯವಹಾರಗಳಾದ ಆಯಾ ವರ್ಷದ (2025–26) ಆರ್ಥಿಕ ಲೆಕ್ಕ ಪತ್ರಗಳನ್ನು ಗಣಕೀಕರಣ, ವಾರ್ಷಿಕ ಲೆಕ್ಕ ಪತ್ರಗಳ ತಯಾರಿಕೆ, ತ್ರೈಮಾಸಿಕ ಟಿ.ಡಿ.ಎಸ್ ರಿಟರ್ನ್ಸ್, ಇ–ಟಿಡಿಎಸ್ ಅನ್ನು ಆದಾಯ ತೆರಿಗೆ ಇಲಾಖೆ ಫೈಲ್ ಮಾಡುವುದು ಹಾಗೂ ಜಿ.ಎಸ್.ಟಿ ರಿಟರ್ನ್ಸ್ ಮತ್ತು ವಾರ್ಷಿಕ ಲೆಕ್ಕ ಪರಿಶೋಧನೆ ಕೈಗೊಳ್ಳಲು ಮತ್ತು ಬ್ಯಾಲೆನ್ಸ್‌ಶೀಟ್‌ನ್ನು ತಯಾರಿಸಿ ಸರ್ಕಾರದ ವತಿಯಿಂದ ಕೈಗೊಳ್ಳುವ ಲೆಕ್ಕ ಪರಿಶೋದನೆಗಾಗಿ ಲೆಕ್ಕಪತ್ರ ಮತ್ತು ಬ್ಯಾಲೆನ್ಸ್ ಶೀಟ್ ಸದರಿ ಕಾರ್ಯಗಳನ್ನು ನಿರ್ವಹಿಸಲು ಪ್ರಾಧಿಕಾರಕ್ಕೆ ಅವಶ್ಯಕವಾಗಿರುತ್ತದೆ. ಅವುಗಳನ್ನು ಅನುಸರಿಸಲು ಮತ್ತು ಪ್ರಾಧಿಕಾರದ ದಿನ ನಿತ್ಯದ ಖರ್ಚು ವೆಚ್ಚದ ವಿವರಗಳನ್ನು ತಯಾರಿಸಲು, ಇನ್ನಿತ್ತರ ಹಣಕಾಸಿನ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಒಬ್ಬ ಲೆಕ್ಕ ಸಹಾಯಕರನ್ನು ಸಹ ಈ ಕಛೇರಿಗೆ ದಿನ ನಿತ್ಯ ಹಾಜರಾಗಿ ಕೆಲಸ ನಿರ್ವಹಿಸಲು ಒದಗಿಸಬೇಕಾಗುತ್ತದೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 07 (ಏಳು) ದಿವಸಗಳೊಳಗಾಗಿ ಈ ಕೆಳಕಂಡ ಪ್ರಾಧಿಕಾರದ ಷರತ್ತುಗಳನ್ನು ಒಳಗೊಂಡಂತೆ ತಮ್ಮ ದರಪಟ್ಟಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲು ತಿಳಿಸಲಾಗಿದೆ.

1) ಸರ್ವಿಸ್ ಟ್ಯಾಕ್ಸ್ ರಿಜಿಸ್ಟ್ರೇಷನ್ ದಾಖಲಾತಿ.
2) ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3) ಸದರಿ ವೃತ್ತಿಯಲ್ಲಿನ ಅನುಭವ ಮತ್ತು ಸರ್ಕಾರದ ವಿವಿಧ ಇಲಾಖೆಗಳಿಗೆ ಸೇವೆಯನ್ನು ನೀಡಿರುವ ಬಗ್ಗೆ ದಾಖಲೆಗಳು.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/157/ಅಡ್ವರ್ಟೋರ್/2025–26

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
KSHIP
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಪಿಡಬ್ಲ್ಯೂಡಿ ಅನೆಕ್ಸ್ ಕಟ್ಟಡ, ಯೋಜನಾ ಅನುಷ್ಟಾನ ಘಟಕ, 1ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು, ಕರ್ನಾಟಕ – 560 001

ಸಂ: PIU/KSHIP-IV/IFB/2025-26/08 ದಿನಾಂಕ: 09-04-2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

1. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯು (KSHIP) "KSHIP-IV ಪ್ಯಾಕೇಜ್‌ಗಳ ಅಡಿಯಲ್ಲಿ ಕೆಳಕಂಡ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳಿಗೆ ವಿಸ್ತ್ರತಾ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸಮಾಲೋಚಕರ ಸೇವೆಗಳನ್ನು ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸಲು" ಬಿಡ್‌ಗಳನ್ನು ಆಹ್ವಾನಿಸಿದೆ. ಗುಣಮಟ್ಟ & ವೆಚ್ಚ ಆಧಾರಿತ ಆಯ್ಕೆಯ (ಕ್ಯೂಸಿಬಿಎಸ್) ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಪ್ಯಾಕೇಜ್ ಸಂಖ್ಯೆ.	ವಿವರಗಳು	ಇಎಂಡಿ (ರೂ ಲಕ್ಷಗಳಲ್ಲಿ)
ಪ್ಯಾಕೇಜ್ – 1	266 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ
ಪ್ಯಾಕೇಜ್ – 2	253 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ
ಪ್ಯಾಕೇಜ್ – 3	210 ಕಿಮೀಗಳ ಉದ್ದದ 2 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ
ಪ್ಯಾಕೇಜ್ – 4	186 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ

2. ಸಮಾಲೋಚಕರು ಈ ಪ್ರಸ್ತಾವನೆ ಭಾಗವಾಗಿ ಇಎಂಡಿ ರೂ.10,00,000/– (ರೂಪಾಯಿ ಹತ್ತು ಲಕ್ಷಗಳು ಮಾತ್ರ) ವನ್ನು ಪಾವತಿಸಬೇಕು. (1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ ಮತ್ತು 9 ಲಕ್ಷ ಬಿಜಿ ರೂಪದಲ್ಲಿರಬೇಕು).
3. ಬಿಡ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಬಿಡ್‌ಗಳನ್ನು **12.05.2025 ರಂದು (ಭಾರತೀಯ ಕಾಲಮಾನ 16:30 ಗಂಟೆಯವರೆಗೆ)** ಅಥವಾ ಮುಂಚಿತವಾಗಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು.
5. ಬಿಡ್ ಪೂರ್ವ ವಿಚಾರಣೆಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ / ಇ–ಮೇಲ್: piukship@gmail.com ಮೂಲಕ ಮಾತ್ರ **22.04.2025, 11.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು.
6. ಬಿಡ್ ಪೂರ್ವ ಸಭೆಯನ್ನು KSHIP, ಪಿಡಬ್ಲ್ಯೂಡಿ ಅನೆಕ್ಸ್ ಕಟ್ಟಡ, ಯೋಜನಾ ಅನುಷ್ಠಾನ ಘಟಕ, 1ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು, ಕರ್ನಾಟಕ – 560 001, ಕರ್ನಾಟಕ KSHIP ಕಛೇರಿಯಲ್ಲಿ **24.04.2025 ರಂದು, 15.00 ಗಂಟೆಗೆ** ಏರ್ಪಡಿಸಲಾಗಿದೆ.
7. ತಾಂತ್ರಿಕ ಬಿಡ್‌ಗಳನ್ನು **14.05.2025 ರಂದು 15:00 ಗಂಟೆಗೆ** ತೆರೆಯಲಾಗುವುದು.
8. ಬಿಡ್ ದಾಖಲಾತಿಗಳಲ್ಲಿ ತಿದ್ದುಪಡಿ/ಸ್ಪಷ್ಟತೆ/ವೇಳಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು ಎಂದು ಗಮನಿಸತಕ್ಕದ್ದು.
9. ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಿದ ಬಿಡ್‌ಗಳನ್ನು ಪರಿಗಣಿಸಲಾಗುವುದಿಲ್ಲ.
10. ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ.

ಸಹಿ/– ಯೋಜನಾ ನಿರ್ದೇಶಕರು,
ಕ.ರಾ.ಹೆ.ಅ.ಯೋ.,
ಬೆಂಗಳೂರು.

ವಾಸಾಸಂಇ/ವಾಪ್ರ/169/ಆಕಾರ್/2025–26



ಸುಭಾಷಿತ

ನಾವು ಚಲನಶೀಲರಾಗಿ ಇರಲು ನಮ್ಮ ಜೀವನವು ಏರಿಳಿತಗಳನ್ನು ಕಾಣುವುದು ಬಹಳ ಮುಖ್ಯ. ಏಕೆಂದರೆ, ಇ.ಸಿ.ಜಿ.ಯಲ್ಲಿ ಕೂಡ ನೇರವಾದ ಗೆರೆಯು ನಾವು ಬದುಕಿಲ್ಲ ಎಂಬುದನ್ನು ಸೂಚಿಸುತ್ತದೆ. **-ರತನ್ ಟಾಟಾ**

ಮಸೂದೆಗಳಿಗೆ ಅಂಕಿತ: ಒಕ್ಕೂಟ ತತ್ವ ಮರುಸ್ಥಾಪಿಸಿದ 'ಸುಪ್ರೀಂ' ತೀರ್ಪು

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ವಿಧಾನಸಭೆ ಅಂಗೀಕರಿಸಿದ 10 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವುದಕ್ಕಾಗಿ ತಡೆಹಿಡಿದಿರುವ ಕ್ರಮವು ಕಾನೂನುಬಾಹಿರ ಮತ್ತು ಲೋಪದಿಂದ ಕೂಡಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಒಕ್ಕೂಟ ವ್ಯವಸ್ಥೆಯ ಮೌಲ್ಯ ಮತ್ತು ಸಂವಿಧಾನವೇ ಸರ್ವೋಚ್ಚ ಎಂಬುದನ್ನು ಎತ್ತಿಹಿಡಿದಿರುವ ಈ ತೀರ್ಪು ಒಂದು ಮೈಲಿಗಲ್ಲು. ತಾವು ಕಾನೂನು ಮತ್ತು ರಾಜ್ಯ ಸರ್ಕಾರಕ್ಕಿಂತ ಮಿಗಿಲು ಎಂಬ ರೀತಿಯಲ್ಲಿ ರಾಜ್ಯಪಾಲರು ಮಾತನಾಡಿದ್ದಾರೆ ಮತ್ತು ನಡೆದುಕೊಂಡಿದ್ದಾರೆ; ಇದು ರಾಜ್ಯಪಾಲ ಹುದ್ದೆಗೆ ತಕ್ಕದ್ದಲ್ಲದ ನಡವಳಿಕೆ ಎಂಬುದಕ್ಕೆ ಸುಪ್ರೀಂ ಕೋರ್ಟ್‌ನ ಮುದ್ರೆ ಬಿದ್ದಂತಾಗಿದೆ. ರವಿ ಅವರನ್ನು ಮತ್ತು ಅಸಾಂವಿಧಾನಿಕ ಹಾಗೂ ತೊಡಕು ಉಂಟುಮಾಡುವ ರೀತಿಯಲ್ಲಿ ನಡೆದುಕೊಂಡ ಇತರ ಕೆಲವು ರಾಜ್ಯಗಳ ರಾಜ್ಯಪಾಲರನ್ನು ಬೆಂಬಲಿಸಿದ ಕೇಂದ್ರ ಗೃಹ ಸಚಿವಾಲಯಕ್ಕೂ ಇದು ಅನ್ವಯವಾಗುತ್ತದೆ. ಸಂವಿಧಾನದ 142ನೇ ವಿಧಿ ಅಡಿಯಲ್ಲಿ ಇರುವ ವಿಶೇಷಾಧಿಕಾರ ಬಳಸಿರುವ ನ್ಯಾಯಾಲಯವು ಮಸೂದೆಗಳಿಗೆ ಸಂಬಂಧಿಸಿ ರವಿ ಅವರು ಕೈಗೊಂಡ ಎಲ್ಲ ನಿರ್ಧಾರಗಳನ್ನು ಬದಿಗೊತ್ತಿದೆ. ರಾಜ್ಯಪಾಲರಿಗೆ ಮರು ಸಲ್ಲಿಕೆಯಾದ ದಿನಾಂಕದಂದೇ ಈ 10 ಮಸೂದೆಗಳು ಅಂಗೀಕಾರವಾಗಿವೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು ಹೇಳಿದೆ. ಈ ಮೂಲಕ, ಸಂವಿಧಾನದ ಗಂಭೀರ ಉಲ್ಲಂಘನೆಯನ್ನು ಸರಿಪಡಿಸಿದೆ. ಅಸಾಧಾರಣ ಸನ್ನಿವೇಶಗಳಲ್ಲಿ ಅಸಾಧಾರಣವಾದ ಪರಿಹಾರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗುತ್ತದೆ.



ನ್ಯಾಯಾಲಯವು ಹೇಳಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಎಲ್ಲ ರಾಜ್ಯಪಾಲರು ಅರ್ಥ ಮಾಡಿಕೊಳ್ಳಬೇಕು

ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕಲು ಸಮಯದ ಗಡುವನ್ನು ನಿಗದಿ ಮಾಡುವ ಉತ್ತಮ ಕೆಲಸವನ್ನೂ ನ್ಯಾಯಾಲಯ ಮಾಡಿದೆ. ಮಸೂದೆಗೆ ಅಂಕಿತ ಹಾಕುವುದನ್ನು ತಡೆಹಿಡಿದು, ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವುದಿದ್ದರೆ ಅದಕ್ಕೂ ಒಂದು ತಿಂಗಳ ಗಡುವು ನಿಗದಿ ಮಾಡಲಾಗಿದೆ. ಮಸೂದೆಗೆ ಅಂಕಿತ ಹಾಕದಿರಲು ರಾಜ್ಯಪಾಲರು ತೀರ್ಮಾನಿಸಿದರೆ ಅದನ್ನು ಮೂರು ತಿಂಗಳೊಳಗೆ ಸದನಕ್ಕೆ ಮರಳಿಸಬೇಕು ಎಂದು ಕೋರ್ಟ್ ಹೇಳಿದೆ. ರಾಜ್ಯ ವಿಧಾನಸಭೆಯು ಮರುಪರಿಶೀಲನೆ ಬಳಿಕ ಎರಡನೆಯ ಬಾರಿಗೆ ರಾಜ್ಯಪಾಲರಿಗೆ ಮಸೂದೆಯನ್ನು ಕಳುಹಿಸಿಕೊಟ್ಟರೆ, ಅದಕ್ಕೆ ಒಂದು ತಿಂಗಳೊಳಗೆ ಅಂಕಿತ ಹಾಕಬೇಕು. ಈ ಗಡುವಿಗೆ ಬದ್ಧರಾಗದೇ ಇದ್ದರೆ ನ್ಯಾಯಾಲಯದ ಪರಿಶೀಲನೆಗೆ ಒಳಪಡಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ. ಉನ್ನತ ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯು ವಾಡಿಕೆಯಂತೆ ಮಾಡಬೇಕಾದ ಕೆಲಸಕ್ಕೆ ಕೂಡ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕಾಗಿ ಬಂದದ್ದು ಮತ್ತು ಎಚ್ಚರಿಕೆ ಕೊಡಬೇಕಾಗಿ ಬಂದದ್ದು ವಿಷಾದನೀಯ ಸ್ಥಿತಿ. ರವಿ ಮತ್ತು ಇತರ ಕೆಲವು ರಾಜ್ಯಪಾಲರು ಸಂವಿಧಾನದ ಉಲ್ಲಂಘನೆಯನ್ನು ಪದೇ ಪದೇ ಮಾಡಿದ್ದಾರೆ. ರಾಜ್ಯಪಾಲರ ನಡವಳಿಕೆಗೆ ಸಂಬಂಧಿಸಿ ಹಲವು ಆದೇಶಗಳು, ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಕಿವಿಗೆ ಹಾಕಿಕೊಳ್ಳದ ಕಾರಣಕ್ಕೆ ನ್ಯಾಯಾಲಯವು ಕಠಿಣ ನಿರ್ಧಾರವನ್ನು ಕೈಗೊಳ್ಳಬೇಕಾಗಿ ಬಂದಿದೆ.

ಶಾಸನ ರೂಪಿಸುವ ವಿಚಾರದಲ್ಲಿ ಶಾಸನಸಭೆಗೆ ಹೆಚ್ಚಿನ ಅಧಿಕಾರ ಇರುತ್ತದೆಯೇ ವಿನಾ ಕೇಂದ್ರ ಸರ್ಕಾರ ನೇಮಕ ಮಾಡಿದ, ಚುನಾಯಿತರಲ್ಲದ ರಾಜ್ಯಪಾಲರಿಗೆ ಅಲ್ಲ. ಪರೋಕ್ಷ ಪರಮಾಧಿಕಾರ ಅಥವಾ ಸಂಪೂರ್ಣ ಪರಮಾಧಿಕಾರ ಎಂಬುದು ರಾಜ್ಯಪಾಲರಿಗೆ ಇಲ್ಲ ಎಂಬುದನ್ನು ನ್ಯಾಯಾಲಯವು ಹಲವು ಬಾರಿ ಹೇಳಿದೆ. ರಾಜ್ಯಪಾಲರು 'ಸಂಸದೀಯ ಪ್ರಜಾಸತ್ತೆಯ ಸ್ಥಾಪಿತ ನಿಯಮಗಳನ್ನು ಗೌರವಿಸಬೇಕು; ಶಾಸನಗಳ ಮೂಲಕ ವ್ಯಕ್ತವಾಗುವ ಜನರ ಇಚ್ಛೆಯನ್ನು ಗೌರವಿಸಬೇಕು; ಮತ್ತು ಜನರಿಗೆ ಉತ್ತರದಾಯಿಯಾಗಿರುವ ಚುನಾಯಿತ ಸರ್ಕಾರವನ್ನು ಗೌರವಿಸಬೇಕು' ಎಂದು ನ್ಯಾಯಾಲಯವು ಹೇಳಿದೆ. ಕೇಂದ್ರ ಸರ್ಕಾರದ ರಾಜಕೀಯ ಏಜೆಂಟ್ ರೀತಿ ನಡೆದುಕೊಂಡು ಸರ್ಕಾರದ ಅಧಿಕಾರವನ್ನು ಕಸಿದುಕೊಳ್ಳುವ ಅವಕಾಶ ರಾಜ್ಯಪಾಲರಿಗೆ ಇಲ್ಲ. ನ್ಯಾಯಾಲಯವು ಹೇಳಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಎಲ್ಲ ರಾಜ್ಯಪಾಲರು ಅರ್ಥ ಮಾಡಿಕೊಳ್ಳಬೇಕು. ಒಕ್ಕೂಟ ತತ್ವಗಳು ಗಂಭೀರ ಅಪಾಯದಲ್ಲಿದ್ದ ಹೊತ್ತಿನಲ್ಲಿ ಅವುಗಳನ್ನು ರಕ್ಷಿಸುವ ಕೆಲಸವನ್ನು ನ್ಯಾಯಾಲಯವು ಮಾಡಿದೆ. ನ್ಯಾಯಾಲಯವು ಇಷ್ಟೊಂದು ಗಂಭೀರವಾಗಿ ದೋಷ ಹೊರಿಸಿದ ಬಳಿಕವೂ ತಮ್ಮ ಹುದ್ದೆಯಲ್ಲಿ ಮುಂದುವರಿಯಬೇಕೇ ಎಂಬುದರ ಕುರಿತು ರಾಜ್ಯಪಾಲ ರವಿ ಅವರು ಯೋಚಿಸಬೇಕು.

ದಿನದ ಟ್ವೀಟ್

ಇಚ್ಛಾಶಕ್ತಿ ಸಾಲದಾಯಿತೇ?

ಪಿಯುಸಿ ಫಲಿತಾಂಶಕ್ಕೆ ಹಲವರು ಕಲ್ಯಾಣ ಕರ್ನಾಟಕದ ರಾಜಕಾರಣಿಗಳನ್ನು ಮತ್ತು ಮೂಲ ಸೌಕರ್ಯಗಳನ್ನು ಹೊಣೆ ಮಾಡಿ ಜಾರಿಕೊಳ್ಳುತ್ತಿದ್ದಾರೆ ಅನ್ನಿಸುತ್ತದೆ. ಹಾಗೆ ನೋಡಿದರೆ, ಕಾಡಂಚಿನ ಚಾಮರಾಜನಗರ ತೀರಾ ಹಿಂದುಳಿದ ಜಿಲ್ಲೆ 13ನೇ ಸ್ಥಾನ ಪಡೆದುಕೊಂಡಿದೆ. ಅದು ಕೂಡ ಘಟಾನುಘಟಿ ಮಂಡ್ಯ, ಧಾರವಾಡ, ತುಮಕೂರು, ರಾಮನಗರ ಮತ್ತು ದಾವಣಗೆರೆಯನ್ನು ಹಿಂದಿಕ್ಕಿ. ಇಚ್ಛಾಶಕ್ತಿ ಕೂಡಾ ಪ್ರಮುಖ ಪಾತ್ರ ವಹಿಸುತ್ತದೆ ಅನ್ನುವುದು ಸುಳ್ಳಲ್ಲ.

ವಿಲಿಯಂ ಡಿಸೋಜಾ

ಕಿಡಿನುಡಿ

ಲಿಂಗತ್ವ ಅಲ್ಪಸಂಖ್ಯಾತರದು ದೊಡ್ಡ ಮಟ್ಟದ ದಂಧೆ ಆಗಿಹೋಗಿದೆ. ಮದುವೆ, ಗೃಹಪ್ರವೇಶ, ಆರತಕ್ಷತೆ ಏನೇ ಸಮಾರಂಭ ಇರಲಿ ಗುಂಪಾಗಿ ಬರುತ್ತಾರೆ, ಅವರು ಕೇಳಿದಷ್ಟು ಹಣ ಕೊಟ್ಟಿಲ್ಲ ಅಂದರೆ ದೊಡ್ಡ ಗಲಾಟೆ ಮಾಡಿ, ದಾಂದಲೆ ನಡೆಸುತ್ತಾರೆ. ಅಲ್ಲದೆ ಇವರು ಹೋದ ಮೇಲೆ ಇವರೇ ಮತ್ತೊಂದು, ಮಗದೊಂದು ಗುಂಪು ಕಳಿಸಿ ಸಮಸ್ಯೆ ಮಾಡುತ್ತಿರುತ್ತಾರೆ. ಬೆಂಗಳೂರು ನಗರ ಪೊಲೀಸರೇ ಪರಿಹಾರ ತಿಳಿಸಿ!



ಸುರೇಶ್ ಕುಮಾರ್ ಜಿ.ಆರ್.

25 ವರ್ಷಗಳ ಹಿಂದೆ

ಸೋಮವಾರ, 10-4-2000

• ಸೇನಾಡಳಿತದ ದೇಶ ಹೊರಗಿಡಲು ಅಲಿಪ್ತ ಚಳವಳಿಗೆ ಭಾರತ ಆಗ್ರಹ

ಕಾರ್ಟಜೆನ (ಕೊಲಂಬಿಯ), ಏ. 9 (ಪಿಟಿಐ)- ಅಲಿಪ್ತ ರಾಷ್ಟ್ರಗಳ ಚಳವಳಿಯಿಂದ ಸೇನಾ ಆಡಳಿತ ಇರುವ ಪಾಕಿಸ್ತಾನದಂತಹ ರಾಷ್ಟ್ರಗಳ ಸದಸ್ಯತ್ವವನ್ನು ರದ್ದುಗೊಳಿಸಬೇಕು ಎಂದು ಭಾರತ ಇಂದು ಇಲ್ಲಿ ಆರಂಭವಾದ ಎರಡು ದಿನಗಳ 13ನೇ ಅಲಿಪ್ತ ರಾಷ್ಟ್ರಗಳ ಸಚಿವರ ಸಮಾವೇಶದಲ್ಲಿ ಪ್ರತಿಪಾದಿಸಿತು.

ಭಾರತದ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್, 'ಕಾಮನ್‌ವೆಲ್ತ್ ಹಾಗೂ ಆಫ್ರಿಕಾ ರಾಷ್ಟ್ರಗಳ ಒಕ್ಕೂಟಗಳು ಅಕ್ರಮವಾಗಿ ಅಧಿಕಾರ ಸೂತ್ರ ಹಿಡಿದ ರಾಷ್ಟ್ರಗಳ ಸದಸ್ಯತ್ವವನ್ನು ರದ್ದುಗೊಳಿಸಿವೆ. ಅಲಿಪ್ತ ಚಳವಳಿಯೂ ಇದೇ ರೀತಿಯ ನಿರ್ಣಯ ಅಂಗೀಕರಿಸಬೇಕು' ಎಂದು ಒತ್ತಾಯಿಸಿದರು.

• ಕುಸಿದ ಮಾರುಕಟ್ಟೆ: ಹತಾಶ ತಂಬಾಕು ಬೆಳೆಗಾರರು

ಮೈಸೂರು, ಏ. 9- ತಂಬಾಕು ಮಾರುಕಟ್ಟೆ ಕಳೆದ 2 ವರ್ಷಗಳಿಂದ ಕುಸಿದಿದೆ. ಮುಂಬರುವ ವರ್ಷಗಳಲ್ಲಿ ತಂಬಾಕು ಬೆಲೆ ಏರುವ ಸಾಧ್ಯತೆಯೂ ಕಾಣುತ್ತಿಲ್ಲ. ಹೀಗಾಗಿ ರಾಜ್ಯದ ತಂಬಾಕು ಬೆಳೆಗಾರರು ಕಂಗಾಲಾಗಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ತಂಬಾಕು ಕಡಿಮೆ ಬೆಲೆಯಲ್ಲಿ ಸಿಗುವುದು ಹಾಗೂ ಭಾರತದ ತಂಬಾಕಿಗೆ ಬೇಡಿಕೆ ಇಲ್ಲದಿರುವುದು ಬೆಲೆ ಕುಸಿಯಲು ಕಾರಣ. ರೈತರು ಅನಧಿಕೃತವಾಗಿ ಅಪಾರ ಪ್ರಮಾಣದಲ್ಲಿ ತಂಬಾಕು ಬೆಳೆದಿರುವುದೂ ಬೆಲೆ ಕುಸಿಯಲು ಕಾರಣವೆಂದು ತಂಬಾಕು ಮಂಡಳಿ ಹೇಳುತ್ತಿದೆ.

50 ವರ್ಷಗಳ ಹಿಂದೆ

ಗುರುವಾರ, 10-4-1975

• 'ಗೊತ್ತುಗುರಿ ಇಲ್ಲದ ವೆಚ್ಚ'

ಬೆಂಗಳೂರು, ಏ. 9- ನಿರ್ದಿಷ್ಟ ಕಾರ್ಯಕ್ರಮ ಇಲ್ಲದೆ, ಗೊತ್ತುಗುರಿಯಿಲ್ಲದೆ ಪ್ರತಿವರ್ಷ ಲಕ್ಷಾಂತರ ರೂಪಾಯಿ ವೆಚ್ಚ ಮಾಡಬಹುದು ಎನ್ನುವುದನ್ನು ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ತೋರಿಸಿಕೊಟ್ಟಿದೆ.

ಸಾಹಿತ್ಯ ಅಕಾಡೆಮಿ ಪ್ರಾರಂಭವಾಗಿ ಹನ್ನೆರಡು-ಹದಿಮೂರು ವರ್ಷಗಳಾದರೂ ಗಮನಾರ್ಹವಾದ ಯಾವ ಕೆಲಸವನ್ನೂ ಮಾಡಿಲ್ಲ. ಇತರ ಎರಡು ಅಕಾಡೆಮಿಗಳಂತೆಯೇ ಇದು ಕೂಡ ವರ್ಷಕ್ಕೆ ಐದು ಜನರನ್ನು ಸನ್ಮಾನಿಸುವುದರಲ್ಲಿಯೇ ತೃಪ್ತಿ ಪಡೆಯುತ್ತಿದೆ. ಇದರಿಂದಾಗಿ ಸರ್ಕಾರದಿಂದ ವರ್ಷಕ್ಕೆ ಸಿಕ್ಕುತ್ತಿರುವ ಒಂದು ಲಕ್ಷ ಹದಿನೈದು ಸಾವಿರ ರೂಪಾಯಿಗಳನ್ನು ಕೂಡ ಪೂರ್ಣವಾಗಿ ವೆಚ್ಚ ಮಾಡಲು ಸಾಧ್ಯವಾಗಿಲ್ಲ.

ನೆರೆಯ ಆಂಧ್ರ ಸಾಹಿತ್ಯ ಅಕಾಡೆಮಿ ಅಪೂರ್ವವಾದ ಕೆಲಸವನ್ನು ಮಾಡುತ್ತಿರುವುದನ್ನು ಗಮನಿಸಬೇಕು. ನಮ್ಮಲ್ಲೇಕೆ ಈ ರೀತಿ ಕೆಲಸ ಮಾಡಲು ಸಾಧ್ಯವಿಲ್ಲ? ಶ್ರೀ ಆದ್ಯ ರಂಗಾಚಾರ್ಯರು ಅಧ್ಯಕ್ಷರಾಗಿದ್ದಾಗ ಹಲವು ಯೋಜನೆಗಳನ್ನು ರೂಪಿಸಿದರು. ಆದರೆ ಅವರ ಜೊತೆಯಲ್ಲಿಯೇ ಅವೂ ಹೊರಟು ಹೋದವು. ವ್ಯಕ್ತಿಗಿಂತ ಸಂಸ್ಥೆ ಮುಖ್ಯವಲ್ಲವೇ?

ಪ್ರತಿವರ್ಷ ಪ್ರಕಟವಾದ ಉತ್ತಮ ಪುಸ್ತಕಗಳಿಗೆ ಬಹುಮಾನ ಕೊಡುವ ಕೆಲಸವನ್ನು ಅತ್ಯಂತ ಅಸಮರ್ಪಕವಾಗಿ ಅಕಾಡೆಮಿ ನಡೆಸಿಕೊಂಡು ಹೋಗುತ್ತಿದೆ. ಮೊದಲಲ್ಲಿ ಅಕಾಡೆಮಿಯವರೇ ವಿಮರ್ಶಕರಿಂದ, ವಿದ್ವಾಂಸರಿಂದ ಅಭಿಪ್ರಾಯ ಪಡೆದು ಪುಸ್ತಕಗಳಿಗೆ ಪ್ರಶಸ್ತಿ ನೀಡಿದರು. ಕೆಲವು ಪುಸ್ತಕಗಳಿಗೆ ಬಹುಮಾನ ನೀಡಿದುದನ್ನು ಕೆಲವರು ಟೀಕಿಸಿದರು. ತಕ್ಷಣ ಕ್ರಮವನ್ನೇ ಬದಲಾಯಿಸಿ, ಸ್ಪರ್ಧೆಗೆ ಬಂದ ಪುಸ್ತಕಗಳನ್ನು ಮಾತ್ರ ಪರಿಶೀಲಿಸುವುದಾಗಿ ಪ್ರಕಟಿಸಿದರು. ಈಗಲೂ ಹೀಗೆಯೇ ಮಾಡಲಾಗುತ್ತಿದೆ.

ಪ್ರಕೃತಿಯೇ ನಿರ್ಮಿಸಿದ ರಾಮಸೇತುವೆಯ ಬಗ್ಗೆ ಭಕ್ತಿ ಬೇಕೆ, ವೈಜ್ಞಾನಿಕ ದೃಷ್ಟಿ ಬೇಕೆ?

ಸೇತುವೆ ಹತ್ತಿರ ಸೋತೆವೆ? ಗೆದ್ದೆವೆ?



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಮೊನ್ನೆ ರಾಮನವಮಿಯಂದು ಧರ್ಮ ಮತ್ತು ವಿಜ್ಞಾನದ ಒಂದು ವಿಶಿಷ್ಟ ಮಿಲನ ಸಂಭವಿಸಿತು. ಅಯೋಧ್ಯೆಯ ಬಾಲರಾಮನ ವಿಗ್ರಹದ ಹಣೆಗೆ ತಿಲಕದಂತೆ ಸೂರ್ಯನ ಬೆಳಕು ಬಿತ್ತು. ಅದೇ ವೇಳೆಗೆ ಪ್ರಧಾನಿ ನರೇಂದ್ರ ಮೋದಿಯವರು ಶ್ರೀಲಂಕಾದಿಂದ ಬರುವಾಗ ರಾಮಸೇತುವೆಯ ದರ್ಶನ ಪಡೆದರು. ಇವೆರಡೂ ಒಟ್ಟಿಗೆ ಘಟಿಸಿದ್ದು 'ದಿವ್ಯ ಸಂಯೋಗ' ಎಂದು ಅವರು ಎಕ್ಸ್‌ನಲ್ಲಿ ವಿಡಿಯೊ ಸಮೇತ ಟ್ವೀಟ್ ಮಾಡಿದರು.

ಈ ಸಂಯೋಗವನ್ನು ಸಾಧ್ಯಗೊಳಿಸಲು ಎಷ್ಟೆಲ್ಲ ಬಗೆಯ ತಂತ್ರಜ್ಞಾನವನ್ನು ಏಕಕಾಲದಲ್ಲಿ ಬಳಸಿಕೊಳ್ಳಲಾಯಿತು: ಬಾಲರಾಮನ ವಿಗ್ರಹದ ಹಣೆಯ ಮೇಲೆ ಸೂರ್ಯ 'ತಿಲಕ' ಗೋಚರಿಸಿದ್ದು ಪವಾಡವೇನಲ್ಲ. ರೂರ್ಕಿ ಐಐಟಿ ಮತ್ತು ಸಿಎಸ್‌ಐಆರ್ ಎಂಜಿನಿಯರ್‌ಗಳು ಕಂಚಿನ ಕೊಳವೆಗಳಲ್ಲಿ ಕನ್ನಡಿಗಳನ್ನು ಜೋಡಿಸಿದ್ದರಿಂದ ಬಿಸಿಲು ಒಳಗೆ ಬಂತು. ಹೈಸ್ಕೂಲ್ ಮಕ್ಕಳು ರಟ್ಟಿನ ಕೊಳವೆಗಳಲ್ಲಿ ಕನ್ನಡಿಗಳನ್ನಿಟ್ಟು ತಯಾರಿಸುವ ಪೆರಿಸ್ಕೋಪ್ ಎಂಬ ಸಾಧನದ ಆಧುನಿಕ ರೂಪ ಇದು. ವರ್ಷದ ಯಾವ ದಿನದಲ್ಲಾದರೂ ಹೀಗೆ ಕತ್ತಲ ಕೋಣೆಗೆ ಬಿಸಿಲು ಬೀಳುವಂತೆ ಮಾಡಬಹುದು.

ಇನ್ನು, ಅದೇ ವೇಳೆಗೆ ಪ್ರಧಾನ ಮಂತ್ರಿಯವರಿದ್ದ ವಿಮಾನ ರಾಮಸೇತುವಿನ ಮೇಲ್ಗಡೆ ಸಾಗುವಂತೆ ಮಾಡಿ, ಅವರೆದುರು ಕ್ಯಾಮೆರಾ ಇಟ್ಟು ಅವರ ಕಣ್ಣಿಗೆ ಅಯೋಧ್ಯೆಯ ತಿಲಕ ದರ್ಶನ ಮಾಡಿಸಿ, ಅದೊಂದು 'ದಿವ್ಯ ಸಂಯೋಗ' ಎಂದು ಜಗತ್ತಿಗೆ ಸಾರಿದ್ದು ಸರಿಯೆ?

ವಾಸ್ತವವಾಗಿ ದೈವಬಲ ಎಂಬುದನ್ನು ಬದಿಗೊತ್ತಿ ಮನುಷ್ಯ ತನ್ನ ಮನೋಬಲ ಮತ್ತು ತೋಳ್ಬಲದಿಂದ ಏನೆಲ್ಲ ವೈಜ್ಞಾನಿಕ ಸಾಧನಗಳನ್ನು ಸೃಷ್ಟಿಸಿದ್ದಾನೆ. ಆದರೆ ಅಂಥ ಸಾಧನಗಳನ್ನೇ ಮೆಟ್ಟಿಲನ್ನಾಗಿ ಮಾಡಿಕೊಂಡು ಧಾರ್ಮಿಕ ನಂಬಿಕೆಗಳನ್ನು ಮೇಲೆತ್ತರಿಸುವ ಸಾಹಸ ಹಿಂದಿನಿಂದಲೂ ನಡೆದುಬಂದಿದೆ. ಅಕ್ಷರಗಳ ಬಳಕೆ ಆರಂಭವಾಗುತ್ತಲೇ ದೈವೀಶಕ್ತಿಯನ್ನು ಬಿತ್ತರಿಸುವ ಧರ್ಮಗ್ರಂಥಗಳೇ ಎಲ್ಲೆಡೆ ಪ್ರಚಾರಕ್ಕೆ ಬಂದವು. ಮುದ್ರಣ ತಂತ್ರಜ್ಞಾನ ಬಂದಮೇಲಂತೂ ನಮಗೆ ಗೊತ್ತೇ ಇದೆ. ಇವೊತ್ತಿಗೂ ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಣಗೊಳ್ಳುತ್ತಿರುವ ಗ್ರಂಥ ಯಾವುದೆಂದರೆ ಬೈಬಲ್. ನಂತರ ಬಂದ ರೇಡಿಯೊ, ಟಿ.ವಿ., ಇಂಟರ್ನೆಟ್ ಎಲ್ಲವೂ ವೈಚಾರಿಕತೆಯನ್ನು ಬಿತ್ತರಿಸುವುದಕ್ಕಿಂತ ಹೆಚ್ಚಾಗಿ ಧರ್ಮಪ್ರಸಾರಕ್ಕೆ ಮತ್ತು ಮೂಢನಂಬಿಕೆಗಳ ವಿಸ್ತರಣೆಗೇ ದಂಡಿಯಾಗಿ ಬಳಕೆಯಾಗುತ್ತಿವೆ. ಈಚೆಗೆ ಮಾರ್ಚ್ 29ರ ಸೌರಗ್ರಹಣ ನಮ್ಮ ದೇಶದಲ್ಲಿ ಎಲ್ಲೂ ಕಾಣದಿದ್ದರೂ ಅದೆಷ್ಟೊಂದು ಕಡೆ ದೇವ ದಿಗ್ಬಂಧನ, ಶಾಪವಿಮೋಚನ ವ್ರತ, ನೀರಿನ ಅಪಾರ ಅಪವ್ಯಯ ಎಲ್ಲ ವರದಿಯಾದವು. ಕೋವಿಡ್ ಕಾಲದ ಅಂಧಾಚರಣೆಗಳ ವಿರಾಟ್ ರೂಪವಂತೂ ನಮಗೆ ಗೊತ್ತೇ ಇದೆ. ಆಗ ಜಗತ್ತಿನ ಎಲ್ಲ ದೇವಮಂದಿರಗಳನ್ನು ಮುಚ್ಚಿಟ್ಟು, ವಿಜ್ಞಾನಿಗಳು ಲ್ಯಾಬಿನಲ್ಲಿ ತ್ವರಿತ ಸಂಶೋಧನೆ ನಡೆಸಿದ್ದರಿಂದಲೇ ನಮಗೆಲ್ಲ ಕೊರೊನಾವನ್ನು ಹಿಮ್ಮೆಟ್ಟಿಸುವ ಲಸಿಕೆ ಸಿಕ್ಕಿತಾದರೂ ಎಷ್ಟೆಲ್ಲ ಬಗೆಯ ಮೂಢನಂಬಿಕೆಗಳು ಪ್ರಸಾರವಾದವು. ಅದೆಷ್ಟೊಂದು ಜನ ಪ್ರಾಣ ಕಳೆದುಕೊಂಡರು.

ಧಾರ್ಮಿಕ ನಂಬಿಕೆಗಳು ರಾಕೆಟ್ ಏರಿ ಬಾಹ್ಯಾಕಾಶಕ್ಕೂ ಹೋಗಿದ್ದು ಗೊತ್ತೆ? 1968ರಲ್ಲಿ ಅಪೊಲೊ 8ರಲ್ಲಿ ಕೂತು ಚಂದ್ರನ ಪ್ರದಕ್ಷಿಣೆ ಹಾಕುತ್ತಿದ್ದ ಮೂವರೂ ಗಗನಯಾತ್ರಿಗಳು ಬೈಬಲ್ ಓದಿದ್ದನ್ನು 64 ದೇಶಗಳ ಶತಕೋಟಿ ಜನ ಕೇಳಿಸಿಕೊಂಡರು. ಅದಾಗಿ ಮೂರು ವರ್ಷಗಳ ನಂತರ ನೀಲ್ ಆರ್ಮ್‌ಸ್ಟ್ರಾಂಗ್ ಜೊತೆ ಅಪೊಲೊ 11ರ ಮೂಲಕ ಚಂದ್ರನ ಮೇಲೆ ಮೊದಲ ಬಾರಿ ಕಾಲಿಟ್ಟ ಬಝ್ ಆಲ್ಡ್ರಿನ್ ಕೂಡ ಅಲ್ಲಿಂದಲೇ ಪ್ರಾರ್ಥನೆಯನ್ನು ಬಿತ್ತರಿಸಬಯಸಿದ್ದ. ಆದರೆ ಅದಕ್ಕೆ ಮೊದಲೇ ಮೆಡಲೀನ್ ಓಹೇರ್ ಹೆಸರಿನ ಮಹಿಳೆಯೊಬ್ಬಳು ತಂತ್ರಜ್ಞಾನದ ಇಂಥ ದುರ್ಬಳಕೆಯ ವಿರುದ್ಧ ಅಮೆರಿಕದ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಳು. ನಾಸಾ ಬೆದರಿತ್ತು. ಚಂದ್ರನ ಮೇಲಿನ ಬಹಿರಂಗ ಪ್ರಾರ್ಥನೆಗೆ ಅದು ಅನುಮತಿ ಕೊಡಲಿಲ್ಲ. ಇಲ್ಲಿ ನೋಡಿದರೆ ಪ್ರಧಾನಿ ಮೋದಿಯವರು ವಿಮಾನದ ಮೇಲಿಂದ 'ನಮ್ಮೆಲ್ಲರನ್ನೂ ಒಗ್ಗೂಡಿಸುವ ಶಕ್ತಿ ಪ್ರಭು ಶ್ರೀರಾಮನಲ್ಲಿದೆ. ಆತನ ಕೃಪೆ ಸದಾ ನಮ್ಮೆಲ್ಲರ ಮೇಲಿರಲಿ' ಎಂದು ಹಾರೈಸಿದ್ದಾರೆ. 'ನಮ್ಮೆಲ್ಲರನ್ನೂ' ಅಂದರೆ ಯಾರೆಲ್ಲರನ್ನು?

ಈಗ ರಾಮಸೇತುವಿನತ್ತ ಬರೋಣ. ಮೋದಿಯವರಿಗೆ 'ದರ್ಶನ' ನೀಡಿದ ರಾಮಸೇತುವಿನ ಬಗ್ಗೆ ಅಂದೇ ಕನ್ನಡ ವಾಹಿನಿಗಳಲ್ಲಿ ಬರೀ ಭಕ್ತಿಬೋಧೆ ಪ್ರಸಾರವಾಯಿತು. ಆದರೆ ಅದು ನಿಸರ್ಗನಿರ್ಮಿತ ಭೂರಚನೆ ಎಂದು ಎಲ್ಲ ವೈಜ್ಞಾನಿಕ ಸಂಶೋಧನೆಗಳೂ ಸಾರುತ್ತಲೇ ಬಂದಿವೆ. ಅದು ಘಟಿಸಿದ್ದು ಹೀಗೆ: ಸುಮಾರು ಒಂದು ಲಕ್ಷ ವರ್ಷಗಳ ಹಿಂದೆ ಜಗತ್ತಿಗೆಲ್ಲ ಹಿಮಯುಗ ವ್ಯಾಪಿಸಿತ್ತು. ಸಾಗರಗಳ ನೀರು ಆವಿಯಾಗಿ ಬರ್ಫವಾಗಿ ಎಲ್ಲ ಭೂಖಂಡಗಳ ಮೇಲೂ ಹಾಸಿತ್ತು. ಸಮುದ್ರ ಪಾತಳಿ ಈಗಿಗಿಂತ 125 ಮೀಟರ್ ಕೆಳಕ್ಕಿತ್ತು. ಆಗ ಧನುಷ್ಕೋಡಿಯಿಂದ ಕಾಲ್ನಡಿಗೆಯಲ್ಲೇ ಶ್ರೀಲಂಕಾಕ್ಕೆ ಹೋಗಬಹುದಿತ್ತು. ಇಲ್ಲೊಂದೇ ಅಲ್ಲ; ಬ್ರಿಟನ್ ಮತ್ತು ಫ್ರಾನ್ಸ್ ನಡುವೆ ಸಮುದ್ರ ಇರಲಿಲ್ಲ; ಆಸ್ಟ್ರೇಲಿಯಾದಿಂದ ನ್ಯೂಗಿನಿಗೆ, ರಷ್ಯಾದಿಂದ ಅಲಾಸ್ಕಾಗೆ ನಡೆದೇ ಹೋಗಬಹುದಿತ್ತು. ಸುಮಾರು 60 ಸಾವಿರ ವರ್ಷಗಳ ಹಿಂದೆ ಆಫ್ರಿಕಾದಿಂದ ಹೊರಟ 'ನೆಗ್ರಿಟೊ' ಆದಿಮಾನವರು ಭಾರತ, ಶ್ರೀಲಂಕಾ, ಅಂಡಮಾನ್, ಇಂಡೊನೇಷ್ಯ, ಆಸ್ಟ್ರೇಲಿಯಾವರೆಗೂ ಹೋದರು. ಸುಮಾರು 11,700 ವರ್ಷಗಳೀಚೆ ಭೂಮಿ ಮತ್ತೆ ಬಿಸಿಯಾಗುತ್ತ ಬಂದಂತೆ ಸಮುದ್ರಮಟ್ಟ ಮೆಲ್ಲಗೆ ಏರತೊಡಗಿತ್ತು. ಭಾರತ- ಶ್ರೀಲಂಕಾ ನಡುವಣ ಗುಡ್ಡಶ್ರೇಣಿಗಳು ಮುಳುಗುತ್ತ ಬಂದಂತೆಲ್ಲ ಸುಣ್ಣದ ಕಲ್ಲುಗಳು ಮತ್ತು ಹವಳದ ದಿಬ್ಬಗಳು ಬೆಳೆಯುತ್ತ ನೀರಿನ ಮಟ್ಟದೊಂದಿಗೆ ಮೇಲಕ್ಕೇರಿದವು. ತಳದ ಕೆಲವು ಹೆಬ್ಬಂಡೆಗಳನ್ನೂ ಮರಳನ್ನೂ ಅಲೆಗಳು ಮೇಲಕ್ಕೆ ತಂದುದರಿಂದ ಅಲ್ಲಲ್ಲಿ ಮರಳಿನ ಪಟ್ಟಿಗಳೂ ನಿರ್ಮಾಣಗೊಂಡವು. ಕ್ರಮೇಣ ಸಾಗರದ ನೀರಿನ ತಾಪಮಾನವೂ ಏರತೊಡಗಿತು. ಹವಳದ ದಿಬ್ಬಗಳ ಬೆಳವಣಿಗೆ ನಿಂತಿತು. ಹಾಗಾಗಿ, ಇಂದು ಸಮುದ್ರ ಪಾತಳಿಗಿಂತ ಸ್ವಲ್ಪ ಕೆಳಗೆ, ಆದರೂ ಆಕಾಶ ಮಾರ್ಗದಲ್ಲಿ ಕಾಣುವಂತೆ ತುಂಡು ತುಂಡು ದಿಬ್ಬಗಳು ರಾಮೇಶ್ವರದ ಬಳಿಯ ಪಂಬನ್ ದ್ವೀಪದಿಂದ ಶ್ರೀಲಂಕಾದ ಮನ್ನಾರ್ ದ್ವೀಪದವರೆಗಿನ ಸುಮಾರು 30 ಕಿ.ಮೀ. ದೂರದವರೆಗೆ ಕಾಣುತ್ತಿವೆ. ಪ್ರಾಯಶಃ ಒಂದೆರಡು ಸಾವಿರ ವರ್ಷಗಳ ಹಿಂದೆ ದಿಬ್ಬದಿಂದ ದಿಬ್ಬಕ್ಕೆ ದೋಣಿಯ ಮೂಲಕ ಸಂಚಾರವೂ ಇತ್ತೇನೊ.



ಬ್ರಿಟಿಷರ ಕಾಲದಲ್ಲಿ 'ಆಡಮ್ಸ್ ಬ್ರಿಜ್' ಎಂದೆನಿಸಿದ್ದ ಈ ಸೇತುವೆ ಮಾನವ ನಿರ್ಮಿತ ಅಲ್ಲ; ವಾನರರು + ದೇವಮಾನವರು ಸೇರಿ ನಿರ್ಮಿಸಿದ್ದೂ ಅಲ್ಲ. ಇಷ್ಟಕ್ಕೂ ರಾಮನೆಂಬ ವ್ಯಕ್ತಿ ಇತಿಹಾಸದಲ್ಲಿ ಆಗಿಹೋಗಿದ್ದರ ಬಗ್ಗೆ ಯಾವ ಸಾಕ್ಷ್ಯವೂ ಇಲ್ಲವೆಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ 2007ರಲ್ಲಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. ಅದೂ ಅಲ್ಲದೆ, ಮೋದಿಯವರ ನೇತೃತ್ವದ ಸರ್ಕಾರದಲ್ಲಿ ವಿಜ್ಞಾನ ಸಚಿವರಾಗಿದ್ದ ಡಾ. ಜಿತೇಂದ್ರ ಸಿಂಗ್ 2022ರಲ್ಲಿ ರಾಜ್ಯಸಭೆಯಲ್ಲಿ ಹೇಳಿಕೆ ನೀಡಿ, 'ಅಲ್ಲಿನ ಸಾಲು ಸಾಲು ಸುಣ್ಣದ ಬಂಡೆಗಳು ಮತ್ತು ಮರಳು ದಿಬ್ಬಗಳು ಸೇತುವೆ ಆಗಿದ್ದವೆಂದು ಹೇಳಲು ಸಾಕ್ಷ್ಯಗಳು ಸಿಕ್ಕಿಲ್ಲ' ಎಂದಿದ್ದರು. ಆದಾಗ್ಯೂ ನಮ್ಮ ಪ್ರಧಾನಿಯವರು ತಮಗೆ 'ರಾಮಸೇತುವಿನ ದರ್ಶನದ ಸೌಭಾಗ್ಯ ಸಿಕ್ಕಿತು' ಎಂದು ಹೇಳಿದ್ದಾರೆ.

ನಮ್ಮ ಸಂವಿಧಾನದ ಕಲಮು 51ಎ(ಎಚ್) ನಲ್ಲಿ, 'ವೈಜ್ಞಾನಿಕ ಮನೋಭಾವವನ್ನು, ಸತ್ಯಾನ್ವೇಷಣೆ ಮತ್ತು ಸುಧಾರಣಾ ಗುಣವನ್ನು ರೂಢಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ' ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಹಾಗೆ ವಿಜ್ಞಾನದ ಮಹತ್ವವನ್ನು ಸ್ಪಷ್ಟವಾಗಿ ಸಾರಿದ ಏಕೈಕ ಸಂವಿಧಾನ ನಮ್ಮದೆಂದು ಹೆಮ್ಮೆಯಿಂದ ಹೇಳಿಕೊಂಡು ಬಂದಿದ್ದೇವೆ. ಆದರೂ ಸೇತುವೆ ನೋಡಿ ನಾವು ಸೋತೆವೆ?

ಇರಲಿಕ್ಕಿಲ್ಲ. ರಾಮಸೇತುವಿನ ದರ್ಶನದ ನಂತರ ನೆಲಕ್ಕಿಳಿದ ಮೋದಿಯವರು ರಿಮೋಟ್ ಹಿಡಿದು ಅಲ್ಲೇ ಪಂಬನ್ ದ್ವೀಪದ ರೈಲುಸೇತುವೆಯ ಕಡೆ ಕ್ಲಿಕ್ ಮಾಡಿದರು. ಆ ಲೋಹದ ಸೇತುವೆಯ 72 ಮೀಟರ್ ಉದ್ದದ ಭಾಗವೊಂದು ರೈಲು ಹಳಿಗಳ ಸಮೇತ ತೊಟ್ಟಿಲಿನಂತೆ 17 ಮೀಟರ್ ಮೇಲಕ್ಕೇರಿತು. ಆಗ ಕೆಳಗಿನ ಸಮುದ್ರದಲ್ಲಿದ್ದ ಕಡಲ ರಕ್ಷಣಾ ಪಡೆಯ ಹಡಗು ಸಲೀಸಾಗಿ ಈಚೆ ಸಾಗಿ ಬಂತು. ತಲೆಯೆತ್ತಿ ಸಾಗಿ ಬಂತು.

ಹಿಂದಿನವರ ಕಲ್ಪನಾಕತೆಗಳನ್ನು ಹಾಡಿ ಹೊಗಳಬೇಕಾದದ್ದೇನೊ ಹೌದು. ಆದರೆ 'ನಮ್ಮೆಲ್ಲರನ್ನೂ ಒಂದುಗೂಡಿಸಬಲ್ಲ' ದೈವೀಶಕ್ತಿಯ ಬದಲು ವೈಜ್ಞಾನಿಕ, ತಾಂತ್ರಿಕ ಸಾಧನೆಗಳನ್ನು ಸಂಭ್ರಮಿಸಬೇಕಲ್ಲವೆ?

ಚುರುಮುರಿ



ಸಂಬಳದ ಜೋಕು!

• ಗುರು ಪಿ.ಎಸ್.

'ಬಿತ್ತು ಬಿತ್ತು ಬಿತ್ತು, ಬಿದ್ದೇ ಬಿಡ್ತು...' ಆತಂಕದಿಂದ ಕೂಗಿದೆ. ದಡಬಡನೆ ಓಡಿಬಂದ ಹೆಂಡತಿ, 'ಏನು ಬಿತ್ತು ರೀ' ಎಂದಳು.

'ಷೇರ್ ಮಾರ್ಕೆಟ್ ಬಿತ್ತು ಕಣೆ, ಮಹಾಪತನ!'

'ಏನ್ ಬಿಲ್ ಗೇಟ್ಸ್ ಮೊಮ್ಮಗ ಇವ್ರು, ಕೋಟಿಗಟ್ಟಲೆ ದುಡ್ಡನ್ನ ಷೇರ್ ಮಾರ್ಕೆಟ್‌ನಲ್ಲಿ ಇನ್ವೆಸ್ಟ್ ಮಾಡಿದಾರೆ... ಅದ್ ಸರಿ, ನೀವೆಷ್ಟು ಹೂಡಿಕೆ ಮಾಡಿದ್ರಿ?'

'ತಿಂಗಳಿಗೆ ಎರಡು ಸಾವಿರಾನ ಮ್ಯೂಚುವಲ್ ಫಂಡ್‌ನಲ್ಲಿ ಹಾಕ್ತಿರೋದು ಗೊತ್ತಿಲ್ವ?'

ಜೋರಾಗಿ ನಕ್ಕ ಹೆಂಡತಿ, 'ಅಬ್ಬಬ್ಬಾ, ಕ್ರೋರ್ಸ್ ಟುಗೆದರ್ ಇನ್ವೆಸ್ಟ್‌ಮೆಂಟ್' ಎನ್ನುತ್ತಾ, 'ಇನ್ಮುಂದೆ ಆ ಎರಡು ಸಾವಿರ ರೂಪಾಯಿನೂ ಮರೆತುಬಿಡಿ'.

'ಯಾಕೆ? ಅದರ ಮೇಲೂ ನಿನ್ನ ಕಣ್ಣು ಬಿತ್ತಾ?'

'ನನ್ನ ಕಣ್ಣಲ್ಲ ರೀ, ನಿಮ್ಮ ಕಾಂಗ್ರೆಸ್ ಸರ್ಕಾರದ ಕಣ್ಣು ಬಿದ್ದಿದೆ. ಹಾಲು- ಮೊಸರಿನ ರೇಟ್ ಜಾಸ್ತಿ ಮಾಡಿದಾರಲ್ಲ'.

'ಹಾಗಾದರೆ, ನಿಮ್ ಬಿಜೆಪಿ ಸರ್ಕಾರದವರು ಮಾಡಿರೋ ಘನಕಾರ್ಯಕ್ಕೆ ನನ್ ಸ್ಯಾಲರಿಯೇ ತೆಗೆದಿಡಬೇಕು ಅನಿಸುತ್ತೆ'.

'ಗ್ಯಾಸ್ ಸಿಲಿಂಡರ್‌ಗೆ ಐವತ್ತು ರೂಪಾಯಿ ಜಾಸ್ತಿ ಮಾಡಿರಬಹುದಷ್ಟೇ, ಅದೇನ್ ದೊಡ್ಡ ಹೊರೆ ಅಲ್ಲ ಬಿಡಿ' ಸಮರ್ಥಿಸಿಕೊಳ್ಳುವಂತೆ ಹೇಳಿದಳು.

'ನಾವು ಹೀಗಿರೋದಕ್ಕೇ ನಮ್ ಲೈಫ್ ಕಷ್ಟ ಆಗ್ತಿರೋದು'.

'ಅಂದ್ರೆ, ಏನ್ರೀ ನಿಮ್ ಮಾತಿನ ಅರ್ಥ?'

'ಅಂದ್ರೆ, ನಾವು ಕಾಂಗ್ರೆಸ್‌ನ ಸಪೋರ್ಟ್ ಮಾಡಲಿ, ಬಿಜೆಪಿಯನ್ನ ಬೆಂಬಲಿಸಲಿ, ನಾವು ಹಿಂದೂ ಆಗಿರಲಿ, ಮುಸ್ಲಿಂ ಆಗಿರಲಿ, ಎಲ್ಲರಿಗೂ ಬೆಲೆ ಏರಿಕೆ ಬಿಸಿ ಸಮಾನವಾಗಿ ತಟ್ಟುತ್ತೆ'.

'ಅಬ್ಬಬ್ಬಾ, ಏನ್ ಹೊಸ ವಿಷಯ ಹೇಳಿದ್ರಿ, ಜೋಕ್ ಮಾಡೋದನ್ನ ನಿಲ್ಸಿ ಸಾಕು' ಎಂದು ವ್ಯಂಗ್ಯ ಮಾಡುತ್ತಾ, 'ಅದ್ ಸರಿ, ಎಲ್ಲದರ ಬೆಲೆ ಜಾಸ್ತಿ ಆಗಿರೋದ್ರಿಂದ ನಿಮ್ ಸ್ಯಾಲರಿನೂ ಜಾಸ್ತಿ ಮಾಡ್ತಾರಾ' ಎಂದಳು.

'ಈಗ ನೀನು ಜೋಕ್ ಮಾಡೋದನ್ನ ನಿಲ್ಸು ಸಾಕು' ಎಂದು ಹೊರ ನಡೆದೆ.

ಸಂಗತ

ಪ್ರಚಾರಕ್ಕಷ್ಟೇ ಸೀಮಿತವಾದ ಸಿರಿಧಾನ್ಯ!

ಸಿರಿಧಾನ್ಯದ ಪ್ರಚಾರ ಭರಾಟೆಯಲ್ಲಿ ಲಾಭ ಯಾರಿಗೆ?

• ಆನಂದತೀರ್ಥ ಪ್ಯಾಟಿ

ವಾಣಿಜ್ಯ ಬೆಳೆಗಳ ಬೆಲೆ ಕುಸಿದಾಗ ಬೆಂಬಲ ಬೆಲೆ ಪ್ರಕಟಿಸುವ ಧಾವಂತವು ಸಿರಿಧಾನ್ಯಗಳ ವಿಚಾರದಲ್ಲಿ ಮಾತ್ರ ನಾಪತ್ತೆ! ಮೇಳ, ಉತ್ಸವದಂಥ ಅಬ್ಬರದ ಪ್ರಚಾರಕ್ಕೆ ಮಾತ್ರ ಸಿರಿಧಾನ್ಯಗಳು ಮೀಸಲಾಗಿವೆಯೇ?


ಸುಸ್ಥಿರ ಕೃಷಿಗೆ ಮಾದರಿಯೆನಿಸಿದ ಸಿರಿಧಾನ್ಯಗಳ ಬೇಸಾಯ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರಗಳು ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಅಬ್ಬರದ ಪ್ರಚಾರಕ್ಕೆ 'ದಾಳ'ವಾದ ಸಿರಿಧಾನ್ಯಗಳನ್ನು ನೆಚ್ಚಿದ ರೈತರಿಗೆ ದಿಕ್ಕು ತೋಚದ ಸ್ಥಿತಿ ಎದುರಾಗಿದೆ. ಕಡಿಮೆ ಮಳೆ ಹಾಗೂ ಕಡಿಮೆ ಒಳಸುರಿಗಳಲ್ಲಿ ಬೆಳೆಯಬಹುದಾದ ಸಿರಿಧಾನ್ಯಗಳು ಸಾಂಪ್ರದಾಯಿಕ ಕೃಷಿಯ ಭಾಗ. ವರ್ಷವಿಡೀ ಕುಟುಂಬದ ಆಹಾರ ಹಾಗೂ ಪೋಷಕಾಂಶ ಭದ್ರತೆಗೆ ಮಹತ್ವದ ಕೊಡುಗೆ ನೀಡುತ್ತವೆ. ಇತ್ತೀಚಿನ ದಿನಗಳಲ್ಲಿ ಜಗತ್ತನ್ನು ಕಾಡುತ್ತಿರುವ ಹವಾಮಾನ ವೈಪರೀತ್ಯಕ್ಕೆ ಸಿರಿಧಾನ್ಯ ಕೃಷಿ ಪರಿಹಾರ ಎಂಬುದು ಸಾಬೀತಾಗಿದೆ.

ವಾಣಿಜ್ಯ ಬೆಳೆಗಳ ಮೇಲೆ ಗಮನ ಕೇಂದ್ರೀಕರಿಸಿದ್ದ ಆಧುನಿಕ ಕೃಷಿ ವಿಜ್ಞಾನವು ಸಿರಿಧಾನ್ಯಗಳನ್ನು 'ತೃಣಧಾನ್ಯ' ಎಂದೇ ಹೆಸರಿಸಿತ್ತು. ರೈತಪರ ಸಂಘಟನೆಗಳ ಒತ್ತಾಸೆ ಹಾಗೂ ಕ್ರಿಯಾಶೀಲ ಚಟುವಟಿಕೆಯಿಂದ ಸಿರಿಧಾನ್ಯ ಮಹತ್ವ ಪಡೆಯಿತು. ಆಗ ಕೃಷಿ ವಿಶ್ವವಿದ್ಯಾಲಯಗಳೂ ಸಂಶೋಧನಾ ಕೇಂದ್ರಗಳೂ ಎದ್ದು ಕೂತವು. ಸಿರಿಧಾನ್ಯಕ್ಕೆ ಒಂದು ವಿಭಾಗ, ಅದಕ್ಕೆ ಒಂದಷ್ಟು ವಿಜ್ಞಾನಿಗಳು, ಸಿಬ್ಬಂದಿ ಹೀಗೆ... ಪರಿಸ್ಥಿತಿ ಹೀಗಾದಾಗ ಸರ್ಕಾರ ಸುಮ್ಮನಿರುತ್ತದೆಯೇ? ಮರೆತೇಹೋಗಿದ್ದ ಸಿರಿಧಾನ್ಯಗಳಿಗೆ ಭರ್ಜರಿಯಾದ ಮಹತ್ವ ದಕ್ಕಿತು. ಅದರ ಪರಿಣಾಮವೇ ಸಿರಿಧಾನ್ಯದ ಪ್ರಚಾರ ಭರಾಟೆ.

ಕೃಷಿ ಗುಂಪುಗಳು ನಡೆಸುತ್ತಿದ್ದ ಮೇಳಗಳನ್ನು ಸರ್ಕಾರವೇ ಆಯೋಜಿಸಲು ಮುಂದಾಯಿತು. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಮೇಳ, ಮೌಲ್ಯವರ್ಧನೆ ತರಬೇತಿ, ಸಂಸ್ಕರಣೆಗೆ ಮಿಲ್‌ಗಳು... ಒಂದೇ ಎರಡೇ? ಸಿರಿಧಾನ್ಯ ಬೆಳೆಯುವವರಿಗೆ ಧನಸಹಾಯ ಬೇರೆ! ಪರಿಣಾಮವಂತೂ ಕಣ್ಣಿಗೆ ಕಾಣಿಸಲು ಶುರುವಾಯಿತು. ಮೂರ್ನಾಲ್ಕು ದಶಕಗಳಿಂದ ಬೆಳೆಯುತ್ತಿದ್ದ ವಾಣಿಜ್ಯ ಬೆಳೆ ಬಿಟ್ಟು ರೈತರು ಸಿರಿಧಾನ್ಯಗಳತ್ತ ವಾಲಿದರು, ಉತ್ಪಾದನೆಯೂ ಹೆಚ್ಚಿತು. ಸಿರಿಧಾನ್ಯ ಕೃಷಿಕರಿಗೆ ಪ್ರಶಸ್ತಿ, ಗೌರವ, ಜಿಲ್ಲಾ ಮಟ್ಟದಿಂದ ಹಿಡಿದು ಬೆಂಗಳೂರಿನ ಅರಮನೆ ಆವರಣದ ಅಂತರರಾಷ್ಟ್ರೀಯ ಮೇಳದವರೆಗೂ ಸಿರಿಧಾನ್ಯ ಮಿಂಚ ತೊಗಿತು. ಸಿರಿಧಾನ್ಯಗಳಿಗೂ ಅವುಗಳ ಉತ್ಪನ್ನಗಳಿಗೂ ಅತಿ ಎನಿಸುವಷ್ಟರ ಮಟ್ಟಿಗೆ ಬೇಡಿಕೆ ಉಂಟಾಯಿತು.

ಸಿಹಿ ಇದ್ದಲ್ಲಿ ಇರುವೆ ಬರುವುದು ಸಹಜವೇ! ವ್ಯಾಪಾರಿಗಳು ಈಗ ರಂಗಪ್ರವೇಶ ಮಾಡಿದ್ದಾರೆ. ಹೊಲದ ಅಂಚಿನಲ್ಲೇ ಸಿರಿಧಾನ್ಯ ಖರೀದಿಸುವ 'ಜಾಲ' ಸೃಷ್ಟಿಯಾಗಿದೆ. ಆರಂಭದಲ್ಲಿ ಒಳ್ಳೆಯ ದರ ಗಿಟ್ಟಿಸುತ್ತಿದ್ದ ರೈತರು, ಈಗ ಎರಡು- ಮೂರು ವರ್ಷಗಳಿಂದ ಬೇಸ್ತು ಬೀಳುತ್ತಿದ್ದಾರೆ. ಸಿರಿಧಾನ್ಯಗಳ ಮಾರುಕಟ್ಟೆ ದೊಡ್ಡ ವ್ಯಾಪಾರಿಗಳ ಕಪಿಮುಷ್ಟಿಗೆ ಸಿಲುಕಿದೆ. ಧಾನ್ಯಗಳನ್ನು ಖರೀದಿಸಿ, ಗೋದಾಮುಗಳಲ್ಲಿ ಸಂಗ್ರಹಿಸಿ, ಬೇಡಿಕೆ ಸೃಷ್ಟಿಯಾದಾಗ ಅವುಗಳ ಅಕ್ಕಿ ಮಾಡಿ, ಗ್ರಾಹಕರಿಗೆ ಒದಗಿಸುವ 'ವ್ಯವಸ್ಥಿತ ಪೂರೈಕೆ ಜಾಲ' ರೂಪುಗೊಂಡಿದೆ. ಇದರಿಂದ ಅತ್ತ ರೈತರಿಗೂ ಲಾಭವಿಲ್ಲ, ಇತ್ತ ಗ್ರಾಹಕರಿಗೂ ಪ್ರಯೋಜನವಿಲ್ಲ.

'ಅಧಿಕ ನಾರಿನಂಶ ಹೊಂದಿರುವ ಕೊರಲೆಗೆ ಹೆಚ್ಚು ಬೇಡಿಕೆ ಇದೆ. ಹಿಂದಿನ ವರ್ಷದವರೆಗೆ ಇದರ ದರ ಕ್ವಿಂಟಲಿಗೆ ₹ 6,800 ಇದ್ದುದು ಈ ವರ್ಷ ₹ 3,400ಕ್ಕೆ ಕುಸಿದಿದೆ. ಅದೇ ರೀತಿ ಸಾವಿರಾರು ಟನ್ ನೆರೆರಾಜ್ಯಗಳಿಗೆ ಹೋಗುವ ಸಾಮೆಯ ದರ ₹ 4,800ರಿಂದ ₹ 3,200 ಹಾಗೂ ಜನಪ್ರಿಯ ಆಹಾರಧಾನ್ಯವಾದ ನವಣೆಯು ₹ 6,000ದಿಂದ ₹ 3,000ಕ್ಕೆ ಇಳಿದಿದೆ. ಮೊದಲೆಲ್ಲ ಹೊಲಕ್ಕೇ ಹೋಗಿ ಖರೀದಿ ಮಾಡುತ್ತಿದ್ದ ವ್ಯಾಪಾರಿಗಳು, ಈಗ ರೈತರೇ ತಮ್ಮ ಬಳಿ ಬಂದು ಧಾನ್ಯ ಕೊಡಬಹುದು ಎನ್ನುತ್ತಿದ್ದಾರೆ' ಎಂದು ಕುಂದಗೋಳ ತಾಲ್ಲೂಕಿನ ಹನುಮನಹಳ್ಳಿಯ ಸಿರಿಧಾನ್ಯ ಕೃಷಿಕ ಯಲ್ಲಪ್ಪ ರಾಮಜಿ ಬೇಸರಿಸುತ್ತಾರೆ.



ಕಡಲೆ, ಈರುಳ್ಳಿ, ಹೆಸರು, ಭತ್ತದಂಥ ಧಾನ್ಯಗಳ ಬೆಲೆ ಕುಸಿದಾಗ ಸರ್ಕಾರಗಳು ಮಧ್ಯ ಪ್ರವೇಶಿಸಿ ಬೆಂಬಲ ಬೆಲೆ ಘೋಷಿಸಿ ದೊಡ್ಡ ರೈತರಿಗೆ ನೆರವಾಗುತ್ತವೆ. ಸಿರಿಧಾನ್ಯಗಳಿಗೆ ಆ ಅದೃಷ್ಟ ಇಲ್ಲ. ಅಬ್ಬರದ ಪ್ರಚಾರಕ್ಕಷ್ಟೇ ಸಿರಿಧಾನ್ಯಗಳನ್ನು ಬಳಸಿಕೊಳ್ಳುವ ಸರ್ಕಾರಗಳೂ ಇಂಥ ಸಮಯದಲ್ಲಿ ಬೆಳೆಗಾರರನ್ನು ಮರೆತೇಬಿಡುತ್ತವೆ. ಅದರಲ್ಲೂ ರೈತ ಗುಂಪುಗಳಿಗೆ ಸರ್ಕಾರ ನೀಡಿರುವ ಸಿರಿಧಾನ್ಯ ಸಂಸ್ಕರಣೆಯ ಮಿನಿ ಘಟಕ (ಮಿಲ್) ಮಾರುಕಟ್ಟೆ ಗುಣಮಟ್ಟಕ್ಕೆ ಹೊಂದಿಕೆಯಾಗದೆ ಬರೀ ಪ್ರಚಾರದ ಭಾಗವೆಂಬಂತೆ ಭಾಸವಾಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನದ ಸುಸಜ್ಜಿತ ಮಿಲ್‌ಗಳನ್ನು ಒದಗಿಸದ ವಿನಾ ರೈತರಿಗೆ ಈ ಮಿನಿ ಮಿಲ್‌ಗಳಿಂದ ಏನೇನೂ ಉಪಯೋಗ ಇಲ್ಲ. ಸಿರಿಧಾನ್ಯ ವಹಿವಾಟು ಕೇಂದ್ರೀಕರಿಸಿರುವ ರೈತ ಉತ್ಪಾದಕ ಕಂಪನಿಗಳು, ಆವರ್ತ ನಿಧಿ ಹಾಗೂ ದಾಸ್ತಾನಿಗೆ ಗೋದಾಮು ಇಲ್ಲದೆ ಏದುಸಿರು ಬಿಡುತ್ತಿವೆ.

ಧಾನ್ಯಗಳ ಬೆಲೆ ಇಳಿದರೆ ಅದರ ಲಾಭ ಗ್ರಾಹಕರಿಗೆ ಸಿಗಬೇಕು. ಆದರೆ ಸಿರಿಧಾನ್ಯಗಳ ಅಕ್ಕಿ ದರ ನೂರು ರೂಪಾಯಿಗೂ ಕಡಿಮೆ ಇಲ್ಲ! ಧಾನ್ಯ ದಾಸ್ತಾನು ಮಾಡಿ, ಬೇಡಿಕೆಯಿದ್ದಾಗ ಸಂಸ್ಕರಿಸಿ ಗ್ರಾಹಕರಿಗೆ ಅಧಿಕ ದರದಲ್ಲಿ ಮಾರುವ ಪಕ್ಕಾ ವ್ಯಾಪಾರಿ ತಂತ್ರವಿದು. ಸಿರಿಧಾನ್ಯದ ಹೆಸರಿನಲ್ಲಿ ಮೇಳ, ಉತ್ಸವ ಆಯೋಜಿಸಿ ಕೋಟಿಗಟ್ಟಲೆ ಹಣ ಖರ್ಚು ಮಾಡುವ ಸರ್ಕಾರ, ಸಿರಿಧಾನ್ಯ ಬೆಳೆಗಾರರ ನೆರವಿಗೆ ಬರಬೇಕು.

ವಾಚಕರ ವಾಣಿ

ಶುಲ್ಕರಹಿತ ಪರೀಕ್ಷೆ: ಒಳ್ಳೆಯ ಬೆಳವಣಿಗೆ

ಈ ಬಾರಿಯ ಪಿಯುಸಿ ಪರೀಕ್ಷಾ ಫಲಿತಾಂಶ ನೋಡಿ ಸಂತೋಷ, ದುಃಖ ಎರಡೂ ಆಯಿತು. ಹೆಣ್ಣುಮಕ್ಕಳು ಫಲಿತಾಂಶದಲ್ಲಿ ಮೇಲುಗೈ ಸಾಧಿಸಿರುವುದು ಬಹಳ ಸಂತೋಷದ ವಿಷಯ. ಮಹಿಳಾ ವಿದ್ಯಾಭ್ಯಾಸಕ್ಕೆ ಮಹತ್ವ ಕೊಟ್ಟ ಸಾವಿತ್ರಿಬಾಯಿ ಫುಲೆ, ಯಶೋಧರಮ್ಮ ದಾಸಪ್ಪ ಅವರಂತಹ ಗಣ್ಯರ ಕನಸು ನನಸಾಗುತ್ತಿದೆ. ಆದರೆ ಶೇಕಡ 25ರಷ್ಟು ಮಂದಿ ನಪಾಸಾಗಿರುವುದು ದುಃಖಕರ. ಇವರಿಗೆ ಯಾವುದೇ ಶುಲ್ಕ ಇಲ್ಲದೆ ಮತ್ತೆ ಪರೀಕ್ಷೆಗೆ ಕೂರುವ ಅವಕಾಶ ಕಲ್ಪಿಸಿದ ಸರ್ಕಾರದ ನಿರ್ಧಾರ ಒಂದು ಒಳ್ಳೆಯ ಬೆಳವಣಿಗೆ.

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

ಕಾಲು ಲೀಟರ್ ಪ್ಯಾಕೆಟ್‌ನಲ್ಲೂ ಬರಲಿ ಹಾಲು

ಪ್ರಸ್ತುತ ನಂದಿನಿ ಹಾಲು ಒಂದು ಲೀಟರ್ ಹಾಗೂ ಅರ್ಧ ಲೀಟರ್ ಪ್ಯಾಕೆಟ್‌ಗಳಲ್ಲಿ ಮಾರಾಟ ಆಗುತ್ತಿದೆ. ಈಗ ಹಾಲಿನ ಬೆಲೆ ಏರಿಕೆಯಾಗಿದೆ. ಬಡವರು, ಸಣ್ಣ ಕುಟುಂಬಗಳು ಹಾಗೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ಪ್ಯಾಕೆಟ್‌ಗಳನ್ನು ಖರೀದಿಸಲು ಆಗುವುದಿಲ್ಲ. ಹೀಗಾಗಿ, ಇವರಿಗಾಗಿ ಕಾಲು ಲೀಟರ್ (250 ಎಂಎಲ್) ಪ್ಯಾಕೆಟ್‌ನಲ್ಲಿ ಹಾಲು ಮಾರಾಟ ಮಾಡಬೇಕು. ಆಗ, ಬಡವರೇ ಹೆಚ್ಚಾಗಿರುವ ಸಮಾಜದಲ್ಲಿ ಸಹಜವಾಗಿಯೇ ನಂದಿನಿ ಹಾಲಿನ ಮಾರಾಟವೂ ಹೆಚ್ಚಾಗುತ್ತದೆ. ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಈ ವಿಷಯವನ್ನು ಗಂಭೀರವಾಗಿ ಪರಿಶೀಲಿಸಬೇಕು.

ಐ.ಯು.ಇಟಗಿ, ಹುಬ್ಬಳ್ಳಿ

ಗಾಳಿಯಲ್ಲಿ ಗುಂಡು ಹೊಡೆಯುವುದೇಕೆ?

ಎಚ್.ಡಿ.ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ರಾಜ್ಯದ ಗೌರವಾನ್ವಿತ ರಾಜಕಾರಣಿಗಳು. ಜನಸಾಮಾನ್ಯರು ಮತ ಹಾಕಿ ಚುನಾವಣೆಯಲ್ಲಿ ಇಬ್ಬರನ್ನೂ ಗೆಲ್ಲಿಸಿದ್ದಾರೆ. ಈ ಕಾರಣದಿಂದ, ಒಬ್ಬರು ಕೇಂದ್ರ ಸರ್ಕಾರದಲ್ಲಿ ಮತ್ತು ಇನ್ನೊಬ್ಬರು ರಾಜ್ಯ ಸರ್ಕಾರದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದಾರೆ. ಶಿವಕುಮಾರ್ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಅವರು ತಮ್ಮ ಬಳಿ ಟನ್‌ಗಟ್ಟಲೆ ದಾಖಲೆಗಳು ಇರುವುದಾಗಿ ಹೇಳಿರುವ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದಕ್ಕೆ ಪ್ರತಿಯಾಗಿ ಶಿವಕುಮಾರ್ ಅವರು 'ಅವರು ಗಾಳಿಯಲ್ಲಿ ಗುಂಡು ಹೊಡೆಯುವವರು. ನನ್ನ ವಿರುದ್ಧ ಟನ್‌ಗಟ್ಟಲೆ ದಾಖಲೆಗಳಿದ್ದರೆ ಅವುಗಳನ್ನು ಬಹಿರಂಗಪಡಿಸಲಿ. ಎಲ್ಲದಕ್ಕೂ ಉತ್ತರಿಸುತ್ತೇನೆ' ಎಂದು ಹೇಳಿದ್ದಾರೆ.

ಅದರಂತೆ ಈಗ ಕುಮಾರಸ್ವಾಮಿ ಅವರು ಬರೀ ಗಾಳಿಯಲ್ಲಿ ಗುಂಡು ಹೊಡೆಯದೆ ಎಲ್ಲವನ್ನೂ ಬಹಿರಂಗಪಡಿಸಬೇಕು ಎಂಬುದು ಇಬ್ಬರಿಗೂ ಮತ ಹಾಕಿ ಗೆಲ್ಲಿಸಿರುವ ಮತದಾರರ ಆಗ್ರಹ. ನಂತರ ಶಿವಕುಮಾರ್ ಅವರು ಅದಕ್ಕೆ ಉತ್ತರಿಸದಿದ್ದರೆ ಅವರಿಗೂ ಪ್ರಶ್ನೆಗಳನ್ನು ಕೇಳಲು ಇದರಿಂದ ನೆರವಾಗುತ್ತದೆ.

ಎ.ವಿ.ಶಾಮರಾವ್, ಬೆಂಗಳೂರು

ಬಲೆ!

ಕೇಳಿಬಂದಿದೆ
'ಮಧುಬಲೆ'ಯ ಹಗರಣ!
ಅದು ಬೇಡ,
'ಮಧು' ಸಂಸ್ಕೃತ
'ಜೇನುಬಲೆ' ಎನ್ನೋಣ
(ಅಚ್ಚಗನ್ನಡ!)
ಆದೀತು; 'ಮಧುಜಾಲ' ಕೂಡ

ಸಿ.ಪಿ.ಕೆ., ಮೈಸೂರು

ಚೋಮನೂ ಚಿರಂಜೀವಿ, ಪಾತ್ರಧಾರಿಯೂ ಚಿರಂಜೀವಿ

ಭಾರತ ಚಲನಚಿತ್ರರಂಗದಲ್ಲಿನ ಅಪೂರ್ವ ಸೃಷ್ಟಿಗಳಲ್ಲಿ ಒಂದಾದ ಬಿ.ವಿ.ಕಾರಂತ ನಿರ್ದೇಶನದ 'ಚೋಮನ ದುಡಿ' ಈಗ ಸುವರ್ಣ ಸಂಭ್ರಮದಲ್ಲಿದೆ. ಶಿವರಾಮ ಕಾರಂತರ ಕಾದಂಬರಿ ಆಧರಿಸಿದ ಈ ಚಲನಚಿತ್ರ ಬಿಡುಗಡೆಯಾದ 19 ವರ್ಷಗಳ ನಂತರ, 1994ರಲ್ಲಿ ನನ್ನ ಕಾರ್ಯಸ್ಥಾನ ಚಂಡೀಗಡದಿಂದ ಚೆನ್ನೈ ಮೂಲಕ ಬೆಂಗಳೂರಿಗೆ ಬರುವವನಿದ್ದೆ. ಆಗ ಚೆನ್ನೈ ಬಸ್ ನಿಲ್ದಾಣದಲ್ಲಿ ಬೆಂಗಳೂರಿಗೆ ಹೊರಟು ನಿಂತಿದ್ದ ಬಸ್ ಹತ್ತಿದಾಗ ಎದುರಿಗೆ ಕಂಡಿದ್ದು ಸಪೂರ ದೇಹ, ಅಷ್ಟೇನೂ ಎತ್ತರವಲ್ಲದ, ಹೊಂಬಣ್ಣದ, ಮಂಗಳೂರು ದಟ್ಟಿ ಬಿಳಿ ಪಂಚೆ, ಜುಬ್ಬ, ಹೆಗಲಲ್ಲಿ ಟವೆಲ್ ಮಾದರಿಯ ಒಂದು ಬಿಳಿ ಶಲ್ಯ ಧರಿಸಿದ್ದ ವ್ಯಕ್ತಿ. ಅವರು ನನ್ನನ್ನು ಕಂಡು 'ನೀವು ಕನ್ನಡದವರಾ? ಬನ್ನಿ ಬನ್ನಿ' ಎಂದು ತಮ್ಮ ಪಕ್ಕದ ಜಾಗ ತೋರಿಸಿದರು. ನಾನು ಕೂಡಲೇ 'ನೀವು ವಾಸುದೇವ ರಾವ್ ಅಲ್ಲವೇ? ಚೋಮನದುಡಿ ವಾಸುದೇವ್' ಅನ್ನುವಷ್ಟರಲ್ಲೇ ಅವರು 'ಹೌದ್ಹೌದು... ಚಿತ್ರ ಬಂದು ಇಷ್ಟೊಂದು ವರ್ಷಗಳಾದ ಮೇಲೂ ಇನ್ನೂ ನೆನಪಿದೆಯಲ್ಲಾ ನಿಮಗೆ, ಸಂತೋಷ ಸಂತೋಷ' ಎಂದರು. ನಾನು 'ಸಾರ್... ಆ ಚೋಮನ ಪಾತ್ರದಲ್ಲಿ ಜೀವಿಸಿ ಪ್ರೇಕ್ಷಕರಿಗೆ ಕಣ್ಣೀರ ಸ್ನಾನ ಮಾಡಿಸಿ ಯೋಚಿಸುವಂತೆ ಮಾಡಿದ ನಿಮ್ಮನ್ನಾಗಲೀ ಆ ಚಿತ್ರವನ್ನಾಗಲೀ ಮರೆಯಲಾದೀತೇ' ಎಂದೆ. ಮೊದಲೇ ಹೊಳಪಿನಿಂದಿದ್ದ ಅವರ ಕಣ್ಣುಗಳು ಮತ್ತಷ್ಟು ಹೊಳೆದಿದ್ದವು.

ದಾರಿಯುದ್ದಕ್ಕೂ ಅವರು ತಮ್ಮ ಬದುಕು ಸಾಗಿ ಬಂದ ದಾರಿ, ಗುಬ್ಬಿ ವೀರಣ್ಣ ನಾಟಕ ಕಂಪನಿಯ ಜೊತೆಗಿನ ನಂಟು, ಹವ್ಯಾಸಿ ರಂಗಭೂಮಿ, ಯಕ್ಷಗಾನ, ಚಿತ್ರ ನಿರ್ದೇಶಕ ಮೃಣಾಲ್ ಸೇನ್ ಅವರು ನಿರ್ದೇಶಿಸಲು ಉದ್ದೇಶಿಸಿದ್ದ ತೆಲುಗು ಚಿತ್ರವೊಂದರ ಮುಖ್ಯ ಪಾತ್ರ ಪೋಷಣೆಗೆ ಇವರನ್ನೇ ಕಾಯುತ್ತಾ ನಿಂತದ್ದು, ಗುಬ್ಬಿ ವೀರಣ್ಣ ಸಂಸ್ಥೆಯಲ್ಲಿ ಸಹನಟರಾಗಿದ್ದ ರಾಜ್‌ಕುಮಾರ್ ಅವರ ವಿನಯ, ಗಾಂಭೀರ್ಯ, ಸೌಜನ್ಯ, ಆದರ್ಶ... ಹೀಗೆ ಎಲ್ಲದರ ಬಗ್ಗೆಯೂ ಬಲು ಮುಕ್ತವಾಗಿ ಮಾತನಾಡಿದರು. ಅಷ್ಟರಲ್ಲೇ ಬಸ್ ಒಂದು ಹೋಟೆಲಿನ ಮುಂದೆ ಮಧ್ಯಾಹ್ನದ ಊಟಕ್ಕಾಗಿ ನಿಲ್ಲಿಸಿದಾಗ, ನಾವಿಬ್ಬರೂ ಜೊತೆಯಲ್ಲೇ ಕುಳಿತು ಊಟ ಮಾಡಿದೆವು. ನಂತರವೂ ಅವರೊಟ್ಟಿಗೆ ವಿವಿಧ ವಿಷಯಗಳ ಕುರಿತು ಮಾತುಕತೆ ಮುಂದುವರಿಯಿತು. ಬೆಂಗಳೂರು ತಲುಪಿದಾಗ ಅವರ ಕಾಲು ಮುಟ್ಟಿ ನಮಸ್ಕರಿಸುವ ಭಾಗ್ಯ ನನ್ನದಾಯಿತು. ಅಂತಹ ಅನುಭವಿ ಸಾರ್ಥಕ ಕರ್ಮಿಗಳ ಸಂಗ ದೊರಕುವುದು ಅಪರೂಪ. ಕಾರಂತದ್ವಯರ 'ಚೋಮ' ಚಿರಂಜೀವಿ ಹೌದಾದರೂ ಆ ಪಾತ್ರವನ್ನು ಅತ್ಯುತ್ತಮವಾಗಿ ಪೋಷಿಸಿದ್ದ ಪಾತ್ರಧಾರಿ ಎಂ.ವಿ.ವಾಸುದೇವ ರಾವ್ ಅವರೂ ಚಿರಂಜೀವಿಯೇ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಮಿಳುನಾಡಿನ ರಾಜ್ಯಪಾಲ ಆರ್‌.ಎನ್‌.ರವಿ ಅವರು ಅಲ್ಲಿನ ಸರ್ಕಾರದ 10 ಮಸೂದೆಗಳ ಬಗ್ಗೆ ತೀರ್ಮಾನ ಕೈಗೊಳ್ಳದೇ ತಮ್ಮ ಬಳಿಯೇ ಉಳಿಸಿಕೊಂಡು ವಿಳಂಬ ಮಾಡಿದ ಬಗ್ಗೆ ಸುಪ್ರೀಂ ಕೋರ್ಟ್‌ ನೀಡಿರುವ ತೀರ್ಪು ಹಲವು ನೆಲೆಗಳಿಂದ ಐತಿಹಾಸಿಕವಾಗಿದೆ. ರಾಜ್ಯಪಾಲರ ಅಧಿಕಾರ ಮತ್ತು ರಾಜ್ಯ ಸರ್ಕಾರಗಳ ಹಕ್ಕಿನ ಬಗ್ಗೆ ನ್ಯಾಯಮೂರ್ತಿಗಳ ಮಾತು ಮತ್ತೊಮ್ಮೆ ಬೆಳಕು ಚೆಲ್ಲಿದೆ. ಕರ್ನಾಟಕವೂ ಸೇರಿದಂತೆ ಕೇರಳ, ಪಶ್ಚಿಮ ಬಂಗಾಳ, ಪಂಜಾಬ್‌ ರಾಜ್ಯಗಳ ಹಲವು ಮಸೂದೆಗಳು ರಾಜ್ಯಪಾಲರ ಬಳಿ ಬಾಕಿ ಇದ್ದು, ಅವುಗಳಿಗೆ ಶೀಘ್ರದಲ್ಲೇ ಅಂಕಿತ ಸಿಗುವ ವಿಶ್ವಾಸ ಮೂಡಿಸಿದೆ. ಭವಿಷ್ಯದಲ್ಲಿಯೂ ಇದು ರಾಜ್ಯಪಾಲ ಮತ್ತು ಸರ್ಕಾರದ ನಡುವಿನ ಸಂಘರ್ಷದ ಸಂದರ್ಭದಲ್ಲಿ ದಿಕ್ಸೂಚಿಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ

ರಾಜ್ಯ–ರಾಜ್ಯಪಾಲರ ಸಂಘರ್ಷ 'ಸುಪ್ರೀಂ' ದಿಕ್ಸೂಚಿ

ಬಿಜೆಪಿಯೇತರ ರಾಜ್ಯ ಸರ್ಕಾರಗಳ ಹಲವು ಮಸೂದೆಗಳಿಗೆ ಸಿಕ್ಕಿಲ್ಲ ಮುಕ್ತಿ



ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ರಾಜ್ಯಪಾಲರು ಸಾಂವಿಧಾನಿಕ ಮುಖ್ಯಸ್ಥರಾಗಿದ್ದರೆ, ಸಚಿವ ಸಂಪುಟವು ಆಡಳಿತಾತ್ಮಕ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಚುನಾಯಿತ ಸರ್ಕಾರವು ಕಾಲದಿಂದ ಕಾಲಕ್ಕೆ ರೂಪಿಸಿದ ಮಸೂದೆಗಳು ಕಾಯ್ದೆಯಾಗಿ ಜಾರಿಗೆ ಬರಬೇಕು ಎಂದರೆ, ಅವಕ್ಕೆ ರಾಜ್ಯಪಾಲರ ಅಂಕಿತ ಬೀಳಲೇಬೇಕು. ರಾಜ್ಯ ಸರ್ಕಾರವು ಸಚಿವ ಸಂಪುಟದಲ್ಲಿ ಚರ್ಚಿಸಿ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಅಂಗೀಕರಿಸಿದ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಬೇಕು, ಹಿಂದಿರುಗಿಸಬೇಕು ಇಲ್ಲವೇ ರಾಷ್ಟ್ರಪತಿಗೆ ಕಳುಹಿಸಬೇಕು. ಆದರೆ, 2014ರ ನಂತರ, ಬಿಜೆಪಿಯೇತರ ಪಕ್ಷಗಳು ಆಡಳಿತ ನಡೆಸುವ ರಾಜ್ಯಗಳಲ್ಲಿ ಸರ್ಕಾರಗಳು ರೂಪಿಸಿದ ಮಸೂದೆಗಳ ಬಗ್ಗೆ ರಾಜ್ಯಪಾಲರು ಅನಿರ್ದಿಷ್ಟ ಕಾಲದವರೆಗೆ ನಿರ್ಧಾರ ಕೈಗೊಳ್ಳದೆ ವಿಳಂಬ ಮಾಡಿದ ವಿಚಾರವು ಅನೇಕ ಬಾರಿ ವಿವಾದ ಸೃಷ್ಟಿಸಿದೆ.

ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಮತ್ತು ರಾಜ್ಯಪಾಲ ಆರ್‌.ಎನ್‌.ರವಿ ನಡುವಿನ ತಿಕ್ಕಾಟದಂತೆಯೇ ಹಲವು ರಾಜ್ಯಗಳಲ್ಲಿ ಸಂಘರ್ಷ ನಡೆಯುತ್ತಿದೆ. ಜಾರ್ಖಂಡ್‌ನಲ್ಲಿ ಜೆಎಂಎಂ ಮೈತ್ರಿ ಸರ್ಕಾರ ಇದ್ದಾಗ ಮೊದಲು ರಾಜ್ಯಪಾಲರಾಗಿದ್ದ ರಮೇಶ್‌ ಬೈಸ್‌ ಮತ್ತು ನಂತರ ರಾಜ್ಯಪಾಲರಾಗಿ ಬಂದಿದ್ದ ಸಿ.ಪಿ.ರಾಧಾಕೃಷ್ಣನ್‌ ಅವರು ಸರ್ಕಾರದ ಅನೇಕ ಮಸೂದೆಗಳಿಗೆ ಅಂಕಿತ ಹಾಕಿರಲಿಲ್ಲ. ಅದೇ ರೀತಿ ಕೇರಳ ಸರ್ಕಾರದ ವಿಶ್ವವಿದ್ಯಾಲಯ ತಿದ್ದುಪಡಿ ನಿಯಮಗಳ ಮಸೂದೆ, ಸಹಕಾರ ಸಂಘಗಳ ತಿದ್ದುಪಡಿ ಮಸೂದೆ ಮತ್ತು ಲೋಕಾಯುಕ್ತ ಮಸೂದೆಗಳು ಸೇರಿದಂತೆ ಅನೇಕ ಮಸೂದೆಗಳಿಗೆ ರಾಜ್ಯಪಾಲರಾಗಿದ್ದ ಆರಿಫ್‌ ಮೊಹಮ್ಮದ್‌ ಖಾನ್‌ ಅವರು ಸಹಿ ಹಾಕಿರಲಿಲ್ಲ. ಪಂಜಾಬ್‌ ರಾಜ್ಯಪಾಲರಾಗಿದ್ದ ಬನ್ವರಿಲಾಲ್‌ ಪುರೋಹಿತ್‌ ಮತ್ತು ಎಎಪಿ ಸರ್ಕಾರ, ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದ ಜಗದೀಪ್‌ ಧನಕರ್‌ ಮತ್ತು ಟಿಎಂಸಿ ಸರ್ಕಾರದ ನಡುವೆ ಭಾರಿ ಸಂಘರ್ಷವೇ ನಡೆದಿತ್ತು.

ತೆಲಂಗಾಣದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಬಿಆರ್‌ಎಸ್‌ ಮತ್ತು ಆಗ ರಾಜ್ಯಪಾಲರಾಗಿದ್ದ ತಮಿಳ್‌ ಇಸೈ ಸೌಂದರರಾಜನ್‌ ನಡುವಿನ ತಿಕ್ಕಾಟವಂತೂ ರಾಜಭವನದ ಹೊರಗೂ ಚಾಚಿಕೊಂಡಿತ್ತು. ಮಸೂದೆಗಳಿಗೆ ಒಪ್ಪಿಗೆ ನೀಡದೇ ಇರುವುದರ ಜತೆಗೆ, ತಮಿಳ್‌ ಇಸೈ ಅವರು ವಿರೋಧ ಪಕ್ಷಗಳ ನಾಯಕರಂತೆ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರು; ಸುದ್ದಿವಾಹಿನಿಗಳಿಗೆ ಸಂದರ್ಶನ ನೀಡಿ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಕಾರ್ಯವೈಖರಿಯನ್ನು ಟೀಕಿಸುತ್ತಿದ್ದರು.

ಹಲವು ಬಾರಿ ಎಚ್ಚರಿಸಿದ್ದ 'ಸುಪ್ರೀಂ': ರಾಜ್ಯಪಾಲರ ಇಂಥ ಧೋರಣೆಯ ವಿರುದ್ಧ ರಾಜ್ಯ ಸರ್ಕಾರಗಳು ಹಲವು ಬಾರಿ 'ಸುಪ್ರೀಂ'ನ ಕದ ತಟ್ಟಿವೆ. ರಾಜ್ಯಪಾಲರಾದ ತಮಿಳ್‌ ಇಸೈ ಅವರು 10 ಮಸೂದೆಗಳಿಗೆ ಅಂಕಿತ ಹಾಕದೇ ವಿಳಂಬ ಮಾಡುತ್ತಿದ್ದಾರೆ ಎಂದು 2023ರಲ್ಲಿ ತೆಲಂಗಾಣ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಸ್ಪಷ್ಟೀಕರಣ ಕೋರಿ ಮಸೂದೆಗಳನ್ನು ವಾಪಸ್‌ ಕಳುಹಿಸಲಾಗಿದೆ ಎಂದು ರಾಜ್ಯಪಾಲರು ಹೇಳಿದ ನಂತರ ಪ್ರಕರಣ ಮುಕ್ತಾಯವಾಗಿತ್ತು. ಆದರೂ, ರಾಜ್ಯಪಾಲರು ಇಂಥ ವಿಚಾರಗಳಲ್ಲಿ ವಿಳಂಬ ಮಾಡುವಂತಿಲ್ಲ ಎಂದು ಕೋರ್ಟ್‌ ಕಿವಿಮಾತು ಹೇಳಿತ್ತು.

ಕಳೆದ ವರ್ಷ ಪಂಜಾಬ್‌ ಸರ್ಕಾರವು ಬನ್ವರಿಲಾಲ್‌ ಅವರು ನಾಲ್ಕು ಮಸೂದೆಗಳಿಗೆ ಸಹಿ ಹಾಕದೇ ವಿಳಂಬ ಮಾಡುತ್ತಿದ್ದಾರೆ ಎಂದು 'ಸುಪ್ರೀಂ'ನಲ್ಲಿ ಅರ್ಜಿ ಸಲ್ಲಿಸಿತ್ತು. ಆಗಲೂ ಬನ್ವರಿಲಾಲ್‌ ಅವರಿಗೆ ಶೀಘ್ರ ಮಸೂದೆ ವಿಲೇವಾರಿಗೆ ಕೋರ್ಟ್‌ ಸೂಚಿಸಿತ್ತು; ರಾಜ್ಯಪಾಲರು ಸಾಂಕೇತಿಕ ಮುಖ್ಯಸ್ಥರಾಗಿದ್ದು, ವಿಧಾನ ಮಂಡಲ ಅಂಗೀಕರಿಸಿರುವ ಮಸೂದೆಗಳನ್ನು ತಡೆಹಿಡಿಯುವಂತಿಲ್ಲ ಎಂದಿತ್ತು. ಟಿಎಂಸಿ ಸರ್ಕಾರವು ವಿಧಾನ ಮಂಡಲದಲ್ಲಿ ಅಂಗೀಕರಿಸಿದ್ದ ಎಂಟು ಮಸೂದೆಗಳನ್ನು ರಾಜ್ಯಪಾಲರಾಗಿದ್ದ ಆನಂದ ಬೋಸ್‌ ಅವರು ವಿಲೇವಾರಿ ಮಾಡದೇ ಹಾಗೆಯೇ ಉಳಿಸಿಕೊಂಡಿದ್ದಾರೆ ಎಂದು ಪಶ್ಚಿಮ ಬಂಗಾಳ ಸರ್ಕಾರವು 2024ರ ಜುಲೈನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಾಕಿದೆ. ಅದು ಇನ್ನೂ ವಿಚಾರಣೆಯ ಹಂತದಲ್ಲಿದೆ.

ಈಗ ತಮಿಳುನಾಡು ಪ್ರಕರಣದಲ್ಲಿ 'ಸುಪ್ರೀಂ'ನ ತೀರ್ಪು ಇಂಥದ್ದೇ ಸಮಸ್ಯೆ ಎದುರಿಸುತ್ತಿರುವ ಹಲವು ರಾಜ್ಯಗಳಲ್ಲಿ ಭರವಸೆ ಮೂಡಿಸಿದೆ. ಪಂಜಾಬ್‌, ಜಾರ್ಖಂಡ್‌, ಕೇರಳದಲ್ಲಿ ಕೆಲವು ಮಸೂದೆಗಳು ರಾಜ್ಯಪಾಲರ ಅಂಕಿತಕ್ಕಾಗಿ ಕಾಯುತ್ತಿವೆ.



ಜಾರಿಯಾಗದ ವರದಿಗಳು

ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು ಎಂದರೆ, ಸಕ್ರಿಯ ರಾಜಕಾರಣದಿಂದ ದೂರ ಇರುವವರನ್ನು ರಾಜ್ಯಪಾಲರಾಗಿ ನೇಮಿಸಬೇಕು ಎನ್ನುವುದು ಸಂವಿಧಾನ ತಜ್ಞರ ಸಲಹೆ. ಈ ದಿಸೆಯಲ್ಲಿ ರಾಜ್ಯಪಾಲರ ನೇಮಕಾತಿ ಮತ್ತು ಅವರ ಕಾರ್ಯನಿರ್ವಹಣೆಯ ಚೌಕಟ್ಟಿನ ಸಂಬಂಧ ಸರ್ಕಾರಿಯಾ ಆಯೋಗ, ಎಂ.ಎನ್‌. ವೆಂಕಟಾಚಲಯ್ಯ ಆಯೋಗ ಹಲವು ಶಿಫಾರಸು ಮಾಡಿವೆ. ಆದರೆ, ಅವುಗಳ ಮುಖ್ಯ ಶಿಫಾರಸುಗಳುಜಾರಿಗೆಬಂದಿಲ್ಲ. ಒಕ್ಕೂಟ ವ್ಯವಸ್ಥೆಯು (ಫೆಡರಲಿಸಂ) ದೇಶದ ಸಂವಿಧಾನದ ಮೂಲ ಲಕ್ಷಣವಾಗಿದೆ. ಇದರ ಮುಖ್ಯ ಪಾತ್ರ ವಹಿಸಬೇಕಾದ ರಾಜ್ಯಪಾಲರು, ಸಂವಿಧಾನದ 163ನೇ ವಿಧಿಯ ಪ್ರಕಾರ, ಸಚಿವ ಸಂಪುಟದ ಸಲಹೆಯ ಮೇರೆಗೆ ಮಾತ್ರ ಕೆಲಸ ಮಾಡಬೇಕು. ಆದರೆ, ಸ್ವಂತ ವಿವೇಚನಾಧಿಕಾರ ಬಳಸುವುದು, ರಾಜಕೀಯ ಪಕ್ಷವೊಂದರ ವಕ್ತಾರರಾಗಿ ಕೆಲಸ ಮಾಡುತ್ತಿರುವುದರಿಂದ ಸಮಸ್ಯೆ, ಸಂಘರ್ಷ ಸೃಷ್ಟಿಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಆಧಾರ: ಪಿಟಿಐ, ಸುಪ್ರೀಂ ಕೋರ್ಟ್‌ ತೀರ್ಪುಗಳು, ಮಾಧ್ಯಮ ವರದಿಗಳು

ತೀರ್ಪಿಗೇಕೆ ಮಹತ್ವ?

'ಈ ತೀರ್ಪು ಐತಿಹಾಸಿಕ. ಇದು ಎಲ್ಲ ರಾಜ್ಯ ಸರ್ಕಾರಗಳಿಗೆ ಸಿಕ್ಕ ಗೆಲುವು'

– ಮಂಗಳವಾರ ಸುಪ್ರೀಂ ಕೋರ್ಟ್‌ನ ತೀರ್ಪು ಹೊರಬಿದ್ದ ತಕ್ಷಣ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್‌ ನೀಡಿದ ಪ್ರತಿಕ್ರಿಯೆ ಇದು.

ಕರ್ನಾಟಕದ ಸಿದ್ದರಾಮಯ್ಯ, ಕೇರಳದ ಪಿಣರಾಯಿ ವಿಜಯನ್‌ ಸೇರಿದಂತೆ ಬಿಜೆಪಿಯೇತರ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳು ಕೂಡ 'ಸುಪ್ರೀಂ'ನ ತೀರ್ಪನ್ನು ಸ್ವಾಗತಿಸಿದ್ದಾರೆ. ಈ ತೀರ್ಪಿನ ಆಧಾರದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ.

ಕಾನೂನು ತಜ್ಞರು ಕೂಡ ಈ ತೀರ್ಪನ್ನು ಸ್ವಾಗತಿಸಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಕಾನೂನುಗಳನ್ನು ರೂಪಿಸುವ ರಾಜ್ಯಗಳ/ವಿಧಾನ ಮಂಡಲಗಳ ಹಕ್ಕುಗಳನ್ನು ಈ ತೀರ್ಪು ಒತ್ತಿ ಹೇಳಿದೆ. ಕೇಂದ್ರ ಸರ್ಕಾರವು ರಾಜ್ಯಪಾಲರ ಮೂಲಕ ವಿವಿಧ ರಾಜ್ಯಗಳ ಆಡಳಿತದಲ್ಲಿ ಮೂಗು ತೂರಿಸುವ ಪ್ರವೃತ್ತಿಗೂ ಇದು ಕಡಿವಾಣ ಹಾಕಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಸುಪ್ರೀಂ ಕೋರ್ಟ್‌ನ ನಿರ್ಧಾರದಿಂದ ತಮಿಳುನಾಡು ಸರ್ಕಾರ ಸೇರಿದಂತೆ ಮಸೂದೆಗಳ ವಿಚಾರದಲ್ಲಿ ರಾಜ್ಯಪಾಲರೊಂದಿಗೆ ಸಂಘರ್ಷ ನಡೆಸುತ್ತಿರುವ ಇತರ ರಾಜ್ಯಗಳಿಗೂ ಅನುಕೂಲವಾಗಲಿದೆ ಎಂಬ ಅಭಿಪ್ರಾಯವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ತೀರ್ಪು ರಾಜ್ಯಪಾಲರ ಅಧಿಕಾರಗಳ ವಿಚಾರದ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ಈ ಹಿಂದೆಯೂ ದೇಶದ ಅತ್ಯುನ್ನತ ನ್ಯಾಯಾಲಯವು ವಿವಿಧ ಪ್ರಕರಣಗಳಲ್ಲಿ ರಾಜ್ಯಪಾಲರ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ತೀರ್ಪುಗಳನ್ನು ನೀಡಿತ್ತು.



- 1974ರ ಶಮ್‌ಶೇರ್‌ ಸಿಂಗ್‌ ಮತ್ತು ಪಂಜಾಬ್‌ ನಡುವಿನ ಪ್ರಕರಣದಲ್ಲಿ (ಇಬ್ಬರನ್ನು ನ್ಯಾಯಾಂಗ ಇಲಾಖೆಯಿಂದ ಕಾರಣ ನೀಡದೆ ವಜಾ ಮಾಡಿದ್ದ ಪ್ರಕರಣ) ರಾಜ್ಯಪಾಲರ ಅಧಿಕಾರದ ಬಗ್ಗೆ ವಿವರಣೆ ನೀಡಿದ್ದ ಸುಪ್ರೀಂ ಕೋರ್ಟ್‌, 'ರಾಜ್ಯಪಾಲರು ರಾಜ್ಯದ ಮಂತ್ರಿ ಪರಿಷತ್ತಿನ ಸಲಹೆಗೆ ಅನುಗುಣವಾಗಿ ನಡೆದುಕೊಳ್ಳಬೇಕಾಗುತ್ತದೆ. ಅವರು ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ಮಾತ್ರ ತಮ್ಮ ವಿವೇಚನಾಧಿಕಾರವನ್ನು ಬಳಸಬಹುದು' ಎಂದು ಹೇಳಿತ್ತು
- ರಾಮೇಶ್ವರ ಪ್ರಸಾದ್‌ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ (ಬಿಹಾರ ವಿಧಾನಸಭೆ ವಿಸರ್ಜನೆ ಮಾಡಿದ ಪ್ರಕರಣ) ರಾಜ್ಯಪಾಲರ ವೈಯಕ್ತಿಕ ಅಭಿಪ್ರಾಯವು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಆಧಾರವಾಗಲಾರದು ಎಂದು ಸುಪ್ರೀಂ ಕೋರ್ಟ್‌ 2006ರಲ್ಲಿ ಪ್ರತಿಪಾದಿಸಿತ್ತು
- 2006ರಲ್ಲಿ ಎಪುರು ಸುಧಾಕರ್‌ ಮತ್ತು ಆಂಧ್ರಪ್ರದೇಶ ಸರ್ಕಾರದ ನಡುವಿನ ವ್ಯಾಜ್ಯದಲ್ಲಿ (ಕ್ಷಮಾದಾನ ಅರ್ಜಿಗೆ ಸಂಬಂಧಿಸಿದ ಪ್ರಕರಣ) ಸಂವಿಧಾನದ 161ನೇ ವಿಧಿಯು ರಾಜ್ಯಪಾಲರಿಗೆ ನೀಡಿರುವ ಕ್ಷಮಾದಾನ ನೀಡುವ ಅಧಿಕಾರ ಕೂಡ ನ್ಯಾಯಾಂಗದ ಪರಿಶೀಲನೆಗೆ ಒಳಪಟ್ಟಿದೆ ಎಂದು ಹೇಳಿತ್ತು
- 2016ರಲ್ಲಿ ಅರುಣಾಚಲ ಪ್ರದೇಶ ವಿಧಾನಸಭೆಗೆ ಸಂಬಂಧಿಸಿದ ಪ್ರಕರಣದಲ್ಲೂ ಐವರು ನ್ಯಾಯಮೂರ್ತಿಗಳನ್ನೊಳಗೊಂಡ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು, ವಿಧಾನಸಭೆ ಅಧಿವೇಶನ ಕರೆಯುವುದು, ವಿಸರ್ಜಿಸುವುದು ಮತ್ತು ಅಧಿವೇಶನವನ್ನು ನಿಗದಿಗೂ ಮೊದಲೇ ಕರೆಯುವುದಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಇರುವ ಅಧಿಕಾರವು ಕಾನೂನಿಗೆ ಪರಿಶೀಲನೆಗೆ ಒಳಪಡುತ್ತದೆ ಎಂದು ಒಮ್ಮತದ ತೀರ್ಪು ನೀಡಿತ್ತು

ಸಂವಿಧಾನ ಹೇಳುವುದೇನು?

ಮಸೂದೆಗಳಿಗೆ ಅಂಕಿತ ಹಾಕುವ ಸಂಬಂಧ ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ಸಂವಿಧಾನದ 200ನೇ ವಿಧಿಯು ವಿವರಿಸುತ್ತದೆ.

ಅದರ ಪ್ರಕಾರ, ರಾಜ್ಯವೊಂದರ ವಿಧಾನ ಮಂಡಲದ ಎರಡೂ ಸದನಗಳು ಅಂಗೀಕರಿಸಿದ ಮಸೂದೆಯನ್ನು ಅನುಮತಿಗಾಗಿ ರಾಜ್ಯಪಾಲರ ಮುಂದಿಡಬೇಕು. ರಾಜ್ಯಪಾಲರು ಆ ಮಸೂದೆಗೆ ಅಂಕಿತ ಹಾಕಬಹುದು ಅಥವಾ ಅನುಮತಿ ನೀಡದಿರಬಹುದು ಅಥವಾ ರಾಷ್ಟ್ರಪತಿಗಳ ಪರಿಶೀಲನೆಗಾಗಿ ಮಸೂದೆಯನ್ನು ಕಳುಹಿಸಬಹುದು. ರಾಜ್ಯವು ಮಸೂದೆಯನ್ನು (ಹಣಕಾಸು ಮಸೂದೆ ಅಲ್ಲದಿದ್ದರೆ) ರಾಜ್ಯಪಾಲರ ಸಹಿಗಾಗಿ ಕಳುಹಿಸಿದ ನಂತರ, ರಾಜ್ಯಪಾಲರು ಮಸೂದೆಯನ್ನು ಮರುಪರಿಶೀಲಿಸುವಂತೆ ಮತ್ತು ಆಗಬೇಕಾದ ಬದಲಾವಣೆಗಳ ಕುರಿತಂತೆ ಶಿಫಾರಸು ಮಾಡಿ ಸಾಧ್ಯವಾದಷ್ಟು ಬೇಗ ಮಸೂದೆಯನ್ನು ವಾಪಸ್‌ ಕಳುಹಿಸಬೇಕು. ಮಸೂದೆ ವಾಪಸ್‌ ಬಂದ ನಂತರ ವಿಧಾನಸಭೆ ಅಥವಾ ಎರಡೂ ಸದನಗಳು ಮಸೂದೆಯನ್ನು ಪರಿಶೀಲನೆಗೆ ಒಳಪಡಿಸಬೇಕು. ಒಂದು ವೇಳೆ ವಿಧಾನಸಭೆ ಅಥವಾ ಎರಡೂ ಸದನಗಳು ಮಸೂದೆಯಲ್ಲಿ ತಿದ್ದುಪಡಿಗಳನ್ನು ಮಾಡಿ ಅಥವಾ ತಿದ್ದುಪಡಿ ಮಾಡದೆ ಮೊದಲಿನ ರೂಪದಲ್ಲಿಯೇ ಅಂಗೀಕರಿಸಿ, ಮತ್ತೆ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿದ ಪಕ್ಷದಲ್ಲಿ ರಾಜ್ಯಪಾಲರು ಅಂಕಿತ ಹಾಕದೆ ಇರುವಂತಿಲ್ಲ. ಒಂದು ವೇಳೆ, ಮಸೂದೆಯು ಕಾನೂನಾದರೆ ಅದು ಸಂವಿಧಾನದಲ್ಲಿ ಹೈಕೋರ್ಟ್‌ಗೆ ನೀಡಿರುವ ಅಧಿಕಾರ ಮತ್ತು ಸ್ಥಾನಮಾನವನ್ನು ಕುಗ್ಗಿಸಬಹುದು ಎಂಬ ಅಭಿಪ್ರಾಯ ರಾಜ್ಯಪಾಲರಿಗೆ ಬಂದರೆ ಅವರು ಮಸೂದೆಗೆ ಅಂಕಿತ ಹಾಕದೆ ರಾಷ್ಟ್ರಪತಿ ಅವರ ಪರಿಶೀಲನೆಗಾಗಿ ಕಳುಹಿಸಬೇಕು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಸಿನಿಮಾಗಳಿಗೆ ಆಹ್ವಾನ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ 'ಸಿನಿ ಸಮ್ಮಾನ'ದ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗುತ್ತಿದೆ.

2023ರಲ್ಲಿ ತನ್ನ ಅಮೃತ ಸಂಭ್ರಮದ ಸಂದರ್ಭದಲ್ಲಿ 'ಪ್ರಜಾವಾಣಿ' ಪ್ರಾರಂಭಿಸಿದ ಈ ಕಾರ್ಯಕ್ರಮ ಕನ್ನಡ ಚಿತ್ರರಂಗದವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಸಲಾಗಿದೆ.

ಇದೀಗ 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗುತ್ತಿದೆ. ಮೇಲಿರುವ ಕ್ಯೂಆರ್‌ ಕೋಡ್‌ ಸ್ಕ್ಯಾನ್‌ ಮಾಡುವ ಮೂಲಕ ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.



ಸಿನಿಮಾ ಸಲ್ಲಿಕೆಗೆ ನಾಳೆ ಸಂಜೆ ತನಕವೂ ಅವಕಾಶವಿರುತ್ತದೆ

ತೆರೆಗೆ ಬರಲು ಸಜ್ಜಾದ 'ಖದೀಮ'

ಬಹುತೇಕ ಹೊಸಬರಿಂದಲೇ ಕೂಡಿರುವ 'ಖದೀಮ' ಚಿತ್ರದ ಟ್ರೇಲರ್‌ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಯಿ ಪ್ರದೀಪ್‌ ಕಥೆ ಬರೆದು ಆ್ಯಕ್ಷನ್‌ ಕಟ್‌ ಹೇಳಿದ್ದಾರೆ.

'ಸಣ್ಣ ಪ್ರಮಾಣದಲ್ಲಿ ಕಳ್ಳತನ ಮಾಡಿಕೊಂಡಿದ್ದ ಯುವಕನೊಬ್ಬ ಪ್ರೀತಿಯಲ್ಲಿ ಬಿದ್ದಾಗ, ಆತನ ಜೀವನದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತವೆ. ಬಳಿಕ ಆತನಿಂದ ಯಾರಿಗೆಲ್ಲ ಒಳಿತಾಗುತ್ತದೆ, ಸಮಾಜಕ್ಕೆ ಏನು ಕೊಡುಗೆ ನೀಡುತ್ತಾನೆ ಎಂಬುದೇ ಚಿತ್ರಕಥೆ. ಬೆಂಗಳೂರಿನ ಸಿಟಿ ಮಾರ್ಕೆಟ್‌ನಲ್ಲಿ ಬಹುಭಾಗ ಚಿತ್ರೀಕರಣ ಮಾಡಿದ್ದೇವೆ. ಇದೇ ತಿಂಗಳು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಶಿವೇಶು ಪ್ರೊಡಕ್ಷನ್‌ ಅಡಿಯಲ್ಲಿ ಅನಿವಾಸಿ ಭಾರತೀಯ ಟಿ.ಶಿವಕುಮಾರನ್‌ ಬಂಡವಾಳ ಹೂಡಿದ್ದಾರೆ. ನಟ ಚಂದನ್‌ಗೆ ಅನುಷಾ ಕೃಷ್ಣ ಜೋಡಿಯಾಗಿದ್ದಾರೆ. ಶೋಭರಾಜ್‌, ಗಿರಿಜಾ ಲೋಕೇಶ್‌, ಮುಖ್ಯಮಂತ್ರಿ ಚಂದ್ರು, ವಿ.ಮನೋಹರ್‌, ಯಶ್‌ ಶೆಟ್ಟಿ, ಮಿಮಿಕ್ರಿ ದಯಾನಂದ್‌ ಮುಂತಾದವರು ನಟಿಸಿದ್ದಾರೆ. ಶಶಾಂಕ್‌ ಶೇಷಗಿರಿ ಸಂಗೀತ ಸಂಯೋಜಿಸಿದ್ದಾರೆ. ನಾಗಾರ್ಜುನ.ಆರ್‌.ಡಿ ಛಾಯಾಚಿತ್ರಗ್ರಹಣ, ಉಮೇಶ್‌.ಆರ್‌.ಬಿ ಸಂಕಲನವಿದೆ.



ಅನುಷಾ ಕೃಷ್ಣ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್‌ ಚೆಕ್‌

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಚಿನ್ನದ ಆಭರಣಗಳಿಂದ ಮಾಡಿದ ಗೂಡಿನಲ್ಲಿ ಎರಡು ಹಕ್ಕಿಗಳು ಕುಳಿತಿರುವ ಮತ್ತು ನಿರೂಪಕರೊಬ್ಬರು ಮಲಯಾಳ ಭಾಷೆಯಲ್ಲಿ ಅದಕ್ಕೆ ವಿವರಣೆ ಕೊಡುತ್ತಿರುವ ವಿಡಿಯೊ ತುಣುಕೊಂದು 'ಎಕ್ಸ್‌' ಸೇರಿದಂತೆ ಹಾಗೂ ಇತರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬೆಂಗಳೂರಿನ ಹೈಕೋರ್ಟ್‌ ರಸ್ತೆಯಲ್ಲಿರುವ ಮೂರು ಚಿನ್ನಾಭರಣ ಮಳಿಗೆಗಳಿಂದ ಹಕ್ಕಿಗಳು ಒಂದು ಕೆಜಿಗೂ ಹೆಚ್ಚು ಚಿನ್ನಾಭರಣ ಕದ್ದು ಗೂಡು ಕಟ್ಟಿವೆ. ಹಕ್ಕಿಗಳು ಮೊಟ್ಟೆಗಳನ್ನು ಇಟ್ಟು, ಅವುಗಳಿಂದ ಮರಿ ಹೊರ ಬಂದ ಬಳಿಕವೇ ಚಿನ್ನವನ್ನು ವಾಪಸ್‌ ಪಡೆಯಲು ಆಭರಣ ಮಳಿಗೆಗಳು ನಿರ್ಧರಿಸಿವೆ. ಮರದ ಸುತ್ತ ಬಿಗಿ ಭದ್ರತೆ ಕೈಗೊಳ್ಳಲಾಗಿದೆ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು. ಅದು ನೈಜ ವಿಡಿಯೊ ಅಲ್ಲ.

ವಿಡಿಯೊವನ್ನು ಗೂಗಲ್‌ ಲೆನ್ಸ್‌ನಲ್ಲಿ ಹಾಕಿ ಪರಿಶೀಲಿಸಿದಾಗ ಸುರೇಂದ್ರ ಗರ್ವಾಲ್‌ ಎಂಬುವವರು ತಮ್ಮ ಇನ್‌ಸ್ಟಾಗ್ರಾಂ ಪುಟದಲ್ಲಿ ಏಪ್ರಿಲ್‌ 1ರಂದು ಪೋಸ್ಟ್‌ ಮಾಡಿದ ಇದೇ ವಿಡಿಯೊ ಸಿಕ್ಕಿತು. ಡಿಜಿಟಲ್‌ ಕ್ರಿಯೇಟರ್‌ ಮತ್ತು ಕಲೆ ಹಾಗೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಗ್ಗೆ ಕುತೂಹಲ ಉಳ್ಳ ವ್ಯಕ್ತಿ ಎಂದು ತಮ್ಮ ಪ್ರೊಫೈಲ್‌ನಲ್ಲಿ ಬರೆದುಕೊಂಡಿದ್ದಾರೆ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅದು ಎಐ ವಿಡಿಯೊ ಆಗಿರಬಹುದು ಎಂಬ ಅನುಮಾನ ಮೂಡಿತು. ವಿಡಿಯೊವನ್ನು ಎಐ ವಿಡಿಯೊ ಪತ್ತೆ ಟೂಲ್‌ ಹೈವ್‌ ಮಾಡರೇಷನ್‌ನಲ್ಲಿ ಹಾಕಿದಾಗ, ಅದು ಎಐ ನಿರ್ಮಿತ ವಿಡಿಯೊ ಎಂಬುದು ದೃಢಪಟ್ಟಿತು. ಸುರೇಂದ್ರ ಗರ್ವಾಲ್‌ ಅವರನ್ನು ಸಂಪರ್ಕಿಸಿದಾಗ ಅವರು 'ಇದು ಸುಳ್ಳು. ನಾನು ಮನೋರಂಜನೆಯ ಉದ್ದೇಶದಿಂದ ಎಐ ಬಳಸಿ ಆ ವಿಡಿಯೊ ಸೃಷ್ಟಿಸಿದ್ದೇನೆ' ಎಂದು ಸ್ಪಷ್ಟನೆ ನೀಡಿರುವುದಾಗಿ ಪಿಟಿಐ ಫ್ಯಾಕ್ಟ್‌ಚೆಕ್‌ ವರದಿ ತಿಳಿಸಿದೆ.

ಗುಂಡಣ್ಣ



ಈಶಾವಾಸ್ಯಂ ಇದಂ ಸರ್ವಂ



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

170

ರಾತ್ರಿ ನಿದ್ದೆ ಮಾಡಿದಾಗ ಕಳ್ಳರು ಬಂದು ಮನೆಯಲ್ಲಿ ಇದ್ದಿದ್ದು ಎಲ್ಲವನ್ನು ಕದ್ದುಕೊಂಡು ಹೋಗುತ್ತಾರೆ. ನಮಗೆ ಎಚ್ಚರವೇ ಆಗೋದಿಲ್ಲ. ನಿದ್ರೆ ನಮ್ಮ ನಿಯಂತ್ರಣದಲ್ಲಿ ಇಲ್ಲ. ನಿದ್ರೆ ನಮ್ಮ ನಿಯಂತ್ರಣದಲ್ಲಿ ಇದ್ದಿದ್ದರೆ ಬೆಳಿಗ್ಗೆ ಬೇಗ ಏಳಲು ಅಲರಾಂ ಯಾಕೆ ಇಟ್ಟುಕೊಳ್ಳುತ್ತಿದ್ದೆವು. ನಿದ್ದೆ ಬರೋದಿಲ್ಲ ಎಂದು ನಿದ್ದೆ ಗುಳಿಗೆ ತೆಗೆದುಕೊಳ್ಳುವ ಅಗತ್ಯ ಏನಿತ್ತು? ರಾತ್ರಿ ಮಲಗಿದಾಗ ಕನಸು ಬೀಳುತ್ತವೆ. ಕೆಟ್ಟ ಕೆಟ್ಟ ಕನಸುಗಳು ಬೀಳುತ್ತವೆ. ಕನಸುಗಳೂ ನಮ್ಮ ನಿಯಂತ್ರಣದಲ್ಲಿ ಇಲ್ಲ. ಅವು ನಮ್ಮ ನಿಯಂತ್ರಣದಲ್ಲಿ ಇದ್ದಿದ್ದರೆ ಒಳ್ಳೆಯ ಕನಸುಗಳೇ ಬೀಳಬೇಕಿತ್ತಲ್ಲ. ಅವಸ್ಥೆಗಳೂ ನಮ್ಮದಲ್ಲ. ಅವು ನಮ್ಮದು ಎಂದರೆ ನಾವು ಹೇಳಿದ ಹಾಗೆ ಅವು ಕೇಳಬೇಕಿತ್ತಲ್ಲ. ನಮ್ಮ ದೇಹದಲ್ಲಿ ಪ್ರಾಣಗಳಿವೆ. ನಾವು ಉಸಿರಾಡುವುದು ಒಂದೇ ಪ್ರಾಣವಲ್ಲ. ಪಂಚಪ್ರಾಣಗಳಿವೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಪಂಚ ಪ್ರಾಣಗಳಿವೆ. ಒಂದೊಂದಕ್ಕೂ ಒಂದೊಂದು ಕೆಲಸ ಇದೆ. ಒಂದು ಅನ್ನ ಪಚನ ಮಾಡುತ್ತದೆ. ಇನ್ನೊಂದು ರಕ್ತ ಶುದ್ಧಿ ಮಾಡುತ್ತದೆ. ಇನ್ನೊಂದು ವಿಸರ್ಜನೆ ಮಾಡುತ್ತದೆ. ಈ ಪ್ರಾಣಗಳೂ ನಮ್ಮ ನಿಯಂತ್ರಣದಲ್ಲಿ ಇಲ್ಲ. ನಮ್ಮ ನಿಯಂತ್ರಣದಲ್ಲಿ ಇದ್ದಿದ್ದರೆ ಹೃದಯಾಘಾತ ಯಾಕೆ ಆಗುತ್ತಿತ್ತು?

ನಾವು ಹೊಲ ನಂದು ಎನ್ನುತ್ತೇವೆ. ಮನೆ ನಂದು ಎನ್ನುತ್ತೇವೆ. ಕಾರು ನಂದು ಎನ್ನುತ್ತೇವೆ. ಆದರೆ ಹೊಲ, ಕಾರು, ಮನೆ ಯಾವುದೂ ನಾವು ಹೋದ ಮೇಲೆ ಅಳುವುದಿಲ್ಲ. ಹಾಗಾದರೆ ನಂದಲ್ಲ ಅಂದರೆ ಇದು ಯಾರದ್ದು? ನಾವು ಇಲ್ಲಿ ಯಾವುದರ ಮಾಲೀಕರೂ ಅಲ್ಲ. ನಾವು ಬರೀ ಬಳಕೆದಾರರು ಅಷ್ಟೆ. ನಾವು ಮಾಲೀಕರಾಗಲು ಹೊರಟಿದ್ದರಿಂದಲೇ ಕಷ್ಟಗಳೂ ಶುರುವಾಗಿದೆ. ನಾವು ಈ ಜಗತ್ತನ್ನು ಗಳಿಸಲು ಬಂದಿಲ್ಲ. ಬಳಸಿ ಹೋಗಲು ಬಂದವರು ಅಷ್ಟೆ. ಗಾಳಿ ಚಲಿಸುತ್ತದೆ. ಅದಕ್ಕೆ ಗಾಲಿಗಳು ಇದ್ದಾವೆಯೇ? ಸೂರ್ಯ ಬೆಳಗುತ್ತಿದ್ದಾನೆ. ಅವನೇನು ಚಾರ್ಜ್‌ ಮಾಡಿಕೊಂಡು ಬರುತ್ತಾನೇನು? ಸೂರ್ಯ ಬೆಳಗಲು, ಗಾಳಿ ಚಲಿಸಲು, ನೀರು ಹರಿಯಲು, ಮನುಷ್ಯ ಜೀವಿಸಲು ಎಲ್ಲದಕ್ಕೂ ದೇವರು ಎಂಬ ಒಂದು ಶಕ್ತಿ ಕಾರಣ. ಈಶಾವಾಸ್ಯಂ ಇದಂ ಸರ್ವಂ ಎನ್ನುತ್ತಾರೆ ಋಷಿಗಳು. ಇದು ದೇವರು ಕೊಟ್ಟ ಅವಕಾಶ. ಇಲ್ಲಿ ನಮ್ಮ ಹೊಲ, ಮನೆ, ಉದ್ಯೋಗ ಎಲ್ಲವನ್ನೂ ನಾವು ಅನುಭವಿಸುವುದು ಅಷ್ಟೆ. ಇದು ಆ ಶಕ್ತಿಯ ಪ್ರಸಾದ. ಅದಕ್ಕೆ ಪತಂಜಲಿ ಮಹರ್ಷಿಗಳು ಅಸ್ತೇಯ ಅಂತ ಕರೆದರು. ತೇಯ ಅಂದರೆ ಕಳವು ಮಾಡುವುದು. ಅಸ್ತೇಯ ಎಂದರೆ ಕಳವು ಮಾಡದಂತೆ ಇರುವುದು. ದೇವರು ಕೊಟ್ಟ ಸಂಪತ್ತು ನಂದು ಅನ್ನುವುದು ಕೂಡ ಕಳ್ಳತನಕ್ಕೆ ಸಮಾನ. ಪ್ರತಿ ತುತ್ತು ತಿನ್ನುವಾಗಲೂ ಇದು ಆ ಶಕ್ತಿ ಕೊಟ್ಟಿದ್ದು ಎಂದು ಉಣ್ಣಬೇಕು.

ಒಬ್ಬ ರೈತ ಬುತ್ತಿ ಕಟ್ಟಿಕೊಂಡು ಹೊಲಕ್ಕೆ ಹೋಗುತ್ತಾನೆ. ಜೊತೆಗೆ ನಾಯಿ, ಎತ್ತುಗಳನ್ನು ಕರೆದುಕೊಂಡು ಹೋಗುತ್ತಾನೆ. ಬುತ್ತಿಯನ್ನು ಮರದ ಬುಡಕ್ಕೆ ಇಟ್ಟು ಹೊಲದಲ್ಲಿ ಕೆಲಸ ಮಾಡುತ್ತಾನೆ. ಬುತ್ತಿಯನ್ನು ನೋಡಿ ಕಾಗೆಗಳು ಬರುತ್ತವೆ. ಅವುಗಳನ್ನು ನಾಯಿ ಬೊಗಳಿ ಓಡಿಸುತ್ತದೆ. ನಾಯಿಗೆ ಗೊತ್ತು ಆ ಬುತ್ತಿ ತನ್ನ ಮಾಲೀಕನದ್ದು ಎಂದು. ನಮ್ಮ ತಟ್ಟೆಯಲ್ಲಿ ಬಂದು ಬೀಳುವ ಅನ್ನ ಆ ದೇವ ಕೊಟ್ಟಿದ್ದು ಎಂದು ತಿಳಿದುಕೊಳ್ಳದೆ ನಂದು ಎಂದು ತಿಳಿದುಕೊಂಡರೆ ನಾವು ನಾಯಿಗಿಂತ ಕಡೆಯಾಗುತ್ತೇವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್‌ 10, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ತ್ರಯೋದಶಿ ಗಂ. 25-01 ನಕ್ಷತ್ರ: ಪೂರ್ವಫಲ್ಗುನಿ ಗಂ. 12-25 ಯೋಗ: ವೃದ್ಧಿ ಗಂ. 18-59 ಕರಣ: ಕೌಲವ ಗಂ. 11-56, ಮೀನ ಮಾಸದ 27 ನೇ ದಿನ, ಮಳೆನಕ್ಷತ್ರ: ರೇವತಿ 4.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-24 **ಸೂರ್ಯಾಸ್ತ :** 06-40

ಮುಸ್ಲಿಂ ದಿನಾಂಕ : 11 ಶವ್ವಾಲ್‌, **ದಿನ ವಿಶೇಷ :** ಮಹಾವೀರ ಜಯಂತಿ (ಜೈನ್‌), ಅನಂಗ ತ್ರಯೋದಶಿ, **ಅದೃಷ್ಟ ಸಂಖ್ಯೆ :** 11, 7

ಮೇಷ: ಬಹಳ ಕಾಲದಿಂದ ಅಪೇಕ್ಷಿಸಿದ್ದ ವಸ್ತುವೊಂದು ಅಲ್ಪ ಶ್ರಮದಿಂದ ದೊರಕಲಿದೆ. ಕಬ್ಬಿಣ, ಸಿಮೆಂಟ್‌ ದಾಸ್ತಾನುದಾರರಿಗೆ ಉತ್ತಮ ಆದಾಯವಿರುವುದು. ಹಣ ವೆಚ್ಚ ಮಾಡುವ ವಿಚಾರದಲ್ಲಿ ಹಿಡಿತವಿರಲಿ.

ವೃಷಭ: ಹೆಂಡತಿಗೆ ಆರೋಗ್ಯದಲ್ಲಿ ಸ್ಥಿರತೆ ನೀಡುವಂತೆ ದೇವರಲ್ಲಿ ಪ್ರಾರ್ಥಿಸಿಕೊಳ್ಳುವುದರಿಂದ ಒಳ್ಳೆಯದಾಗುತ್ತದೆ. ಕೀಟಗಳ ಕಡಿತದಿಂದ ತೊಂದರೆ ಇರುವುದರಿಂದ ದೂರವಿರಿ.

ಮಿಥುನ: ಬಂಧುಗಳಲ್ಲಿ ಮಾಡಿದ ಲೇವಾದೇವಿ ವ್ಯವಹಾರವು ಬಹಳಷ್ಟು ಲಾಭದಾಯಕವಾಗಿರುವುದು. ಉಪಯೋಗಿಸದ ವಸ್ತುಗಳನ್ನು ಅಗತ್ಯವಿದ್ದವರಿಗೆ ನೀಡುವಿರಿ. ಕೇಶ ವಿನ್ಯಾಸಕರಿಗೆ ಉತ್ತಮ ದಿನವಾಗಿದೆ.

ಕರ್ಕಾಟಕ: ಮೌನವು ಸಮಸ್ಯೆಯನ್ನು ತಿಳಿಗೊಳಿಸುವುದು ಎಂದು ತಿಳಿದುಕೊಂಡಿದ್ದಲ್ಲಿ ಅದು ಹುಸಿಯಾಗುವುದು. ಮಕ್ಕಳ ಮೇಲೆ ಆದಷ್ಟು ಮೃದು ಧೋರಣೆ ಒಳ್ಳೆಯದು. ಅಪಾಯದಲ್ಲಿ ಆಪ್ತರು ಸಹಾಯ ಮಾಡುತ್ತಾರೆ.

ಸಿಂಹ: ನಿರಂತರ ಪರಿಶ್ರಮದಿಂದ ಆರ್ಥಿಕ ಸ್ಥಿತಿಯು ಗಟ್ಟಿಯಾಗುತ್ತಲೇ ಹೋಗಲಿದೆ. ಮಂಗಳಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತವೆ. ಸುಳ್ಳು ನುಡಿಯುವ ಅಭ್ಯಾಸವನ್ನು ಕಡಿಮೆ ಮಾಡಿಕೊಳ್ಳಿರಿ.

ಕನ್ಯಾ: ಬಿಡುವಿಲ್ಲದ ವೃತ್ತಿ ಜೀವನವನ್ನು ಒಂದೆರೆಡು ದಿನಗಳ ಮಟ್ಟಿಗೆ ವಿಶ್ರಾಂತಿ ಜೀವನವಾಗಿ ಬದಲಾಗಿಸಿಕೊಳ್ಳುವುದು ಒಳ್ಳೆಯದು. ಮಿತ್ರರೊಂದಿಗೆ ಮಾತುಕತೆಗಳಲ್ಲಿ ಕಾಲ ಕಳೆಯುವಿರಿ.

ತುಲಾ: ಅಧಿಕವಾದ ಖರ್ಚು–ವೆಚ್ಚಗಳಿಂದ ಮುಕ್ತಿಹೊಂದಲು ಹಾಗೂ ದುರಭ್ಯಾಸದಿಂದ ಹೊರಬರುವ ಯೋಚನೆ ಮಾಡಿರಿ. ನಂಬಿರುವ ದೇವರು ಕೈಬಿಡಲಿಲ್ಲವೆಂಬುದು ಅನುಭವಕ್ಕೆ ಬರಲಿದೆ.

ವೃಶ್ಚಿಕ: ಕೆಲಸದಲ್ಲಿ ಅಪ್ರಾಮಾಣಿಕತೆ ಹಾಗೂ ದುಡುಕಿನ ನಿರ್ಧಾರ ತೆಗೆದುಕೊಂಡಲ್ಲಿ ಪಶ್ಚಾತಾಪ ಪಡಬೇಕಾದ ಸಂದರ್ಭ ಅನಿವಾರ್ಯ ಒದಗಿ ಬರುತ್ತದೆ. ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿಯನ್ನು ಕೊಡಲಿದ್ದಾರೆ.

ಧನು: ಕೋರ್ಟು-ಕಚೇರಿಯಲ್ಲಿ ಸಮಯ ವ್ಯರ್ಥವಾಗುವ ರೀತಿಯಲ್ಲಿ ಘಟನೆಗಳು ನಡೆಯುವುದು. ರಸ ಪದಾರ್ಥ, ಅಲಂಕಾರಿಕ ವಸ್ತುಗಳ ಮಾರಾಟದಿಂದ ನೆಮ್ಮದಿ ಸಿಗಲಿದೆ. ವಾಸ್ತವ ಪರಿಸ್ಥಿತಿ ರಕ್ಷಾ ಕವಚದಂತಿದೆ.

ಮಕರ: ಗ್ರಹಗಳು ಪೂರಕವಾಗಿವೆ. ಚಟುವಟಿಕೆಗಳು ನಡೆಯುವುದು. ಈ ಫಲವನ್ನು ಸದುಪಯೋಗಪಡಿಸಿಕೊಳ್ಳಿ. ಮನೆಯಲ್ಲಿ ದುರ್ಗಾ ಸ್ತೋತ್ರ ಪಠಿಸಿದರೆ ನಿಶ್ಚಿತವಾಗಿ ದೊರೆಯುವುದು.

ಕುಂಭ: ಮೇಲಧಿಕಾರಿಗಳು ಬಯಸಿದ ಹೆಚ್ಚಿನ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ ಕಾರಣ ಅತಿಯಾಗಿ ಮೆಚ್ಚುವರು. ಪರಿಶ್ರಮದ ಅಧಿಕ ಸಮಯ ವೃತ್ತಿಯ ಕೆಲಸಕ್ಕೆ ಮೀಸಲಿಡುವುದರಿಂದ ಅಧಿಕ ಲಾಭ.

ಮೀನ: ಕಾರ್ಯಕ್ಕೆ ಕೆಲವು ಪ್ರಭಾವಿ ವ್ಯಕ್ತಿಗಳ ಹಸ್ತಕ್ಷೇಪದಂಥ ಸಮಸ್ಯೆಗಳು ಎದುರಾಗಬಹುದು. ಹೆಚ್ಚಿನ ಕಾಳಜಿವಹಿಸಿ. ಕುಟುಂಬದವರೊಡನೆ ಮನೋರಂಜನೆಗಾಗಿ ಅಲ್ಪಕಾಲವನ್ನು ಮೀಸಲಿಡಲು ಪ್ರಯತ್ನಿಸಿ.

ಪದಬಂಧ 6007


– ವಿದ್ಯಾ ವಿನಯ್‌

ಎಡದಿಂದ ಬಲಕ್ಕೆ

1.ಮಂದಿಗೆಲ್ಲಾ ತಿಳಿದಿರುವ ಪ್ರಸಿದ್ಧ ವಿಷಯ (5)
3.ಆ ಕ್ರಿಕೆಟಿಗ ನಿರಾತಂಕವಾಗಿ ಪೇರಿಸಿರುವುದು ನೂರರ ಮೊತ್ತ (3)
5.ನಿಯೋಗವಿದ್ದರೆ ಮಾತ್ರ ಒಳ್ಳೆಯದಕ್ಕೆ ವ್ಯಯ (5)
7.ರೀತಿಯೊಡನೆ ಬರುವ ಜೋಡುನುಡಿ (3)
9.ತಟಾಕದ ದಿಕ್ಕಿನಲ್ಲಿ ತೆರೆದಿರುವ ಬಾಗಿಲು (3)
11.ನಾರಾಯಣನೆಂಬ ಋಷಿಯ ತೊಡೆಯಿಂದ ಜನಿಸಿದ ಅಪ್ಸರೆ (3)
13.ಹೊಲದ ಸುತ್ತಲೂ ಹರಡಿರುವ ಕೆಟ್ಟವಾಸನೆ (5)
15.ಮುದ್ರಿತ ಹಾಳೆಗಳನ್ನೆಲ್ಲಾ ಸೇರಿಸಿ ಮಾಡಿದ ಗ್ರಂಥ (3)
16.ಕೆಟ್ಟ ಉದ್ದೇಶಕ್ಕೆ ಬಳಕೆಯಾಗಿರುವುದು (5)

ಮೇಲಿಂದ ಕೆಳಕ್ಕೆ

1.ಜರಿ ಸೀರೆಯಲ್ಲಿರುವುದು ತುಂಬಾ ಬೆಲೆಯುಳ್ಳ ಮಣಿ (4)
2.ಎಳೆದುಕೊಂಡಿರುವ ಉಸಿರನ್ನು ಹೊರಕ್ಕೆಬಿಡುವುದು (3)
4.ಅಂತರಂಗದ ಹೊಯ್ದಾಟದಲ್ಲಿ ಮೇಲೆ ಬಂದಿರುವ ಅಲೆ (3)
6.ಕಟಕಟೆಯಲ್ಲಿ ನಿಂತಿರುವವ ಬಹಳ ಹತ್ತಿರದವನು (3)
8.ದಾವೆ ಹೂಡಿ ಬೆಳೆಸಿರುವ ನೆಂಟಸ್ತಿಕೆ (2)
9.ಇನ್ನೂ ಕರು ಹಾಕದ ಮಣಕ (3)
10.ಪರ್ವತಾರೋಹಿಗೆ ಇದು ಸಂಕ್ರಮಣಕಾಲ (2)
12.ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದ ಕಾಲ (4)
13.ಪುಳಕಗೊಳ್ಳುವಂಥಾ ಕಾಂತಿ (3)
14.ತಂದೆ ತಾಯಿ ಇರುವ ಮನೆ (3)



6006ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅಣೆ 3.ಹತ್ಯಾಕಾಂಡ 5.ನಡುಕ 6.ಕಾಯಿ 7.ಕಡಿವಾಣ 10.ಮನೆತನ 13.ಗದ್ಯ 14.ಸುಗಮ 15.ಗರಗಸ 16.ಕ್ಷಾಮ

ಮೇಲಿಂದ ಕೆಳಕ್ಕೆ:
1.ವನಚರ 2.ಆಕಸ್ಮಿಕ 3.ಹಗರಣ 4.ಡಕಾಯಿತ 8.ವಾಸನೆ 9.ಅಂಗರಾಗ 10.ಮಧುಮಾಸ 11.ನವಸುಮ 12.ಸೆರೆಮನೆ

ಸುಡೊಕು 6392

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6391 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಹೊಸ ಆಧಾರ್ ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹೊಸ ಆಧಾರ್ ಆ್ಯಪ್‌ನ ಪರೀಕ್ಷಾ ಆವೃತ್ತಿಯನ್ನು ಬಿಡುಗಡೆ ಮಾಡಿದೆ.

ಬಳಕೆದಾರರ ಭೌತಿಕ ಕಾರ್ಡ್ ಅಥವಾ ಜೆರಾಕ್ಸ್ ಪ್ರತಿ ಇಲ್ಲದೆಯೇ ಅವರ ಆಧಾರ್ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ಪರಿಶೀಲನೆಗೆ ಇದರಿಂದ ಸಹಕಾರಿಯಾಗಲಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ 'ಎಕ್ಸ್‌'ನಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

ತ್ವರಿತ ದೃಢೀಕರಣ ಮತ್ತು ಸರಳವಾಗಿ ಯುಪಿಐ ವಹಿವಾಟು ನಡೆಸಲು ಅನುಕೂಲ ಆಗಲಿದೆ ಎಂದು ಹೇಳಿದ್ದಾರೆ.

ಈ ಆ್ಯಪ್ ಕ್ಯೂಆರ್ ಕೋಡ್ ಫೀಚರ್ ಹೊಂದಿದೆ. ತ್ವರಿತವಾಗಿ ಪರಿಶೀಲನೆ ಮತ್ತು ಮುಖಚಹರೆ ದೃಢೀಕರಣ ಮಾಡಲಿದೆ. ಇದರಿಂದ ಆಧಾರ್‌ನಂತಹ ಭೌತಿಕ ದಾಖಲೆಗಳನ್ನು ಜನರು ತಮ್ಮ ಜೊತೆಗೆ ತೆಗೆದುಕೊಂಡು ಹೋಗುವುದು ತಪ್ಪಲಿದೆ ಎಂದು ತಿಳಿಸಿದ್ದಾರೆ.

ಇದು ಜಾರಿಗೊಂಡ ಬಳಿಕ ಜನರು ಹೋಟೆಲ್, ವಿಮಾನ ನಿಲ್ದಾಣ, ರೈಲಿನಲ್ಲಿ ಟಿಕೆಟ್ ಪರಿಶೀಲನೆ ವೇಳೆ ಗುರುತಿನ ಚೀಟಿ ಕೇಳಿದಾಗ ಆಧಾರ್‌ನ ಭೌತಿಕ ದಾಖಲೆಗಳನ್ನು ಸಲ್ಲಿಸಬೇಕಿಲ್ಲ. ಆ್ಯಪ್‌ನಲ್ಲಿ ಕ್ಯೂಆರ್ ಕೋಡ್ ಮೂಲಕ ಸ್ಕ್ಯಾನ್ ಮಾಡಿದರೆ ಗುರುತು ಲಭ್ಯವಾಗಲಿದೆ. ಬಳಕೆದಾರರು ಅಗತ್ಯ ಮಾಹಿತಿಯನ್ನು ಹಂಚಿಕೊಳ್ಳಬಹುದಾಗಿದೆ.


ಈ ಆ್ಯಪ್ ಶೇ 100ರಷ್ಟು ಸುರಕ್ಷಿತವಾಗಿದೆ. ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಇದನ್ನು ಅಭಿವೃದ್ಧಿಪಡಿಸಿದೆ. ಬಳಕೆದಾರರ ಪ್ರತಿಕ್ರಿಯೆ ಆಧರಿಸಿ ಶೀಘ್ರವೇ ಎಲ್ಲರಿಗೂ ಲಭ್ಯವಾಗುವಂತೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

REMEMBRANCE

G. MUNIYAPPA IAS (Retd)
10.04.2008
Inserted by
D. Radhakrishna & Brothers
Daughters
M. Kavitha, M. Rekha


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,535
ಇಂದಿನ ಅಂತ್ಯ	22,399
▼	136
ದಿನದ ಕನಿಷ್ಠ	22,353

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ




ಬೆಂಗಳೂರು	
100ಕ್ಕೆ	₹460
12 ಕ್ಕೆ	₹65
ಮೈಸೂರು	
100ಕ್ಕೆ	₹455

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹321-585
ದ್ವಿತಳಿ (ಬಿ.ವಿ) ₹365-678

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹191
ಆರ್‌ಎಸ್‌ಎಸ್-5 ₹186
ಗುಡ್ ಲಾಟ್ ₹178

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹26000
ಎಸಿ	₹15820
ಆರ್‌ಪಿ	₹21000
ಆರ್‌ಸಿ	₹12000

ವಿನಿಮಯ ದರ

$ ಡಾಲರ್	86.68
£ ಪೌಂಡ್	111.17
€ ಯುರೊ	95.76
¥ ಯೆನ್ (100ಕ್ಕೆ)	60

ಕಚ್ಚಾ ತೈಲ ಬೆಲೆ ಶೇ 4.23ರಷ್ಟು ಇಳಿಕೆ • ಎಫ್‌ಐಐ ಹೊರಹರಿವು ಹೆಚ್ಚಳ

ಸುಂಕ ನೀತಿ: ಮುಗ್ಗರಿಸಿದ ಗೂಳಿ



ಮುಂಬೈ (ಪಿಟಿಐ): ಚೀನಾದ ಮೇಲೆ ಡೊನಾಲ್ಡ್ ಟ್ರಂಪ್ ಆಡಳಿತವು ಸಾರಿರುವ ಸುಂಕ ಸಮರದಿಂದಾಗಿ ಬುಧವಾರ ನಡೆದ ವಹಿವಾಟಿನಲ್ಲಿ ದೇಶದ ಷೇರುಪೇಟೆಯು ಇಳಿಕೆ ಕಂಡಿದೆ.

ಅಮೆರಿಕವು ಚೀನಾದ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ 50ರಷ್ಟು ಸುಂಕ ವಿಧಿಸಲು ನಿರ್ಧರಿಸಿದೆ. ಒಟ್ಟಾರೆ ಸುಂಕದ ಪ್ರಮಾಣವು ಶೇ 104ಕ್ಕೆ ಏರಿಕೆಯಾಗಿದೆ. ಇದು ಭಾರತ ಸೇರಿ ಏಷ್ಯಾದ ಷೇರು ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 379 ಅಂಶ ಇಳಿಕೆಯಾಗಿ, 73,847 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ದಿನದ ವಹಿವಾಟಿನ ವೇಳೆ 554 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 136 ಅಂಶ ಕಡಿಮೆಯಾಗಿ, 22,399 ಅಂಶಗಳಲ್ಲಿ ಸ್ಥಿರಗೊಂಡಿತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಷೇರಿನ ಮೌಲ್ಯ ಶೇ 3.43ರಷ್ಟು ಇಳಿಕೆಯಾಗಿದೆ. ಟೆಕ್ ಮಹೀಂದ್ರ, ಲಾರ್ಸೆನ್ ಆ್ಯಂಡ್ ಟೊಬ್ರೊ, ಟಾಟಾ ಸ್ಟೀಲ್, ಸನ್ ಫಾರ್ಮಾ, ಇನ್ಫೊಸಿಸ್, ಎಚ್‌ಸಿಎಲ್ ಟೆಕ್, ಎಕ್ಸಿಸ್ ಬ್ಯಾಂಕ್, ಟಿಸಿಎಸ್ ಮತ್ತು ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ನೆಸ್ಲೆ, ಹಿಂದುಸ್ತಾನ್ ಯೂನಿಲಿವರ್, ಟೈಟನ್, ಪವರ್ ಗ್ರಿಡ್, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಐಟಿಸಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.08 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.73ರಷ್ಟು ಇಳಿದಿದೆ.

ಜಪಾನ್, ದಕ್ಷಿಣ ಕೊರಿಯಾ ಷೇರುಪೇಟೆಗಳು ಇಳಿಕೆ ಕಂಡಿದ್ದರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಏರಿಕೆ ಕಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮಂಗಳವಾರದ ವಹಿವಾಟಿನಲ್ಲಿ ₹4,994 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 4.23ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರೆಲ್ ದರವು 60.16 ಡಾಲರ್ (₹5,216) ಆಗಿದೆ.

ಔಷಧದ ಮೇಲೆ ಪ್ರತಿ ಸುಂಕ?

ನವದೆಹಲಿ (ಪಿಟಿಐ): ಔಷಧಗಳ ಮೇಲೆ ಅಮೆರಿಕವು ಪ್ರತಿ ಸುಂಕ ವಿಧಿಸಲು ನಿರ್ಧರಿಸಿದೆ ಎಂದು ಹೇಳಲಾಗಿದೆ. ಹಾಗಾಗಿ, ಔಷಧ ಕಂಪನಿಗಳ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬ್ಲೂ ಜೆಟ್ ಹೆಲ್ತ್‌ಕೇರ್‌ನ ಷೇರಿನ ಮೌಲ್ಯ ಶೇ 9.9ರಷ್ಟು ಇಳಿದಿದೆ. ಮಾರ್ಕ್ಸನ್ಸ್ ಫಾರ್ಮಾ (ಶೇ 6.6), ವೋಕ್ಹಾರ್ಡ್ (ಶೇ 5.14), ಗ್ಲೆನ್‌ಮಾರ್ಕ್ (ಶೇ 4.35), ಟೊರೆಂಟ್ (ಶೇ 4.10), ಅರಬಿಂದೋ ಫಾರ್ಮಾ (ಶೇ 3.54), ಲುಪಿನ್ (ಶೇ 3.09), ಗ್ಲಾಂಡ್ ಫಾರ್ಮಾ (ಶೇ 2.27), ಸನ್ ಫಾರ್ಮಾ (ಶೇ 2.18), ಜೈಡಸ್ ಲೈಫ್ ಸೈನ್ಸಸ್ (ಶೇ 1.74) ಮತ್ತು ಡಾ.ರೆಡ್ಡೀಸ್ ಷೇರಿನ ಮೌಲ್ಯದಲ್ಲಿ (ಶೇ 1.21) ಇಳಿಕೆಯಾಗಿದೆ. ಬಿಎಸ್‌ಇ ಹೆಲ್ತ್‌ಕೇರ್ ಸೂಚ್ಯಂಕವು ಶೇ 1.20ರಷ್ಟು ಕುಸಿದಿದೆ.

ರೂಪಾಯಿ ಮೌಲ್ಯ 42 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 42 ಪೈಸೆ ಕುಸಿತವಾಗಿದೆ. ಪ್ರತೀ ಡಾಲರ್ ಮೌಲ್ಯವು ₹86.68 ಆಗಿದೆ.

ಡೊನಾಲ್ಡ್ ಟ್ರಂಪ್ ಅವರು, ಚೀನಾದ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಚೀನಾ ಕೂಡ ಅಮೆರಿಕದ ಸರಕುಗಳ ಮೇಲೆ ಸುಂಕ ಹೆಚ್ಚಿಸಿದೆ. ಇದರಿಂದ ಸೃಷ್ಟಿಯಾಗಿರುವ ವ್ಯಾಪಾರ ಬಿಕ್ಕಟ್ಟು ರೂಪಾಯಿ ಮೇಲೆ ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಶೇ 15ರಷ್ಟು ಉದ್ಯೋಗಿಗಳ ವಜಾಕ್ಕೆ ಟಾಟಾ ಸ್ಟೀಲ್ ಕಂಪನಿ ನಿರ್ಧಾರ

ದಿ ಹೇಗ್ (ಎಎಫ್‌ಪಿ): ನೆದರ್ಲೆಂಡ್‌ನ ಡಚ್ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶೇ 15ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಭಾರತದ ಟಾಟಾ ಸ್ಟೀಲ್ ಕಂಪನಿ ನಿರ್ಧರಿಸಿದೆ.

ಈ ಘಟಕಗಳಲ್ಲಿ ಒಟ್ಟು 9,200 ಉದ್ಯೋಗಿಗಳಿದ್ದಾರೆ. ಈ ಪೈಕಿ 1,600 ಉದ್ಯೋಗಿಗಳನ್ನು ಕಡಿತ ಮಾಡಲಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯುರೋಪಿಯನ್ ಒಕ್ಕೂಟ ಸೇರಿ ವಿವಿಧ ದೇಶಗಳ ಮೇಲೆ ಸುಂಕ ಹೆಚ್ಚಳ ಮಾಡಿದ್ದಾರೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ವ್ಯಾಪಾರದ ಬಿಕ್ಕಟ್ಟು ಸೃಷ್ಟಿಸಿದ್ದು, ಕಂಪನಿಯ ಉತ್ಪನ್ನಗಳಿಗೆ ಬೇಡಿಕೆ ತಗ್ಗಿಸಿದೆ. ಕಾರ್ಯಾಚರಣೆ ವೆಚ್ಚ ಮತ್ತು ಹಣಕಾಸಿನ ಮೇಲೆ ಪರಿಣಾಮ ಬೀರಿದ್ದರಿಂದ ಸಿಬ್ಬಂದಿ ಕಡಿತಕ್ಕೆ ಮುಂದಾಗಿರುವುದಾಗಿ ಕಂಪನಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

2.87 ಲಕ್ಷ ಟನ್ ಸಕ್ಕರೆ ರಫ್ತು



ನವದೆಹಲಿ (ಪಿಟಿಐ): 2024-25ನೇ ಮಾರುಕಟ್ಟೆ ವರ್ಷದಲ್ಲಿ ಇಲ್ಲಿಯವರೆಗೆ 2.87 ಲಕ್ಷ ಟನ್ ಸಕ್ಕರೆ ರಫ್ತು ಮಾಡಲಾಗಿದೆ ಎಂದು ಅಖಿಲ ಭಾರತ ಸಕ್ಕರೆ ವ್ಯಾಪಾರಿಗಳ ಒಕ್ಕೂಟ ತಿಳಿಸಿದೆ.

ಈ ಮಾರುಕಟ್ಟೆ ಋತುವಿನಲ್ಲಿ 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ.

ಒಟ್ಟು ರಫ್ತಿನ ಪೈಕಿ ಸೊಮಾಲಿಯಾ 51,596 ಟನ್, ಅಫ್ಘಾನಿಸ್ತಾನ 48,864 ಟನ್, ಶ್ರೀಲಂಕಾ 46,757 ಟನ್ ಮತ್ತು ಲಿಬಿಯಾಕ್ಕೆ 30,729 ಟನ್ ರವಾನಿಸಲಾಗಿದೆ. ಸದ್ಯ ರಫ್ತು ಪ್ರಮಾಣ ಮಂದಗತಿಯಲಿದ್ದು, ಈ ತಿಂಗಳಿನಲ್ಲಿ ಚೇತರಿಕೆ ಕಾಣಲಿದೆ ಎಂದು ತಿಳಿಸಿದೆ.

ಸಹ ಪ್ರಯಾಣಿಕನ ಮೇಲೆ ಮೂತ್ರ ವಿಸರ್ಜನೆ: ದೂರು

ನವದೆಹಲಿ/ ಮುಂಬೈ (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬ ತನ್ನ ಸಹ ಪ್ರಯಾಣಿಕನ ಮೇಲೆ ಮೂತ್ರ ವಿಸರ್ಜನೆ ಮಾಡಿರುವ ಘಟನೆ ಬುಧವಾರ ನಡೆದಿದೆ.

ದೆಹಲಿಯಿಂದ ಬ್ಯಾಂಕಾಕ್‌ಗೆ ತೆರಳುತ್ತಿದ್ದ ವಿಮಾನದಲ್ಲಿ ಈ ಪ್ರಕರಣ ನಡೆದಿದೆ. ಈ ಬಗ್ಗೆ ಏರ್ ಇಂಡಿಯಾ ವಿಮಾನಯಾನ ಕಂಪನಿಯು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ (ಡಿಜಿಸಿಎ) ವರದಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು, 'ಈ ಪ್ರಕರಣ ಕುರಿತು ವಿಮಾನಯಾನ ಕಂಪನಿಯ ಜೊತೆಗೆ ಸಚಿವಾಲಯವು ಚರ್ಚಿಸಲಿದೆ. ಕೃತ್ಯ ಎಸಗಿರುವುದು ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ಹೇಳಿದ್ದಾರೆ.


ಚಿನ್ನದ ಧಾರಣೆ ₹1,050 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಚಿನ್ನದ ಬೆಲೆ ಇಳಿದಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,050 ಕಡಿಮೆಯಾಗಿದ್ದು, ₹90,200 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರ ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹89,750 ಆಗಿದೆ.

ಆದರೆ, ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ. ಪ್ರತಿ ಕೆ.ಜಿಗೆ ₹500 ಹೆಚ್ಚಳವಾಗಿದ್ದು, ₹93,200 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಉಡುಪಿ.

- **ಪ್ರಶ್ನೆ: ನಾನು ಸರ್ಕಾರಿ ನೌಕರನಾಗಿದ್ದು, ಈ ವರ್ಷದ ಜೂನ್‌ನಲ್ಲಿ ನಿವೃತ್ತಿ ಹೊಂದುತ್ತೇನೆ. ಆಗ ನನಗೆ ನಿವೃತ್ತಿ ಉಪಾಧನದ ಜೊತೆಗೆ ಎಲ್ಲಾ ಉಳಿತಾಯ ಸೇರಿ ಸುಮಾರು ₹70 ಲಕ್ಷ ಬರುತ್ತದೆ. ನಿವೃತ್ತಿ ವೇತನ ₹35,540 (ತುಟ್ಟಿಭತ್ಯೆ ಬಿಟ್ಟು) ಸಿಗಲಿದೆ. ಇದು ನನ್ನ ಜೀವಮಾನದ ಗಳಿಕೆ-ಉಳಿಕೆಯೂ ಹೌದು. ಇದುವರೆಗೂ ನಾನು ಯಾವುದೇ ಆಸ್ತಿಪಾಸ್ತಿ ಮಾಡಲಾಗಿಲ್ಲ. ನನ್ನ ಇಬ್ಬರು ಪುತ್ರರ ವಿದ್ಯಾಭ್ಯಾಸ, ನಾಲ್ವರು ಸಹೋದರಿಯರು ಹಾಗೂ ಸಹೋದರನ ಮದುವೆ, ತಂದೆ ತಾಯಿಯ ಅನಾರೋಗ್ಯ ಹೀಗೆ ನಿರಂತರ ಖರ್ಚುಗಳೇ ಇದಕ್ಕೆ ಕಾರಣ. ಮಕ್ಕಳ ಪೈಕಿ ಒಬ್ಬ ಸಿವಿಲ್ ಎಂಜಿನಿಯರ್; ಮತ್ತೊಬ್ಬ ಕಂಪ್ಯೂಟರ್ ಎಂಜಿನಿಯರಿಂಗ್ ಓದಿ ಸಾಕಷ್ಟು ಸ್ಪರ್ಧಾತ್ಮಕ ಪರೀಕ್ಷೆ ಬರೆದು ನಿರಾಶರಾಗಿ ಖಾಸಗಿ ಕಂಪನಿಗಳಲ್ಲಿ ಅತಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ನನ್ನ ಮುಖ್ಯ ಸಮಸ್ಯೆ ಏನೆಂದರೆ ನಮಗೊಂದು ನಮ್ಮದೇ ಆದ ಜಾಗ ಹಾಗೂ ಮನೆ ಬೇಕಿದೆ. ಅಲ್ಲಿ ವಿಶ್ರಾಂತ ಜೀವನ ನಡೆಸಬೇಕು ಎಂಬುದೇ ನನ್ನಾಸೆ. ಇದರ ನಡುವೆ ದೊಡ್ಡ ಮಗನಿಗೆ 32ನೇ ವರ್ಷ. ಚಿಕ್ಕವನಿಗೆ 25 ವರ್ಷ. ಆತನಿಗೆ ಮದುವೆ ಮಾಡಬೇಕು. ಆತ ದುಡಿಯಲು ಆಸ್ಟ್ರೇಲಿಯಾಕ್ಕೆ ಹೋಗಬೇಕು ಅಂತಿದ್ದಾನೆ. ಅದಕ್ಕೆ ನನ್ನಿಂದ ಕನಿಷ್ಠ ₹6 ಲಕ್ಷ ನಿರೀಕ್ಷಿಸಿದ್ದಾನೆ. ಕಾರು ಸಾಲ ₹10 ಲಕ್ಷ ಇದೆ. ಇದನ್ನು ಹೊರತುಪಡಿಸಿ ಬೇರಾವುದೇ ಸಾಲಗಳಿಲ್ಲ. ಹೀಗಿರುವಾಗ ಈಗಿನ ನನ್ನ ಕನಸಿನ ಜಾಗ-ಮನೆ, ಮಕ್ಕಳ ಮದುವೆ, ಮುಂದೆ ನನ್ನ ವಿಶ್ರಾಂತ ಬದುಕನ್ನು ಹೇಗೆ ನೆಮ್ಮದಿಯಾಗಿ ಕಟ್ಟಿಕೊಳ್ಳಬಹುದು ಎಂಬ ಬಗ್ಗೆ ತಿಳಿಸಿಕೊಡಿ.**

ಉತ್ತರ: ನಿಮ್ಮ ವಿಚಾರ ಹೃದಯಸ್ಪರ್ಶಿಯಾಗಿದೆ. ಆರ್ಥಿಕ ಸಂವೇದನೆ ಹಾಗೂ ಸಾಂಸಾರಿಕ ಕಳಕಳಿಯ ನೆಲಗಟ್ಟಿನಲ್ಲಿ ಕಟ್ಟಿಕೊಂಡ ಬದುಕಿನ ಸ್ಥಿತಿಗತಿಗೆ ಕನ್ನಡಿ ಹಿಡಿಯುತ್ತದೆ. ನಿಮ್ಮ ಮಾಹಿತಿ ಪ್ರಕಾರ ನಿವೃತ್ತಿ ವೇಳೆಗೆ ₹70 ಲಕ್ಷ ಸಿಗಲಿದೆ. ಬಾಕಿ ವಾಹನ ಸಾಲ ₹10 ಲಕ್ಷ. ಪುತ್ರನ ವಿದೇಶಿ ಪ್ರಯಾಣಕ್ಕೆ ಎತ್ತಿಡಬೇಕಾದ ಮೊತ್ತ ₹6 ಲಕ್ಷ.

ವಾಹನ ಸಾಲಕ್ಕೆ ಇರುವ ಬಡ್ಡಿ ಶೇ 10ರಷ್ಟು ಇರಬಹುದೆಂದು ನಿರೀಕ್ಷಿಸಿದರೂ ಈ ಸಾಲದ ಮೊತ್ತವನ್ನು ನಿಮ್ಮ ನಿವೃತ್ತಿ ಸಮಯದಲ್ಲಿ ಸಿಗುವ ಹಣದಿಂದ ಸಾಲದ ಷರತ್ತು ನೋಡಿಕೊಂಡು ಅವಕಾಶವಿದ್ದರೆ ಸಂಪೂರ್ಣ ಪಾವತಿ ಮಾಡಿ ಸಾಲದಿಂದ ಮುಕ್ತರಾಗಿ. ಈ ಎರಡು ಪಾವತಿ ಮಾಡಿದ ಮೇಲೆ ಉಳಿಯುವ ಮೊತ್ತ ₹54 ಲಕ್ಷ ಎಂದಿಟ್ಟುಕೊಳ್ಳಿ. ನಿಮ್ಮ ನಿರ್ಧಾರವು ನಿರ್ಣಯವಾಗುವ ತನಕ ತಾತ್ಕಾಲಿಕವಾಗಿ ಈ ಮೊತ್ತವನ್ನು ಬ್ಯಾಂಕ್ ಠೇವಣಿ, ಅಂಚೆ ಖಾತೆಯಲ್ಲಿ ಜಮೆ ಮಾಡಿ ಬಡ್ಡಿ ಪಡೆಯಿರಿ.

ಈ ಮೊತ್ತದಲ್ಲಿ ನಿಮಗೆ ಸೂಕ್ತ ಸ್ಥಳ ಹಾಗೂ ನಿಮ್ಮ ಉಳಿತಾಯದ ಮೊತ್ತದಲ್ಲಿ ಖರೀದಿಸಲು ಬರುವ ಭೂಮಿಯನ್ನು ಆಯ್ಕೆ ಮಾಡುವ ಬಗ್ಗೆ ಯೋಚಿಸಿ. ನಂತರವಷ್ಟೇ ಮನೆ ನಿರ್ಮಾಣದ ಬಗ್ಗೆ ನಿರ್ಧರಿಸಿ. ಈ ಭೂಮಿಯನ್ನು ಮನೆಯ ನಿರ್ಮಾಣಕ್ಕೆ ಸಾಲ ಭದ್ರತೆಗಾಗಿ ಬಳಸಿಕೊಳ್ಳಬಹುದು. ಅಲ್ಲದೆ, ಮಕ್ಕಳ ಉದ್ಯೋಗ ಆಧರಿಸಿ ಗೃಹ ಸಾಲ ಪಡೆಯುವುದು ಸಾಧ್ಯವಾದೀತು. ನೀವು ಸರ್ಕಾರಿ ಉದ್ಯೋಗಿ ಆಗಿರುವ ಕಾರಣ ನಿಮ್ಮ ಪಿಂಚಣಿ ಆಧರಿಸಿ ಸಾಲ ಸಿಗಬಹುದು. ಆದರೆ, ಇದಕ್ಕಾಗಿ ನಿಮ್ಮ ಕುಟುಂಬದ ಸದಸ್ಯರನ್ನೂ ಒಳಗೊಂಡು ಜಂಟಿ ಸಾಲ ಪಡೆಯಬೇಕಾಗಬಹುದು. ಹೆಚ್ಚುವರಿಯಾಗಿ ಸಹಕಾರ ಬ್ಯಾಂಕ್‌ಗಳನ್ನೂ ಸಂಪರ್ಕಿಸಬಹುದು. ನಿಮ್ಮ ವಿಚಾರದಲ್ಲಿ ನಿರಾಶೆ ಬಿಟ್ಟು ಇರುವ ಅವಕಾಶವನ್ನು ಸೂಕ್ತವಾಗಿ ಬಳಸಿಕೊಳ್ಳಿ.

ಶಶಿಕಾಂತ್, ಬಾಗಲಕೋಟೆ.

- **ಪ್ರಶ್ನೆ: ಪ್ರಸಕ್ತ ಸನ್ನಿವೇಶದಲ್ಲಿ ₹2,000 ಮುಖಬೆಲೆಯ ನೋಟುಗಳ ವಿನಿಮಯ ಮಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಲು ಕೋರಿಕೆ.**

ಉತ್ತರ: ₹2,000 ಮುಖಬೆಲೆಯ ನೋಟುಗಳನ್ನು 2016ರ ನೋಟು ಅಮಾನ್ಯದ ಸಂದರ್ಭದಲ್ಲಿ ಮುದ್ರಿಸಿ ಚಲಾವಣೆಗೆ ತರಲಾಯಿತು. ನಂತರ 2018-19ರಿಂದ ಇದರ ಮುದ್ರಣವನ್ನು ನಿಲ್ಲಿಸಿ ಸಣ್ಣ ಮುಖಬೆಲೆಯ ನೋಟುಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಾಗರಿಕರಿಗೆ ಹಾಗೂ ಆರ್ಥಿಕ ವಲಯದಲ್ಲಿ ಸಿಗುವಂತೆ ನೋಡಿಕೊಳ್ಳಲಾಯಿತು.

ಸುಮಾರು ನಾಲ್ಕೈದು ವರ್ಷದ ಅವಧಿಯಲ್ಲಿ ಅಧಿಕ ಚಲಾವಣೆ ಕಂಡ ಈ ನೋಟಿನ ಗುಣಮಟ್ಟ ಕುಸಿತವಾಗಿರುವ ಬಗ್ಗೆ ಗಮನಿಸಿದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ 'ಸ್ವಚ್ಛ ನೋಟು' ನಿಯಮಾವಳಿಯ ಭಾಗವಾಗಿ ಹಂತ ಹಂತವಾಗಿ ಈ ಮುಖಬೆಲೆಯ ನೋಟುಗಳನ್ನು ಸಾರ್ವಜನಿಕ ಮಾಹಿತಿ ನೀಡಿ ಹಿಂಪಡೆಯುವ ನಿರ್ಧಾರ ಕೈಗೊಂಡಿತ್ತು. ಈ ನಿರ್ಧಾರವು ₹2,000 ಮುಖಬೆಲೆಯ ನೋಟುಗಳನ್ನು ಸಾರ್ವಜನಿಕ ವಲಯದಲ್ಲಿ ಬಳಸುವುದನ್ನು ತಗ್ಗಿಸುವುದೇ ಆಗಿತ್ತೇ ಹೊರತು ಆ ನೋಟುಗಳನ್ನು ಅಮಾನ್ಯ ಮಾಡುವುದಾಗಿರಲಿಲ್ಲ. ಹೀಗಾಗಿ, ಯಾವುದೇ ಆತಂಕ ಬೇಡ.

ಇದರ ಭಾಗವಾಗಿ 2023ರ ಅಕ್ಟೋಬರ್ 7ರ ವರೆಗೆ ಸಾರ್ವಜನಿಕರಿಗೆ ಯಾವುದೇ ಬ್ಯಾಂಕ್‌ನ ಶಾಖೆಗಳಲ್ಲಿ ಈ ನೋಟುಗಳ ವಿನಿಮಯಕ್ಕೆ ಅವಕಾಶ ನೀಡಲಾಗಿತ್ತು. ನಂತರದ ಅವಧಿಯಲ್ಲಿ ನೋಟುಗಳ ವಿನಿಮಯ ಮಾಡಿಕೊಳ್ಳಲು ಕರ್ನಾಟಕದಲ್ಲಿ ಆರ್‌ಬಿಐನ ಬೆಂಗಳೂರು ವಲಯ ಕಚೇರಿ ಸೇರಿ ಆರ್‌ಬಿಐನ ಯಾವುದೇ ವಲಯ ಕಚೇರಿಗಳಿಗೆ ಭೇಟಿ ನೀಡಿ ಹಣ ವಿನಿಮಯ ಮಾಡಿಕೊಳ್ಳಲು ಪರ್ಯಾಯ ಅವಕಾಶವಿದೆ. ಇದು ಮುಂದಿನ ಬದಲಾವಣೆ ನಿಗದಿಪಡಿಸುವ ತನಕ ಮುಂದುವರಿಯಲಿದೆ.

ಆದರೆ, ಇದಕ್ಕೆ ಅಗತ್ಯವಾಗಿ ನಿಮ್ಮ ಕೆವೈಸಿ ದಾಖಲೆ ಸಲ್ಲಿಸುವ ಅಗತ್ಯವಿದೆ. ಒಂದು ವೇಳೆ ದೂರದ ಊರಿನ ನಾಗರಿಕರು ವಲಯ ಕಚೇರಿಗೆ ಈ ವಿಚಾರಕ್ಕಾಗಿ ಭೇಟಿ ನೀಡುವುದು ಆರ್ಥಿಕವಾಗಿ ಲಾಭದಾಯಕವಲ್ಲದಿದ್ದರೆ ಅಥವಾ ಪ್ರಯಾಣ ಅಸಾಧ್ಯವಾದರೆ ಸಮೀಪದ ಅಂಚೆ ಕಚೇರಿಗೆ ಭೇಟಿ ನೀಡಿ ಈ ಸೌಲಭ್ಯ ಪಡೆದುಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡುವ ಅವಕಾಶವಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ಸ್ಥಳೀಯ ಅಂಚೆ ಕಚೇರಿ ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

'ಹೊಂದಾಣಿಕೆ' ನಿಲುವು ತಳೆದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ

ಯುಪಿಐ ಪಾವತಿ ಮಿತಿ ಪರಿಷ್ಕರಣೆ

ಮುಂಬೈ (ಪಿಟಿಐ): ಯುಪಿಐ ಮೂಲಕ ಗ್ರಾಹಕರಿಂದ ವ್ಯಾಪಾರಿಗಳಿಗೆ ಪಾವತಿಸುವ ಮೊತ್ತದ ಮಿತಿ ಪರಿಷ್ಕರಿಸುವ ಅಧಿಕಾರವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ರಾಷ್ಟ್ರೀಯ ಪಾವತಿ ನಿಗಮಕ್ಕೆ (ಎನ್‌ಪಿಸಿಐ) ನೀಡಿದೆ.

ಪ್ರಸ್ತುತ ಯುಪಿಐ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ (ಪಿ2ಪಿ) ಮತ್ತು ಗ್ರಾಹಕನಿಂದ ವರ್ತಕನಿಗೆ (ಪಿ2ಎಂ) ಪಾವತಿ ಮಿತಿಯು ₹1 ಲಕ್ಷವಿದೆ. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ₹2 ಲಕ್ಷ ಮತ್ತು ಇತರೆ ವಹಿವಾಟಿಗೆ ₹5 ಲಕ್ಷ ನಿಗದಿಪಡಿಸಲಾಗಿದೆ.

ಬುಧವಾರ ಮುಕ್ತಾಯಗೊಂಡ ಆರ್‌ಬಿಐ ಹಣಕಾಸು ನೀತಿ ಸಮಿತಿಯ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಗವರ್ನರ್ ಸಂಜಯ್ ಮಲ್ಹೋತ್ರಾ, 'ಗ್ರಾಹಕರ ಅಗತ್ಯತೆಗೆ ಅನುಗುಣವಾಗಿ ಯುಪಿಐ ಪಾವತಿ ಮಿತಿ ಪರಿಷ್ಕರಿಸುವ ಅಧಿಕಾರವನ್ನು ಎನ್‌ಪಿಸಿಐಗೆ ನೀಡಲಾಗಿದೆ ಎಂದರು.

ವ್ಯಕ್ತಿಯಿಂದ ವ್ಯಕ್ತಿಗೆ ಇರುವ ಪಾವತಿ ಮಿತಿಯು ₹1 ಲಕ್ಷದಷ್ಟೇ ಇರುತ್ತದೆ. ವಹಿವಾಟಿಗೆ ಹೆಚ್ಚಿನ ಸುರಕ್ಷತಾ ಕ್ರಮ ಕೈಗೊಳ್ಳಲು ಎನ್‌ಪಿಸಿಐಗೆ ಸೂಚಿಸಲಾಗಿದೆ ಎಂದರು.

ಬಳಕೆ ಮತ್ತು ಆದಾಯ ಗಳಿಕೆ ಉದ್ದೇಶಗಳಿಗಾಗಿ ನಿಯಂತ್ರಿತ ಸಂಸ್ಥೆಗಳು ಚಿನ್ನದ ಆಭರಣಗಳ ಆಧಾರದ ಮೇಲೆ ಸಾಲ ನೀಡುತ್ತವೆ. ಈ ರೀತಿಯ ಸಾಲಗಳ ನಡವಳಿಕೆಗೆ ಸಂಬಂಧಿಸಿದ ಅಂಶ ಕುರಿತು ಸಮಗ್ರ ನಿಯಮಾವಳಿ ರೂಪಿಸಲು ನಿರ್ಧರಿಸಲಾಗಿದೆ ಎಂದರು.

> ಹಣದುಬ್ಬರಕ್ಕಿಂತಲೂ ಅಮೆರಿಕದ ಪ್ರತಿ ಸುಂಕ ನೀತಿ ದೇಶದ ಆರ್ಥಿಕತೆ ಬೆಳವಣಿಗೆ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಆರ್‌ಬಿಐ ಹೆಚ್ಚು ಕಳವಳಗೊಂಡಿದೆ
> **ಸಂಜಯ್ ಮಲ್ಹೋತ್ರಾ,** ಆರ್‌ಬಿಐ ಗವರ್ನರ್

'ಹೊಂದಾಣಿಕೆ' ನಿಲುವು: 'ಈ ಮೊದಲು ಸಭೆಯು ಹಣದುಬ್ಬರ ನಿಯಂತ್ರಿಸುವ ಮೂಲಕ ಆರ್ಥಿಕ ಬೆಳವಣಿಗೆಯ ಸ್ಥಿರತೆಗೆ ಒತ್ತು ನೀಡಲು 'ತಟಸ್ಥ' ನೀತಿ ಅನುಸರಿಸಿತ್ತು. ಈಗ 'ಹೊಂದಾಣಿಕೆ' ನಿಲುವು ತಳೆದಿದೆ ಎಂದು ತಿಳಿಸಿದರು.

'ಮುಂದಿನ ಎಂಪಿಸಿ ಸಭೆಯ ವೇಳೆಗೆ ದೇಶದಲ್ಲಿ ಆರ್ಥಿಕ ಅನಿಶ್ಚಿತ ಸ್ಥಿತಿ ಎದುರಾದರೆ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದು ಅಥವಾ ಕಡಿತ ಮುಂದುವರಿಸುವುದು ಈ ನಿಲುವಿನ ಹಿಂದಿರುವ ಉದ್ದೇಶವಾಗಿದೆ' ಎಂದು ಸ್ಪಷ್ಟಪಡಿಸಿದರು.

ಚಿಲ್ಲರೆ ಹಣದುಬ್ಬರ ಪರಿಷ್ಕರಣೆ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಈ ಮೊದಲು ಶೇ 4.2ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಲಾಗಿತ್ತು.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿತ ಹಣದುಬ್ಬರವು ಜನವರಿಯಿಂದ ಫೆಬ್ರುವರಿಗೆ ಶೇ 1.6ರಷ್ಟು ಇಳಿಕೆಯಾಗಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಶೇ 5.2ರಷ್ಟು ಇತ್ತು. ಫೆಬ್ರುವರಿಯಲ್ಲಿ ಶೇ 3.6ರಷ್ಟು ಕನಿಷ್ಠ ಮಟ್ಟಕ್ಕೆ ಇಳಿದಿದೆ. ಇದೇ ತಿಂಗಳಿನಲ್ಲಿ ಆಹಾರ ಪದಾರ್ಥಗಳ ಬೆಲೆಯು 21 ತಿಂಗಳ ಕನಿಷ್ಠ ಮಟ್ಟವಾದ ಶೇ 3.8ಕ್ಕೆ ಇಳಿಕೆಯಾಗಿದೆ.

ಹಣದುಬ್ಬರವು ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ 3.6, ಎರಡನೇ ತ್ರೈಮಾಸಿಕ ಶೇ 3.9, ಮೂರನೇ ತ್ರೈಮಾಸಿಕ ಶೇ 3.8, ನಾಲ್ಕನೇ ತ್ರೈಮಾಸಿಕದಲ್ಲಿ ಶೇ 4.4ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಲಾಗಿದೆ.

ಬಿಒಐ, ಯುಕೊದಿಂದ ಬಡ್ಡಿದರ ಇಳಿಕೆ

ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾ (ಬಿಒಐ) ಮತ್ತು ಯುಕೊ ಬ್ಯಾಂಕ್ ಸಾಲದ ಮೇಲಿನ ಬಡ್ಡಿದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿವೆ. ಆರ್‌ಬಿಐ ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಈ ಕ್ರಮಕೈಗೊಂಡಿವೆ. ಉಳಿದ ಬ್ಯಾಂಕ್‌ಗಳು ಬಡ್ಡಿದರ ಇಳಿಕೆ ಮಾಡುವ ನಿರೀಕ್ಷೆಯಿದೆ.

ಬ್ಯಾಂಕ್ ಆಫ್ ಇಂಡಿಯಾವು ರೆಪೊ ಆಧರಿತ ಸಾಲದ ಬಡ್ಡಿದರವನ್ನು ಶೇ 9.10ರಿಂದ ಶೇ 8.85ಕ್ಕೆ ತಗ್ಗಿಸಿದೆ. ಬುಧವಾರದಿಂದಲೇ ಈ ಪರಿಷ್ಕೃತ ದರ ಜಾರಿಗೆ ಬಂದಿದೆ. ಯುಕೊ ಬ್ಯಾಂಕ್ ರೆಪೊ ಆಧರಿತ ಸಾಲದ ಬಡ್ಡಿದರವನ್ನು ಶೇ 8.8ಕ್ಕೆ ನಿಗದಿಪಡಿಸಿದ್ದು, ಗುರುವಾರದಿಂದ ಜಾರಿಗೆ ಬರಲಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	39899-42298
ಚಿಪ್ಪು	24509-29099
ಕೋಕ	6569-19991
ಫ್ಯಾಕ್ಟರಿ	5099-24300
ಹೊಸಚಾಲಿ	36599-41599
ಶಿವಮೊಗ್ಗ	
ಬೆಟ್ಟೆ	52899-57200
ಗೊರಬಲು	18500-29669
ರಾಶಿ	44000-55599
ಸರಕು	60009-92996
ಸಾಗರ	
ಸಿಪ್ಪೆಗೋಟು	16450-16450
ಸಿದ್ದಾಪುರ	
ಬಿಳಿಗೋಟು	26109-30889
ಚಾಲಿ	33509-40839
ಕೋಕ	14319-25209
ಹಳೆಚಾಲಿ	38899-40039
ಕೆಂಪುಗೋಟು	21309-24709
ರಾಶಿ	42099-47109
ತಟ್ಟಿಬೆಟ್ಟೆ	29099-36089
ಶಿರಸಿ	
ಬೆಟ್ಟೆ	28599-43999
ಬಿಳಿಗೋಟು	16099-32299
ಚಾಲಿ	36089-41966
ಕೆಂಪುಗೋಟು	12199-23721
ರಾಶಿ	40099-46699

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ತಿಳುವಳಿಕೆ
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಮೂಡಿಗೆರೆ
ಎಫ್.ಡಿ.ಪಿ.ಸಂಖ್ಯೆ 1/2025
(ಅ.ದಾ.140/2014)
ಅರ್ಜಿದಾರರು : 1. ಶ್ರೀಮತಿ ದೇವಮ್ಮ–ಮೃತರು ಹಾಗೂ ಇತರೇ ಐವರು.
ವಿರುದ್ಧ
ಎದುರುದಾರರು : ಶ್ರೀಮತಿ ಜಯಂತಿ ನಾಗರಾಜ್–ಮೃತರು ಹಾಗೂ ಇತರೇ ಆರು ಜನ.
2ನೇ ಎದುರುದಾರರು : ಶ್ರೀಮತಿ ದೀಪ್ತಿ ದೀಪಕ್ ಬಿನ್ ಲೇಟ್ ಎ.ಎಸ್. ನಾಗರಾಜ್, ಸುಮಾರು 40 ವರ್ಷ, ಕೇರಾಫ್ ಶ್ರೀ ಸಜ್ಜಿದಾನಂದ, ಕಾಫಿ ಬೆಳೆಗಾರರು, ಸುಗ್ಗಿಕಲ್, ಕೋಟೆ ಬಡಾವಣೆ, ಚಿಕ್ಕಮಗಳೂರು.
ಹಾಗೂ
ಅಣಜೂರು, ಗೋಣಿಬೀಡು ಹೋಬಳಿ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4ನೇ ಎದುರುದಾರರು : ಕುಮಾರಿ ಶೃತಿ ನಾಗರಾಜ್ ಬಿನ್ ಲೇಟ್ ಎ.ಎಸ್. ನಾಗರಾಜ್, ಸುಮಾರು 35 ವರ್ಷ, ಅಣಜೂರು, ಗೋಣಿಬೀಡು ಹೋಬಳಿ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
& ಶ್ರೀಮತಿ ಶ್ರುತಿ ನಾಗ್ ಕೋಂ ಹರ್ಷ, ಸಿದ್ದೇಶ್ವರ ಪೆಟ್ರೋಲ್ ಬಂಕ್, ಹೆಚ್.ಪಿ. & ಸಿಎನ್‌ಜಿ ಬಂಕ್, ಮಡಿಕೇರಿ ರಸ್ತೆ, ಕುಶಾಲನಗರ.
6ನೇ ಎದುರುದಾರರು : ಕುಮಾರಿ ಅದಿತಿ ಬಿನ್ ಲೇಟ್ ಎ.ಎಸ್. ನಾಗರಾಜ್, ಸುಮಾರು 31 ವರ್ಷ, ಅಣಜೂರು, ಗೋಣಿಬೀಡು ಹೋಬಳಿ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
& ಶ್ರೀಮತಿ ಅದಿತಿ ಅಶುತೋಶ್ ಕೋಂ ಅಶುತೋಶ್, ಮನೆ ಸಂಖ್ಯೆ: 1130, 5ನೇ ಮುಖ್ಯ ರಸ್ತೆ, 1ನೇ 'ಎ' ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು.
ತಿಳುವಳಿಕೆ
ಅ.ದಾ.140/2014ರಲ್ಲಿ ಘನ ನ್ಯಾಯಾಲಯವು ದಾವವನ್ನು ದಿನಾಂಕ 20–1224ರ ತೀರ್ಪಿನಡಿಯಲ್ಲಿ ಪಕ್ಷಕಾರರ ಹಿಸ್ಸೆಯನ್ನು ನಿರ್ಧರಿಸಿ ಭಾಗಶಃ ಡಿಕ್ರಿ ಮಾಡಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸ್ವಯಂ ಅಂತಿಮ ಡಿಕ್ರಿಗಾಗಿ ಅ.ದಾ.140/2014ರ ತೀರ್ಪಿನ ದಿನಾಂಕದಂದೆ ದಿನಾಂಕವನ್ನು ನಿಗದಿಪಡಿಸಿದ್ದು, ತಾವುಗಳು ನಿಗದಿಪಡಿಸಿದ ದಿನಾಂಕದಂದು ನ್ಯಾಯಾಲಯಕ್ಕಾಗಿ ಹಾಜರಾಗದೇ ಇದ್ದ ಕಾರಣ, ಘನ ನ್ಯಾಯಾಲಯವು ತಮ್ಮ ಹಾಜರಾತಿಗಾಗಿ ನೋಟೀಸು ನೀಡಿದ್ದು, ಆ ನಂತರವೂ ತಾವುಗಳು ನ್ಯಾಯಾಲಯದಲ್ಲಿ ಹಾಜರಾಗದ ಕಾರಣ ತಮ್ಮಗಳಿಗೆ ಅಂಚೆ ಸ್ವೀಕೃತಿಯೊಂದಿಗೆ ನೋಂದಾಯಿತ ಅಂಚೆಯ ಮೂಲಕ ನೋಟೀಸಿಗೆ ಆದೇಶಿಸಿದ್ದು, ನಂತರವೂ 2,4 ಮತ್ತು 6ನೇ ಎದುರುದಾರರಾದ ತಾವುಗಳು ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ. ಈ ಕಾರಣದಿಂದ ಘನ ನ್ಯಾಯಾಲಯವು 2,4 ಮತ್ತು 6ನೇ ಎದುರುದಾರರುಗಳಾದ ತಮಗೆ ಪತ್ರಿಕಾ ಪ್ರಕಟಣೆಯ ಮೂಲಕ ದಿನಾಂಕ 03.06.2025, ಮಂಗಳವಾರದಂದು ಘನ ನ್ಯಾಯಾಲಯದ ಎದುರು ಹಾಜರಾಗಲು ನೋಟೀಸು ನೀಡಲು ಆದೇಶಿಸಿದ್ದು, 2,4 ಹಾಗೂ 6ನೇ ಎದುರುದಾರರುಗಳಾದ ತಾವುಗಳು ದಿನಾಂಕ 03.06.2025, ಮಂಗಳವಾರದಂದು ಬೆಳಗ್ಗೆ 11–00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲಿ ಅಥವ ತಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಘನ ನ್ಯಾಯಾಲಯವು ಅಂತಿಮ ಡಿಕ್ರಿ ಅರ್ಜಿಯಲ್ಲಿ ಕಾನೂನುರೀತ್ಯ ಮುಂದುವರಿಯುವುದು. ತಿಳಿಯುವುದು.
ಸ್ಥಳ: ಮೂಡಿಗೆರೆ
ದಿನಾಂಕ: 07.04.2025
ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೆದಾರರು, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಧೀಶರು ನ್ಯಾಯಾಲಯ, ಮೂಡಿಗೆರೆ.

ಉದ್ಯೋಗಾವಕಾಶ

Hotel

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್‌ಗಳು ಬೆಂಗಳೂರಿನ ಕಲ್ಯಾಣನಗರ ದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೆ ತುರ್ತಾಗಿ ಬೇಕಾಗಿದ್ದಾರೆ. ಸಂಬಳ : ಸಿಬ್ಬಂದಿಗೆ ರೂ.19300/-, ಸೂಪರ್‌ವೈಸರ್ಗೆ ರೂ. 23000/- ವಯಸ್ಸು : 18 ವರ್ಷದಿಂದ 39 ವರ್ಷಗಳವರೆಗೆ 9945779607, 9112959375, 9108946691

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

22.4.2025 ಜಾರ್ಖಂಡ್ ವೈದ್ಯನಾಥ ಕಾಶಿ ಎರಡು ಜ್ಯೋತಿರ್ಲಿಂಗ ದರ್ಶನ ಗಯ ಪ್ರಯಾಗ್ ರಾಜ್ ಅಯೋಧ್ಯೆ: 4.5.25 ಶ್ರೀಶೈಲ ಮಂತ್ರಾಲಯ ಹೈದರಾಬಾದ್: 30.5.25: ತಮಿಳುನಾಡು ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

★ಶ್ರೇಯಸ್ ಟೂರ್ಸ್★ 19.04.2025,15.05.2025 20.06.2025 7ದಿನಗಳು ನೈಮಿಷಾರಣ್ಯಾ,ಅಯೋಧ್ಯೆ,ಕಾಶಿ ಗಯಾ,ದೇವಘರ್(ಜಾರ್ಖಂಡ್). 01.05.2025 20.05.2025,01.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ)ಅಯೋಧ್ಯೆ 14.05.2025,28.05.2025 12ದಿನಗಳು ಆದಿಕೈಲಾಸ ಓಂಪರ್ವತ,ಪಾತಾಳ ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ. 27.04.2025 19.05.2025 12/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 25.04.2025,05.04.2025 0605.2025 7ದಿನಗಳು. ಪ್ರತಿವಾರ 1).ಊಟಿ, ಕೊಡೈಕೆನಾಲ್,ಪಳನಿ,ತಿರಪ್ಪೂರು 4ದಿನಗಳು. 2) 5ದಿನಗಳ ರಾಮೇಶ್ವರ ನವಗ್ರಹ,ಮದುರೈ ಕುಂಭಕೋಣಂ,ತಂಜಾವೂರು, ಇತರೆ.9743351212 9206979202 9606032154

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯಾ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

14 ದಿನಗಳ ಚಾರ್ಧಾಮ್ ಯಾತ್ರ 29.5.2025. 8 ದಿನಗಳ ಅಮರನಾಥ್ ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

★ಶ್ರೇಯಸ್ ಟೂರ್ಸ್★ 18.04.2025,09.05.2025 31.05.2025 9ದಿನಗಳು ಈಶಾನ್ಯ ಭಾರತದ ನಾಗಲ್ಯಾಂಡ್ ಮಣಿಪುರ,ಮಿಜೋರಾಂ,ತ್ರಿಪುರ ರಾಜ್ಯದ ಧಿಮಾಪುರ ಕೋಹಿಮಾ,ಇಂಫಾಲ,ಮೋರೆ ಐಜ್ವಲ್,ಉನಕೋಟಿ,ಅಗರ್ತಲ ಮಾತಾಬರಿ,ನೀರ್‌ಮಹಲ್. 05.07.2025 ಅಮರನಾಥ್, ಅಮೃತ್‌ಸರ್,ವೈಷ್ಣೋದೇವಿ, ಲಡಾಕ್ 5/11/13ದಿನಗಳು. 14.05.2025 12ದಿನಗಳು ಆದಿಕೈಲಾಸ ಓಂಪರ್ವತ ಪಾತಾಳ,ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ.10.06.2025 10ದಿನಗಳು ನೇಪಾಳ ರಾಷ್ಟ್ರ ಪ್ರವಾಸ.29.05.2025, 12.06.2025 ಚಾರ್‌ದಾಮ್ ಯಾತ್ರೆ 12ದಿನಗಳು 9743351212 9206979202 9606032154

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

‘ಭಯೋತ್ಪಾದಕ ರಾಣಾ ಭಾರತಕ್ಕೆ ಶೀಘ್ರ ಹಸ್ತಾಂತರ’


ಹವ್ವುರ್ ರಾಣಾ

ನವದೆಹಲಿ (ಪಿಟಿಐ): ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವುರ್ ರಾಣಾನನ್ನು ಅಮೆರಿಕದಿಂದ ಶೀಘ್ರದಲ್ಲೇ ಭಾರತಕ್ಕೆ ಹಸ್ತಾಂತರ ಮಾಡುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

166 ಮಂದಿಯ ಜೀವ ಬಲಿ ತೆಗೆದುಕೊಂಡ, 26/11ರ ದಾಳಿಯಲ್ಲಿ ಪಾಕಿಸ್ತಾನ ಸರ್ಕಾರ ಮತ್ತು ಅಲ್ಲಿನ ನಾಯಕರ ಪಾತ್ರವನ್ನು ಹೊರಗೆಳೆಯಲು ರಾಣಾ ಹಸ್ತಾಂತರವು ತನಿಖಾ ಸಂಸ್ಥೆಗಳಿಗೆ ನೆರವಾಗಲಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ.

ದೇಶದ ವಿವಿಧ ತನಿಖಾ ಏಜೆನ್ಸಿಗಳ ತಂಡವು ಅಮೆರಿಕಕ್ಕೆ ತೆರಳಿದ್ದು, ಪಾಕಿಸ್ತಾನ ಮೂಲದ ಕೆನಡಾ ಪ್ರಜೆ ರಾಣಾನನ್ನು ಭಾರತಕ್ಕೆ ಕರೆತರಲು ಎಲ್ಲ ದಾಖಲೆಗಳನ್ನು ಒದಗಿಸಲಾಗುತ್ತಿದ್ದು, ಕಾನೂನು ಪ್ರಕ್ರಿಯೆಯಗಳನ್ನು ಪೂರೈಸಲಾಗುತ್ತಿದೆ. ರಾಣಾನನ್ನು ಶೀಘ್ರದಲ್ಲೇ ಗಡೀಪಾರು ಮಾಡುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹಸ್ತಾಂತರ ವಿರೋಧಿಸಿ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ವಜಾಗೊಳಿಸಿದ ಕೆಲವೇ ದಿನಗಳಲ್ಲಿ ಈ ಮಹತ್ವದ ಬೆಳವಣಿಗೆ ನಡೆದಿದ್ದು, ಆತನನ್ನು ಈಗ ಭಾರತಕ್ಕೆ ಹಸ್ತಾಂತರಿಸಬೇಕಿದೆ. ಗಡೀಪಾರು ಪ್ರಕ್ರಿಯೆ ನಂತರ ರಾಣಾನನ್ನು ಮೊದಲು ಎನ್ಐಎ ಕಸ್ಟಡಿಗೆ ತೆಗೆದುಕೊಳ್ಳುವ ಸಾಧ್ಯತೆಗಳಿವೆ.

ನಟ ಸೈಫ್ ಮೇಲೆ ದಾಳಿ: ಚಾರ್ಜ್‌ಶೀಟ್

ಮುಂಬೈ (ಪಿಟಿಐ): ನಟ ಸೈಫ್ ಅಲಿ ಖಾನ್ ಅವರ ಮೇಲೆ ದಾಳಿ ನಡೆಸಿದ ಪ್ರಕರಣದ ಸಂಬಂಧ, ಪೊಲೀಸರು ದೋಷಾರೋಪ ಪಟ್ಟಿಯನ್ನು ಮುಂಬೈ ಕೋರ್ಟ್‌ಗೆ ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದರು.

ಬಾಂದ್ರಾ ಪೊಲೀಸರು ಸಲ್ಲಿಸಿರುವ ದೋಷಾರೋಪ ಪಟ್ಟಿಯು ಆರೋಪಿ, ಬಾಂಗ್ಲಾ ಪ್ರಜೆ ಮಹಮ್ಮದ್ ಶರೀಫುಲ್ ಇಸ್ಲಾಂ ವಿರುದ್ಧದ ಸಾಕ್ಷ್ಯಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

ಜನವರಿ 16ರಂದು ಬಾಂದ್ರಾ ಪ್ರದೇಶದಲ್ಲಿರುವ ಖಾನ್ ಅವರ ನಿವಾಸದ ಒಳನುಸುಳಿದ್ದ ಶರೀಫುಲ್ ಇಸ್ಲಾಂ, ಖಾನ್ ಅವರಿಗೆ ಹಲವು ಬಾರಿ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಜನವರಿ 19ರಂದು ಆರೋಪಿಯನ್ನು ಪೊಲೀಸರು ಬಂಧಿಸಿದ್ದರು.

26 ರಫೇಲ್ ಖರೀದಿಗೆ ಒಪ್ಪಿಗೆ

ನವದೆಹಲಿ(ಪಿಟಿಐ): ನೌಕಾಪಡೆಗಾಗಿ 26 ರಫೇಲ್ ಯುದ್ಧವಿಮಾನಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಸಭೆಯು, ಅಂದಾಜು ₹64 ಸಾವಿರ ಕೋಟಿ ವೆಚ್ಚದಲ್ಲಿ ಈ ಯುದ್ಧವಿಮಾನಗಳನ್ನು ಖರೀದಿಸುವುದಕ್ಕೆ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಫ್ರಾನ್ಸ್‌ನ ಡಾಸೊ ಏವಿಯೇಷನ್ ಕಂಪನಿಯು ನೌಕಾಪಡೆಗಾಗಿಯೇ ವಿಶಿಷ್ಟ ವಿನ್ಯಾಸಗಳನ್ನು ಹೊಂದಿರುವ ಈ ಅತ್ಯಾಧುನಿಕ ಯುದ್ಧವಿಮಾನಗಳನ್ನು (ರಫೇಲ್–ಎಂ) ತಯಾರಿಸಲಿದ್ದು, ಇವುಗಳನ್ನು ಯುದ್ಧನೌಕೆ ಐಎನ್‌ಎಸ್ ವಿಕ್ರಾಂತ್‌ನಲ್ಲಿ ನಿಯೋಜಿಸಲಾಗುತ್ತದೆ ಎಂದು ನೌಕಾಪಡೆ ಮೂಲಗಳು ಹೇಳಿವೆ.

ಖರೀದಿ ಒಪ್ಪಂದಕ್ಕೆ ಉಭಯ ದೇಶಗಳು ಅಂಕಿತ ಹಾಕಿದ ಮೇಲೆ, ಐದು ವರ್ಷಗಳ ನಂತರ ಈ ಯುದ್ಧವಿಮಾನಗಳ ಹಸ್ತಾಂತರ ಪ್ರಕ್ರಿಯೆ ಆರಂಭವಾಗುವುದು ಎಂದು ಇವೇ ಮೂಲಗಳು ಹೇಳಿವೆ.

ರಾಮ ಮಂದಿರದ ದರ್ಬಾರ್ ಜೂನ್ 6ರಿಂದ ಭಕ್ತರಿಗೆ ಮುಕ್ತ

ಲಖನೌ(ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ಮುಂದಿನ ತಿಂಗಳು ‘ರಾಮ ದರ್ಬಾರ್’ ಶುರುವಾಗಲಿದೆ. ಇದು ಜೂನ್ 6ರಿಂದ ಭಕ್ತರ ದರ್ಶನಕ್ಕೆ ತೆರೆದಿರಲಿದೆ ಎಂದು ದೇವಾಲಯ ನಿರ್ಮಾಣ ಸಮಿತಿಯ ಮುಖ್ಯಸ್ಥ ನೃಪೇಂದ್ರ ಮಿಶ್ರಾ ಹೇಳಿದ್ದಾರೆ.

‘ಬಾಲ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭವನ್ನು 2024ರಲ್ಲಿ ದೇವಾಲಯದ ನೆಲ ಮಹಡಿಯಲ್ಲಿ ನಡೆಸಲಾಗಿದೆ. ಈಗ ಮೊದಲ ಮಹಡಿಯಲ್ಲಿರುವ ರಾಮ ದರ್ಬಾರ್‌ನಲ್ಲಿ ಇರಿಸಬೇಕಾದ ರಾಜ ರಾಮ (ರಾಜನಾಗಿ ರಾಮ್) ಸ್ಥಾಪನೆ ಸರದಿ. ಭಗವಾನ್ ರಾಮ, ಆತನ ಸಹೋದರರು ಮತ್ತು ದೇವತೆ ಸೀತೆಯ ವಿಗ್ರಹಗಳನ್ನು ಅಯೋಧ್ಯೆಗೆ ತಂದು, ಮೇ 23ರಂದು ದೇವಾಲಯದ ಮೊದಲ ಮಹಡಿಯಲ್ಲಿ ಪ್ರತಿಷ್ಠಾಪಿಸಲಾಗುವುದು’ ಎಂದು ಮಿಶ್ರಾ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಎಐಸಿಸಿ ಅಧಿವೇಶನ: ಕೆಲಸ ಮಾಡದವರಿಗೆ ಜಾಗ ಇಲ್ಲ– ರಾಹುಲ್ ಗಾಂಧಿ, ಖರ್ಗೆ ಸ್ಪಷ್ಟ ಸಂದೇಶ

ನಿಷ್ಕ್ರಿಯರಿಗೆ ಕಾಂಗ್ರೆಸ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ಕೆಲಸಕ್ಕೆ ಸಹಾಯ ಮಾಡದವರು ವಿಶ್ರಾಂತಿ ಪಡೆಯಬೇಕು ಹಾಗೂ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸದವರು ನಿವೃತ್ತರಾಗಬೇಕು ಎಂದು ಕಾಂಗ್ರೆಸ್ ಪಕ್ಷವು ಬುಧವಾರ ಎಚ್ಚರಿಕೆ ನೀಡಿದೆ.


ಗುಜರಾತ್‌ನ ಅಹಮದಾಬಾದ್‌ನ ಸಾಬರಮತಿ ನದಿ ದಡದಲ್ಲಿ ಬುಧವಾರ ನಡೆದ ಎಐಸಿಸಿ ಅಧಿವೇಶನದಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ‘ಲೆಟರ್‌ಹೆಡ್ ನಾಯಕರಿಗೆ ಪಕ್ಷದಲ್ಲಿ ಜಾಗ ಇಲ್ಲ’ ಎಂದು ಸಂದೇಶ ರವಾನಿಸಿದರು. ಈ ತಿಂಗಳ ಕೊನೆಯಲ್ಲಿ ಗುಜರಾತ್ ಮತ್ತು ರಾಜಸ್ಥಾನದಿಂದ ಕಾಂಗ್ರೆಸ್ ತನ್ನ ಜಿಲ್ಲಾ ಸಮಿತಿಗಳನ್ನು ಪುನರ್ ರಚಿಸಲು ಆರಂಭಿಸಲಿದೆ. ಈ ಮೂಲಕ, ಸಂಘಟನೆಯಲ್ಲಿ ಭಾರಿ ಬದಲಾವಣೆ ಮಾಡುವ ಸುಳಿವನ್ನು ಪಕ್ಷ ನೀಡಿದೆ.

ಪಕ್ಷದ ಸಂಘಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಪಾತ್ರ ಮತ್ತಷ್ಟು ಹೆಚ್ಚಾಗಲಿದೆ. ಇನ್ನು ಮುಂದೆ ಪಕ್ಷದ ಅಭ್ಯರ್ಥಿಗಳ ಆಯ್ಕೆಯಲ್ಲಿ ಅವರು ಪಾತ್ರ ವಹಿಸುತ್ತಾರೆ ಎಂದು ಖರ್ಗೆ ಒತ್ತಿ ಹೇಳಿದರು. ಅವರ ನೇಮಕಾತಿಯನ್ನು ಎಐಸಿಸಿ ಮಾರ್ಗಸೂಚಿಗಳ ಪ್ರಕಾರ ಕಟ್ಟುನಿಟ್ಟಾಗಿ ಮತ್ತು ನಿಷ್ಪಕ್ಷಪಾತವಾಗಿ ಮಾಡಬೇಕಾಗಿದೆ ಎಂದರು.

ಜಿಲ್ಲಾ ಘಟಕಗಳ ಅಧ್ಯಕ್ಷರು ನೇಮಕಗೊಂಡ ಒಂದು ವರ್ಷದೊಳಗೆ ಉತ್ತಮ ವ್ಯಕ್ತಿಗಳನ್ನು ಸೇರಿಸಿ ಬೂತ್ ಸಮಿತಿ, ಮಂಡಲ ಸಮಿತಿ, ಬ್ಲಾಕ್ ಸಮಿತಿ ಮತ್ತು ಜಿಲ್ಲಾ ಸಮಿತಿಗಳನ್ನು ರಚಿಸಬೇಕು. ಇದರಲ್ಲಿ ಯಾವುದೇ ಪಕ್ಷಪಾತ ಇರಬಾರದು ಎಂದು ಅವರು ಸೂಚಿಸಿದರು.

ಮೋಸದಿಂದ ಚುನಾವಣಾ ಗೆಲುವು: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಹಿಂದೆಂದೂ ಕಾಣದ ರೀತಿಯಲ್ಲಿ ‘ವಂಚನೆ’ಯ ಮೂಲಕ ಗೆದ್ದಿದೆ ಎಂದು ಆರೋಪಿಸಿರುವ ಖರ್ಗೆ ಮತಪತ್ರದ ಮೂಲಕ ಚುನಾವಣೆಗಳನ್ನು ನಡೆಸಬೇಕೆಂದು ಬಲವಾದ ಧ್ವನಿ ಎತ್ತಿದ್ದಾರೆ.

ಮೋದಿ ಸರ್ಕಾರವು ಆಪ್ತ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡುತ್ತಿದೆ. ಮಹಾರಾಷ್ಟ್ರ ಚುನಾವಣೆಯಲ್ಲಿ ನಡೆದಂತಹ ವಂಚನೆಯು ಪ್ರಜಾಪ್ರಭುತ್ವವನ್ನು ನಾಶಮಾಡುವ ಗುರಿ ಹೊಂದಿದೆ. ಪ್ರಜಾಪ್ರಭುತ್ವವನ್ನು ನಿಧಾನವಾಗಿ, ನಿಧಾನವಾಗಿ, ನಿಧಾನವಾಗಿ ಮುಗಿಸಲಾಗುತ್ತಿದೆ’ ಎಂದು ಖರ್ಗೆ ಆರೋಪಿಸಿದರು.


ಎಐಸಿಸಿ ಅಧಿವೇಶನದಲ್ಲಿ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್ ಸೇರಿದಂತೆ ಇತರ ಮುಖಂಡರು ಪಾಲ್ಗೊಂಡರು

ಬಿಜೆಪಿ ವಿರುದ್ಧ ‘ಕೈ’ ವಾಗ್ದಾಳಿ

- ಬಿಜೆಪಿ ಮತ್ತು ಆರ್‌ಎಸ್‌ಎಸ್ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಮಹಿಳೆಯರಿಗೆ ಅಧ್ಯಕ್ಷ ಸ್ಥಾನ ನೀಡಿಲ್ಲ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಾಯಕರ ಸಂಕುಚಿತ ಮನಸ್ಥಿತಿಯೇ ಇದಕ್ಕೆ ಕಾರಣ
- ಮಹಿಳಾ ಮೀಸಲಾತಿ ಮಸೂದೆಯನ್ನು 2024ರ ಸೆಪ್ಟೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿತು. ಆದರೆ, ದಲಿತ, ಆದಿವಾಸಿ ಮತ್ತು ಒಬಿಸಿಗಳಿಗೆ ಕೋಟಾದೊಂದಿಗೆ ಅದನ್ನು ತಕ್ಷಣ ಜಾರಿಗೆ ತರಬೇಕೆಂದು ಕಾಂಗ್ರೆಸ್ ಬಲವಾಗಿ ಒತ್ತಾಯಿಸಿತು. ಆದರೂ, ಬಿಜೆಪಿ ಸರ್ಕಾರ ಅದನ್ನು ಜಾರಿಗೆ ತಂದಿಲ್ಲ
- ಮಹಿಳಾ ದೌರ್ಜನ್ಯ, ಶೋಷಣೆ, ನಿಂದನೆ ಮತ್ತು ಹಿಂಸಾಚಾರ ಏರಿಕೆಯಾಗಿದೆ
- ಎರಡು ಅಥವಾ ಮೂರು ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿ ಕೊಡಲು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಪ್ರಪಾತಕ್ಕೆ ತಳ್ಳಲಾಗಿದೆ
- 2011ರ ನಂತರ ಜನಗಣತಿ ನಡೆಸದ ಕಾರಣ 11 ಕೋಟಿ ಜನರು ಆಹಾರ ಭದ್ರತಾ ಕಾಯ್ದೆಯಿಂದ ವಂಚಿತರಾಗಿದ್ದಾರೆ
- ಬಿಜೆಪಿ ಸರ್ಕಾರದ ದೋಷಪೂರಿತ ಆರ್ಥಿಕ ನೀತಿಗಳು ಸಾಮಾನ್ಯ ಜನರ ಬೆನ್ನೆಲುಬನ್ನು ಮುರಿದಿವೆ

‘ವಕ್ಫ್ ಕಾಯ್ದೆ ಸಂವಿಧಾನ ವಿರೋಧಿ’

ವಕ್ಫ್ (ತಿದ್ದುಪಡಿ) ಕಾಯ್ದೆಯು ಸಂವಿಧಾನ ವಿರೋಧಿ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಬಿಜೆಪಿ-ಆರ್‌ಎಸ್‌ಎಸ್ ಶೀಘ್ರದಲ್ಲೇ ಕ್ರೈಸ್ತರು ಮತ್ತು ಸಿಖ್ಖರಂತಹ ಇತರ ಅಲ್ಪ-ಸಂಖ್ಯಾತರ ಹಕ್ಕುಗಳನ್ನು ಕಸಿದುಕೊಳ್ಳಲಿದೆ ಎಂದು ಎಚ್ಚರಿಸಿದರು.

ಅಧಿವೇಶನದಲ್ಲಿ ಮಾತನಾಡಿದ ಅವರು, ‘ಆರ್ಥಿಕ ಹಿಂಜರಿತದ ಬಿರುಗಾಳಿ ಸಮೀಪಿಸುತ್ತಿದೆ. ಸುಂಕ ವಿಧಿಸುವಿಕೆಯ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒತ್ತಡಕ್ಕೆ ಪ್ರಧಾನಿ ನರೇಂದ್ರ ಮೋದಿ ಮಣಿದಿದ್ದಾರೆ’ ಎಂದರು.

‘ಟ್ರಂಪ್ ಅವರನ್ನು ಪ್ರಧಾನಿ ಮೋದಿ ತಬ್ಬಿಕೊಳ್ಳುತ್ತಿರುವ ಛಾಯಾಚಿತ್ರವನ್ನು ನೀವು ನೋಡಿದ್ದೀರಾ? ಈ ಬಾರಿ ಟ್ರಂಪ್ ಅವರು, ‘ನಾವು ನಿಮ್ಮನ್ನು ತಬ್ಬಿಕೊಳ್ಳುವುದಿಲ್ಲ. ಆದರೆ, ಹೊಸ ಸುಂಕಗಳನ್ನು ವಿಧಿಸುತ್ತೇವೆ’ ಎಂದು ಎಚ್ಚರಿಸಿದರು. ಪ್ರಧಾನಿ ಮೋದಿ ಒಂದು ಮಾತನ್ನೂ ಹೇಳಲಿಲ್ಲ. ಇದರಿಂದ ಗಮನ ಬೇರೆಡೆ ಸೆಳೆಯಲು ಅವರು ಎರಡು ದಿನ ಸಂಸತ್ತಿನಲ್ಲಿ ನಾಟಕ ನಡೆಸಿದರು. ಪ್ರಧಾನಿ ಎಲ್ಲಿ ಅಡಗಿದ್ದಾರೆ’ ಎಂದು ಅವರು ಪ್ರಶ್ನಿಸಿದರು.

ದೇಶದಲ್ಲಿ ಜಾತಿ ಜನಗಣತಿ ನಡೆಯಬೇಕು ಎಂದು ಬಲವಾಗಿ ಪ್ರತಿಪಾದಿಸಿದ ಅವರು, ‘ನಾವು ಶೇಕಡಾ 50ರಷ್ಟು ಮೀಸಲಾತಿಯ ಗೋಡೆಯನ್ನು ಒಡೆಯುತ್ತೇವೆ. ತೆಲಂಗಾಣದಲ್ಲಿ ಮಾಡಿರುವುದನ್ನು ದೇಶದಾದ್ಯಂತ ಜಾರಿಗೆ ತರಲಿದ್ದೇವೆ’ ಎಂದು ಭರವಸೆ ನೀಡಿದರು.

> ಪಕ್ಷವು ಮುಂಬರುವ ಚುನಾವಣೆಯಲ್ಲಿ ಗೆಲ್ಲಲು ಬಯಸಿದರೆ, ಬೆದರಿಕೆ ಮತ್ತು ಆಮಿಷಗಳ ಹೊರತಾಗಿಯೂ ಪಕ್ಷದಲ್ಲಿ ಉಳಿದಿರುವ ಕಠಿಣ ವ್ಯಕ್ತಿಗಳನ್ನು ಉತ್ತೇಜಿಸಬೇಕು. ಅವರಿಗೆ ಅವಕಾಶಗಳನ್ನು ನೀಡಬೇಕು.
> **ಗೌರವ್ ಗೊಗೋಯಿ,** ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ

> ಕಾಂಗ್ರೆಸ್ ಭರವಸೆಯ ಪಕ್ಷವಾಗಿರಬೇಕು, ಅಸಮಾಧಾನದ ಪಕ್ಷವಲ್ಲ. ಭವಿಷ್ಯದ ಪಕ್ಷವಾಗಿರಬೇಕು, ಕೇವಲ ಭೂತಕಾಲದ ಪಕ್ಷವಲ್ಲ ಮತ್ತು ಸಕಾರಾತ್ಮಕ ನಿರೂಪಣೆ ಹೊಂದಿರುವ ಪಕ್ಷವಾಗಿರಬೇಕು.
> **ಶಶಿ ತರೂರ್,** ಹಿರಿಯ ನಾಯಕ

ಬಿಜೆಪಿಯ ದಲಿತ ವಿರೋಧಿ ಮನಃಸ್ಥಿತಿ: ರಾಹುಲ್ ಟೀಕೆ

ಅಹಮದಾಬಾದ್ (ಪಿಟಿಐ): ಬಿಜೆಪಿಯು ದಲಿತ ವಿರೋಧಿ ಮನಃಸ್ಥಿತಿಯನ್ನು ಹೊಂದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದ್ದಾರೆ.

ರಾಜಸ್ಥಾನದ ಅಲ್ವಾರ್‌ನಲ್ಲಿರುವ ರಾಮ ಮಂದಿರದ ಪ್ರತಿಷ್ಠಾಪನೆ ಸಮಾರಂಭದಲ್ಲಿ ಕಾಂಗ್ರೆಸ್‌ನ ಟೀಕಾರಾಮ್ ಜೂಲಿ ಭಾಗವಹಿಸಿದ ಬಳಿಕ ಬಿಜೆಪಿ ಮುಖಂಡ ಜ್ಞಾನದೇವ್ ಅಹುಜಾ ಅವರು ಗಂಗಾ ಜಲ ಚಿಮುಕಿಸಿ ದೇವಾಲಯ ಶುದ್ಧೀಕರಿಸಿದ್ದನ್ನು ಪ್ರಸ್ತಾಪಿಸಿ ಈ ಆರೋಪ ಮಾಡಿದ್ದಾರೆ.

ಎಐಸಿಸಿ ಅಧಿವೇಶನದಲ್ಲಿ ಭಾಗವಹಿಸಲು ಆಗಮಿಸಿರುವ ರಾಹುಲ್ ಗಾಂಧಿ, ಈ ಘಟನೆಯನ್ನು ಉಲ್ಲೇಖಿಸಿ, ‘ಬಿಜೆಪಿಯ ದಲಿತ ವಿರೋಧಿ ಮತ್ತು ಮನುವಾದಿ ಚಿಂತನೆಗೆ ಮತ್ತೊಂದು ಉದಾಹರಣೆ ಇದು. ಬಿಜೆಪಿ ನಿರಂತರವಾಗಿ ದಲಿತರನ್ನು ಅವಮಾನಿಸುತ್ತಿದೆ. ಸಂವಿಧಾನದ ಮೇಲೆ ದಾಳಿ ಮಾಡುತ್ತಿದೆ’ ಎಂದು ಕಿಡಿಕಾರಿದ್ದಾರೆ.


‘ಮೋದಿ ಜೀ, ದೇಶವನ್ನು ಸಂವಿಧಾನ ಮತ್ತು ಅದರ ಆದರ್ಶಗಳಿಂದ ನಡೆಸಲಾಗುತ್ತದೆಯೇ ಹೊರತು ಬಹುಜನರನ್ನು ಎರಡನೇ ದರ್ಜೆಯ ನಾಗರಿಕರೆಂದು ಪರಿಗಣಿಸುವ ಮನುಸ್ಮೃತಿಯಿಂದಲ್ಲ. ಅದಕ್ಕಾಗಿಯೇ ಸಂವಿಧಾನವನ್ನು ಗೌರವಿಸುವುದು ಮಾತ್ರವಲ್ಲದೆ ಅದನ್ನು ರಕ್ಷಿಸುವುದು ಸಹ ಮುಖ್ಯವಾಗಿದೆ’ ಎಂದು ರಾಹುಲ್ ಹೇಳಿದ್ದಾರೆ.

‘ಅಹುಜಾ ಅವರ ಕೃತ್ಯವು ದಲಿತರ ಬಗೆಗಿನ ಬಿಜೆಪಿಯ ಮನಃಸ್ಥಿತಿಯನ್ನು ಸೂಚಿಸುತ್ತದೆ. ಇದು ತನ್ನ ನಂಬಿಕೆಯ ಮೇಲಿನ ದಾಳಿ ಮಾತ್ರವಲ್ಲದೆ ಅಸ್ಪೃಶ್ಯತೆಯನ್ನು ಉತ್ತೇಜಿಸುವ ಪ್ರಯತ್ನವೂ ಆಗಿದೆ’ ಎಂದು ಟೀಕಾರಾಮ್ ಜೂಲಿ ಟೀಕಿಸಿದ್ದಾರೆ.

ರಾಮ ನವಮಿಯ ವೇಳೆ ಭಾನುವಾರ ಅಲ್ವಾರ್‌ನ ವಸತಿ ಸೊಸೈಟಿಯಲ್ಲಿರುವ ರಾಮ ದೇವಾಲಯದಲ್ಲಿ ನಡೆದ ಅಭಿಷೇಕದಲ್ಲಿ ಜೂಲಿ ಪಾಲ್ಗೊಂಡಿದ್ದರು.

‘ಸಮಾರಂಭದಲ್ಲಿ ಕೆಲವು ವ್ಯತ್ಯಾಸಗಳಾಗಿದ್ದವು. ಹಾಗಾಗಿ, ಮರು ದಿನ ನಾನು ಅಲ್ಲಿಗೆ ಹೋಗಿ ದೇವಾಲಯದ ಆವರಣವನ್ನು ಶುದ್ಧೀಕರಿಸಲು ಗಂಗಾ ಜಲ ಚಿಮುಕಿಸಿದೆ. ಭಗವಾನ್ ರಾಮನ ಬಗೆಗಿನ ಕಾಂಗ್ರೆಸ್ ನಾಯಕರ ನಿಲುವಿನಿಂದಾಗಿ ಈ ರೀತಿ ಮಾಡಿದ್ದೇನೆಯೇ ಹೊರತು ಜೂಲಿ ದಲಿತ ಎಂಬ ಕಾರಣಕ್ಕೆ ಅಲ್ಲ’ ಎಂದು ಅಹುಜಾ ಪ್ರತಿಕ್ರಿಯಿಸಿದ್ದಾರೆ.

ಬಂಗಾಳದಲ್ಲಿ ವಕ್ಫ್ ಕಾಯ್ದೆ ಅನುಷ್ಠಾನ ಮಾಡಲ್ಲ: ಮಮತಾ



ಕೋಲ್ಕತ್ತ (ಪಿಟಿಐ): ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಪಶ್ಚಿಮ ಬಂಗಾಳದಲ್ಲಿ ಅನುಷ್ಠಾನ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬುಧವಾರ ತಿಳಿಸಿದರು.

ಜೈನ ಸಮುದಾಯದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಅಲ್ಪಸಂಖ್ಯಾತ ಜನರನ್ನು ಮತ್ತು ಅವರ ಆಸ್ತಿಯನ್ನು ರಕ್ಷಿಸುತ್ತೇನೆ’ ಎಂದು ಭರವಸೆ ನೀಡಿದರು.

‘ವಕ್ಫ್ ತಿದ್ದುಪಡಿ ಕಾಯ್ದೆಯಿಂದ ನಿಮಗೆ ತೊಂದರೆಯಾಗಿದೆ ಎಂದು ನನಗೆ ಗೊತ್ತು. ನಂಬಿಕೆ ಇಡಿ; ಬಂಗಾಳದಲ್ಲಿ ಏನೂ ಆಗುವುದಿಲ್ಲ’ ಎಂದು ಹೇಳಿದರು. ಮುರ್ಶಿದಾಬಾದ್‌ನಲ್ಲಿ ನಡೆದ ಗಲಭೆಯನ್ನು ಪರೋಕ್ಷವಾಗಿ ಉಲ್ಲೇಖಿಸಿ, ‘ರಾಜಕೀಯ ಚಳವಳಿ ರೂಪಿಸಲು ಪ್ರಚೋದಿಸುವವರತ್ತ ಗಮನ ನೀಡಬೇಡಿ’ ಎಂದು ಕರೆ ನೀಡಿದರು.

ತಮಿಳು ಹಕ್ಕಿಗಾಗಿ ಹೋರಾಡಿದ್ದ ಕುಮಾರಿ ಅನಂತನ್ ನಿಧನ

ಚೆನ್ನೈ (ಪಿಟಿಐ): ಸಂಸತ್ತನ್ನು ಉದ್ದೇಶಿಸಿ ಮಾತನಾಡುವಾಗ ತಮಿಳು ಭಾಷೆಯನ್ನು ಬಳಸುವ ಅವಕಾಶಕ್ಕಾಗಿ ಹೋರಾಟ ನಡೆಸಿ, ಅದರಲ್ಲಿ ಯಶಸ್ಸು ಕಂಡಿದ್ದ ಕಾಂಗ್ರೆಸ್ಸಿನ ಹಿರಿಯ ಮುಖಂಡ ಮತ್ತು ವಾಗ್ಮಿ ಕುಮಾರಿ ಅನಂತನ್ (92) ಅವರು ಬುಧವಾರ ನಿಧನರಾದರು ಎಂದು ಕುಟುಂಬದ ಮೂಲಗಳು ಹೇಳಿವೆ.

ಸಂಸತ್ತಿನಲ್ಲಿ ತಮಿಳಿನಲ್ಲಿ ಮಾತನಾಡುವ ಹಕ್ಕನ್ನು ಕೊಡಿಸುವಲ್ಲಿ ಅನಂತನ್ ಮಹತ್ವದ ಪಾತ್ರ ವಹಿಸಿದ್ದರು ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸಂಸದ ವೈಕೊ ಹೇಳಿದ್ದಾರೆ. ಅನಂತನ್ ಅವರು ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದರು. ಅವರಿಗೆ ಪುತ್ರ, ನಾಲ್ವರು ಪುತ್ರಿಯರು ಇದ್ದಾರೆ. ಬಿಜೆಪಿ ನಾಯಕಿ, ತೆಲಂಗಾಣದ ಮಾಜಿ ರಾಜ್ಯಪಾಲೆ ತಮಿಳ್‌ಇಸೈ ಸೌಂದರರಾಜನ್ ಅವರು ಅನಂತನ್ ಅವರ ಮಗಳು.

‘ಸಮಾಜಸೇವೆ ಹಾಗೂ ತಮಿಳುನಾಡಿನ ಪ್ರಗತಿಯ ಬಗೆಗಿನ ಪ್ರೀತಿಯ ಕಾರಣಕ್ಕಾಗಿ ಅನಂತನ್ ಅವರು ನೆನಪಿನಲ್ಲಿ ಇರುತ್ತಾರೆ. ತಮಿಳು ಭಾಷೆ ಮತ್ತು ಸಂಸ್ಕೃತಿಯನ್ನು ಜನಪ್ರಿಯಗೊಳಿಸಲು ಅವರು ಹಲವು ಪ್ರಯತ್ನ ನಡೆಸಿದ್ದರು. ಅವರ ಅಗಲುವಿಕೆಯಿಂದ ನೋವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

‘ವ್ಯಾಜ್ಯ ಇತ್ಯರ್ಥಕ್ಕೆ ವ್ಯಾಪ್ತಿ ವಿಧಿಸಬಹುದು’

ನವದೆಹಲಿ (ಪಿಟಿಐ): ನೌಕರಿಗೆ ಸಂಬಂಧಿಸಿದ ಯಾವುದೇ ವ್ಯಾಜ್ಯವನ್ನು ನಿರ್ದಿಷ್ಟವಾದ ನ್ಯಾಯಾಲಯದ ವ್ಯಾಪ್ತಿಯಲ್ಲೇ ಬಗೆಹರಿಸಿಕೊಳ್ಳಬೇಕು ಎಂಬ ಷರತ್ತನ್ನು ಖಾಸಗಿ ವಲಯದ ಉದ್ಯೋಗದಾತರು ನೇಮಕಾತಿ ಪತ್ರದಲ್ಲಿ ವಿಧಿಸಬಹುದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಮನಮೋಹನ್ ಅವರು ಇರುವ ವಿಭಾಗೀಯ ಪೀಠವು ಈ ಮಾತು ಹೇಳಿದೆ. ‘ನ್ಯಾಯಾಲಯದ ಮೂಲಕ ಪ್ರಕರಣ ಬಗೆಹರಿಸಿಕೊಳ್ಳುವ ಹಕ್ಕನ್ನು ಯಾವುದೇ ಒಪ್ಪಂದದ ಮೂಲಕ ಕಿತ್ತುಕೊಳ್ಳಲು ಅವಕಾಶ ಇಲ್ಲ. ಆದರೆ ಆ ಹಕ್ಕನ್ನು ನಿರ್ದಿಷ್ಟ ನ್ಯಾಯಾಲಯಕ್ಕೆ ಸೀಮಿತಗೊಳಿಸಬಹುದು’ ಎಂದು ಪೀಠವು ಹೇಳಿದೆ.

ನಗದುರಹಿತ ಚಿಕಿತ್ಸೆ: ಕೇಂದ್ರಕ್ಕೆ ತರಾಟೆ

ನವದೆಹಲಿ (ಪಿಟಿಐ): ಮೋಟಾರು ವಾಹನ ಅಪಘಾತಗಳಲ್ಲಿ ಗಾಯಗೊಂಡವರು ನಗದುರಹಿತವಾಗಿ ಚಿಕಿತ್ಸೆ ಪಡೆಯಲು ಅಗತ್ಯವಿರುವ ಯೋಜನೆಯನ್ನು ರೂಪಿಸುವಲ್ಲಿ ವಿಳಂಬ ಧೋರಣೆ ಪ್ರದರ್ಶಿಸಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ವಿಳಂಬಕ್ಕೆ ವಿವರಣೆ ನೀಡಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ಕಾರ್ಯದರ್ಶಿಯನ್ನು ಬರಹೇಳಿದೆ.

ಜನವರಿ 8ರಂದು ಕೋರ್ಟ್ ಆದೇಶ ನೀಡಿದ್ದರೂ ಕೇಂದ್ರ ಸರ್ಕಾರವು ಅದನ್ನು ಪಾಲಿಸಿಲ್ಲ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಆಕ್ಷೇಪ ವ್ಯಕ್ತಪಡಿಸಿತು.

‘ಕೊಡಲಾಗಿದ್ದ ಸಮಯವು ಮಾರ್ಚ್ 15ಕ್ಕೆ ಕೊನೆಗೊಂಡಿದೆ. ಇದು ಈ ನ್ಯಾಯಾಲಯದ ಆದೇಶದ ಗಂಭೀರ ಉಲ್ಲಂಘನೆಯಷ್ಟೇ ಅಲ್ಲ, ಇದು ಬಹಳ ಉಪಯುಕ್ತವಾದ ಕಾನೂನಿನ ಅನುಷ್ಠಾನದಲ್ಲಿನ ಲೋಪವೂ ಹೌದು’ ಎಂದು ಪೀಠವು ಹೇಳಿದೆ. ರಸ್ತೆ ಸಾರಿಗೆ ಸಚಿವಾಲಯದ ಕಾರ್ಯದರ್ಶಿಯು ಏಪ್ರಿಲ್ 28ರಂದು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದಲ್ಲಿ ಹಾಜರಿರಬೇಕು ಎಂದು ಅದು ಸೂಚಿಸಿದೆ.

ಅನುಷ್ಠಾನದ ವಿಚಾರವಾಗಿ ಕೆಲವು ಅಡ್ಡಿಗಳು ಇವೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ವಿಕ್ರಮಜೀತ್ ಬ್ಯಾನರ್ಜಿ ಅವರು ಪೀಠಕ್ಕೆ ಮಾಹಿತಿ ನೀಡಿದರು.

‘ಇದು ನೀವೇ ರೂಪಿಸಿದ ಶಾಸನ. ನಗದುರಹಿತ ಚಿಕಿತ್ಸೆಯ ಸೌಲಭ್ಯ ಇಲ್ಲವಾಗಿರುವ ಕಾರಣಕ್ಕೆ ಜನ ಜೀವ ಕಳೆದುಕೊಳ್ಳುತ್ತಿದ್ದಾರೆ... ಜನಸಾಮಾನ್ಯರ ಅನುಕೂಲಕ್ಕಾಗಿ ಇದನ್ನು ರೂಪಿಸಲಾಗಿದೆ. ನಾವು ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಕ್ರಮ ಕೈಗೊಳ್ಳುತ್ತೇವೆ. ಕಾರ್ಯದರ್ಶಿಯವರಿಗೆ ವಿವರಣೆ ನೀಡಲು ಹೇಳಿ’ ಎಂದು ಪೀಠವು ತಾಕೀತು ಮಾಡಿತು.



ಅಪಘಾತ ಸಂಭವಿಸಿದ ನಂತರ ಒಂದು ತಾಸಿನ ಒಳಗೆ (ಗೋಲ್ಡನ್ ಅವರ್) ಗಾಯಾಳುಗಳಿಗೆ ನಗದು ರಹಿತವಾಗಿ ಚಿಕಿತ್ಸೆ ಒದಗಿಸಲು ಅಗತ್ಯವಿರುವ ಯೋಜನೆಯನ್ನು ಸಿದ್ಧಪಡಿಸುವಂತೆ ಕೋರ್ಟ್ ಜನವರಿ 8ರಂದು ಹೇಳಿತ್ತು. ಯೋಜನೆಯ ವಿವರವನ್ನು ಮಾರ್ಚ್ 14ಕ್ಕೆ ಮೊದಲು ಸಲ್ಲಿಸಬೇಕು ಎಂದು ಸೂಚಿಸಿತ್ತು.

‘ಸುಪ್ರೀಂ’ ವಿಧಿಸಿದ ಷರತ್ತು ಉಲ್ಲಂಘಿಸಿಲ್ಲ’


ಸೆಂಥಿಲ್ ಬಾಲಾಜಿ

ನವದೆಹಲಿ (ಪಿಟಿಐ): ‘ನನ್ನನ್ನು ಸಚಿವರನ್ನಾಗಿ ನೇಮಿಸಿರುವುದು ಸುಪ್ರೀಂ ಕೋರ್ಟ್ ವಿಧಿಸಿದ್ದ ಜಾಮೀನು ಷರತ್ತುಗಳ ಉಲ್ಲಂಘನೆಯಾಗಿಲ್ಲ. ಜನರು ನೀಡಿದ ತೀರ್ಪಿನ ಆಧಾರದಲ್ಲಿ ನಾನು ಸಚಿವ ಸ್ಥಾನದಲ್ಲಿದ್ದೇನೆ. ಇದಕ್ಕಾಗಿ ನನ್ನನ್ನು ಶಿಕ್ಷಿಸಲು ಸಾಧ್ಯವಿಲ್ಲ’ ಎಂದು ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಜಾರಿ ನಿರ್ದೇಶನಾಲಯ ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಡಿಎಂಕೆ ನಾಯಕ ಸೆಂಥಿಲ್ ಅವರಿಗೆ ಕಳೆದ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಷರತ್ತುಬದ್ಧ ಜಾಮೀನು ನೀಡಿತ್ತು. ಸೆಂಥಿಲ್ ಅವರಿಗೆ ಸಚಿವ ಸ್ಥಾನ ನೀಡಿರುವುದನ್ನು ಪ್ರಶ್ನಿಸಿ ಕೆ. ವಿದ್ಯಾ ಕುಮಾರ್ ಎಂಬುವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ‘ಸಾಕ್ಷಿಗಳನ್ನು ಬೆದರಿಸುವ ಸಂಭವವಿದೆ’ ಎಂದು ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ.

ಈ ಅರ್ಜಿಯ ಸಂಬಂಧ ಸೆಂಥಿಲ್ ಅವರು ಪ್ರಮಾಣಪತ್ರ ದಾಖಲಿಸಿದ್ದಾರೆ. ‘ಸಾಕ್ಷಿಗಳಲ್ಲಿ ಯಾರಾದರು ಭಯಪಡುತ್ತಿದ್ದರೆ, ಅಂಥವರು ರಾಜ್ಯ ಸರ್ಕಾರದ ‘ಸಾಕ್ಷಿ ರಕ್ಷಣೆ ಯೋಜನೆ’ ಅಡಿ ರಕ್ಷಣೆ ಪಡೆದುಕೊಳ್ಳಬಹುದು. ಈ ಅರ್ಜಿಯು ರಾಜಕೀಯ ಮಹತ್ವಾಕಾಂಕ್ಷೆಯಿಂದ ಕೂಡಿದ್ದಾಗಿದೆ. ನಾನು ಸಚಿವನಾಗಬಾರದು ಎಂದು ಹೇಳುವುದು ಸಂವಿಧಾನದ 21ನೇ ವಿಧಿಯು ನನಗೆ ನೀಡಿದ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ’ ಎಂದು ಪ್ರಮಾಣಪತ್ರದಲ್ಲಿ ಹೇಳಿದ್ದಾರೆ.

‘ವಯನಾಡ್ ಭೂಕುಸಿತ ಸಂತ್ರಸ್ತರ ಸಾಲಮನ್ನಾ ಅಸಾಧ್ಯ’

ಕೊಚ್ಚಿ (ಪಿಟಿಐ): ವಯನಾಡ್‌ನಲ್ಲಿ ಕಳೆದ ವರ್ಷ ಜುಲೈನಲ್ಲಿ ಸಂಭವಿಸಿದ ಭೂಕುಸಿತದಿಂದ ಸಂಕಷ್ಟಕ್ಕೊಳಗಾದ ಜನರ ಸಾಲವನ್ನು ಮನ್ನಾ ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರವು ಕೇರಳ ಹೈಕೋರ್ಟ್‌ಗೆ ತಿಳಿಸಿದೆ.

ಬದಲಾಗಿ, ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅನ್ವಯವಾಗುವ ಆರ್‌ಬಿಐ ಸೂಚನೆಯ ಅನುಸಾರವಾಗಿ ಅವರ ಸಾಲದ ಮರುಪಾವತಿ ಅವಧಿಯನ್ನು ಮರುನಿಗದಿ ಮಾಡಬಹುದು ಎಂದು ತಿಳಿಸಿದೆ.

ನೈಸರ್ಗಿಕ ವಿಕೋಪ ಸಂದರ್ಭದಲ್ಲಿ, ಸಾಲದ ಮರುಪಾವತಿ ಅವಧಿಯನ್ನು ಮುಂದೂಡಲು ಮತ್ತು ಹೊಸ ಸಾಲ ತೆಗೆದುಕೊಳ್ಳಲು ಆರ್‌ಬಿಐ ನಿಯಮವು ಅನುವು ಮಾಡಿಕೊಡುತ್ತದೆ.

ಸಂತ್ರಸ್ತರು ಪಡೆದ ಸಾಲವನ್ನು ಮನ್ನಾ ಮಾಡಬಹುದೇ ಎಂದು ತಿಳಿಸುವಂತೆ ಕೋರ್ಟ್ ಸರ್ಕಾರವನ್ನು ಕೇಳಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಹಣಕಾಸು ಸಚಿವಾಲಯವು, ಕಳೆದ ವರ್ಷ ಆಗಸ್ಟ್ 19ರಂದು ರಾಜ್ಯಮಟ್ಟದ ಬ್ಯಾಂಕ್ ಅಧಿಕಾರಿಗಳ ಸಮಿತಿಯೊಂದಿಗೆ ವಿಶೇಷ ಸಭೆ ನಡೆಸಲಾಗಿತ್ತು ಎಂದು ತಿಳಿಸಿದೆ.


ವಿಷುಗೆ ಸಿದ್ಧತೆ ವಿಷು ಹಬ್ಬದ ಅಂಗವಾಗಿ ತಿರುವನಂತಪುರದ ರಸ್ತೆ ಬದಿ ಬುಧವಾರ ಮಾರಾಟಕ್ಕಿಟ್ಟಿದ್ದ ಕೃಷ್ಣನ ಮೂರ್ತಿಗಳನ್ನು ಮಹಿಳೆ ವೀಕ್ಷಿಸುತ್ತಾ ಸಾಗಿದರು –ಪಿಟಿಐ ಚಿತ್ರ

ಜಲ ನಿರ್ವಹಣೆ ಆಧುನೀಕರಣಕ್ಕೆ ಯೋಜನೆ

ನವದೆಹಲಿ (ಪಿಟಿಐ): ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಆಧುನೀಕರಣ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಈ ಯೋಜನೆಯ ಆರಂಭಿಕ ವೆಚ್ಚ ₹1,600 ಕೋಟಿ ಆಗಿದೆ.

ಇದನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಉಪ ಯೋಜನೆ ಯಾಗಿ ಜಾರಿಗೊಳಿಸಲಾಗುತ್ತಿದ್ದು, ಹಾಲಿ ಇರುವ ಕಾಲುವೆಗಳು ಮತ್ತು ಇತರ ಜಲ ಮೂಲಗಳ ಮೂಲಕ ನೀರು ಪೂರೈಕೆ ಜಾಲವನ್ನು ಆಧುನೀಕರಿಸುವ ಉದ್ದೇಶವನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ. ದೇಶದ ವಿವಿಧೆಡೆ ಇರುವ ಕೃಷಿ ಹವಾಮಾನ ವಲಯಗಳಲ್ಲಿ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಆರಂಭಿಕ ಅನುಮೋದನೆಯನ್ನು ಸಂಪುಟ ನೀಡಿದೆ.

10 ಸಾವಿರ ಭಾರತೀಯರ ಡಿಎನ್‌ಎ ಕುರಿತ ಮಾಹಿತಿ ಲಭ್ಯ

ಜಿನೋಮ್ ದತ್ತಾಂಶ ಸ್ಥಾಪನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 83 ವಿಭಿನ್ನ ಗುಂಪುಗಳಿಗೆ ಸೇರಿದ ಹಾಗೂ ಆರೋಗ್ಯವಂತರಾದ 10 ಸಾವಿರ ಜನರ ಜಿನೋಮ್ ಡೇಟಾಬೇಸ್ (ವರ್ಣತಂತುಗಳ ಸಂರಚನೆಯ ದತ್ತಾಂಶ) ಸ್ಥಾಪಿಸಿದ್ದಾಗಿ ಭಾರತೀಯ ಜೀವವಿಜ್ಞಾನಿಗಳು ಘೋಷಿಸಿದ್ದಾರೆ.

ಜಿನೋಮ್ ದತ್ತಾಂಶ ಒಳಗೊಂಡ ಈ ವಿಶಿಷ್ಟ ವೇದಿಕೆಯು, ಭವಿಷ್ಯದಲ್ಲಿ ‘ನಿಖರ ಔಷಧಿ’ ಅಭಿವೃದ್ಧಿಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಜೀವವಿಜ್ಞಾನಿಗಳು ಹೇಳಿದ್ದಾರೆ.

‘ಜಿನೋಮ್ ಇಂಡಿಯಾ ಪ್ರಾಜೆಕ್ಟ್’ ನಡಿ ಐದು ವರ್ಷಗಳ ಸಂಶೋಧನೆ ಫಲವಾಗಿ ಈ ದತ್ತಾಂಶ ಸಿದ್ಧಪಡಿಸಲಾಗಿದೆ. ಈ ಉದ್ದೇಶಕ್ಕಾಗಿ ಬೆಂಗಳೂರಿನ ಐಐಎಸ್‌ಸಿ, ನಿಮ್ಹಾನ್ಸ್ ಹಾಗೂ ಸೆಂಟರ್ ಫಾರ್ ಬಯೊಲಾಜಿಕಲ್ ಸೈನ್ಸಸ್ ಸೇರಿ ದೇಶದ 20 ಪ್ರತಿಷ್ಠಿತ ಸಂಸ್ಥೆಗಳನ್ನು ಒಳಗೊಂಡ ಒಕ್ಕೂಟ ಸ್ಥಾಪಿಸಲಾಗಿದೆ.


‘ಜಿನೋಮ್ ಇಂಡಿಯಾ ಪ್ರಾಜೆಕ್ಟ್‌ನ ಭಾಗವಾಗಿ ಕೈಗೊಂಡ ಸಂಶೋಧನೆಯಿಂದ ಭಾರತೀಯರ ಡಿಎನ್‌ಎಯಲ್ಲಿ 18 ಕೋಟಿ ವಿಶಿಷ್ಟ ವ್ಯತ್ಯಾಸಗಳಿರುವುದು ಪತ್ತೆಯಾಗಿದೆ. ಈ ಪೈಕಿ ಶೇ 60ರಷ್ಟು ವ್ಯತ್ಯಾಸಗಳು ಅಪರೂಪ ಎಂದೇ ಪರಿಗಣಿಸಲಾಗುತ್ತದೆ’ ಎಂದು ಬಯೊಟೆಕ್ನಾಲಜಿ ಇಲಾಖೆ ಕಾರ್ಯದರ್ಶಿ ರಾಜೇಶ್ ಗೋಖಲೆ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ರಾಜೇಶ್ ಗೋಖಲೆ ಅವರು ಈ ಪ್ರಾಜೆಕ್ಟ್‌ನ ಮುಂದಾಳತ್ವ ವಹಿಸಿದ್ದರು.

‘ದೇಶದ ಆರೋಗ್ಯವಂತ ಭಾರತೀಯರ ವಂಶವಾಹಿಯಲ್ಲಿನ ವೈವಿಧ್ಯವನ್ನು ಅರ್ಥ ಮಾಡಿಕೊಳ್ಳಲು ಹಾಗೂ ರೋಗಗಳಿಗೆ ಕಾರಣವಾಗುವ ವಂಶವಾಹಿಯಲ್ಲಿನ ವ್ಯತ್ಯಾಸಗಳ ಮೌಲ್ಯಮಾಪನಕ್ಕೆ ಈ ಪ್ರಾಜೆಕ್ಟ್ ಆಧಾರ ಒದಗಿಸುತ್ತದೆ’ ಎಂದು ಗೋಖಲೆ ಹೇಳಿದ್ದಾರೆ.



ಪ್ರಮುಖ ಅಂಶಗಳು

- ವ್ಯಕ್ತಿಯ ಚಿಕಿತ್ಸೆಗೆ ಅಗತ್ಯವಿರುವ ನಿರ್ದಿಷ್ಟ ಔಷಧಿ ಅಭಿವೃದ್ಧಿಗೆ ದತ್ತಾಂಶದಿಂದ ಅನುಕೂಲ
- ನಿರ್ದಿಷ್ಟ ಜನರ ಗುಂಪುಗಳಲ್ಲಿ ಕಂಡುಬರುವ ಕಾಯಿಲೆಗಳಿಗೆ ಔಷಧಿಗಳ ಅಭಿವೃದ್ಧಿ
- 83 ಜನಾಂಗೀಯ ಗುಂಪುಗಳಿಗೆ ಸೇರಿದ 20 ಸಾವಿರ ಜನರ ರಕ್ತದ ಮಾದರಿ ಸಂಗ್ರಹಿಸಿ, ಜಿನೋಮ್ ಸಿಕ್ವೆನ್ಸಿಂಗ್‌ಗೆ ಒಳಪಡಿಸಲಾಗಿತ್ತು
- ಅಂತಿಮವಾಗಿ 4,696 ಪುರುಷರು ಹಾಗೂ 5,076 ಮಹಿಳೆಯರ ಜಿನೋಮ್ ಸಿಕ್ವೆನ್ಸಿಂಗ್ ಫಲಿತಾಂಶ ಒಳಗೊಂಡ ದತ್ತಾಂಶ ಸಿದ್ಧಪಡಿಸಲಾಗಿದೆ





ಅಜೇಯ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯ ಇಂದು • ಕನ್ನಡಿಗ ಕೆ.ಎಲ್. ರಾಹುಲ್ ಆಕರ್ಷಣೆ

ಆರ್‌ಸಿಬಿಗೆ ತವರಿನಲ್ಲಿ ಗೆಲುವಿನ ತವಕ

• ನಾಗೇಶ್ ಶೆಣೈ



ರಜತ್ ಪಾಟಿದಾರ್

ಬೆಂಗಳೂರು: ನಿರ್ಭೀತ ಆಟವಾಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಈ ಬಾರಿಯ ಐಪಿಎಲ್‌ನಲ್ಲಿ ನಾಲ್ಕು ಪಂದ್ಯಗಳ ಪೈಕಿ ಮೂರನ್ನು ಗೆದ್ದು ಉತ್ತಮ ಆರಂಭ ಮಾಡಿದೆ. ಇದೀಗ, ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಜೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದ್ದು, ತವರಿನಲ್ಲಿ ಗೆಲುವಿನ ಖಾತೆ ತೆರೆಯುವ ತವಕದಲ್ಲಿದೆ.

ಈ ಪಂದ್ಯ ಆಸಕ್ತಿಕರ ಮುಖಾಮುಖಿಗೆ ವೇದಿಕೆಯಾಗಲಿದೆ. ತವರಿನ ಅಂಗಳದಲ್ಲಿ ಆಡುತ್ತಿರುವ ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ತಾರೆ ಕೆ.ಎಲ್.ರಾಹುಲ್ ಅವರ ಪ್ರದರ್ಶನ ಕುತೂಹಲಕ್ಕೆ ಎಡೆಮಾಡಿದೆ.

ರಜತ್ ಪಾಟೀದಾರ್ ಪಡೆ ಈ ಬಾರಿ ಆಡುತ್ತಿರುವ ರೀತಿ ಮೆಚ್ಚುಗೆಗೆ ಪಾತ್ರವಾಗಿದೆ. ಕೋಲ್ಕತ್ತದಲ್ಲಿ ಉದ್ಘಾಟನಾ ಪಂದ್ಯ ಗೆದ್ದ ನಂತರ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 17 ವರ್ಷಗಳ ನಂತರ ಅದರ ನೆಲದಲ್ಲೇ ಬಗ್ಗುಬಡಿದಿದೆ. ತವರಿನಲ್ಲಿ ಗುಜರಾತ್ ಟೈಟನ್ಸ್‌ಗೆ ಸೋತರೂ, ರನ್ ಹೊಳೆಕಂಡ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಮೇಲೆ ರೋಚಕ ಜಯ ಪಡೆದು ಆತ್ಮವಿಶ್ವಾಸದಲ್ಲಿದೆ.

ಆಡಿದ ಮೂರೂ ಪಂದ್ಯಗಳನ್ನು ಗೆದ್ದಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಸಮತೋಲನ ಹೊಂದಿದ್ದು ಉತ್ತಮ ಹೋರಾಟ ನಿರೀಕ್ಷಿಸಬಹುದು.

ಕೊಹ್ಲಿ–ಸ್ಟಾರ್ಕ್ ಮುಖಾಮುಖಿ: 36 ವರ್ಷ ವಯಸ್ಸಿನ ವಿರಾಟ್ ಕೊಹ್ಲಿ ಅವರು ರನ್ ಸುಗ್ಗಿ ಕಾಣುತ್ತಿರುವುದು ತಂಡದ ಮನೋಬಲ ಹೆಚ್ಚಿಸಿದೆ. ಅವರ ಆಟ ಆರ್‌ಸಿಬಿ ಯಶಸ್ಸಿನಲ್ಲಿ ನಿರ್ಣಾಯಕವಾಗಲಿದೆ. ಪಾಟೀದಾರ್ ಕೂಡ ಆಕ್ರಮಣಕಾರಿಯಾಗಿಯೇ ಅವರು ಆಡುತ್ತಿದ್ದಾರೆ.

ಈ ಪಂದ್ಯದಲ್ಲಿ ಕೊಹ್ಲಿ ಮತ್ತು ಎದುರಾಳಿ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಮುಖಾಮುಖಿ ಕುತೂಹಲ ಕೆರಳಿಸಿದೆ. ಅವರು ಪವರ್‌ಪ್ಲೇ ಅವಧಿ ಕಳೆದರೆ, ಅನುಭವಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನು ಹೇಗೆ ನಿಭಾಯಿಸುವರು ಎಂಬುದೂ ಆಸಕ್ತಿಕರ.

ಈ ಹಿಂದಿನ ಪಂದ್ಯಗಳಲ್ಲಿ ಸ್ಟಾರ್ಕ್ ಹಾಕಿದ 31 ಎಸೆತಗಳಲ್ಲಿ ಕೊಹ್ಲಿ 72 ರನ್ ಗಳಿಸಿದ್ದಾರೆ. ಆದರೆ ಈ ಬಾರಿ ಆಸ್ಟ್ರೇಲಿಯಾದ ಬೌಲರ್ ಪರಿಣಾಮಕಾರಿಯಾಗಿದ್ದು, 3 ಪಂದ್ಯಗಳಲ್ಲಿ ಕೇವಲ 11ರ ಸರಾಸರಿಯಲ್ಲಿ 9 ವಿಕೆಟ್ ಪಡೆದಿದ್ದಾರೆ. ಕುಲದೀಪ್ 6 ವಿಕೆಟ್‌ಗಳನ್ನು ಗಳಿಸಿದ್ದಾರೆ. ಆರ್‌ಸಿಬಿ ಮಧ್ಯಮ ಕ್ರಮಾಂಕಕ್ಕೆ ಡೆಲ್ಲಿಯ ಅನುಭವಿ ಸ್ಪಿನ್ನರ್‌ಗಳನ್ನು (ಕುಲದೀಪ್, ಅಕ್ಷರ್) ಅವರನ್ನು ಎದುರಿಸುವ ಸವಾಲು ಇದೆ.

ಬೌಲರ್‌ಗಳ ಭರವಸೆ: ಈ ಆವೃತ್ತಿಯಲ್ಲಿ ಬೆಂಗಳೂರಿನ ಆರಂಭಿಕ ಬೌಲರ್‌ಗಳಾದ ಜೋಶ್ ಹ್ಯಾಜಲ್‌ವುಡ್ ಮತ್ತು ಭುವನೇಶ್ವರ ಕುಮಾರ್ ಅವರು ಪವರ್ ಪ್ಲೇ ಅವಧಿಯಲ್ಲಿ ಎದುರಾಳಿಗಳನ್ನು ನಿಯಂತ್ರಿಸಿದ್ದಾರೆ. ಇಲ್ಲಿನ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಡೆಲ್ಲಿ ತಂಡದ ಕೀಪರ್–ಬ್ಯಾಟರ್ ಕೆ.ಎಲ್.ರಾಹುಲ್ ಅವರನ್ನು ಕಟ್ಟಿಹಾಕುವ ಸವಾಲು ಈ ಬೌಲರ್‌ಗಳ ಮುಂದಿದೆ. ರಾಹುಲ್ ಈ ಹಿಂದಿನ ಪಂದ್ಯದಲ್ಲಿ ಬಿರುಸಿನ ಅರ್ಧ ಶತಕ ಗಳಿಸಿದ್ದಾರೆ.

ರಾಹುಲ್ ಅವರ ಹಾಗೆಯೇ ಆರಂಭ ಆಟಗಾರ ಫಾಫ್ ಡುಪ್ಲೆಸಿ ಅವರಿಗೂ ಇಲ್ಲಿನ ಪರಿಸ್ಥಿತಿ ಚಿರಪರಿಚಿತ. ಕಳೆದ ಋತುವಿನವರೆಗೆ ಆರ್‌ಸಿಬಿ ನಾಯಕರಾಗಿದ್ದ ಅವರು ಫಿಟ್ನೆಸ್ ಕಾರಣ ಸಿಎಸ್‌ಕೆ ವಿರುದ್ಧ ಈ ಹಿಂದಿನ ಪಂದ್ಯ ಆಡಿರಲಿಲ್ಲ. ಅವರ ಲಭ್ಯತೆ ಗುರುವಾರವೇ ತೀರ್ಮಾನ ಆಗಲಿದೆ.

ಈ ಇಬ್ಬರ ಜೊತೆ ಜೇಕ್ ಫ್ರೇಸರ್ ಮೆಕ್‌ಗುರ್ಕ್, ಅಭಿಷೇಕ್ ಪೊರೆಲ್, ಟ್ರಿಸ್ಟನ್ ಸ್ಟಬ್ಸ್, ಅಶುತೋಷ್ ಶರ್ಮಾ... ಹೀಗೆ ಡೆಲ್ಲಿ ಬ್ಯಾಟಿಂಗ್ ಸರದಿ ಪ್ರಬಲವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊಸ್ಟಾರ್ ಆ್ಯಪ್.



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಡೆಲ್ಲಿ ಕ್ಯಾಪಿಟಲ್ಸ್ (ಡಿಸಿ) ತಂಡದ ಆಟಗಾರರಾದ ಕೆ.ಎಲ್. ರಾಹುಲ್ ಹಾಗೂ ಫಾಫ್ ಡುಪ್ಲೆಸಿ ಅಭ್ಯಾಸ ನಡೆಸಿದರು. ಚಿತ್ರ:.ಪ್ರಶಾಂತ್ ಎಚ್‌.ಜಿ.

ಬಲಾಬಲ

ಮುಖಾಮುಖಿ	32
ಆರ್‌ಸಿಬಿ ಗೆಲುವು	19
ಡೆಲ್ಲಿ ಗೆಲುವು	11
ಡ್ರಾ	1
ಫಲಿತಾಂಶವಿಲ್ಲ	1

ಟೈಟನ್ಸ್‌ಗೆ ನಾಲ್ಕನೇ ಜಯ

ಅಹಮದಾಬಾದ್ (ಪಿಟಿಐ): ಚೆನ್ನೈ ಬ್ಯಾಟರ್ ಸಾಯಿ ಸುದರ್ಶನ್ ಮತ್ತು ಬೆಂಗಳೂರು ಬೌಲರ್ ಪ್ರಸಿದ್ಧ ಕೃಷ್ಣ ಅವರ ಅಮೋಘ ಆಟದ ಬಲದಿಂದ ಗುಜರಾತ್ ಟೈಟನ್ಸ್ ತಂಡವು ಐಪಿಎಲ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಆತಿಥೇಯ ಗುಜರಾತ್ ತಂಡವು 58 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ಎದುರು ಗೆದ್ದಿತು. ಟೂರ್ನಿಯಲ್ಲಿ ಸತತ ನಾಲ್ಕನೇ ಪಂದ್ಯ ಜಯಿಸಿದ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಟಾಸ್ ಗೆದ್ದ ರಾಜಸ್ಥಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಟೈಟನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 217 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಸುದರ್ಶನ್ 18 ಓವರ್‌ಗಳವರೆಗೆ ಕ್ರೀಸ್‌ನಲ್ಲಿದ್ದು ತಂಡಕ್ಕೆ ಆಸರೆಯಾದರು. ಸಾಯಿ (82; 53 ಎ, 4X8, 6X3) ಟೂರ್ನಿಯಲ್ಲಿ ಮೂರನೇ ಅರ್ಧಶತಕ ದಾಖಲಿಸಿದರು. ಸುದರ್ಶನ್ ಅವರಿಗೆ ಇದು ಐಪಿಎಲ್‌ನಲ್ಲಿ 30ನೇ ಪಂದ್ಯ.

ಗುರಿ ಬೆನ್ನಟ್ಟಿದ ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ತಂಡವು 19.2 ಓವರ್‌ಗಳಲ್ಲಿ 159 ರನ್ ಗಳಿಸಿ ಆಲೌಟ್ ಆಯಿತು. ವೇಗಿ ಪ್ರಸಿದ್ಧ ಕೃಷ್ಣ (24ಕ್ಕೆ3) ಅವರು ಪರಿಣಾಮಕಾರಿ ದಾಳಿ ನಡೆಸಿದರು. ಅವರೊಂದಿಗೆ ಸ್ಪಿನ್ನರ್ ರಶೀದ್ ಖಾನ್ ಮತ್ತು ಆರ್. ಸಾಯಿಕಿಶೋರ್ ತಲಾ 2 ವಿಕೆಟ್ ಗಳಿಸಿದರು. ವೇಗಿ ಮೊಹಮ್ಮದ್ ಸಿರಾಜ್ 1 ವಿಕೆಟ್ ಪಡೆದರು.

ಸುದರ್ಶನ್ ಆಟ: ಇನಿಂಗ್ಸ್ ಆರಂಭಿಸಿದ ಗುಜರಾತ್ ತಂಡಕ್ಕೆ ರಾಯಲ್ಸ್ ವೇಗಿ ಜೋಫ್ರಾ ಆರ್ಚರ್ ಮೊದಲ ಪೆಟ್ಟು ಕೊಟ್ಟರು. ಅವರ ನಿಖರ ಎಸೆತಕ್ಕೆ ಗುಜರಾತ್ ತಂಡದ ಗಿಲ್ ಕ್ಲೀನ್‌ಬೌಲ್ಡ್ ಆದರು. ಕ್ರೀಸ್‌ಗೆ ಬಂದ ಜೋಸ್ ಬಟ್ಲರ್ ತಾಳ್ಮೆಯಿಂದ ಇನಿಂಗ್ಸ್ ನಿರ್ವಹಿಸಿದರು. ಅವರು ಸುದರ್ಶನ್‌ಗೆ ಹೆಚ್ಚು ಬೆಂಬಲ ನೀಡಿದರು. ಇದರಿಂದಾಗಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 80 (47ಎಸೆತ) ರನ್ ಸೇರಿದವು. ಅದರಲ್ಲಿ ಬಟ್ಲರ್ ಕಾಣಿಕೆ 36 (25ಎ, 4X5) ರನ್‌ಗಳಷ್ಟೇ. ಆಫ್‌ಬ್ರೇಕ್ ಬೌಲರ್ ಮಹೀಷ ತೀಕ್ಷಣ ಎಸೆತದಲ್ಲಿ ಬಟ್ಲರ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇದರೊಂದಿಗೆ ಜೊತೆಯಾಟ ಮುರಿಯಿತು.

ಕ್ರೀಸ್‌ಗೆ ಬಂದ ಶಾರೂಕ್ ಖಾನ್ (36; 20ಎ) ಕೂಡ ಸಾಯಿ ಸುದರ್ಶನ್‌ಗೆ ಉತ್ತಮ ಜೊತೆ ನೀಡಿದರು. ಇಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 62 (34ಎ) ರನ್ ಸೇರಿಸಿದರು. ಕೊನೆಯ ಐದು ಓವರ್‌ಗಳಲ್ಲಿ ಸುದರ್ಶನ್ ಅವರು ತಮ್ಮ ಆಟದ ವೇಗ ಹೆಚ್ಚಿಸಿದರು.

ಆದರೆ 16ನೇ ಓವರ್‌ನಲ್ಲಿ ತೀಕ್ಷಣ ಅವರೇ ಈ ಜೊತೆಯಾಟವನ್ನೂ ಮುರಿದರು. ಖಾನ್ ಕ್ರೀಸ್‌ನಿಂದ ಮುನ್ನುಗ್ಗಿ ಹೊಡೆಯುವ ಯತ್ನಿಸಿದರು. ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಸ್ಟಂಪಿಂಗ್ ಮಾಡಿದರು. ತುಷಾರ್ ದೇಶಪಾಂಡೆ ಹಾಕಿದ 19ನೇ ಓವರ್‌ನಲ್ಲಿ ಸುದರ್ಶನ್ ಔಟಾದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 6ಕ್ಕೆ217 (ಸಾಯಿ ಸುದರ್ಶನ್ 82, ಜೋಸ್ ಬಟ್ಲರ್ 36, ಶಾರೂಕ್ ಖಾನ್ 36, ರಾಹುಲ್ ತೆವಾಟಿಯಾ ಔಟಾಗದೇ 24, ರಶೀದ್ ಖಾನ್ 12, ತುಷಾರ್ ದೇಶಪಾಂಡೆ 53ಕ್ಕೆ2, ಮಹೀಶ್ ತೀಕ್ಷಣ 54ಕ್ಕೆ2) **ರಾಜಸ್ಥಾನ ರಾಯಲ್ಸ್:** 19.2 ಓವರ್‌ಗಳಲ್ಲಿ 159 (ಸಂಜು ಸ್ಯಾಮ್ಸನ್ 41, ರಿಯಾನ್ ಪರಾಗ್ 26, ಶಿಮ್ರಾನ್ ಹೆಟ್ಮೆಯರ್ 52, ಪ್ರಸಿದ್ಧ ಕೃಷ್ಣ 24ಕ್ಕೆ3, ರಶೀದ್ ಖಾನ್ 37ಕ್ಕೆ2, ಆರ್. ಸಾಯಿಕಿಶೋರ್ 20ಕ್ಕೆ2) ಫಲಿತಾಂಶ: ಗುಜರಾತ್ ಟೈಟನ್ಸ್ ತಂಡಕ್ಕೆ 58 ರನ್ ಜಯ. **ಪಂದ್ಯದ ಆಟಗಾರ:** ಸಾಯಿ ಸುದರ್ಶನ್.



ಗುಜರಾತ್ ಟೈಟನ್ಸ್ ತಂಡದ ಎಂ. ಶಾರೂಕ್ ಖಾನ್ (ಎಡ) ಮತ್ತು ಸಾಯಿ ಸುದರ್ಶನ್–ಎಎಫ್‌ಪಿ ಚಿತ್ರ

ರಾಷ್ಟ್ರೀಯ ಹಾಕಿ: 'ಡ್ರಾ' ಪಂದ್ಯದಲ್ಲಿ ಕರ್ನಾಟಕ

ಝಾನ್ಸಿ (ಪಿಟಿಐ): ಕರ್ನಾಟಕ ತಂಡ ಬುಧವಾರ ಆರಂಭವಾದ 15ನೇ ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನ 'ಎ' ಡಿವಿಜನ್ ಪಂದ್ಯದಲ್ಲಿ ಬುಧವಾರ ಮಣಿಪುರ ಜೊತೆ 1–1 ಡ್ರಾ ಮಾಡಿಕೊಂಡಿತು.

ನೀಲಕಂಠ ಶರ್ಮಾ 44ನೇ ನಿಮಿಷ ಮಣಿಪುರ ತಂಡಕ್ಕೆ ಮುನ್ನಡೆ ಒದಗಿಸಿದರೆ, ಆರು ನಿಮಿಷಗಳ ನಂತರ ಗಣೇಶ್ ಮಜ್ಜಿ ಅವರು ಕರ್ನಾಟಕ ತಂಡ ಸಮ ಮಾಡಿಕೊಳ್ಳಲು ನೆರವಾದರು.

ಬಿ ಡಿವಿಜನ್‌ನ 'ಎ' ಗುಂಪಿನ ಪಂದ್ಯದಲ್ಲಿ ಹಾಕಿ ಚಂಡೀಗಢ 9–0 ಗೋಲುಗಳಿಂದ ಉತ್ತರಾಖಂಡ ತಂಡವನ್ನು ಸದೆಬಡಿಯಿತು. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ 8–2 ಗೋಲುಗಳಿಂದ ಆಂಧ್ರ ಪ್ರದೇಶ ತಂಡವನ್ನು ಸೋಲಿಸಿತು.

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್

ವಿಜಯವೀರ್‌ಗೆ ಚಿನ್ನದ ಪದಕ

ಬ್ಯೂನೊ ಏರ್ಸ್ (ಪಿಟಿಐ): ಪ್ಯಾರಿಸ್ ಒಲಿಂಪಿಯನ್ ವಿಜಯವೀರ್ ಸಿಧು ಅವರು ಐಎಸ್‌ಎಸ್‌ಎಫ್ ವಿಶ್ವ ಕಪ್ ಶೂಟಿಂಗ್‌ನ ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮಂಗಳವಾರ ಚಿನ್ನ ಗೆದ್ದರು. ಇದು ಈ ಕೂಟದಲ್ಲಿ ಭಾರತಕ್ಕೆ ನಾಲ್ಕನೇ ಚಿನ್ನ.

ಅಲ್ಪಸ್ಕೋರುಗಳ ಫೈನಲ್‌ನಲ್ಲಿ ವಿಜಯವೀರ್ ಅವರು 29 ಸ್ಕೋರ್ ಗಳಿಸಿದರು. ಅನುಭವಿ ಎದುರಾಳಿ ಇಟಲಿಯ ರಿಕಾರ್ಡೊ ಮಝೆಟ್ಟಿ ಒಂದು ಪಾಯಿಂಟ್ ಹಿನ್ನಡೆಯಿಂದ ಬೆಳ್ಳಿ ಪದಕಕ್ಕೆ ತೃಪ್ತರಾಗಬೇಕಾಯಿತು. ಚೀನಾದ ಹದಿಹರೆಯದ ಸ್ಪರ್ಧಿ ಯಾಂಗ್ ಯುಹಾವೊ ಕಂಚಿನ ಪದಕ ಗೆದ್ದರು. ಫೈನಲ್ ಐದು ರ್‍ಯಾಪಿಡ್ ಫೈರ್ ಶಾಟ್‌ಗಳ ಎಂಟು ಸುತ್ತುಗಳನ್ನು ಹೊಂದಿತ್ತು.



ವಿಜಯವೀರ್ ಸಿಧು

'ಫೈನಲ್‌ನಲ್ಲಿ ನಾನು ನಿಯಂತ್ರಣ ಸಾಧಿಸಲು ಯತ್ನಿಸಿದೆ. ಅದು ಯಶಸ್ವಿಯಾಯಿತು. ನನಗೆ ಈ ಹಿಂದೆ ಈ ಕೂಟದಲ್ಲಿ ಚಿನ್ನ ಗೆಲ್ಲಲು ಆಗಿರಲಿಲ್ಲ. ಈಗ ಆ ತಡೆಯನ್ನು ದಾಟಲು ಸಾಧ್ಯವಾಗಿದೆ. ಇದು ದೇಶದ ಭವಿಷ್ಯದ ಶೂಟರ್‌ಗಳಿಗೆ ಈ ಕೂಟದಲ್ಲಿ ಯಶಸ್ಸು ಗಳಿಸಲು ನೆರವಾಗಲಿದೆ' ಎಂದು ಅವರು ಫೈನಲ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.

ರುದ್ರಾಂಕ್ಷ್– ಆರ್ಯ ಜೋಡಿಗೆ ಬೆಳ್ಳಿ: ರುದ್ರಾಂಕ್ಷ್ ಪಾಟೀಲ್– ಆರ್ಯ ಬೋರ್ಸೆ ಜೋಡಿ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಬುಧವಾರ ಬೆಳ್ಳಿ ಪದಕ ಜಯಿಸಿತು. ಚೀನಾದ ಝೀಫಿ ವಾಂಗ್– ಬುಹಾನ್ ಸಾಂಗ್ ಚಿನ್ನದ ಪದಕ ತಮ್ಮದಾಗಿಸಿಕೊಂಡಿತು.

ಇದಕ್ಕೆ ಮೊದಲು, ಮಂಗಳವಾರ ಸುರುಚಿ ಇಂದರ್ ಸಿಂಗ್ ಅವರು ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಭಾರತ ಈ ಕೂಟದಲ್ಲಿ ಏಳು ಪದಕಗಳನ್ನು (4 ಚಿನ್ನ, 2 ಬೆಳ್ಳಿ, 1 ಕಂಚು) ಗೆದ್ದಿದ್ದು ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಗ್ಲೆನ್ ಮ್ಯಾಕ್ಸ್‌ವೆಲ್‌ಗೆ ದಂಡ

ಮುಲ್ಲನಪುರ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಗೆ ಪಂದ್ಯ ಸಂಭಾವನೆಯ ಶೇ 25ರಷ್ಟು ದಂಡ ಮತ್ತು ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ.

ಮಂಗಳವಾರ ಇಲ್ಲಿ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಆಸ್ಟ್ರೇಲಿಯಾದ ಆಟಗಾರ ಮ್ಯಾಕ್ಸ್‌ವೆಲ್ ಅವರು 2.2ರ ನಿಯಮದಡಿಯ ಲೆವಲ್ 1ರಲ್ಲಿ ಲೋಪ ಎಸಗಿದ್ದಾರೆಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

'ಪಂದ್ಯ ನಡೆಯುವ ಸಂದರ್ಭದಲ್ಲಿ ಮೂಲಸೌಕರ್ಯ ಮತ್ತು ಕ್ರಿಕೆಟ್ ಸಲಕರಣೆಗಳಿಗೆ ಹಾನಿಯುಂಟು ಮಾಡಿದ್ದಾರೆ. ಅವರು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಮ್ಯಾಕ್ಸ್‌ವೆಲ್ ಅವರು ಫಾರ್ಮ್ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ವಿಫಲರಾಗುತ್ತಿದ್ದಾರೆ.

ಈ ಪಂದ್ಯದಲ್ಲಿ ಪಂಜಾಬ್ ತಂಡವು 18 ರನ್‌ಗಳಿಂದ ಜಯಿಸಿತು. ಒಟ್ಟು 6 ಅಂಕಗಳೊಂದಿಗೆ 4ನೇ ಸ್ಥಾನದಲ್ಲಿದೆ.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಜಿಟಿ	5	4	1	8	1.413
2	ಡಿಸಿ	3	3	0	6	1.257
3	ಆರ್‌ಸಿಬಿ	4	3	1	6	1.015
4	ಪಿಬಿಕೆಎಸ್	4	3	1	6	0.289
5	ಎಲ್‌ಎಸ್‌ಜಿ	5	3	2	6	0.078
6	ಕೆಕೆಆರ್	5	2	3	4	-0.056
7	ಆರ್‌ಆರ್	5	2	3	4	-0.733
8	ಎಂಐ	5	1	4	2	-0.010
9	ಸಿಎಸ್‌ಕೆ	5	1	4	2	-0.889
10	ಎಸ್‌ಆರ್‌ಎಚ್	5	1	4	2	-1.629

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 288 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 11 ವಿಕೆಟ್

ಬಿಎಫ್‌ಐ: ನಿರ್ವಹಣೆಗೆ ಹಂಗಾಮಿ ಸಮಿತಿ ನೇಮಕ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಆಡಳಿತ ಸರಾಗವಾಗಿ ನಡೆಯುವಂತೆ ನೋಡಿಕೊಳ್ಳಲು ವಿಶ್ವ ಬಾಕ್ಸಿಂಗ್, ಆರು ಸದಸ್ಯರ ಹಂಗಾಮಿ ಸಮಿತಿಯನ್ನು ನೇಮಕ ಮಾಡಿದೆ. ಇದಕ್ಕೆ ಬಿಎಫ್‌ಐ ಅಧ್ಯಕ್ಷ ಅಜಯ್ ಸಿಂಗ್ ಅವರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ.

ಸಮಿತಿ ಮುಖ್ಯಸ್ಥ ಸಿಂಗ್ ಅವರ ಅವಧಿ 90 ದಿನ ಮೀರುವಂತಿಲ್ಲ ಎಂದು ಅವರಿಗೆ ಬರೆದ ಪತ್ರದಲ್ಲಿ ವಿಶ್ವ ಬಾಕ್ಸಿಂಗ್ ಅಧ್ಯಕ್ಷ ಬೋರಿಸ್ ವಾನ್‌ಡೆರ್ ವೊಸ್ಟ್ ತಿಳಿಸಿದ್ದಾರೆ.

ಈ ಸಮಿತಿಯಲ್ಲಿ ಬಿಎಫ್‌ಐ ಉಪಾಧ್ಯಕ್ಷ ನರೇಂದರ್ ಕುಮಾರ್ ನಿರ್ವಾಣ್, ಕಾರ್ಯಕಾರಿ ನಿರ್ದೇಶಕ ಅರುಣ್ ಮಲಿಕ್, ಒಲಿಂಪಿಯನ್ ಎಲ್.ಸರಿತಾ ದೇವಿ ಅವರೂ ಇದ್ದಾರೆ.ಉಳಿದ ಇಬ್ಬರು ಸದಸ್ಯರಲ್ಲಿ ಒಬ್ಬರನ್ನು ನಾಮನಿರ್ದೇಶನಗೊಳಿಸಲು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಅವರಿಗೆ ತಿಳಿಸಲಾಗಿದೆ.

'ಯಶಸ್ಸಿಗೆ ಮೆಂಟರ್ ಡಿ.ಕೆ ಕಾರಣ'

ಬೆಂಗಳೂರು (ಪಿಟಿಐ): ತಾವು ಟಿ20 ಬ್ಯಾಟರ್ ಆಗಿ ಪುನರುತ್ಥಾನ ಕಾಣುವಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೆಂಟರ್ ದಿನೇಶ್ ಕಾರ್ತಿಕ್ ಅವರ ಪ್ರಯತ್ನ ಪ್ರಮುಖವಾಗಿದೆ ಎಂದು ತಂಡದ ವಿಕೆಟ್ ಕೀಪರ್ ಜಿತೇಶ್ ಶರ್ಮಾ ಹೇಳಿದರು.

2024ರಲ್ಲಿ ಪಂಜಾಬ್ ಕಿಂಗ್ಸ್ ಪರ ಆಡಿದ್ದಾಗ ಅವರು 14 ಪಂದ್ಯಗಳಲ್ಲಿ ಬರೇ 187 ರನ್ ಗಳಿಸಿದ್ದರು. 'ಈ ಋತುವಿಗೆ ಮುನ್ನ ಅವರ (ದಿನೇಶ್ ಕಾರ್ತಿಕ್) ಜೊತೆ ಕಠಿಣ ಶ್ರಮ ಹಾಕಿದೆ.

ಈಗ ನಾನು ಅವರ ರೀತಿಯಲ್ಲೇ ಆಡತೊಡಗಿದ್ದೇನೆ. ನನ್ನಲ್ಲಿ ಹೊಸ ಆಟಗಾರನನ್ನು ಕಂಡುಕೊಳ್ಳಲು ಅವರು ಪ್ರಯತ್ನಿಸಿದ್ದಾರೆ' ಎಂದು ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯಕ್ಕೆ ಪೂರ್ವಭಾವಿಯಾಗಿ ಅವರು ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಅವರು ತಿಳಿಸಿದರು.



ದಿನೇಶ್ ಕಾರ್ತಿಕ್

31 ವರ್ಷ ವಯಸ್ಸಿನ ಜಿತೇಶ್ ಈ ಬಾರಿ 4 ಪಂದ್ಯಗಳಿಂದ ಉಪಯುಕ್ತ 85 ರನ್ ಗಳಿಸಿದ್ದಾರೆ. ಸ್ಟ್ರೈಕ್ ರೇಟ್ 185 ತಲುಪಿದೆ.

ಕಾರ್ತಿಕ್ ಈ ಹಿಂದೆ ಆರ್‌ಸಿಬಿ ವಿಕೆಟ್ ಕೀಪರ್ ಆಗಿದ್ದರು.

ಬ್ಯಾಡ್ಮಿಂಟನ್: ಸಿಂಧು ಶುಭಾರಂಭ

ನಿಂಗ್ಬೊ (ಪಿಟಿಐ): ಭಾರತದ ಪಿ.ವಿ. ಸಿಂಧು ಇಲ್ಲಿ ನಡೆಯುತ್ತಿರುವ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ 29 ವರ್ಷದ ಸಿಂಧು 21–15, 21–19ರಿಂದ ಇಂಡೊನೇಷ್ಯಾದ ಎಸ್ಟರ್ ನುರುಮಿ ವಾರ್ಡೊಯೊ ಅವರನ್ನು ಸೋಲಿಸಿದರು. ಸಿಂಧು ಅವರು 17ನೇ ಶ್ರೇಯಾಂಕದ ಆಟಗಾರ್ತಿಯಾಗಿ ಕಣಕ್ಕಿಳಿದಿದ್ದಾರೆ. 19 ವರ್ಷದ ವಾರ್ಡೊಯೊ ಅವರು 36ನೇ ರ್‍ಯಾಂಕ್ ಹೊಂದಿದ್ದಾರೆ. 44 ನಿಮಿಷ ನಡೆದ ಪಂದ್ಯದಲ್ಲಿ ಸಿಂಧು ಪಾರಮ್ಯ ಮೆರೆದರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಕಿರಣ್ ಜಾರ್ಜ್ 21–16, 21–8 ರಿಂದ ಕಜಕಸ್ತಾನದ ಡಿಮಿಟ್ರಿ ಪನಾರಿನ್ ಅವರನ್ನು ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.



ಟೂರ್ನಿಯ ಇನ್ನುಳಿದ ಪಿ.ವಿ. ಸಿಂಧು ಭಾರತಕ್ಕೆ ನಿರಾಶೆ ಕಾಡಿತು. ಅನುಭವಿ ಆಟಗಾರ ಎಚ್.ಎಸ್.ಪ್ರಣಯ್ ಅವರು ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಆಕರ್ಷಿ ಕಶ್ಯಪ್ ಮತ್ತು ಅನುಪಮಾ ಉಪಾಧ್ಯಾಯ ಅವರೂ ನಿರ್ಗಮಿಸಿದರು.

32ರ ಸುತ್ತಿನ ಪಂದ್ಯದಲ್ಲಿ ಚೀನಾದ ಝು ಗುವಾಂಗ್ ಮೂರು ಗೇಮ್‌ಗಳ ಹೋರಾಟದಲ್ಲಿ ಪ್ರಣಯ್ ಅವರನ್ನು 21–16, 12–21, 21–11 ರಿಂದ ಹಿಮ್ಮೆಟ್ಟಿಸಿದರು. ಈ ಪಂದ್ಯ 68 ನಿಮಿಷ ನಡೆಯಿತು.

ಆಕರ್ಷಿ 13–21, 7–21 ರಲ್ಲಿ ಚೀನಾದ ಹಾನ್ ಯು ಅವರಿಗೆ 31 ನಿಮಿಷಗಳಲ್ಲಿ ಮಣಿದರು. ಅನುಪಮಾ 13–21, 14–21 ರಲ್ಲಿ ಎಂಟನೇ ಶ್ರೇಯಾಂಕದ ರಟ್ಚನೋಕ್ ಇಂತಾನನ್ (ಥಾಯ್ಲೆಂಡ್) ಅವರಿಗೆ ಸೋತರು. ವಿಶ್ವ ಕ್ರಮಾಂಕದಲ್ಲಿ13ನೇ ಸ್ಥಾನದಲ್ಲಿರುವ ರಟ್ಚನೋಕ್ 36 ನಿಮಿಷಗಳಲ್ಲಿ ಗೆದ್ದರು.ಮಹಿಳೆಯರ ಡಬಲ್ಸ್‌ನಲ್ಲಿ ಪ್ರಿಯಾ ಕೊಂಜೆಂಗ್ಬಾಮ್– ಶ್ರುತಿ ಮಿಶ್ರಾ 11–21, 13–21 ರಲ್ಲಿ ಚೀನಾ ತೈಪಿಯ ಶುವೊ ಯುನ್ ಸುಂಗ್– ಚೀಯೆನ್ ಹುಯಿ ಯು ಅವರಿಗೆ ಸೋತರು.

ಡ್ರಾ ಪಂದ್ಯದಲ್ಲಿ ಅರ್ಜುನ್

ಪ್ಯಾರಿಸ್: ಪ್ಯಾರಿಸ್: ಭಾರತದ ಅರ್ಜುನ್ ಇರಿಗೇಶಿ ಇಲ್ಲಿ ನಡೆಯುತ್ತಿರುವ ಫ್ರೀ ಸ್ಟೈಲ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಬುಧವಾರ ಅಮೆರಿಕದ ಹಿಕಾರು ನಕಾಮುರಾ ಜೊತೆ ಡ್ರಾ ಮಾಡಿಕೊಂಡರು. ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ತಮ್ಮ ಮೊದಲ ಪಂದ್ಯದಲ್ಲಿ ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಸೋಲಿಸಿ ಉತ್ತಮ ಆರಂಭ ಪಡೆದರು. ರಷ್ಯಾದ ಇಯಾನ್ ನಿಪೊಮ್‌ನಿಷಿ, ಜರ್ಮನಿಯ ವಿನ್ಸೆಂಟ್ ಕೀಮರ್ ಅವರ ಜೊತೆ ಪಾಯಿಂಟ್ ಹಂಚಿಕೊಂಡರು.

ಕೊಡವ ಹಾಕಿ:ಕೊಟ್ಟಂಗಡ, ಅಮ್ಮಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಟ್ಟಂಗಡ, ಅಮ್ಮಂಡ ತಂಡಗಳು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿ 'ಮುದ್ದಂಡ ಕಪ್'ನ ಬುಧವಾರದ ಪಂದ್ಯಗಳಲ್ಲಿ ಭರ್ಜರಿ ಜಯ ಸಾಧಿಸಿದವು.

ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ, ರಾಹುಲ್ ಪೊನ್ನಣ್ಣ, ಜೋಯಪ್ಪ ತಲಾ 2 ಹಾಗೂ ದೇವಯ್ಯ, ಸಾಯಿ ಬೋಪಣ್ಣ, ಪೊನ್ನಚ್ಚ ತಲಾ 1 ಗೋಲುಗಳ ಬಲದಿಂದ ಕೊಟ್ಟಂಗಡ ತಂಡದವರು 7-0 ಗೋಲುಗಳಿಂದ ಪೊನ್ನಿಮಾಡ ವಿರುದ್ಧ ಜಯಿಸಿದರು.

ಐತಿಚಂಡ ಮತ್ತು ಅಮ್ಮಂಡ ತಂಡಗಳ ಸೆಣಸಾಟದಲ್ಲಿ 11-10 ಗೋಲುಗಳ ಅಂತರದಲ್ಲಿ ಅಮ್ಮಂಡ ತಂಡ ರೋಚಕ ಜಯ ಪಡೆಯಿತು.

ಕೋಡಿಮಣಿಯಂಡ ಮತ್ತು ಮಾದಂಡ 1-1ರಿಂದ ಸಮಬಲ ಸಾಧಿಸಿದ್ದವು. ಮಾದಂಡ ತಂಡದವರು ಟೈ ಬ್ರೇಕರ್‌ನಲ್ಲಿ 7-6 ಗೋಲುಗಳಿಂದ ಗೆಲುವು ಪಡೆದು ಬೀಗಿದರು. ಬೊಳ್ಳೆರ 4-2ರಿಂದ ಚೋಳಂಡ ವಿರುದ್ಧ ಗೆಲುವು ಪಡೆಯಿತು.

ಅಂಜಪರವಂಡ 1-0 ಯಿಂದ ತಿರುಟೆರ ವಿರುದ್ಧ, ಮುಕ್ಕಾಟಿರ (ಬೋಂದ) 3-0ಯಿಂದ ಕೊಚ್ಚೆರ ವಿರುದ್ಧ, ಚಂಗುಲಂಡ 3-0ಯಿಂದ ಮಾತಂಡ ವಿರುದ್ಧ, ಮಂಡೇಟಿರ 4-2 ರಿಂದ ಮೇಚಂಡ ವಿರುದ್ಧ, ಅಮ್ಮಣಿಚಂಡ 4-0ರಿಂದ ಕುಟ್ಟಂಡ (ಕಾರ್ಮಾಡ್) ವಿರುದ್ಧ, ಬೊಳಕಾರಂಡ 2-0ಯಿಂದ ಚಿಲ್ಲವಂಡ ವಿರುದ್ಧ, ಅಜ್ಜಮಾಡ 2-1 ರಿಂದ ಕಂಜಿತಂಡ ವಿರುದ್ಧ, ಮೇರಿಯಂಡ 2-1ರಿಂದ ಬೊಳ್ಳಚಂಡ ವಿರುದ್ಧ, ಗೆಲುವು ಸಾಧಿಸಿತು.

ಡ್ರೀಮ್ ಯುನೈಟೆಡ್ ಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಎಜಿಒಆರ್‌ಸಿ ತಂಡದ ವಿರುದ್ಧ 3-0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಡ್ರೀಮ್ ಯುನೈಟೆಡ್ ತಂಡದ ಪರ ಜೈ ರಿ ಬರ್ಮನ್ (12,33 ಮತ್ತು 79ನೇ) ಗೋಲು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ (ಕೆಎಸ್‌ಎಫ್‌ಎ) ತಂಡ 2–1 ಗೋಲುಗಳಿಂದ ಆರ್‌ಡಬ್ಲ್ಯು ಎಫ್ ಎಫ್‌ಸಿ ವಿರುದ್ಧ ಜಯಿಸಿತು. ರೂಟ್ಸ್ ಎಫ್‌ಎಸ್ ತಂಡದ ಪರ ಬಿ.ಅಭಿರಾಮ್ (45ನೇ ನಿ.), ಸಿದ್ಧಾರ್ಥ್ ಜಯಂತ್ (79ನೇ ನಿ.) ಗೋಲು ಗಳಿಸಿದರು. ಆರ್‌ಡಬ್ಲ್ಯುಎಫ್ ತಂಡದ ಪರ ರಾಜೇಶ್ ಎಸ್. (40 + 2) ಗೋಲು ಹೊಡೆದರು. ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿಬ್ಲೂ ಬ್ಲೂ ಡೈಮಂಡ್ ತಂಡ 5–1 ಗೋಲುಗಳಿಂದ ರಶ್ ತಂಡವನ್ನು ಮಣಿಸಿತು.

